ಸೋಮವಾರ, ಏಪ್ರಿಲ್ 10, 2023 | ಬೆಂಗಳೂರು | ₹ 6.00 | ಸಂಪುಟ 76 | ಸಂಚಿಕೆ 99 | ಪುಟ 12
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ
ನಿಮ್ಮನ್ನು ನೀವು ಅರಿಯಲು 'ಸ್ವಾಟ್ ಅನಾಲಿಸಿಸ್' ಪೂರಕ



ಆಳ-ಅಗಲ
ಹುಲಿ ಯೋಜನೆಗೆ ಅನುದಾನ ಭಾರಿ ಕಡಿತ

ಕಾಂಗ್ರೆಸ್ ಅಧಿಕಾರಕ್ಕೆ: ಶಶಿ ತರೂರ್ ವಿಶ್ವಾಸ 8
ಪಕ್ಷೇತರವಾಗಿ ಸ್ಪರ್ಧೆ: ವೈ.ಎಸ್.ವಿ ದತ್ತ 8

ಗರಿಷ್ಠ ಮಟ್ಟದಲ್ಲಿ ಆಮದು ಸುಂಕ : ತಗ್ಗಿದ ಬೇಡಿಕೆ
ಚಿನ್ನ ಆಮದು ಶೇ 30ರಷ್ಟು ಇಳಿಕೆ 11

ಭಾರಿ ಸಮಾಲೋಚನೆ ಬಳಿಕ ಸಿದ್ಧವಾದ ಪಟ್ಟಿ: ಸೋಮವಾರ ಪ್ರಕಟಣೆ ಬಹುತೇಕ ಖಚಿತ

ಬಿಜೆಪಿ ಪಟ್ಟಿಗೆ ಅಂತಿಮ ರೂಪ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕ ವಿಧಾನಸಭೆ ಚುನಾವಣೆಗೆ ಸ್ಪರ್ಧಿಸುವ ಬಿಜೆಪಿ ಅಭ್ಯರ್ಥಿಗಳ ಮೊದಲ ಪಟ್ಟಿಗೆ ಪಕ್ಷದ ಕೇಂದ್ರ ಚುನಾವಣಾ ಸಮಿತಿ ಭಾನುವಾರ ರಾತ್ರಿ ಅಂತಿಮ ರೂಪ ನೀಡಿತು. ಮೊದಲ ಪಟ್ಟಿ ಸೋಮವಾರ ಮಧ್ಯಾಹ್ನದೊಳಗೆ ಬಿಡುಗಡೆಯಾಗಲಿದೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

ಪ್ರಧಾನಿ ನರೇಂದ್ರ ಮೋದಿ ಹಾಗೂ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ನೇತೃತ್ವದಲ್ಲಿ ಬಿಜೆಪಿ ಕೇಂದ್ರ ಕಚೇರಿಯಲ್ಲಿ ಸುಮಾರು ಎರಡು ಗಂಟೆ ನಡೆದ ಸಭೆಯಲ್ಲಿ ಎಲ್ಲ 224 ಕ್ಷೇತ್ರಗಳ ಕುರಿತು ಚರ್ಚಿಸಲಾಯಿತು. ಮೊದಲ ಪಟ್ಟಿಯಲ್ಲಿ 170ರಿಂದ 180 ಅಭ್ಯರ್ಥಿಗಳ ಹೆಸರು ಘೋಷಣೆಯಾಗುವ ಸಾಧ್ಯತೆ ಇದೆ.

ಅಭ್ಯರ್ಥಿಗಳ ಹೆಸರು ಅಖೈರುಗೊಳಿಸುವ ಸಂಬಂಧ ನಡ್ಡಾ ಅವರು ರಾಜ್ಯ ನಾಯಕರ ಜತೆಗೆ ಶನಿವಾರ ಸುಮಾರು 13 ಗಂಟೆ ಸಮಾಲೋಚನೆ ನಡೆಸಿದ್ದರು. ಶನಿವಾರ ಎಲ್ಲ ಕ್ಷೇತ್ರಗಳ ಚರ್ಚೆ ಪೂರ್ಣ ಆಗಿರಲಿಲ್ಲ. ನಡ್ಡಾ ಅವರು ರಾಜ್ಯ ನಾಯಕರ ಜತೆಗೆ ಭಾನುವಾರ ನಾಲ್ಕು ಗಂಟೆಗೂ ಅಧಿಕ ಚರ್ಚಿಸಿದರು. ಪ್ರತಿ ಕ್ಷೇತ್ರಕ್ಕೆ ರಾಜ್ಯ ಪ್ರಮುಖರ ಸಮಿತಿಯು ತಲಾ 2–3 ಹೆಸರನ್ನು ಶಿಫಾರಸು ಮಾಡಿತ್ತು. ಎರಡು ದಿನಗಳ ಕಾಲ ನಡೆದ ಸಭೆಯಲ್ಲಿ ಹೆಚ್ಚಿನ ಕ್ಷೇತ್ರಗಳಿಗೆ ಆಕಾಂಕ್ಷಿಗಳ ಹೆಸರನ್ನು ತಲಾ ಒಂದಕ್ಕೆ ಇಳಿಸಲಾಯಿತು.

ಗುಜರಾತ್ ಹಾಗೂ ಕರ್ನಾಟಕದ ಸನ್ನಿವೇಶ ಭಿನ್ನ. ಗುಜರಾತ್ ಮಾದರಿಯಲ್ಲಿ ಬಹು ದೊಡ್ಡ ಮಟ್ಟದ ಪ್ರಯೋಗವೂ ಇರುವುದಿಲ್ಲ. ಕೆಲವು ಅಚ್ಚರಿಯ ಬದಲಾವಣೆಗಳು ಇರುವುದಂತೂ ಖಚಿತ. ಹಲವು ಹೊಸ ಮುಖಗಳಿಗೆ ಅವಕಾಶ ಲಭಿಸಲಿದೆ. ಕರ್ನಾಟಕದಲ್ಲಿ ಅಧಿಕಾರ ಉಳಿಸಿಕೊಳ್ಳಲು ಬೇಕಾದ ಎಲ್ಲ ತಂತ್ರಗಳನ್ನು ಪಕ್ಷ ಮಾಡಲಿದೆ. ಈ ಕುರಿತು ನಡ್ಡಾ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಚರ್ಚೆಯಾಗಿದೆ ಎಂದು ಪಕ್ಷದ ಹಿರಿಯ ಮುಖಂಡರೊಬ್ಬರು ತಿಳಿಸಿದರು.

ಸಿದ್ದರಾಮಯ್ಯ ವಿರುದ್ಧ ಪ್ರಬಲ ಅಭ್ಯರ್ಥಿ?: ಕೋಲಾರ ಕ್ಷೇತ್ರದಿಂದ ಮಾಜಿ ಸಚಿವ ಕೆ.ಎಸ್. ಈಶ್ವರಪ್ಪ ಹಾಗೂ ವರುಣ ಕ್ಷೇತ್ರದಿಂದ ವಿ.ಸೋಮಣ್ಣ ಅವರನ್ನು ಕಣಕ್ಕೆ ಇಳಿಸುವ ಕುರಿತು ಪಕ್ಷದಲ್ಲಿ ಗಂಭೀರ ಚರ್ಚೆಗಳು ನಡೆದಿವೆ.

ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ವಿರುದ್ಧ ಪ್ರಬಲ ಅಭ್ಯರ್ಥಿಯನ್ನು ಕಣಕ್ಕೆ ಇಳಿಸಲಾಗುವುದು ಎಂದು ಮುಖ್ಯಮಂತ್ರಿ ಸೇರಿ ಬಿಜೆಪಿಯ ಮುಖಂಡರು ಈಗಾಗಲೇ ಹೇಳಿದ್ದಾರೆ.

ವರುಣದಲ್ಲಿ ಸೋಮಣ್ಣ ಅವರನ್ನು ಕಣಕ್ಕೆ ಇಳಿಸಿದರೆ ಸಿದ್ದರಾಮಯ್ಯ ಅವರನ್ನು ಕಟ್ಟಿ ಹಾಕಬಹುದು ಎಂಬುದು ಬಿಜೆಪಿ ನಾಯಕರ ಆಲೋಚನೆ. ಕೋಲಾರ ಕ್ಷೇತ್ರದಲ್ಲಿ ಸಿದ್ದರಾಮಯ್ಯ ಸ್ಪರ್ಧಿಸಿದರೆ ಈಶ್ವರಪ್ಪ ಅವರನ್ನು ಹುರಿಯಾಳುವನ್ನಾಗಿ ಮಾಡಬೇಕು ಎಂಬುದಾಗಿ ಚರ್ಚೆಯಾಗಿದೆ ಎಂದು ಪಕ್ಷದ ಮೂಲಗಳು ಹೇಳಿವೆ.

ಕೆಲವು ಕ್ಷೇತ್ರಗಳ ಕುರಿತು ಇನ್ನಷ್ಟು ಚರ್ಚೆ ನಡೆಸಬೇಕಿದೆ. ಸೋಮವಾರ ಮತ್ತೊಂದು ಸುತ್ತಿನ ಸಭೆ ನಡೆಸಿ ಗೊಂದಲ ಪರಿಹಾರ ಮಾಡುತ್ತೇವೆ. ನಾನು ಶಿಗ್ಗಾವಿ ಕ್ಷೇತ್ರದಿಂದಲೇ ಸ್ಪರ್ಧಿಸುತ್ತೇನೆ

ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ

ಸಭೆಯಲ್ಲಿ ಹುರಿಯಾಳುಗಳ ಕುರಿತು ವಿವರವಾದ ಚರ್ಚೆ ನಡೆಸಿದ್ದೇವೆ. ರಾಷ್ಟ್ರೀಯ ಅಧ್ಯಕ್ಷರ ಒಪ್ಪಿಗೆ ಪಡೆದು ಸೋಮವಾರ ಮೊದಲ ಪಟ್ಟಿ ಪ್ರಕಟಿಸುತ್ತೇವೆ

ಪ್ರಲ್ಹಾದ ಜೋಶಿ
ಕೇಂದ್ರ ಸಚಿವ

ಮಕ್ಕಳಿಗಾಗಿ ಮುಖಂಡರ ಲಾಬಿ

ಪುತ್ರ ಅರುಣ್ ಸೋಮಣ್ಣ ಅವರಿಗೆ ತುಮಕೂರು ಜಿಲ್ಲೆಯ ಗುಬ್ಬಿ ಕ್ಷೇತ್ರದಲ್ಲಿ ಟಿಕೆಟ್ ನೀಡುವಂತೆ ವಸತಿ ಸಚಿವ ವಿ.ಸೋಮಣ್ಣ ಅವರು ಕೇಂದ್ರ ನಾಯಕರು ಹಾಗೂ ಮುಖ್ಯಮಂತ್ರಿ ಅವರಲ್ಲಿ ಲಾಬಿ ನಡೆಸಿದರು. ನವದೆಹಲಿಗೆ ಭಾನುವಾರ ಬೆಳಿಗ್ಗೆ ಬಂದ ಅವರು ಹಿರಿಯ ನಾಯಕರನ್ನು ಭೇಟಿ ಮಾಡಿ ಪುತ್ರನಿಗೆ ಈ ಸಲ ಅವಕಾಶ ನೀಡುವಂತೆ ಕೇಳಿಕೊಂಡರು.

'ಒಂದು ಮನೆಯಲ್ಲಿ ಇಬ್ಬರಿಗೆ ಟಿಕೆಟ್ ನೀಡುವುದಾದರೆ ನಮ್ಮ ಕುಟುಂಬವನ್ನು ಸಹ ಪರಿಗಣಿಸಿ ಎಂದು ಕೇಳಿಕೊಂಡಿದ್ದೇನೆ. ಗುಬ್ಬಿ ಕ್ಷೇತ್ರದಲ್ಲಿ ಸ್ಪರ್ಧೆಗೆ ಅವಕಾಶ ನೀಡುವಂತೆ ಮನವಿ ಮಾಡಿದ್ದೇನೆ' ಎಂದು ಸೋಮಣ್ಣ ಸುದ್ದಿಗಾರರಿಗೆ ತಿಳಿಸಿದರು.

'ಕುಟುಂಬಕ್ಕೆ ಎರಡು ಟಿಕೆಟ್ ನೀಡುವುದಾದರೆ ನಮ್ಮ ಕುಟುಂಬವನ್ನು ಸಹ ಪರಿಗಣಿಸಿ' ಎಂದು ಜಲ ಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಅವರು ರಾಷ್ಟ್ರೀಯ ನಾಯಕರಲ್ಲಿ ಮನವಿ ಮಾಡಿದ್ದಾರೆ. ಕಾರಜೋಳ ಅವರು ಮುಧೋಳದ ಶಾಸಕರಾಗಿದ್ದಾರೆ. ಪುತ್ರ ಗೋಪಾಲ ಕಾರಜೋಳ ಅವರಿಗೆ ನಾಗಠಾಣ ಕ್ಷೇತ್ರದಿಂದ ಟಿಕೆಟ್ ನೀಡಬೇಕು ಎಂಬುದು ಅವರ ಬೇಡಿಕೆ.

ಛಬ್ಬಿ ಬಿಜೆಪಿಗೆ

ವಿಧಾನ ಪರಿಷತ್ ಮಾಜಿ ಸದಸ್ಯ ನಾಗರಾಜ ಛಬ್ಬಿ ಅವರು ಮುಖ್ಯಮಂತ್ರಿ ಸಮ್ಮುಖದಲ್ಲಿ ಬಿಜೆಪಿಗೆ ಭಾನುವಾರ ಸೇರಿದರು.

ಮಾಜಿ ಸಚಿವ ಸಂತೋಷ್ ಲಾಡ್ ಹಾಗೂ ಛಬ್ಬಿ ಅವರು ಕಲಘಟಗಿ ಕ್ಷೇತ್ರದಿಂದ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಗಳಾಗಿದ್ದರು. ಲಾಡ್ ಅವರಿಗೆ ಕಾಂಗ್ರೆಸ್ ಟಿಕೆಟ್ ನೀಡಿತ್ತು. ಇದರಿಂದ ಮುನಿಸಿಕೊಂಡಿದ್ದ ಛಬ್ಬಿ, 'ಈ ಚುನಾವಣೆಯಲ್ಲಿ ಲಾಡ್ ವಿರುದ್ಧ ಕೆಲಸ ಮಾಡುವೆ' ಎಂದು ಆಪ್ತರ ಬಳಿ ಹೇಳಿಕೊಂಡಿದ್ದರು. ಕಳೆದ ಮೂರು ದಿನಗಳಿಂದ ದೆಹಲಿಯಲ್ಲಿ ಬೀಡು ಬಿಟ್ಟಿದ್ದ ಅವರು ಬಿಜೆಪಿ ನಾಯಕರನ್ನು ಭೇಟಿ ಮಾಡಿ ಚರ್ಚಿಸಿದ್ದರು. ಬಿಜೆಪಿಯಿಂದ ಟಿಕೆಟ್ ಸಿಗುವ ಭರವಸೆ ಸಿಕ್ಕ ಬಳಿಕ ಆ ಪಕ್ಷಕ್ಕೆ ಸೇರ್ಪಡೆಯಾದರು. ಅವರಿಗೆ ಪಕ್ಷ ಟಿಕೆಟ್ ನೀಡಲಿದೆ ಎಂದು ಹಿರಿಯ ನಾಯಕರೊಬ್ಬರು ತಿಳಿಸಿದರು.



ಪ್ರಧಾನಿ ನರೇಂದ್ರ ಮೋದಿ ಅವರು ಬಂಡೀಪುರದಲ್ಲಿ ಭಾನುವಾರ ಸಫಾರಿ ನಡೆಸಿದರು –ಪಿಐಬಿ ಚಿತ್ರ

ವನ್ಯಜೀವಿ ಸಂರಕ್ಷಣೆಗೆ ವಿಶ್ವಮೈತ್ರಿ ಅಗತ್ಯ: ಮೋದಿ

ದೇಶದಲ್ಲಿ 3,167 ಹುಲಿಗಳು

ಪ್ರಜಾವಾಣಿ ವಾರ್ತೆ

ಮೈಸೂರು: 'ದೇಶದಲ್ಲಿ ಹುಲಿ ಯೋಜನೆ ಆರಂಭವಾಗಿ 50 ವರ್ಷವಾಗಿದ್ದು, 2022ರ ಗಣತಿ ಪ್ರಕಾರ ದೇಶದಲ್ಲಿ 3,167 ಹುಲಿಗಳಿವೆ. ಹುಲಿಸಂತತಿ ವೃದ್ಧಿಸಿರುವುದು ಇಡೀ ವಿಶ್ವವೇ ಹೆಮ್ಮೆ ಪಡುವ ವಿಷಯ' ಎಂದು ಪ್ರಧಾನಿ ನರೇಂದ್ರ ಮೋದಿ ಭಾನುವಾರ ಇಲ್ಲಿ ಹೇಳಿದರು.

ಹುಲಿ ಯೋಜನೆ ಸುವರ್ಣ ಸಂಭ್ರಮ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಯೋಜನೆ ಆರಂಭದಲ್ಲಿ 1,827 ಹುಲಿಗಳಿದ್ದವು. ಬಂಡೀಪುರ ಸೇರಿ ದೇಶದ 9 ಅರಣ್ಯಗಳಲ್ಲಿ ಯೋಜನೆ ಜಾರಿಗೊಳಿಸಲಾಗಿತ್ತು. ವಿಶ್ವದ ಹುಲಿಗಳ ಸಂಖ್ಯೆಯ ಶೇ 75ರಷ್ಟು ಭಾರತದಲ್ಲೇ ಇರುವುದು ವಿಶೇಷ' ಎಂದರು.

'ಐವತ್ತು ವರ್ಷಗಳಲ್ಲಿ ದೇಶದಲ್ಲಿಯೇ ಹುಲಿ ಸಂರಕ್ಷಣೆಗಾಗಿ ಮೀಸಲಿರಿಸಿದ ಕಾಡುಗಳ ಸಂಖ್ಯೆ 53ಕ್ಕೆ ಹೆಚ್ಚಿದೆ. 35 ಹುಲಿ ಸಂರಕ್ಷಿತ ಪ್ರದೇಶಗಳಿಗೆ ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರ ಮಾನ್ಯತೆ ನೀಡಿದೆ. ಅಲ್ಲದೆ, '30 ಸಾವಿರ ಆನೆಗಳು, 3 ಸಾವಿರ ಘೇಂಡಾಮೃಗಗಳಿದ್ದು, 2015ರಲ್ಲಿ ದೇಶದಲ್ಲಿ 525ರಷ್ಟಿದ್ದ ಸಿಂಹಗಳ ಸಂತತಿ 2020ರಲ್ಲಿ 675ಕ್ಕೇರಿದೆ. ಚಿರತೆ ಸಂತತಿ ಶೇ 60ರಷ್ಟು ಹೆಚ್ಚಾಗಿದೆ' ಎಂದರು.

'ಸ್ವಾತಂತ್ರ್ಯದ ಅಮೃತ ಮಹೋತ್ಸವದ ವೇಳೆ ಅರಣ್ಯ ವ್ಯಾಪ್ತಿಯೂ ಹಿಗ್ಗಿದೆ. ಅಭಿವೃದ್ಧಿಗೆ 75 ಜೌಗು ಪ್ರದೇಶಗಳನ್ನು ಗುರುತಿಸಲಾಗಿದೆ. ಮೊದಲಿಗೆ ಕೇವಲ 11 ಪ್ರದೇಶಗಳನ್ನಷ್ಟೇ ಗುರುತಿಸಲಾಗಿತ್ತು. ಒಂದು ದಶಕದಲ್ಲಿ ರಾಷ್ಟ್ರೀಯ ಉದ್ಯಾನಗಳು ಮತ್ತು ಅಭಯಾರಣ್ಯಗಳ ಸಂಖ್ಯೆ 9ರಿಂದ 468ಕ್ಕೇರಿದೆ' ಎಂದರು.

4ನೇ ಪುಟ ನೋಡಿ

ಪ್ರಧಾನಿಗೆ ಕಾಣಿಸದ ಹುಲಿ

ಚಾಮರಾಜನಗರ/ಗುಂಡ್ಲುಪೇಟೆ: ಪ್ರಧಾನಿ ಮೋದಿ ಅವರು ಬಂಡೀಪುರ ಹುಲಿಸಂರಕ್ಷಿತ ಪ್ರದೇಶದಲ್ಲಿ ಭಾನುವಾರ ಸಫಾರಿ ನಡೆಸಿದರು. ಆನೆ, ಕಾಡೆಮ್ಮೆ ಸೇರಿ ಹಲವು ಪ್ರಾಣಿಗಳು ಕಂಡವು. ಆದರೆ, ಅವರಿಗೆ ಹುಲಿ ಗೋಚರಿಸಲಿಲ್ಲ.

ಬಳಿಕ ನೆರೆಯ ತಮಿಳುನಾಡಿನ ಮುದುಮಲೈ ಹುಲಿ ಸಂರಕ್ಷಿತ ಪ್ರದೇಶದ ತೆಪ್ಪಕಾಡು ಆನೆ ಶಿಬಿರಕ್ಕೆ ಭೇಟಿ ನೀಡಿದ್ದು, ಆಸ್ಕರ್ ಪ್ರಶಸ್ತಿ ವಿಜೇತ ಕಿರುಚಿತ್ರ 'ದಿ ಎಲಿಫೆಂಟ್ ವಿಸ್ಪರ್ಸ್'ನ ಕಾವಾಡಿ ದಂಪತಿ ಬೊಮ್ಮ–ಬೆಳ್ಳಿ ಅವರನ್ನು ಭೇಟಿ ಮಾಡಿ, ಆತ್ಮೀಯವಾಗಿ ಬೆರೆತರು.

22 ಕಿ.ಮೀ ಸಫಾರಿ: ಬೆಳಿಗ್ಗೆ 7.20ಕ್ಕೆ ಮೇಲುಕಾಮಹಳ್ಳಿ ಸಫಾರಿ ಕೇಂದ್ರದ ಬಳಿ ಹೆಲಿಪ್ಯಾಡ್‌ನಲ್ಲಿ ಬಂದಿಳಿದ ಮೋದಿ, ರಸ್ತೆ ಮೂಲಕ ಬಂಡೀಪುರ ಕ್ಯಾಂಪಸ್‌ಗೆ ತೆರಳಿದರು. ಅರಣ್ಯ ಹುತಾತ್ಮರ ಸ್ಮಾರಕಕ್ಕೆ ಗೌರವ ಸಲ್ಲಿಸಿ ಸಫಾರಿಗೆ ತೆರಳಿದರು. 7.50ಕ್ಕೆ ಸಫಾರಿ ಆರಂಭಿಸಿದ್ದು ಎರಡು ಗಂಟೆ ಬಂಡೀಪುರ ಅರಣ್ಯದಲ್ಲಿ ಕಾಡಿನ ಸೌಂದರ್ಯ ಸವಿದರು. ಕಚ್ಚಾ ರಸ್ತೆಯಲ್ಲಿ 22 ಕಿ.ಮೀ ದೂರ ಸಾಗಿದರು. ಬೋಳುಗುಡ್ಡ, ಮರಳಹಳ್ಳದ ಕಳ್ಳ ಬೇಟೆ ತಡೆ ಶಿಬಿರಕ್ಕೆ ಭೇಟಿ ನೀಡಿದರು. ಬೋಳುಗುಡ್ಡದಲ್ಲಿರುವ ಶಿಬಿರದ ಚಾವಣಿಯಲ್ಲಿ ನಿಂತು ಬೈನಾಕ್ಯುಲರ್ ಮೂಲಕ ಸಸ್ಯ, ಪ್ರಾಣಿ ಸಂಪತ್ತು ಕಣ್ತುಂಬಿಕೊಂಡರು. ಕ್ಯಾಮೆರಾ ಮೂಲಕ ಪ್ರಾಣಿ, ಪಕ್ಷಿಗಳು, ಬೆಟ್ಟ ಗುಡ್ಡಗಳ ಚಿತ್ರಗಳನ್ನು ಸೆರೆ ಹಿಡಿದರು.

9.50ಕ್ಕೆ ಕರ್ನಾಟಕದ ಗಡಿಭಾಗದ ಕೆಕ್ಕನಹಳ್ಳ ಚೆಕ್‌ಪೋಸ್ಟ್‌ಗೆ ತಲುಪಿ, ಅಲ್ಲಿಂದ ತಮ್ಮ ವಾಹನದ ಮೂಲಕ ತೆಪ್ಪಕಾಡು ಆನೆ ಶಿಬಿರಕ್ಕೆ ತೆರಳಿದರು.

ಬ್ಯಾಡ್ಮಿಂಟನ್: ಪ್ರಿಯಾಂಶುಗೆ ಪ್ರಶಸ್ತಿ



ಪ್ರಿಯಾಂಶು

ಆರ್ಲಿಯಾನ್, ಫ್ರಾನ್ಸ್ (ಪಿಟಿಐ): ಭಾರತದ ಪ್ರಿಯಾಂಶು ರಾಜಾವತ್ ಅವರು ಇಲ್ಲಿ ನಡೆದ ಆರ್ಲಿಯಾನ್ ಮಾಸ್ಟರ್ಸ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಪ್ರಶಸ್ತಿ ಜಯಿಸಿದರು.

ಭಾನುವಾರ ನಡೆದ ಟೂರ್ನಿಯ ಪುರುಷರ ಸಿಂಗಲ್ಸ್ ವಿಭಾಗದ ಫೈನಲ್‌ನಲ್ಲಿ ಪ್ರಿಯಾಂಶು 21-15, 19-21, 21-16ರಿಂದ ಡೆನ್ಮಾರ್ಕ್‌ನ ಮ್ಯಾಗ್ನಸ್ ಜೋಹಾನ್‌ಸನ್ ಅವರನ್ನು ಮಣಿಸಿದರು. ಬಿಡಬ್ಲ್ಯುಎಫ್ ವಿಶ್ವ ಟೂರ್ ಸೂಪರ್ 300 ಮಟ್ಟದಲ್ಲಿ ಪ್ರಿಯಾಂಶು ಗೆದ್ದ ಮೊದಲ ಪ್ರಶಸ್ತಿ ಇದು.

ಮಧ್ಯಪ್ರದೇಶದ 21 ವರ್ಷದ ಪ್ರಿಯಾಂಶು ಅವರಿಗೆ ಇದು ವೃತ್ತಿಜೀವನದ ಮೊದಲ ದೊಡ್ಡ ಪ್ರಶಸ್ತಿಯೂ ಆಗಿದೆ.

ವಿವರ 12

ಈ ವರ್ಷ 16ನೇ ಹಣಕಾಸು ಆಯೋಗ ರಚನೆ?

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು ಈ ವರ್ಷದಲ್ಲಿಯೇ 16ನೇ ಹಣಕಾಸು ಆಯೋಗ ರಚನೆ ಮಾಡುವ ಸಾಧ್ಯತೆ ಇದೆ ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

2026ರ ಏಪ್ರಿಲ್ 1ರಿಂದ ಮುಂದಿನ ಐದು ವರ್ಷಗಳಿಗೆ ಕೇಂದ್ರ ಸರ್ಕಾರ ಸಂಗ್ರಹಿಸುವ ತೆರಿಗೆ ವರಮಾನವನ್ನು ರಾಜ್ಯಗಳಿಗೆ ಎಷ್ಟು ಪ್ರಮಾಣದಲ್ಲಿ ಹಂಚಿಕೆ ಮಾಡಬೇಕು ಎನ್ನುವ ಕುರಿತು ಸಮಿತಿಯು ಸಲಹೆ ನೀಡಲಿದೆ ಎಂದು ಹೇಳಿದ್ದಾರೆ.

2021–22ರಿಂದ 2025–26ರವರೆಗೆ ಕೇಂದ್ರ ಸರ್ಕಾರ ಸಂಗ್ರಹಿಸುವ ತೆರಿಗೆ ವರಮಾನದಲ್ಲಿ ರಾಜ್ಯಗಳಿಗೆ ಶೇಕಡ 42ರಷ್ಟು ಪಾಲು ನೀಡುವಂತೆ ಎನ್.ಕೆ. ಸಿಂಗ್ ನೇತೃತ್ವದ 15ನೇ ಹಣಕಾಸು ಆಯೋಗವು ಶಿಫಾರಸು ಮಾಡಿದೆ. 14ನೇ ಆಯೋಗವು ಮಾಡಿದ್ದ ಶಿಫಾರಸಿನಲ್ಲಿಯೂ, ಇದೇ ಪ್ರಮಾಣದಲ್ಲಿ ಹಂಚಿಕೆ ಆಗಬೇಕು ಎಂದು ಹೇಳಲಾಗಿತ್ತು.

ಆಯೋಗದ ಶಿಫಾರಸಿನಂತೆ, 2021–22ರಿಂದ 2025–26ರವರೆಗಿನ ಅವಧಿಗೆ ಕೇಂದ್ರದ ತೆರಿಗೆ ವರಮಾನದಲ್ಲಿ ರಾಜ್ಯಗಳಿಗೆ ಶೇ 42ರಷ್ಟನ್ನು ನೀಡಲು ಕೇಂದ್ರ ಸರ್ಕಾರವು ಒಪ್ಪಿಕೊಂಡಿದೆ.

ಎರಡು ಸಂಸ್ಥೆಗಳ ವಿಲೀನ ಪ್ರಸ್ತಾಪವೇ ಇಲ್ಲ: ಸಚಿವ ಸೋಮಶೇಖರ್

'ರಾಜಕಾರಣಕ್ಕಾಗಿ ಅಮುಲ್ ಪ್ರಸ್ತಾಪ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಮುಲ್ ಜತೆ ನಂದಿನಿ ಉತ್ಪನ್ನಗಳನ್ನು ತಯಾರಿಸುವುದೂ ಇಲ್ಲ. ಅಮುಲ್ ಮತ್ತು ಕೆಎಂಎಫ್ ವಿಲೀನದ ಪ್ರಸ್ತಾಪವೂ ಇಲ್ಲ' ಎಂದು ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ಹೇಳಿದ್ದಾರೆ.

ಬಿಜೆಪಿ ಕಚೇರಿಯಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಚುನಾವಣಾ ರಾಜಕಾರಣಕ್ಕಾಗಿ ಕಾಂಗ್ರೆಸ್ ಮತ್ತು ಜೆಡಿಎಸ್ ನಾಯಕರು ನಂದಿನಿ– ಅಮುಲ್ ವಿಷಯವನ್ನು ಕೈಗೆತ್ತಿಕೊಂಡಿದ್ದಾರೆ ಎಂದು ಹರಿಹಾಯ್ದರು.

'ಬೇಸಿಗೆಯಲ್ಲಿ ಹಾಲಿನ ಉತ್ಪಾದನೆ ಕಡಿಮೆ ಆಗಿದೆ. ಇದನ್ನು ಕೊರೆ ಕಾಲ ಎನ್ನುತ್ತಾರೆ. ಪ್ರತಿ ವರ್ಷವೂ ಬೇಸಿಗೆಯಲ್ಲಿ ಹಾಲು ಉತ್ಪಾದನೆ ಕಡಿಮೆ ಆಗುತ್ತದೆ. ಕರ್ನಾಟಕದಲ್ಲಿ 15 ಹಾಲು ಒಕ್ಕೂಟಗಳಿವೆ. ಎಲ್ಲವೂ ಲಾಭದಲ್ಲಿವೆ. ಕೋವಿಡ್ ಸಂದರ್ಭದಲ್ಲಿ ಮುಖ್ಯಮಂತ್ರಿಯಾಗಿದ್ದ ಯಡಿಯೂರಪ್ಪ ಅವರು ಮಿಗತೆ ಹಾಲಿನ ಪುಡಿಯನ್ನು ಶಾಲಾ ಮಕ್ಕಳಿಗೆ ಉಚಿತವಾಗಿ ಕೊಡಲು ಏರ್ಪಾಡು ಮಾಡಿದ್ದರು. ಅಲ್ಲದೇ, ಮಿಗತೆ ಹಾಲನ್ನು ಕೂಲಿ–ಕಾರ್ಮಿಕರಿಗೆ ಉಚಿತವಾಗಿ ಹಂಚಲು ವ್ಯವಸ್ಥೆ ಮಾಡಿದ್ದರು' ಎಂದು ಸಚಿವ ಸೋಮಶೇಖರ್ ಹೇಳಿದರು.

ಕೆಎಂಎಫ್‌ನ ನಂದಿನಿ ವಿಶ್ವದಾದ್ಯಂತ ವಹಿವಾಟು ಹೊಂದಿದೆ. ಕಳೆದ ವರ್ಷ ಡಿಸೆಂಬರ್ 30ರಂದು ಮಂಡ್ಯ ಜಿಲ್ಲೆ ಮದ್ದೂರಿನ ಗೆಜ್ಜಲಗೆರೆಯಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ನಂದಿನಿ ಮಾರುಕಟ್ಟೆ ವಿಸ್ತರಣೆ, ತಂತ್ರಜ್ಞಾನ ನೆರವು ಪಡೆಯಲು ಅಮುಲ್ ಜತೆ ಚರ್ಚಿಸುವಂತೆ ಸಲಹೆ ನೀಡಿದ್ದರು ಎಂದು ಅವರು ತಿಳಿಸಿದರು.

4ನೇ ಪುಟ ನೋಡಿ

ನಮ್ಮ 'ನಂದಿನಿ' ಮುಕ್ಕಲು ಹೊರಟಿದ್ದೀರಾ: ಸಿದ್ದರಾಮಯ್ಯ

ಬೆಂಗಳೂರು: 'ರಾಜ್ಯದ ಮಾರುಕಟ್ಟೆಯಿಂದ ಅಮುಲ್ ಉತ್ಪನ್ನಗಳ ಮಾರಾಟವನ್ನು ಗೌರವಯುತವಾಗಿ ಹಿಂಪಡೆಯಬೇಕು' ಎಂದು ಪ್ರಧಾನಿ ನರೇಂದ್ರ ಮೋದಿ ಅವರನ್ನು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆಗ್ರಹಿಸಿದ್ದಾರೆ.

'ಮೋದಿಯವರೇ, ನೀವು ಕರ್ನಾಟಕಕ್ಕೆ ಬರುವುದು ಕನ್ನಡಿಗರಿಗೆ ಕೊಡುವುದಕ್ಕೋ, ಕಿತ್ತುಕೊಳ್ಳುವುದಕ್ಕೋ? ಕನ್ನಡಿಗರು ಕಟ್ಟಿದ್ದ ಬ್ಯಾಂಕು, ಬಂದರು, ವಿಮಾನ ನಿಲ್ದಾಣಗಳನ್ನು ಮುಕ್ಕಿ ತಿಂದಾಯಿತು. ಈಗ ನಮ್ಮ 'ನಂದಿನಿ'ಯನ್ನು ಮುಕ್ಕಲು ಹೊರಟಿದ್ದೀರಾ' ಎಂದು ಅವರು ಆಕ್ರೋಶ ಹೊರಹಾಕಿದ್ದಾರೆ.

'ನಮ್ಮ ವಿಜಯಾ ಬ್ಯಾಂಕನ್ನು ನುಂಗಿದ ಬರೋಡಾ ಬ್ಯಾಂಕ್ ಗುಜರಾತ್‌ನದ್ದು. ಬಂದರು, ವಿಮಾನ ನಿಲ್ದಾಣ ನುಂಗಿದ್ದ ಅದಾನಿ ಗುಜರಾತ್‌ನವರು. ಈಗ ಕೆಎಂಎಫ್ ನುಂಗಲು ಹೊರಟಿರುವ ಅಮುಲ್ ಗುಜರಾತ್‌ನದ್ದು. ಈ ಗುಜರಾತಿ ಆಕ್ರಮಣವನ್ನು ಸಹಿಸಲು ಸಾಧ್ಯವಿಲ್ಲ. ಕರ್ನಾಟಕದಲ್ಲಿ ಅಮುಲ್ ಉತ್ಪನ್ನಗಳ ಮಾರಾಟವನ್ನು ನಿಲ್ಲಿಸಿ. ಕನ್ನಡಿಗರ ನಾಡಪ್ರೇಮ, ಸ್ವಾಭಿಮಾನವನ್ನು ಕೆಣಕಲು ಹೋಗಬೇಡಿ, ಪರಿಣಾಮ ನೆಟ್ಟಗಾಗದು' ಎಂದಿದ್ದಾರೆ.

4ನೇ ಪುಟ ನೋಡಿ

ವರಮಾನ ಶೇ 20ರಷ್ಟು ಏರಿಕೆ ನಿರೀಕ್ಷೆ: ಅಮೂಲ್

ನವದೆಹಲಿ (ಪಿಟಿಐ): ಕೋವಿಡ್ ಸಾಂಕ್ರಾಮಿಕದ ನಂತರ ಬ್ರ್ಯಾಂಡೆಡ್ ಹಾಲು ಉತ್ಪನ್ನಗಳಿಗೆ ಬೇಡಿಕೆ ಹೆಚ್ಚಾಗುತ್ತಿದೆ. ಹೀಗಾಗಿ ಪ್ರಸಕ್ತ ಹಣಕಾಸು ವರ್ಷದಲ್ಲಿ ವರಮಾನ ಶೇಕಡ 20ರಷ್ಟು ಹೆಚ್ಚಾಗಿ ₹ 66 ಸಾವಿರ ಕೋಟಿಗೆ ತಲುಪುವ ನಿರೀಕ್ಷೆ ಇದೆ ಎಂದು ಅಮೂಲ್ ಬ್ರ್ಯಾಂಡ್ ಅಡಿಯಲ್ಲಿ ವಹಿವಾಟು ನಡೆಸುವ ಗುಜರಾತ್ ಸಹಕಾರ ಹಾಲು ಮಾರಾಟ ಮಹಾಮಂಡಳದ (ಜಿಸಿಎಂಎಂಎಫ್) ವ್ಯವಸ್ಥಾಪಕ ನಿರ್ದೇಶಕ ಜಯನ್ ಮೆಹ್ತಾ ಹೇಳಿದ್ದಾರೆ.

2022–23ನೇ ಹಣಕಾಸು ವರ್ಷದಲ್ಲಿ ಮಹಾಮಂಡಳವು ₹ 55,055 ಕೋಟಿ ಮೊತ್ತದ ವಹಿವಾಟು ನಡೆಸಿದೆ. 2021–22ನೇ ಹಣಕಾಸು ವರ್ಷಕ್ಕೆ ಹೋಲಿಸಿದರೆ ಇದು ಶೇ 18.5ರಷ್ಟು ಹೆಚ್ಚು.

ಪ್ರಜಾ ಮತ
ಜನತಂತ್ರದ ಹಬ್ಬ

ದುಡಿಯುವ ವರ್ಗದ ಧ್ವನಿಗಿಲ್ಲ ಬೆಲೆ 9

ಟಿಕೆಟ್: 'ಕೈ' ಶಾಸಕರಲ್ಲಿ ಆತಂಕ 8

ಕೇಂದ್ರ ಸರ್ಕಾರದ ವಿರುದ್ಧ ಕಾಂಗ್ರೆಸ್ ಹೊಸ ಆರೋಪ

'ಅದಾನಿ ಸಮೂಹಕ್ಕೆ ಚೀನಾ ನಂಟು'

ನವದೆಹಲಿ (ಪಿಟಿಐ): ಅದಾನಿ ಸಮೂಹಕ್ಕೆ ಚೀನಾ ನಂಟಿದೆ ಎಂಬ ಆರೋಪಗಳನ್ನು ಮುಂದಿಟ್ಟುಕೊಂಡು ಕಾಂಗ್ರೆಸ್ ಪಕ್ಷವು ಕೇಂದ್ರ ಸರ್ಕಾರದ ವಿರುದ್ಧ ಭಾನುವಾರ ವಾಗ್ದಾಳಿ ನಡೆಸಿದೆ.

ಈ ಆರೋಪಗಳಿಗೆ ಸಂಬಂಧಿಸಿ ಮಾಧ್ಯಮಗಳಲ್ಲಿ ಪ್ರಕಟವಾಗಿರುವ ವರದಿಯನ್ನು ಉಲ್ಲೇಖಿಸಿರುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್, 'ಚೀನಾ ಕಂಪನಿಗಳೊಂದಿಗೆ ನಂಟು ಹೊಂದಿದ್ದರೂ ಅದಾನಿ ಸಮೂಹಕ್ಕೆ ದೇಶದ ಕೆಲ ಬಂದರುಗಳ ನಿರ್ವಹಣೆ ಗುತ್ತಿಗೆಯನ್ನು ಏಕೆ ನೀಡಲಾಗಿದೆ' ಎಂದು ಪ್ರಶ್ನಿಸಿದ್ದಾರೆ.

'ತೈವಾನ್‌ನ ವಾನ್ ಹೈ ಲೈನ್ಸ್ ಎಂಬ ಕಂಪನಿಗೆ ಚೀನಾದ ನಂಟಿದೆ ಎಂಬುದು ಪರಿಶೀಲನೆಯಿಂದ ಪತ್ತೆಯಾಗಿತ್ತು. ಹೀಗಾಗಿ, ಎಪಿಎಂ ಟರ್ಮಿನಲ್ಸ್ ಮ್ಯಾನೇಜ್‌ಮೆಂಟ್ ಹಾಗೂ ವಾನ್ ಹೈ ಲೈನ್ಸ್ ಒಳಗೊಂಡ ಒಕ್ಕೂಟಕ್ಕೆ ಸುರಕ್ಷತೆಗೆ ಸಂಬಂಧಿಸಿದ ಅನುಮತಿಯನ್ನು ನೀಡಲು ಸರ್ಕಾರ ಕಳೆದ ವರ್ಷ ನಿರಾಕರಿಸಿತ್ತು' ಎಂಬ ಮಾಧ್ಯಮದ ವರದಿಯನ್ನು ಉಲ್ಲೇಖಿಸಿ, ಜೈರಾಮ್ ರಮೇಶ್ ಅವರು ವಾಗ್ದಾಳಿ ನಡೆಸಿದ್ದಾರೆ.

ಜವಾಹರಲಾಲ್ ನೆಹರೂ ಬಂದರು ಪ್ರಾಧಿಕಾರದ ಟರ್ಮಿನಲ್‌ನಲ್ಲಿ ಕಂಟೇನರ್‌ಗಳ ನಿರ್ವಹಣೆಗೆ ಸಂಬಂಧಿಸಿದ ಗುತ್ತಿಗೆಯನ್ನು ಪಡೆಯಲು ಒಕ್ಕೂಟ ನಡೆಸಿದ್ದ ಪ್ರಯತ್ನಕ್ಕೆ ಸರ್ಕಾರದ ಈ ಕ್ರಮ ಅಡ್ಡಿಯಾಗಿತ್ತು ಎಂದು ಅವರು ಹೇಳಿಕೆಯೊಂದರಲ್ಲಿ ತಿಳಿಸಿದ್ದಾರೆ.

ಚೀನಾದ ಕಂಪನಿಗಳು ಹಾಗೂ ಚೀನಾದೊಂದಿಗೆ ನಂಟು ಹೊಂದಿರುವ ಕಂಪನಿಗಳು ದೇಶದಲ್ಲಿ ಯಾವುದೇ ಬಂದರು ಮತ್ತು ಟರ್ಮಿನಲ್ ನಿರ್ವಹಣೆಯ ಗುತ್ತಿಗೆ ಪಡೆಯುವುದನ್ನು ತಡೆಯುವುದೇ ಸರ್ಕಾರದ ನೀತಿಯಾಗಿದೆ. ಆದರೆ, ಅದಾನಿ ಸಮೂಹಕ್ಕೆ ಚೀನಾದೊಂದಿಗೆ ಇರಬಹುದಾದ ನಂಟು ಈಗ ಹೊಸ ಪ್ರಶ್ನೆಗಳು ಹುಟ್ಟುವಂತೆ ಮಾಡಿದೆ ಎಂದೂ ಅವರು ಟೀಕಿಸಿದ್ದಾರೆ.

'ಚೀನಾ ಪ್ರಜೆ ಚಾಂಗ್ ಚುಂಗ್–ಲಿಂಗ್ ಅವರು ಅದಾನಿ ಸಮೂಹದೊಂದಿಗೆ ನಿಕಟ ಸಂಪರ್ಕ ಹೊಂದಿದ್ದಾರೆ. 'ಚಾಂಗ್ ಚುಂಗ್–ಲಿಂಗ್ ಅವರ ಪುತ್ರ ಪಿಎಂಸಿ ಪ್ರಾಜೆಕ್ಟ್ಸ್ ಎಂಬ ಕಂಪನಿ ಮಾಲೀಕ. ಈ ಕಂಪನಿಯು ಅದಾನಿ ಸಮೂಹಕ್ಕೆ ಹಲವಾರು ಬಂದರುಗಳು, ಟರ್ಮಿನಲ್‌ಗಳು, ರೈಲು ಮಾರ್ಗಗಳು, ವಿದ್ಯುತ್ ಮಾರ್ಗ ಹಾಗೂ ಇತರ ಮೂಲಸೌಕರ್ಯಗಳನ್ನು ನಿರ್ಮಿಸಿಕೊಟ್ಟಿದೆ' ಎಂದು ಹೇಳಿದ್ದಾರೆ.

ಆರೋಪಗಳು

- ಶಾಂಘೈ ಮೂಲದ ಎರಡು ಸರಕು ಸಾಗಣೆ ಕಂಪನಿಗಳನ್ನು ಅದಾನಿ ಸಮೂಹ ನಿರ್ವಹಿಸುತ್ತಿದೆ
- ಚೀನಾದ ಮಿತ್ರ ಉತ್ತರ ಕೊರಿಯಾಕ್ಕೆ ಈ ಕಂಪನಿ ಮೂಲಕ ಪೆಟ್ರೋಲ್ ಅಕ್ರಮ ಸಾಗಣೆ ನಡೆದಿದೆ

ಚಿನಕುರಳಿ

ಪ್ರಕಾಶ್ ಶೆಟ್ಟಿ



ಬಡ್ಡಿ ದರ ಸತತ ಏರಿಕೆಯ ಪರಿಣಾಮ

ಅಂಚೆ ಉಳಿತಾಯ ಯೋಜನೆಗೆ ಹೆಚ್ಚಿದ ಆಕರ್ಷಣೆ

ನವದೆಹಲಿ (ಪಿಟಿಐ): ಸಣ್ಣ ಉಳಿತಾಯ ಯೋಜನೆಗಳ ಬಡ್ಡಿ ದರವನ್ನು ಕೇಂದ್ರ ಸರ್ಕಾರವು ಸತತ ಮೂರು ತ್ರೈಮಾಸಿಕಗಳಲ್ಲಿ ಹೆಚ್ಚು ಮಾಡಿರುವ ಪರಿಣಾಮವಾಗಿ, ಅಂಚೆ ಕಚೇರಿ ಅವಧಿ ಠೇವಣಿಗಳು ಮತ್ತೆ ಸ್ಪರ್ಧಾತ್ಮಕವಾಗಿ ಕಾಣುತ್ತಿವೆ. ಈ ಉಳಿತಾಯ ಯೋಜನೆಗಳು ಬಡ್ಡಿ ದರ ಏರಿಕೆಗೂ ಮೊದಲು ಬ್ಯಾಂಕ್ ಎಫ್.ಡಿ.ಗಳಿಗಿಂತ ಕಡಿಮೆ ಲಾಭ ತಂದುಕೊಡುತ್ತಿದ್ದವು.

ಅಂಚೆ ಕಚೇರಿಯ ಎರಡು ವರ್ಷಗಳ ಅವಧಿ ಠೇವಣಿಗೆ ಈಗ ಶೇ 6.9ರಷ್ಟು ಬಡ್ಡಿ ಸಿಗುತ್ತಿದೆ. ಇದೇ ಅವಧಿಯ ಬಹುತೇಕ ಬ್ಯಾಂಕ್ ಎಫ್.ಡಿ.ಗಳು ಈಗ ಇಷ್ಟೇ ಪ್ರಮಾಣದ ಬಡ್ಡಿ ನೀಡುತ್ತಿವೆ.



ಆರ್‌ಬಿಐ ರೆಪೊ ದರವನ್ನು 2022ರ ಮೇ ತಿಂಗಳಿನಿಂದ ಹೆಚ್ಚಿಸುತ್ತಿದೆ. ಬ್ಯಾಂಕ್‌ಗಳು ತಮ್ಮಲ್ಲಿನ ಠೇವಣಿಯನ್ನು ಹೆಚ್ಚಿಸಿಕೊಳ್ಳುವ ಉದ್ದೇಶದಿಂದ ಕಳೆದ ಆರ್ಥಿಕ ವರ್ಷದ ದ್ವಿತೀಯಾರ್ಧದಲ್ಲಿ ಠೇವಣಿಗಳ ಮೇಲಿನ ಬಡ್ಡಿ ದರವನ್ನು ಹೆಚ್ಚಿಸುವ ಕೆಲಸಕ್ಕೆ ಚುರುಕು ನೀಡಿದವು.

ಕೇಂದ್ರ ಸರ್ಕಾರವು ಸಣ್ಣ ಉಳಿತಾಯ ಯೋಜನೆಗಳ ಮೇಲಿನ ಬಡ್ಡಿ ದರವನ್ನು ಅಕ್ಟೋಬರ್–ಡಿಸೆಂಬರ್ ತ್ರೈಮಾಸಿಕದಲ್ಲಿ ಗರಿಷ್ಠ ಶೇ 0.30ರವರೆಗೆ, ಜನವರಿ–ಮಾರ್ಚ್ ತ್ರೈಮಾಸಿಕದಲ್ಲಿ ಗರಿಷ್ಠ ಶೇ 1.10ರವರೆಗೆ ಹಾಗೂ ಪ್ರಸಕ್ತ ಹಣಕಾಸು ವರ್ಷದ ಏಪ್ರಿಲ್–ಜೂನ್ ತ್ರೈಮಾಸಿಕಕ್ಕೆ ಗರಿಷ್ಠ ಶೇ 0.70ರವರೆಗೆ ಹೆಚ್ಚಿಸಿದೆ. ಇದಕ್ಕೂ ಮೊದಲು ಸಣ್ಣ ಉಳಿತಾಯ ಯೋಜನೆಗಳ ಮೇಲಿನ ಬಡ್ಡಿ ದರವು ಸತತ ಒಂಬತ್ತು ತ್ರೈಮಾಸಿಕಗಳಲ್ಲಿ ಯಾವ ಬದಲಾವಣೆಯನ್ನೂ ಕಂಡಿರಲಿಲ್ಲ.

ಆರ್‌ಬಿಐ ಅಂದಾಜಿನ ಅನ್ವಯ 1 ವರ್ಷದಿಂದ 2 ವರ್ಷಗಳವರೆಗಿನ, ಬ್ಯಾಂಕ್ ರಿಟೇಲ್ ಠೇವಣಿಗಳ ಮೇಲಿನ ಸರಾಸರಿ ಬಡ್ಡಿ ದರವು ಈಗ ಶೇ 6.9ರಷ್ಟು ಇದೆ. ಇದು 2022ರ ಸೆಪ್ಟೆಂಬರ್‌ನಲ್ಲಿ ಶೇ 5.8ರಷ್ಟು ಇತ್ತು.

ಮೂರು ವರ್ಷಗಳ ಅವಧಿಯ ಅಂಚೆ ಕಚೇರಿ ಅವಧಿ ಠೇವಣಿಯ ಬಡ್ಡಿ ದರವು ಶೇ 7ಕ್ಕೆ ತಲುಪಿದೆ. ಇದು ಈ ಮೊದಲು ಶೇ 5.5ರಷ್ಟು ಇತ್ತು. ದೇಶದ ಅತಿದೊಡ್ಡ ಬ್ಯಾಂಕ್ ಆಗಿರುವ ಎಸ್‌ಬಿಐ, ಎರಡು ವರ್ಷಕ್ಕಿಂತ ಹೆಚ್ಚಿನ ಹಾಗೂ ಮೂರು ವರ್ಷಕ್ಕಿಂತ ಕಡಿಮೆ ಅವಧಿಯ ಠೇವಣಿಗೆ ಶೇ 7ರಷ್ಟು ಬಡ್ಡಿ ನೀಡುತ್ತಿದೆ.

ಸೋಮವಾರದ ಉಷ್ಣಾಂಶ 33° ಗರಿಷ್ಠ 21° ಕನಿಷ್ಠ

ಹವಾಮಾನ ಮುನ್ಸೂಚನೆ ನಗರದಲ್ಲಿ ಬೆಳಿಗ್ಗೆ ಮಂಜು ಕವಿದ ವಾತಾವರಣವಿದ್ದು, ನಂತರ ಬಿಸಿಲು ಇರಲಿದೆ.

ಹವಾಮಾನ: ಮಂಗಳವಾರ 34° 22° | ಬುಧವಾರ 35° 22° | ಗುರುವಾರ 36° 23°

ಸೂರ್ಯೋದಯ: 6.12 ಸೂರ್ಯಾಸ್ತ: 6.32 ಚಂದ್ರೋದಯ: ರಾ. 9.28 ಚಂದ್ರಾಸ್ತ: ಬೆ. 8.18

ಭಾನುವಾರದ ಹವಾಮಾನ : ಗರಿಷ್ಠ 33° ಕನಿಷ್ಠ 21°

ಪ್ರಜಾವಾಣಿ

ಕುಂದು ಕೊರತೆ | ಜನದನಿ



ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು. ನಿಮ್ಮ ಅಹವಾಲುಗಳನ್ನು ಇ ಮೇಲ್ ಮಾಡಬೇಕಾದ ವಿಳಾಸ: peoplesproblem@prajavani.co.in. ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (9606038256) ಸಹ ಮಾಡಬಹುದು.

'ಸಪ್ತಗಿರಿ ನಗರದಲ್ಲಿ ಪಾರ್ಕ್ ನಿರ್ಮಿಸಿ'

ರಾಜರಾಜೇಶ್ವರಿ ನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಸಪ್ತಗಿರಿ ನಗರದಲ್ಲಿ ಒಂದೂ ಉದ್ಯಾನವಿಲ್ಲ. ಹೊಸಕೆರೆಹಳ್ಳಿಗೆ ಹೊಂದಿಕೊಂಡಿರುವ ಈ ಬಡಾವಣೆಯಲ್ಲಿ, ಟಾಟಾ ದಿ ಪ್ರೊಮೊಂಟ್ ಸೇರಿ ವಿವಿಧ ಅಪಾರ್ಟ್‌ಮೆಂಟ್ ಸಮುಚ್ಚಯಗಳಿವೆ. ಹಲವು ಮನೆಗಳು ಇದ್ದರೂ, ಉದ್ಯಾನ ಇಲ್ಲದಿರುವುದು ಮಕ್ಕಳಿಗೆ ಆಟವಾಡಲು ಸಮಸ್ಯೆಯಾಗಿದೆ. ವೃದ್ಧರು ಹಾಗೂ ಮಹಿಳೆಯರಿಗೆ ವಾಯುವಿಹಾರಕ್ಕೆ ಸಮಸ್ಯೆಯಾಗಿದ್ದು, ಮುಂಜಾನೆ ಮತ್ತು ಸಂಜೆ ರಸ್ತೆಯಲ್ಲಿಯೇ ವಾಯುವಿಹಾರ ಮಾಡುತ್ತಿದ್ದಾರೆ. ವಾಹನಗಳು ವೇಗವಾಗಿ ಸಂಚರಿಸುವುದರಿಂದ ಭಯದಲ್ಲಿಯೇ ಹೆಜ್ಜೆ ಹಾಕಬೇಕಿದೆ. ಸಪ್ತಗಿರಿ ನಗರದ 6ನೇ ಮುಖ್ಯರಸ್ತೆಯಲ್ಲಿ ಖಾಲಿ ಸ್ಥಳವಿದ್ದು, ಅಲ್ಲಿ ಉದ್ಯಾನ ನಿರ್ಮಿಸಿದರೆ ಸ್ಥಳೀಯರಿಗೆ ಅನುಕೂಲ ಆಗುತ್ತದೆ. ಸ್ಥಳೀಯ ಶಾಸಕರೂ ಆಗಿರುವ ತೋಟಗಾರಿಕೆ ಸಚಿವ ಮುನಿರತ್ನ ಅವರು ಈ ಬಗ್ಗೆ ಗಮನಹರಿಸಿ, ಅಗತ್ಯ ಕ್ರಮಕ್ಕೆ ಅಧಿಕಾರಿಗಳಿಗೆ ಸೂಚಿಸಬೇಕು.

ಶಾರದಾ ಕೇಶವ, ಸ್ಥಳೀಯ ನಿವಾಸಿ

'ರಸ್ತೆ ದುರಸ್ತಿಗೊಳಿಸಿ'

ದೊಡ್ಡಕಲ್ಲಸಂದ್ರದ ನಾರಾಯಣನಗರ 1ನೇ ಹಂತದ 18ನೇ ಮುಖ್ಯರಸ್ತೆಯ 19ನೇ ಕ್ರಾಸ್‌ನ ಮೋರಿ ಮತ್ತು ರಸ್ತೆ ಹದಗೆಟ್ಟಿದೆ. ಈ ರಸ್ತೆಯಲ್ಲಿ ನಿತ್ಯ ಸಾವಿರಾರು ವಾಹನಗಳು ಸಂಚರಿಸುತ್ತವೆ. ಕಳಪೆ ಕಾಮಗಾರಿಯಿಂದ ಕೇವಲ ಒಂದು ತಿಂಗಳಲ್ಲಿ ರಸ್ತೆ ಮತ್ತೆ ಹಾಳಾಗಿದ್ದು, ವಾಹನ ಸವಾರರು ಪರದಾಡುತ್ತಿದ್ದಾರೆ. ಇದರಿಂದ ಶಾಲಾ–ಕಾಲೇಜಿನ ವಿದ್ಯಾರ್ಥಿಗಳು, ನೌಕರರು ತಮ್ಮ ಕಚೇರಿಗಳಿಗೆ ತಡವಾಗಿ ಹೋಗುವಂತಾಗಿದೆ. ರಸ್ತೆ ಮತ್ತು ಮೋರಿ ದುರಸ್ತಿಗೆ ಹಲವು ಬಾರಿ ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ. ಸಂಬಂಧಪಟ್ಟ ಅಧಿಕಾರಿಗಳು ರಸ್ತೆ ಸರಿಪಡಿಸಿ ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕು.

ಸುಬ್ರಹ್ಮಣ್ಯ ಕೆ., ಸ್ಥಳೀಯ ನಿವಾಸಿ



ದೊಡ್ಡಕಲ್ಲಸಂದ್ರದ ನಾರಾಯಣನಗರದ ಮೋರಿ ಮತ್ತು ರಸ್ತೆ ಸ್ಥಿತಿ.



ಕೌದೇನಹಳ್ಳಿಯ ಉದ್ಯಾನದಲ್ಲಿ ನಿರ್ಮಿಸಿರುವ ಶೌಚಾಲಯ.

ಶೌಚಾಲಯ ಉದ್ಘಾಟಿಸಲು ಆಗ್ರಹ

ಕೃಷ್ಣರಾಜಪುರ ವಿಧಾನಸಭಾ ಕ್ಷೇತ್ರದ ರಾಮಮೂರ್ತಿನಗರದ ವಾರ್ಡ್ ಸಂಖ್ಯೆ 26 ಕೌದೇನಹಳ್ಳಿ ಗ್ರಾಮದ ಕೆರೆ ಮತ್ತು ಉದ್ಯಾನದಲ್ಲಿ ಶೌಚಾಲಯ ನಿರ್ಮಿಸಿ ಎರಡು ವರ್ಷ ಕಳೆದರೂ ಉದ್ಘಾಟನೆಯಾಗಿಲ್ಲ. ವಾಯುವಿಹಾರಕ್ಕೆ ಉದ್ಯಾನಕ್ಕೆ ಬರುವವರು, ಮಧುಮೇಹ ಕಾಯಿಲೆಯಿಂದ ಬಳಲುತ್ತಿರುವ ವಯೋವೃದ್ಧರು ಮತ್ತು ಸಾರ್ವಜನಿಕರು ಪರದಾಡುವ ಸ್ಥಿತಿ ನಿರ್ಮಾಣವಾಗಿದೆ. ಕೂಡಲೇ ಬಿಬಿಎಂಪಿ ಅಧಿಕಾರಿಗಳು ಈ ಶೌಚಾಲಯದ ಉದ್ಘಾಟನೆಗೆ ಅಗತ್ಯ ಕ್ರಮ ಕೈಗೊಳ್ಳಬೇಕು.

ಕಿರಣ್ ಕುಮಾರ್ ಜೆ., ಮೇಡಹಳ್ಳಿ (ಕೃಷ್ಣರಾಜಪುರ)

ಕದ್ದ ಕಾರುಗಳಿಗೆ ನಕಲಿ ಫಲಕ ಅಳವಡಿಸಿ ಮಾರಾಟ • ಆರು ಮಂದಿ ಬಂಧನ

₹ 3 ಕೋಟಿ ಮೌಲ್ಯದ 8 ಕಾರು ಜಪ್ತಿ

ಪ್ರಜಾವಾಣಿ ವಾರ್ತೆ



ಇಮ್ರಾನ್ | ಆರ್. ನಸೀಬ್ | ಸೈಯದ್ ರಿಯಾಜ್ | ನಯಾಜ್ ಖಾನ್ | ಮಂಜುನಾಥ್ | ಶಾಬಾಜ್

ಬೆಂಗಳೂರು: ಹೊರರಾಜ್ಯಗಳಲ್ಲಿ ಕಳ್ಳತನ ಮಾಡುತ್ತಿದ್ದ ಕಾರುಗಳಿಗೆ ನಕಲಿ ನೋಂದಣಿ ಫಲಕ ಅಳವಡಿಸಿ ನಗರದಲ್ಲಿ ಮಾರುತ್ತಿದ್ದ ಜಾಲ ಭೇದಿಸಿರುವ ಹೈಗ್ರೌಂಡ್ಸ್ ಠಾಣೆ ಪೊಲೀಸರು, ಆರು ಮಂದಿಯನ್ನು ಬಂಧಿಸಿದ್ದಾರೆ.

'ಶಿವಾಜಿನಗರದ ಆರ್. ನಸೀಬ್ (38), ಅಟ್ಟೂರು ಬಡಾವಣೆಯ ಮಂಜುನಾಥ್ (45), ಫ್ರೇಜರ್‌ಟೌನ್ ಸೈಯದ್ ರಿಯಾಜ್ (34), ಬಾಗಲೂರು ಬಡಾವಣೆಯ ಇಮ್ರಾನ್ (34), ಸಾರಾಯಿ ಪಾಳ್ಯದ ನಯಾಜ್ ಖಾನ್ (32) ಹಾಗೂ ಮೈಸೂರು ಬನ್ನಿ ಮಂಟಪ ಬಳಿಯ ನಿವಾಸಿ ಶಾಬಾಜ್ ಖಾನ್ (31) ಬಂಧಿತರು. ಇವರಿಂದ ₹ 3 ಕೋಟಿ ಮೌಲ್ಯದ 8 ಐಷಾರಾಮಿ ಕಾರುಗಳನ್ನು ಜಪ್ತಿ ಮಾಡಲಾಗಿದೆ' ಎಂದು ಕೇಂದ್ರ ವಿಭಾಗದ ಡಿಸಿಪಿ ಶ್ರೀನಿವಾಸ್ ಗೌಡ ತಿಳಿಸಿದರು.

'ವಿಧಾನ ಪರಿಷತ್ ಸದಸ್ಯ ಎಸ್.ಎಲ್. ಭೋಜೇಗೌಡ ಅವರ ಇನ್ನೊವಾ ಕಾರಿನ ಸಂಖ್ಯಾ ಫಲಕವನ್ನು ನಕಲು ಮಾಡಿ ಬೇರೊಂದು ಕಾರಿಗೆ ಅಳವಡಿಸಲಾಗಿತ್ತು. ಕ್ವೀನ್ಸ್ ರಸ್ತೆಯಲ್ಲಿರುವ 'ಐ ಕಾರ್ಸ್ ಸ್ಟುಡಿಯೊ' ಮಳಿಗೆಯಲ್ಲಿ ಕಾರು ಮಾರಾಟಕ್ಕೆ ಇರಿಸಲಾಗಿತ್ತು.'

'ಕಾರು ಗಮನಿಸಿದ್ದ ಭೋಜೇಗೌಡ ಆಪ್ತ ಸಹಾಯಕ, ಮಳಿಗೆ ಮಾಲೀಕರನ್ನು ಮಾತನಾಡಿಸಿ ಮಾಹಿತಿ ಸಂಗ್ರಹಿಸಿದ್ದರು. ಕದ್ದ ಕಾರು ಎಂಬುದು ಗೊತ್ತಾಗಿ, ಠಾಣೆಗೆ ದೂರು ನೀಡಿದ್ದರು. ಅವರು ನೀಡಿದ್ದ ಸುಳಿವು ಆಧರಿಸಿ ತನಿಖೆ ಕೈಗೊಂಡು, ಆರೋಪಿಗಳನ್ನು ಸೆರೆ ಹಿಡಿಯಲಾಗಿದೆ' ಎಂದು ಅವರು ಹೇಳಿದರು.

ಕಳ್ಳತನದಿಂದಲೇ ಲಕ್ಷ ಲಕ್ಷ ಗಳಿಕೆ: 'ಬಂಧಿತ ಆರೋಪಿಗಳು ತಮ್ಮದೇ ತಂಡ ಕಟ್ಟಿಕೊಂಡು, ಕದ್ದ ಕಾರುಗಳ ಮಾರಾಟಕ್ಕೆ ಇಳಿದಿದ್ದರು. ಇದರಿಂದ ಲಕ್ಷ ಲಕ್ಷ ಗಳಿಸುತ್ತಿದ್ದರು. ಇವರ ಬಂಧನದಿಂದ ಹಲವು ಕಳ್ಳತನ ಪ್ರಕರಣಗಳು ಪತ್ತೆಯಾಗಿವೆ' ಎಂದು ಪೊಲೀಸರು ಹೇಳಿದರು.

'ಮಹಾರಾಷ್ಟ್ರ, ದೆಹಲಿ, ಗೋವಾ ಹಾಗೂ ಇತರೆ ರಾಜ್ಯಗಳ ಕಾರು ಡೀಲರ್‌ಗಳ ಜೊತೆ ಆರೋಪಿಗಳು ಒಡನಾಟ ಹೊಂದಿದ್ದರು. ಆ ರಾಜ್ಯಗಳಲ್ಲಿ ಕಳ್ಳತನ ಮಾಡುತ್ತಿದ್ದ ಕಾರುಗಳನ್ನು ಕಡಿಮೆ ಬೆಲೆಗೆ ಖರೀದಿಸಿ, ನಗರಕ್ಕೆ ತರುತ್ತಿದ್ದರು. ನಂತರ, ವಾಹನಗಳ ನೋಂದಣಿ ಬಗ್ಗೆ ನಕಲಿ ದಾಖಲೆ ಸೃಷ್ಟಿ-ಸುತ್ತಿದ್ದರು. ಅದೇ ದಾಖಲೆ ಬಳಸಿ, ನಕಲಿ ನೋಂದಣಿ ಫಲಕ ಅಳವಡಿಸು-ತ್ತಿದ್ದರು' ಎಂದರು.

'ಮಾರಾಟ ಮಳಿಗೆಗಳಲ್ಲಿ ಕಾರು ನಿಲ್ಲಿಸುತ್ತಿದ್ದರು. ಯಾರಾದರೂ ಗ್ರಾಹಕರು ಬಂದು ಕಾರು ನೋಡಿದರೆ, ನಕಲಿ ದಾಖಲೆಗಳನ್ನು ತೋರಿಸಿ ನಂಬಿ-ಸುತ್ತಿದ್ದರು. ಆರೋಪಿಗಳು ಹಲವು ವರ್ಷಗಳಿಂದ ಕೃತ್ಯ ಎಸಗುತ್ತಿದ್ದರೂ ಸುಳಿವು ಸಿಕ್ಕಿರಲಿಲ್ಲ' ಎಂದು ಪೊಲೀಸರು ತಿಳಿಸಿದರು.

ಜೆಡಿಎಸ್ ಮುಖಂಡನೆಂದು ಹೇಳಿಕೆ: 'ಬಂಧಿತ ಆರೋಪಿ ಶಾಬಾಜ್, ಮೈಸೂರು ಭಾಗದ ಜೆಡಿಎಸ್ ಮುಖಂಡನೆಂದು ಹೇಳಿಕೆ ನೀಡಿದ್ದಾನೆ. ಈತನ ವಿರುದ್ಧ ದೆಹಲಿಯ ಚಿತ್ತರಂಜನ್ ಠಾಣೆಯಲ್ಲೂ ಪ್ರಕರಣ ದಾಖಲಾಗಿತ್ತು' ಎಂದು ಪೊಲೀಸರು ಹೇಳಿದರು.

ಸುದೀಪ್‌ಗೆ ಬೆದರಿಕೆ: ದೊಮ್ಮಲೂರು ಅಂಚೆ ಕಚೇರಿಯಿಂದ ಪತ್ರ

ಪ್ರಜಾವಾಣಿ ಚಿತ್ರ

ಬೆಂಗಳೂರು: ನಟ ಸುದೀಪ್ ಅವರಿಗೆ ಬಂದಿರುವ ಎರಡು ಅನಾಮಧೇಯ ಪತ್ರಗಳ ಬಗ್ಗೆ ಸಿಸಿಬಿ ಪೊಲೀಸರು ತನಿಖೆ ಚುರುಕುಗೊಳಿಸಿದ್ದು, ಎರಡೂ ಪತ್ರಗಳು ದೊಮ್ಮಲೂರು ಅಂಚೆ ಕಚೇರಿಯಿಂದ ಬಂದಿರುವ ಸಂಗತಿಯನ್ನು ಪತ್ತೆ ಹಚ್ಚಿದ್ದಾರೆ.

ಪುಟ್ಟೇನಹಳ್ಳಿ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣದ ತನಿಖೆ ನಡೆಸುತ್ತಿರುವ ಸಿಸಿಬಿ ಪೊಲೀಸರ ತಂಡ, ಪತ್ರಗಳನ್ನು ಸುಪರ್ದಿಗೆ ಪಡೆದಿತ್ತು. ಪತ್ರ ತಂದು ಕೊಟ್ಟವರು ಹಾಗೂ ಇತರರನ್ನು ವಿಚಾರಣೆ ನಡೆಸಿತ್ತು. ದೊಮ್ಮಲೂರು ಅಂಚೆ ಕಚೇರಿಯಿಂದ ಪತ್ರ ಬಂದಿರುವುದು ಗೊತ್ತಾಗುತ್ತಿದ್ದಂತೆ, ಸಿಬ್ಬಂದಿಯಿಂದ ಹೆಚ್ಚಿನ ಮಾಹಿತಿ ಪಡೆದುಕೊಂಡಿದೆ.

'ಕಾರೊಂದರಲ್ಲಿ ಬಂದಿದ್ದ ಆರೋಪಿಗಳು, ದೊಮ್ಮಲೂರು ಅಂಚೆ ಕಚೇರಿ ಡಬ್ಬಿಯಲ್ಲಿ ಪತ್ರ ಹಾಕಿ ಹೋಗಿದ್ದಾರೆ. ಕಾರಿನ ನೋಂದಣಿ ಸಂಖ್ಯೆ ಆಧರಿಸಿ ಮಾಲೀಕರನ್ನು ಪತ್ತೆ ಮಾಡಲಾಗಿತ್ತು. ಕೆಂಗೇರಿ ನಿವಾಸಿಯಾಗಿರುವ ಮಾಲೀಕರನ್ನು ವಿಚಾರಿಸಿದಾಗ, ತಮಗೂ ಪ್ರಕರಣಕ್ಕೂ ಯಾವುದೇ ಸಂಬಂಧವಿಲ್ಲವೆಂದು ಹೇಳುತ್ತಿದ್ದಾರೆ. ಹೆಚ್ಚಿನ ವಿಚಾರಣೆ ನಡೆಸಿದಾಗ, ಅವರು ಅಮಾಯಕರೆಂಬುದು ಗೊತ್ತಾಗಿದೆ' ಎಂದು ಸಿಸಿಬಿ ಮೂಲಗಳು ತಿಳಿಸಿವೆ.

'ಆರೋಪಿಗಳು ನಕಲಿ ನೋಂದಣಿ ಫಲಕ ಅಳವಡಿಸಿದ್ದ ಕಾರು ಬಳಸಿ, ಅಂಚೆ ಕಚೇರಿಗೆ ಬಂದು ಹೋಗಿರುವುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ. ಅವರು ಯಾರು ಎಂಬುದನ್ನು ತಿಳಿಯಲು ತನಿಖೆ ಮುಂದುವರಿಸಲಾಗಿದೆ' ಎಂದು ಹೇಳಿವೆ.

ಮಹಿಳೆಯನ್ನು ತಳ್ಳಿ ಕಳ್ಳ ಪರಾರಿ

ಪ್ರಜಾವಾಣಿ ಚಿತ್ರ

ಬೆಂಗಳೂರು: ಮರಿಯಪ್ಪನಪಾಳ್ಯದ ಮನೆಯೊಂದಕ್ಕೆ ನುಗ್ಗಿದ್ದ ಕಳ್ಳನೊಬ್ಬ ತನ್ನನ್ನು ಹಿಡಿಯಲು ಬಂದ ಮಹಿಳೆಯನ್ನು ತಳ್ಳಿ ಪರಾರಿಯಾಗಿದ್ದಾನೆ. ಈ ಸಂಬಂಧ ಜ್ಞಾನಭಾರತಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಸ್ಥಳೀಯ ನಿವಾಸಿ 26 ವರ್ಷದ ಮಹಿಳೆ ದೂರು ನೀಡಿದ್ದು, ₹ 1 ಲಕ್ಷ ಮೌಲ್ಯದ ಚಿನ್ನಾಭರಣ ಕದ್ದೊಯ್ದಿರುವ ಆರೋಪಿ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಕಂಪನಿಯೊಂದರ ಉದ್ಯೋಗಿಯಾಗಿರುವ ಪತಿ ಜೊತೆ ಮಹಿಳೆ ವಾಸವಿದ್ದಾರೆ. ಏ. 7ರಂದು ರಾತ್ರಿ ದಂಪತಿ ಕೊಠಡಿಯಲ್ಲಿ ಮಲಗಿದ್ದರು. ಮಲಗುವುದಕ್ಕೂ ಮುನ್ನ ತಮ್ಮ ಚಿನ್ನದ ಸರ ಹಾಗೂ ಓಲೆಯನ್ನು ಬಿಚ್ಚಿ ಟೇಬಲ್ ಮೇಲಿಟ್ಟಿದ್ದರು. ತಡರಾತ್ರಿ 1.30ರ ಸುಮಾರಿಗೆ ಮಹಿಳೆ ಶೌಚಾಲಯಕ್ಕೆ ಹೋಗಿದ್ದರು. ಅಲ್ಲಿಂದ ವಾಪಸು ಬರುವಾಗ, ಕಳ್ಳ ಮನೆಯಿಂದ ಹೊರಗೆ ಓಡಿ ಹೋಗುತ್ತಿದ್ದದ್ದು ಕಂಡಿತ್ತು.'

'ಕಳ್ಳನನ್ನು ಬೆನ್ನಟ್ಟಿದ್ದ ಮಹಿಳೆ, ಆತನ ಹಿಡಿಯಲು ಮುಂದಾಗಿದ್ದರು. ಈ ವೇಳೆ ಆರೋಪಿ, ಮಹಿಳೆಯನ್ನು ತಳ್ಳಿದ್ದ. ಅವರ ತಲೆ ಗೋಡೆಗೆ ತಾಗಿ, ತೀವ್ರ ಪೆಟ್ಟಾಗಿ ಬಿದ್ದಿದ್ದರು. ನಂತರ, ಕಳ್ಳ ಮನೆಯಿಂದ ಓಡಿ ಹೋಗಿದ್ದಾನೆ. ಕೆಲ ನಿಮಿಷಗಳ ನಂತರ ಎಚ್ಚರ-ಗೊಂಡಿದ್ದ ಮಹಿಳೆ, ಪತಿಗೆ ವಿಷಯ ತಿಳಿಸಿದ್ದರು. ಬಿಚ್ಚಿಟ್ಟಿದ್ದ ಆಭರಣಗಳು ಸ್ಥಳದಲ್ಲಿ ಇರಲಿಲ್ಲ. ಕಳ್ಳನೇ ಅವುಗಳನ್ನು ಕದ್ದೊಯ್ದಿದ್ದಾನೆ' ಎಂದು ಮೂಲಗಳು ತಿಳಿಸಿವೆ.

ಅಕ್ಕಮಹಾದೇವಿಗೆ ವಚನ ಪ್ರಣಾಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಆಧ್ಯಾತ್ಮಿಕ ದೃಷ್ಟಿಯಿಂದ ಮಾತ್ರವಲ್ಲದೆ, ಸಾಹಿತ್ಯ– ಸಾಮಾಜಿಕ ನೆಲೆಗಟ್ಟಿನಲ್ಲಿಯೂ ಮಹಾದೇವಿ ಕನ್ನಡದ ಅನ್ವರ್ಥಕ ಅಕ್ಕ' ಎಂದು ವಚನಜ್ಯೋತಿ ಬಳಗದ ಅಧ್ಯಕ್ಷ ಎಸ್. ಪಿನಾಕಪಾಣಿ ಹೇಳಿದರು.

ವಚನಜ್ಯೋತಿ ಬಳಗ ಆಯೋಜಿಸಿದ್ದ ಅಕ್ಕಮಹಾದೇವಿ ಜಯಂತಿಯಲ್ಲಿ ಮಾತನಾಡಿದ ಅವರು, ಚೆನ್ನಮಲ್ಲಿಕಾ-ರ್ಜುನನೇ ತನ್ನ ಗಂಡನೆಂದು ಹೊರಟ ಮಹಾದೇವಿಯಕ್ಕನ ಕುರಿತಾಗಿಯೇ ಹೆಚ್ಚು ಚರ್ಚೆಗಳಾಗುತ್ತಿವೆ. ಆದರೆ, ಮಹಾದೇವಿಯಕ್ಕನ ವಚನಗಳ ವೈಶಿಷ್ಟ್ಯದ ಕುರಿತು ಹೆಚ್ಚು ಅಧ್ಯಯನ ನಡೆದಿಲ್ಲ' ಎಂದು ವಿಷಾದಿಸಿದರು.

'ಸಿಕ್ಕಿರುವ 434 ವಚನಗಳಲ್ಲಿ ಅಕ್ಕ ಬಳಸಿರುವ ಭಾಷೆ ಅತ್ಯಂತ ವಿಶಿಷ್ಟವಾ-ಗಿದ್ದು ಬೆಳದಿಂಗಳು ಬಿಸಿಲಾಯಿತ್ತು, ಸುಡಲೀ ವಿರಹವ, ನಾನಾರಿಗೆ ದೃಢಗೆಡುವೆ, ಕಿಚ್ಚಿಲ್ಲದ ಬೇಗೆಯಲ್ಲಿ ಬೆಂದೆನವ್ವ ಮೊದಲಾದವು ಕನ್ನಡದ ವಿಸ್ಮಯ ಮಹಾದೇವಿಯಕ್ಕ ಎನ್ನುವುದಕ್ಕೆ ಸಾಕ್ಷಿ' ಎಂದರು.

ವಚನ ಕಲಿಕಾ ತರಗತಿ ವಿದ್ಯಾರ್ಥಿಗಳು ಮಹಾದೇವಿಯಕ್ಕನ ವಚನಗಳನ್ನು ಹಾಡುವುದರ ಮೂಲಕ ಅಕ್ಕನಿಗೆ ವಚನ ಪ್ರಣಾಮ ಸಲ್ಲಿಸಿದರು. ಕೆ.ಸಿ.ಎಚ್.ಎಸ್. ಕ್ಷೇಮಾಭಿವೃದ್ಧಿ ಸಂಘದ ಮಾಜಿ ಅಧ್ಯಕ್ಷ ಡಿ. ಚೆನ್ನಮಲ್ಲಯ್ಯ, ವಚನಜ್ಯೋತಿ ಬಳಗ ಸಿಇಒ ರಾಜಾಗುರುಪ್ರಸಾದ್, ವಚನ ಕಲಿಕಾ ತರಗತಿಯ ಸಂಚಾಲಕ ದಿವಾಕರ್ ಭಾಗವಹಿಸಿದ್ದರು.



ವಚನಜ್ಯೋತಿ ಬಳಗದಿಂದ 'ಅಕ್ಕಮಹಾದೇವಿಗೆ ವಚನ ಪ್ರಣಾಮ' ನಡೆಯಿತು. ಬಳಗದ ಅಧ್ಯಕ್ಷ ಪಿನಾಕಪಾಣಿಯವರೊಂದಿಗೆ ವಚನ ಕಲಿಕಾ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಬಾಲಕನ ಕೊಲೆ: ಮೂವರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆ.ಜಿ. ಹಳ್ಳಿ ಠಾಣೆ ವ್ಯಾಪ್ತಿಯ ಪಿಳ್ಳಣ್ಣ ಗಾರ್ಡನ್ ರೈಲು ಹಳಿ ಸಮೀಪದಲ್ಲಿ ನಡೆದಿದ್ದ ಬಾಲಕ ಎಂ. ಸತೀಶ್ (15) ಕೊಲೆ ಪ್ರಕರಣ ಸಂಬಂಧ, ಮೂವರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

'ಸ್ಥಳೀಯ ಮುಸ್ಲಿಂ ಕಾಲೊನಿ ನಿವಾಸಿ ಸುಹೇಲ್ ಉಲ್ಲಾ ಷರೀಫ್ (19), ಪಿಳ್ಳಣ್ಣ ಗಾರ್ಡನ್‌ನ ಸೈಯದ್ ಶೋಯಿಬ್ (20) ಹಾಗೂ ಮೊಹಮ್ಮದ್ ಹುಸೇನ್ (18)ನನ್ನು ಬಂಧಿಸಲಾಗಿದೆ. ಮೂವರು ಸೇರಿ ಸತೀಶ್‌ನನ್ನು ಕೊಲೆ ಮಾಡಿ ಪರಾರಿಯಾಗಿದ್ದರು' ಎಂದು ಪೂರ್ವ ವಿಭಾಗದ ಡಿಸಿಪಿ ಭೀಮಾಶಂಕರ್ ಗುಳೇದ್ ಹೇಳಿದರು.

'ಸತೀಶ್, ತಮ್ಮ ಮನೆಯಲ್ಲಿದ್ದ ಕುದುರೆ ಸವಾರಿ ಮಾಡುತ್ತಿದ್ದ. ಅದರ ಜೊತೆ ನಗರದ ಹಲವೆಡೆ ಸುತ್ತಾಡುತ್ತಿದ್ದ. ಇತ್ತೀಚೆಗೆ ರಿಚರ್ಡ್ಸ್ ಉದ್ಯಾನ ಬಳಿ ಕುದುರೆ ಮೇಲೆ ಹೊರಟಿದ್ದ ಸತೀಶ್‌ನನ್ನು ಮಾತನಾಡಿಸಿದ್ದ ಆರೋಪಿ ಸುಹೇಲ್, 'ಕುದುರೆ ಕೊಡು. ಅದರ ಮೇಲೆ ಕುಳಿತು ಫೋಟೊ ತೆಗೆದುಕೊಳ್ಳುತ್ತೇನೆ' ಎಂದಿದ್ದ. ಅದಕ್ಕೆ ಆತ ಒಪ್ಪಿರಲಿಲ್ಲ. ಸಿಟ್ಟಾದ ಆರೋಪಿ, ಸತೀಶ್‌ನ ಕಪಾಳಕ್ಕೆ ಹೊಡೆದು ಸ್ಥಳದಿಂದ ಹೊರಟು ಹೋಗಿದ್ದ.'

'ಕೆಲ ದಿನ ಬಿಟ್ಟು ಲಿಂಗರಾಜಪುರ ಬಳಿ ಸತೀಶ್ ಹಾಗೂ ಸುಹೇಲ್ ಎದುರಾಗಿದ್ದರು. ಅಲ್ಲಿಯೂ ಇಬ್ಬರ ನಡುವೆ ಜಗಳವಾಗಿತ್ತು. ಏಪ್ರಿಲ್ 2ರಂದು ರಾತ್ರಿ ಬಿಲಾಲ್ ಮಸೀದಿ ಬಳಿ ಹೋಗುತ್ತಿದ್ದ ಸತೀಶ್‌ನನ್ನು ಅಡ್ಡಗಟ್ಟಿದ್ದ ಆರೋಪಿಗಳು, ಮಾತನಾಡಬೇಕೆಂದು ಹೇಳಿ ಪಿಳ್ಳಣ್ಣ ಗಾರ್ಡನ್ ಬಳಿಯ ರೈಲು ಹಳಿ ಸಮೀಪ ಕರೆದೊಯ್ದಿದ್ದರು' ಎಂದು ಡಿಸಿಪಿ ತಿಳಿಸಿದರು.

'ಆರೋಪಿಗಳು ಸತೀಶ್ ತಲೆಗೆ ದೊಣ್ಣೆಯಿಂದ ಹೊಡೆದಿದ್ದರು. ತೀವ್ರ ರಕ್ತಸ್ರಾವದಿಂದ ಸ್ಥಳದಲ್ಲಿ ಮೃತಪಟ್ಟಿದ್ದ. ಆರೋಪಿಗಳು ಪರಾರಿಯಾಗಿದ್ದರು. ಮೃತದೇಹ ನೋಡಿದ್ದ ಸ್ಥಳೀಯರು ಠಾಣೆಗೆ ಮಾಹಿತಿ ನೀಡಿದ್ದರು' ಎಂದು ಹೇಳಿದರು.

ಐಪಿಎಲ್ : ವಾಹನ ನಿಲುಗಡೆ ನಿರ್ಬಂಧ

ಬೆಂಗಳೂರು: ನಗರದ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಏ. 10ರಂದು ಟಾಟಾ ಐಪಿಎಲ್ ಕ್ರಿಕೆಟ್ ಪಂದ್ಯ ನಡೆಯಲಿದ್ದು, ಈ ಅವಧಿಯಲ್ಲಿ ಕ್ರೀಡಾಂಗಣ ಸುತ್ತ ಮುತ್ತ ಸಂಚಾರ ದಟ್ಟಣೆ ಉಂಟಾಗುವ ಸಾಧ್ಯತೆ ಇದೆ.

ಸಂಚಾರ ದಟ್ಟಣೆ ನಿಯಂತ್ರಿಸುವ ಉದ್ದೇಶದಿಂದ ಕೆಲ ರಸ್ತೆಗಳಲ್ಲಿ ಸಂಜೆ 4 ಗಂಟೆಯಿಂದ 10 ಗಂಟೆಯವರೆಗೆ ವಾಹನಗಳ ನಿಲುಗಡೆಯನ್ನು ಪೊಲೀಸರು ನಿರ್ಬಂಧಿಸಿದ್ದಾರೆ.

ಆರ್‌ಸಿಬಿ ಹಾಗೂ ಎಲ್‌ಎಸ್‌ಜಿ ತಂಡಗಳ ನಡುವಿನ ಪಂದ್ಯ ವೀಕ್ಷಿಸಲು ಹೆಚ್ಚು ಜನರು ಆಗಮಿಸುವ ನಿರೀಕ್ಷೆ ಇದೆ. ಈ ಪಂದ್ಯದ ಎಲ್ಲ ಟಿಕೆಟ್‌ಗಳು ಮಾರಾಟವಾಗಿವೆ. 'ಕ್ರೀಡಾಂಗಣಕ್ಕೆ ಹೊಂದಿಕೊಂಡಿರುವ ಕಬ್ಬನ್ ರಸ್ತೆ, ಕ್ವೀನ್ಸ್ ರಸ್ತೆ, ಎಂ.ಜಿ. ರಸ್ತೆ, ರಾಜಭವನ ರಸ್ತೆ, ಸೆಂಟ್ರಲ್ ಸ್ಟ್ರೀಟ್, ಸೇಂಟ್ ಮಾರ್ಕ್ಸ್ ರಸ್ತೆ, ಮ್ಯೂಸಿಯಂ ರಸ್ತೆ, ಕಸ್ತೂರಬಾ ರಸ್ತೆ, ವಿಧಾನಸೌಧ–ಹೈಕೋರ್ಟ್ ಎದುರಿನ ರಸ್ತೆ, ಟ್ರಿನಿಟಿ ರಸ್ತೆ, ಲ್ಯಾವೆಲ್ಲೆ ರಸ್ತೆ, ವಿಠ್ಠಲ್ ಮಲ್ಯ ರಸ್ತೆ, ನೃಪತುಂಗ ರಸ್ತೆಯಲ್ಲಿ ದಟ್ಟಣೆ ಉಂಟಾಗುವ ಸಾಧ್ಯತೆ ಇದೆ. ಈ ರಸ್ತೆಗಳಲ್ಲಿ ವಾಹನಗಳ ನಿಲುಗಡೆಗೆ ಅವಕಾಶವಿಲ್ಲ' ಎಂದು ಸಂಚಾರಿ ಪೊಲೀಸರು ಹೇಳಿದ್ದಾರೆ.

'ಪಂದ್ಯ ವೀಕ್ಷಿಸಲು ಬರುವ ಜನರು, ತಮ್ಮ ವಾಹನಗಳನ್ನು ಸೇಂಟ್ ಜೋಸೆಫ್ ಇಂಡಿಯಾ ಸ್ಕೂಲ್ ಮೈದಾನ, ಯು.ಬಿ ಸಿಟಿ ಹಾಗೂ ಶಾಂತಿನಗರ ಬಿಎಂಟಿಸಿ ಬಸ್ ನಿಲ್ದಾಣದ ಪಾರ್ಕಿಂಗ್ ಜಾಗದಲ್ಲಿ ನಿಲ್ಲಿಸಬೇಕು. ಜೊತೆಗೆ, ಸಾರ್ವಜನಿಕರು ಮೆಟ್ರೊ ಹಾಗೂ ಬಸ್ ಬಳಸಬೇಕು' ಎಂದು ಅವರೂ ತಿಳಿಸಿದ್ದಾರೆ.

ಕೋವಿಡ್: ಸಾವಿರ ದಾಟಿದ ಸಕ್ರಿಯ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಕೋವಿಡ್ ಹೊಸ ಪ್ರಕರಣಗಳು ಹೆಚ್ಚಳವಾಗಿದ್ದು, ಸಕ್ರಿಯ ಪ್ರಕರಣಗಳ ಸಂಖ್ಯೆ ಮೂರು ತಿಂಗಳ ಬಳಿಕ ಸಾವಿರದ ಗಡಿ (1,074) ದಾಟಿದೆ.

2020ರ ಮಾರ್ಚ್ ವೇಳೆಗೆ ನಗರದಲ್ಲಿ 3 ಸಾವಿರಕ್ಕೂ ಅಧಿಕ ಸಕ್ರಿಯ ಪ್ರಕರಣಗಳಿದ್ದವು. ಬಳಿಕ ಹೊಸ ಪ್ರಕರಣಗಳು ಇಳಿಕೆ ಕಂಡು, ಚೇತರಿಸಿಕೊಂಡವರ ಸಂಖ್ಯೆ ಹೆಚ್ಚಳವಾಗಿ-ತ್ತು. ಈ ವರ್ಷ ಫೆಬ್ರುವರಿಯಲ್ಲಿ ಕೆಲ ದಿನಗಳು ಸಕ್ರಿಯ ಪ್ರಕರಣ ನೂರಕ್ಕಿಂತ ಕಡಿಮೆಯಿತ್ತು. ಮಾರ್ಚ್‌ನಲ್ಲಿ ಮತ್ತೆ ಏರಿಕೆಯಾಗಿದೆ.

ನಗರದಲ್ಲಿ ಭಾನುವಾರ 1,724 ಪರೀಕ್ಷೆ ಮಾಡಲಾಗಿದೆ. 71 ಕೋವಿಡ್ ಪ್ರಕರಣಗಳು ಪತ್ತೆಯಾಗಿದ್ದು, ಸೋಂಕು ದೃಢ ಪ್ರಮಾಣ ಶೇ 5.92 ರಷ್ಟಿದೆ. ಈವರೆಗೆ ಕೋವಿಡ್ ಪೀಡಿತರಾದವರ ಒಟ್ಟು ಸಂಖ್ಯೆ 18.81 ಲಕ್ಷ ತಲುಪಿದೆ. 18.63 ಲಕ್ಷ ಮಂದಿ ಚೇತರಿಸಿಕೊಂಡಿದ್ದಾರೆ.

ನಗರದಲ್ಲಿ ಫೆಬ್ರುವರಿ ಕೊನೆ ವಾರದಲ್ಲಿ 241 ಕೋವಿಡ್ ಪ್ರಕರಣಗಳು ದೃಢಪಟ್ಟಿದ್ದವು. ಆ ವೇಳೆ ನಗರದಲ್ಲಿ 180 ಸಕ್ರಿಯ ಪ್ರಕರಣಗಳಿದ್ದವು. 14 ಮಂದಿ ಮಾತ್ರ ಆಸ್ಪತ್ರೆಗೆ ದಾಖಲಾಗಿದ್ದರು. ಈಗ ಒಂದು ವಾರದಲ್ಲಿ 997 ಕೋವಿಡ್ ಪ್ರಕರಣಗಳು ಪತ್ತೆಯಾಗಿವೆ. 67 ಮಂದಿ ಆಸ್ಪತ್ರೆ ದಾಖಲಾತಿಗೆ ಒಳಗಾಗಿದ್ದು, 11 ಮಂದಿ ಐಸಿಯು ಹಾಸಿಗೆಯಲ್ಲಿ ಚಿಕಿತ್ಸೆ ಪಡೆದು-ಕೊಳ್ಳುತ್ತಿದ್ದಾರೆ.

ಕೋವಿಡ್ ಪರೀಕ್ಷೆಗಳನ್ನೂ ಹೆಚ್ಚಳ ಮಾಡಲಾಗಿದ್ದು, ಕಳೆದ 7 ದಿನಗಳಲ್ಲಿ 16,840 ಮಂದಿಗೆ ಪರೀಕ್ಷೆ ಮಾಡಲಾಗಿದೆ. ನಿತ್ಯ ಸರಾಸರಿ 142 ಪ್ರಕರಣಗಳು ವರದಿಯಾಗಿವೆ. ಮಾರ್ಚ್ ಮೂರನೇ ವಾರದಲ್ಲಿ ಪರೀಕ್ಷೆಗಳ ಸಂಖ್ಯೆ 500ರ ಆಸುಪಾಸಿನಲ್ಲಿತ್ತು. ಈಗ ಕೆಲ ದಿನ 3 ಸಾವಿರದ ಗಡಿ ದಾಟುತ್ತಿದೆ.

ಬೆಳ್ಳಂದೂರು, ಎಚ್.ಎಸ್.ಆರ್. ಲೇಔಟ್, ಕಾಡುಗೋಡಿ, ಹಾಗೂ ದೊಡ್ಡನೆಕ್ಕುಂದಿ ವಾರ್ಡ್‌ನಲ್ಲಿ ಅಧಿಕ ಪ್ರಕರಣಗಳು ಪತ್ತೆಯಾಗುತ್ತಿವೆ.

ನಂದಿನಿ ಉಳಿಸಿ ಅಭಿಯಾನ

ಬೊಮ್ಮನಹಳ್ಳಿ: 'ರಾಜ್ಯ ಬಿಜೆಪಿ ಸರ್ಕಾರವು ಪ್ರಧಾನಿ ನರೇಂದ್ರ ಮೋದಿ ಮೆಚ್ಚಿಸಲು 'ನಂದಿನಿ'ಯನ್ನು ಬಲಿಕೊಡಲು ಮುಂದಾಗಿದೆ' ಎಂದು ಕಾಂಗ್ರೆಸ್ ಮುಖಂಡ ಉಮಾಪತಿ ಶ್ರೀನಿವಾಸಗೌಡ ಆರೋಪಿಸಿದರು.

ಎಚ್‌ಎಸ್‌ಆರ್ ಬಡಾವಣೆಯ ಉದ್ಯಾನದಲ್ಲಿ ನಂದಿನಿ ಉಳಿಸಿ ಅಭಿಯಾನದಲ್ಲಿ ಮಾತನಾಡಿದರು.

'ಕೆಎಂಎಫ್ ರಾಜ್ಯದ ರೈತರ ಜೀವನಾಡಿಯಾಗಿ ಕೆಲಸ ಮಾಡುತ್ತಿದೆ. ಗ್ರಾಮೀಣರ ಆರ್ಥಿಕ ಚಟುವಟಿಕೆಗೆ ಕೊಡುಗೆ ನೀಡುತ್ತಿದೆ. ಹೀಗಿರುವಾಗ ಗುಜರಾತ್‌ನ ಅಮುಲ್ ಡೇರಿ ಉತ್ಪನ್ನ-ಗಳಿಗೆ ರಾಜ್ಯದ ಮಾರುಕಟ್ಟೆಯನ್ನು ಕಬ್ಜಾ ಮಾಡಲು ರಾಜ್ಯ ಸರ್ಕಾರ ಅನುವು ಮಾಡಿಕೊಟ್ಟಿದೆ' ಎಂದು ದೂರಿದರು.

ಎಚ್‌ಎಸ್‌ಆರ್ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಟಿ.ವಾಸುದೇವರೆಡ್ಡಿ, ಯುವ ಕಾಂಗ್ರೆಸ್ ಅಧ್ಯಕ್ಷ ಅನಿಲ್ ರೆಡ್ಡಿ ಇದ್ದರು.



ನಗರದ ಕೋಟೆ ಪ್ರೌಢಶಾಲೆ ಆವರಣದಲ್ಲಿ ಶ್ರೀರಾಮಸೇವಾ ಮಂಡಳಿ, ರಾಮನವಮಿ ಸೆಲಬ್ರೇಷನ್ಸ್ ಟ್ರಸ್ಟ್ ಆಯೋಜಿಸಿರುವ ಶ್ರೀರಾಮನವಮಿ ಸಂಗೀತೋತ್ಸವದಲ್ಲಿ ಭಾನುವಾರ ಪ್ರಿಯಾ ಸಹೋದರಿಯರು ಸಂಗೀತ ಕಛೇರಿ ಪ್ರಸ್ತುತಪಡಿಸಿದರು. —ಪ್ರಜಾವಾಣಿ ಚಿತ್ರ

ನಗರದಲ್ಲಿ ಇಂದು

ಶ್ರೀರಾಮೋತ್ಸವ: ಬೆಳಿಗ್ಗೆ 8.30ಕ್ಕೆ ಹನುಮಂತೋತ್ಸವ, ಶಯನೋತ್ಸವ, ಆಯೋಜನೆ ಮತ್ತು ಸ್ಥಳ: ಜಯರಾಮ ಸೇವಾ ಮಂಡಳಿ, ಜಯನಗರ, ಸಂಜೆ 6.30

ಶ್ರೀರಾಮ ನವಮಿ ಸಂಗೀತೋತ್ಸವ: ಸಂಗೀತ ಕಛೇರಿ: ವಿದ್ಯಾಶ್ರೀ ವಿಜಯಕಣ್ಣನ್ ಮತ್ತು ತಂಡ, ಬೆಂಗಳೂರು ಎಸ್. ಶಂಕರ್, ಅಚ್ಯುತ್ ರಾವ್, ಬಿ.ಸಿ. ಮಂಜುನಾಥ್, ಭರದ್ವಾಜ್ ಶತವಲ್ಲಿ, ಆಯೋಜನೆ: ಶ್ರೀರಾಮಸೇವಾ ಮಂಡಳಿ, ರಾಮನವಮಿ ಸೆಲಬ್ರೇಷನ್ಸ್ ಟ್ರಸ್ಟ್, ಸ್ಥಳ: ಕೋಟೆ ಪ್ರೌಢಶಾಲಾ ಆವರಣ, ಚಾಮರಾಜಪೇಟೆ, ಸಂಜೆ 5 ರಿಂದ

30ನೇ ಶ್ರೀರಾಮನವಮಿ ಸಂಗೀತೋತ್ಸವ: ಗಾಯನ: ಸಾರಂಗ್ ಭಾಗವತ್, ಹಂಸಿಣಿ ನಾಗೇಂದ್ರ, ಪಿಟೀಲು: ಅದಿತಿ ಕೃಷ್ಣಪ್ರಕಾಶ್, ಮೃದಂಗ: ಸುನಿಲ್ ಸುಬ್ರಹ್ಮಣ್ಯ, ಖಂಜೀರಾ: ಭಾರ್ಗವ ಹಾಲಂಬಿ, ಆಯೋಜನೆ ಹಾಗೂ ಸ್ಥಳ: ಶ್ರೀ ವಾಣಿ ಕಲಾ ಕೇಂದ್ರ, ಬಸವೇಶ್ವರ ನಗರ, ಸಂಜೆ 5.15ರಿಂದ

ಶ್ರೀರಾಮನವಮಿ ಸಂಗೀತೋತ್ಸವ: ಗಾಯನ: ವಿದ್ಯಾಭೂಷಣ, ಪಿಟೀಲು: ಪ್ರಾದೇಶಾಚಾರ್, ಮೃದಂಗ: ಬೆಂಗಳೂರು ಪ್ರವೀಣ್, ಖಂಜೀರಾ: ವ್ಯಾಸ ವಿಠ್ಠಲ, ಆಯೋಜನೆ: ಶೇಷಾದ್ರಿಪುರ ರಾಮಸೇವಾ ಸಮಿತಿ, ಸ್ಥಳ: ರಾಷ್ಟ್ರಕವಿ ಕುವೆಂಪು ರಂಗಮಂದಿರ, ಶೇಷಾದ್ರಿಪುರ ಕಾಲೇಜು ಆವರಣ, ಶೇಷಾದ್ರಿಪುರ, ಸಂಜೆ 6.30

ಶಾಸನಶಾಸ್ತ್ರ ಸಂಶೋಧನಾ ವಿದ್ಯಾರ್ಥಿಗಳಿಗೆ ವಿಶೇಷ ಉಪನ್ಯಾಸ ಸಮಾರಂಭ: ಉದ್ಘಾಟನೆ: ಹಂ.ಪ. ನಾಗರಾಜಯ್ಯ, ಅಧ್ಯಕ್ಷತೆ: ಮಹೇಶ ಜೋಶಿ, 'ಶಾಸನಗಳ ಇತ್ತೀಚಿನ ಶೋಧಗಳು ಭಾಗ–1 ಮತ್ತು 2' ಕುರಿತು ಉಪನ್ಯಾಸ: ದೇವರಕೊಂಡಾರೆಡ್ಡಿ, ಕೆ. ಧನಪಾಲ್, ಉಪಸ್ಥಿತಿ: ತಲಕಾಡು ಚಿಕ್ಕರಂಗೇಗೌಡ, ಆಯೋಜನೆ ಮತ್ತು ಸ್ಥಳ: ಕನ್ನಡ ಸಾಹಿತ್ಯ ಪರಿಷತ್ತಿನ ಶ್ರೀಕೃಷ್ಣರಾಜ ಪರಿಷತ್ತಿನ ಮಂದಿರ, ಚಾಮರಾಜಪೇಟೆ, ಬೆಳಿಗ್ಗೆ 10.30

ಶರತ್ ಎಂ.ಎಸ್ ಅವರ 'ಮನಿ ಸೀಕ್ರೆಟ್ಸ್' ಮತ್ತು 'ಸ್ಟಾಕ್ ಮಾರ್ಕೆಟ್ ಸೀಕ್ರೆಟ್ಸ್' ಪುಸ್ತಕಗಳ ಬಿಡುಗಡೆ: ಹರಿಪ್ರಕಾಶ್ ಕೋಣೆಮನೆ, ಅಧ್ಯಕ್ಷತೆ: ಶಿವಾನಂದ ತಗಡೂರು, ಅತಿಥಿಗಳು: ಕೆ.ಎನ್. ಚನ್ನೇಗೌಡ, ಸಿ.ಎಸ್. ಸುಧೀರ್, ಉಪಸ್ಥಿತಿ: ಶರತ್ ಎಂ.ಎಸ್., ಆಯೋಜನೆ ಮತ್ತು ಸ್ಥಳ: ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಸಭಾಂಗಣ, ಕಂದಾಯ ಭವನ, ಕೆ.ಜಿ. ರಸ್ತೆ, ಬೆಳಿಗ್ಗೆ 11

ಪ್ರವಚನ ವಾಹಿನಿ: 'ಸಮಾಜಕ್ಕೆ ಬಸವೇಶ್ವರರ ಸಂದೇಶಗಳು' ಕುರಿತು ಪ್ರವಚನ: ಲಕ್ಷ್ಮೀನಾರಾಯಣ ಕೆ., ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್‌ನ ಸಾಂಸ್ಕೃತಿಕ ಮಂದಿರ, ಜಯನಗರ, ಸಂಜೆ 6.30

ಮುತ್ಯಾಲಮ್ಮ ದೇವಿಯ ರಥೋತ್ಸವ: ಮಂದಾಸನೋತ್ಸವ, ಆಯೋಜನೆ ಮತ್ತು ಸ್ಥಳ: ಮುತ್ಯಾಲಮ್ಮ ದೇವಿ ಟೆಂಪಲ್ ಟ್ರಸ್ಟ್, ಕೆ ಸ್ಟ್ರೀಟ್ ಸೆಪ್ಪಿಂಗ್ ರಸ್ತೆ, ಶಿವಾಜಿನಗರ, ಸಂಜೆ 7

'ಸಾರ್ವಜನಿಕ ಚುನಾವಣೆ ಸಾರ್ವಜನಿಕರ ಹೊಣೆ' ಚಿಂತನಗೋಷ್ಠಿ: ಅಧ್ಯಕ್ಷತೆ: ಕೆ. ಮರುಳಸಿದ್ಧಪ್ಪ, ಆಶಯ ನುಡಿ : ಎಸ್.ವೈ. ಗುರುಶಾಂತ್, ನಿರ್ವಹಣೆ: ಬಿ. ರಾಜಶೇಖರಮೂರ್ತಿ, ಬಂಜಗೆರೆ ಜಯಪ್ರಕಾಶ್, ಮೀನಾಕ್ಷಿ ಬಾಳಿ, ಕೆ.ಎನ್. ಉಮೇಶ್, ಟಿ.ಆರ್. ಚಂದ್ರಶೇಖರ್, ಬಿ.ಎಂ. ಹನೀಫ್, ಕೆ. ಶರೀಫಾ, ಯು. ಬಸವರಾಜ, ಮಾವಳ್ಳಿ ಶಂಕರ್, ಆರ್. ಮೋಹನ್ ರಾಜ್, ಮೈತ್ರೇಯಿ ಕೃಷ್ಣನ್, ಸಿದ್ಧನಗೌಡ ಪಾಟೀಲ್, ಗೋಪಾಲಕೃಷ್ಣ ಹರಳಹಳ್ಳಿ, ಆಯೋಜನೆ: ಸೌಹಾರ್ದ ಕರ್ನಾಟಕ, ಸ್ಥಳ: ಬಾಪೂಜಿ ಸಭಾಂಗಣ, ಗಾಂಧಿಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 10.30



ಕೆ.ಮರುಳಸಿದ್ದಪ್ಪ

ಮಾದರಿ ಕ್ಷೇತ್ರ

ಮುಂದಿನ ಶಾಸಕರಿಂದ ಜನರ ನಿರೀಕ್ಷೆಗಳೇನು?

ಮುಂದೆ ಆಯ್ಕೆಯಾಗುವ ಶಾಸಕರಿಂದ ಮತದಾರರು ಏನನ್ನು ನಿರೀಕ್ಷಿಸುತ್ತೀರಿ? ನಿಮ್ಮ ಕ್ಷೇತ್ರ ಮಾದರಿಯಾಗಬೇಕಾದರೆ ಏನಾಗಬೇಕು? 50 ಪದದಲ್ಲಿ ಬರೆದು ಕಳುಹಿಸಿ.
ಕ್ಷೇತ್ರಗಳು: ● ಶಿವಾಜಿನಗರ ● ಗೋವಿಂದರಾಜ ನಗರ ● ವಿಜಯ ನಗರ
96060 38256



ರಾಜರಾಜೇಶ್ವರಿ ನಗರ

ರಾಜರಾಜೇಶ್ವರಿನಗರ ವಿಧಾನಸಭೆ ಕ್ಷೇತ್ರವನ್ನು ಜಾತಿ ರಾಜಕೀಯದಿಂದ ಹೊರಗಿಡಬೇಕು. ಭವಿಷ್ಯದ ಶಾಸಕರು ಸಂವಿಧಾನದ ಆಶಯಗಳಿಗೆ ಬೆಲೆ ನೀಡಬೇಕು. ಅಭಿವೃದ್ಧಿ ನೆಪವೊಡ್ಡಿ ಏನೂ ಮುಚ್ಚಿಡಬಾರದು ಎಂದು ಜನರು ಇಚ್ಛಿಸಿದ್ದಾರೆ

ಹೊಸಕೆರೆಹಳ್ಳಿ ಕೆರೆ ಉಳಿಸಿ



ಹೊಸಕೆರೆಹಳ್ಳಿಗೆ ಆ ಹೆಸರು ಬರಲು ಕಾರಣವಾದ ಬೆಂಗಳೂರಿನ ಪ್ರಾಚೀನ ಕೆರೆಗಳಲ್ಲಿ ಒಂದಾದ ಕೆರೆಯ ಮೇಲೆ ಭೂ ಮಾಫಿಯಾದ ಕಣ್ಣು ಬಿದ್ದಿದೆ. ಅದಕ್ಕೆ ಬಿಬಿಎಂಪಿ ಅಧಿಕಾರಿಗಳು ಶಾಮೀಲಾಗಿರುವ ಅನುಮಾನವಿದೆ. ಅಭಿವೃದ್ಧಿ ನೆಪದಲ್ಲಿ ಕೆರೆ ಒತ್ತುವರಿ ಮಾಡಲಾಗುತ್ತಿದೆ. ಈಗಾಗಲೇ ಒತ್ತುವರಿ ಆಗಿರುವ ಕೆರೆ ಜಾಗವನ್ನು ತೆರವುಗೊಳಿಸಬೇಕಾಗಿದೆ. ಮುಂದೆ ಆಯ್ಕೆಯಾಗುವ ಶಾಸಕರು ಕ್ಷೇತ್ರದಾದ್ಯಂತ ಇರುವ ಇಂಥ ಕೆರೆಗಳನ್ನು ಉಳಿಸಬೇಕು. ಒತ್ತುವರಿ ವಿಚಾರದಲ್ಲಿ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಬೇಕು.

ಬೈರಮಂಗಲ ರಾಮೇಗೌಡ, ಪುಷ್ಪಗಿರಿನಗರ, ರಾಜರಾಜೇಶ್ವರಿ ನಗರ

ವಿ.ವಿ ಆವರಣದಲ್ಲಿ ವಾಹನಕ್ಕೆ ತಡೆಯಾಗಲಿ



ರಾಜರಾಜೇಶ್ವರಿ ನಗರ ಕ್ಷೇತ್ರದ ವ್ಯಾಪ್ತಿಯಲ್ಲಿ ಬೆಂಗಳೂರು ವಿಶ್ವವಿದ್ಯಾಲಯ ಇದೆ. ಇತ್ತೀಚೆಗೆ ಬೇರೆ ಬೇರೆ ರಾಜಕೀಯ ಮತ್ತು ಜಾತಿ ಓಲೈಸುವ ಕಾರಣಕ್ಕೆ ವಿಶ್ವವಿದ್ಯಾಲಯದ ಭೂಮಿಯನ್ನು ಹಂಚುತ್ತಿದ್ದಾರೆ. ಇದು ತಪ್ಪಬೇಕು. ಬಿಡಾಡಿ ದನಕರುಗಳನ್ನು ಬಿಟ್ಟು ಪರಿಸರ ನಾಶಮಾಡುವುದನ್ನು ತಡೆಗಟ್ಟಿ, ಪ್ರತಿ ವರ್ಷ ಇಡೀ ಕಾಡು ಕಾಳ್ಗಿಚ್ಚಿನಿಂದ ಮಾಲಿನ್ಯವಾಗುತ್ತಿದೆ. ವಿವಿ ಆವರಣದೊಳಗೆ ಹೆಚ್ಚುತ್ತಿರುವ ಅಪಘಾತಗಳನ್ನು ತಡೆಗಟ್ಟಲು ಸಾರ್ವಜನಿಕ ಸಾರಿಗೆ, ಖಾಸಗಿ ವಾಹನಗಳಿಗೆ ಬದಲಿ ವ್ಯವಸ್ಥೆ ಮಾಡಬೇಕು.

ಶಿವರಾಜ್ ಬ್ಯಾಡರಹಳ್ಳಿ, ಜ್ಞಾನಭಾರತಿ

ನಾಗರಿಕರ ಬೇಡಿಕೆಗಳಿಗೆ ಧ್ವನಿಯಾಗಬೇಕು



ಸರ್ಕಾರದ ಸವಲತ್ತುಗಳು ನೇರವಾಗಿ ಅವಶ್ಯಕತೆ ಇರುವವರಿಗೆ ತಲುಪಬೇಕು. ಶಿಕ್ಷಣ, ಆರೋಗ್ಯ, ಮೂಲಸೌಕರ್ಯ ಒದಗಿಸಿ, ಭ್ರಷ್ಟಾಚಾರ ರಹಿತವಾಗಿ ಕೆಲಸ ಮಾಡಬೇಕು. ಹೆಣ್ಣು ಮಕ್ಕಳನ್ನು ಸ್ವಾವಲಂಬಿಗಳಾಗಿ ಮಾಡುವ ಕಾರ್ಯಕ್ರಮ ರೂಪಿಸಬೇಕು. ತನ್ನ ಕ್ಷೇತ್ರ, ಮತದಾರರ ಸರ್ವತೋಮುಖ ಬೆಳವಣಿಗೆ ಶಾಸಕರ ಬದ್ಧತೆಯಾಗಬೇಕು. ಜನಪ್ರತಿನಿಧಿಯಾದವರು ಜಾತಿ, ಧರ್ಮಗಳ ಆಧಾರದ ಮೇಲೆ ನಿಲ್ಲದೆ, ಸಂವಿಧಾನದ ಆಶಯಗಳಿಗೆ ಬೆಲೆ ಕೊಡುವಂತಿರಬೇಕು. ನಾಗರಿಕರ ಬೇಡಿಕೆಗಳಿಗೆ ಧ್ವನಿಯಾಗಬೇಕು.

ಡಾ. ಎಚ್. ತುಕಾರಾಂ, ಮಲ್ಲತ್ತಹಳ್ಳಿ



ಚಾಮರಾಜಪೇಟೆ

ಚಾಮರಾಜಪೇಟೆ ವಿಧಾನಸಭೆ ಕ್ಷೇತ್ರದಲ್ಲಿ ಅಭಿವೃದ್ಧಿ ಕಾರ್ಯಗಳ ಜೊತೆಗೆ ಸ್ವಚ್ಛತೆ ಕಾಪಾಡಲೇಬೇಕಿದೆ. ಆರೋಗ್ಯ ಕಾಡುವ ಸಮಸ್ಯೆ ಇದಾಗಿದ್ದು, ಕ್ಷೇತ್ರದ ಸ್ವಚ್ಛ ಪರಿಸರಕ್ಕೆ ಆದ್ಯತೆ ನೀಡಬೇಕು ಎಂದು ಜನ ಬಯಸಿದ್ದಾರೆ.

ವಾರ್ಡ್‌ಗಳಲ್ಲಿ ಜನತಾ ದರ್ಶನ ಮಾಡಲಿ



ಚಾಮರಾಜಪೇಟೆ ವ್ಯಾಪ್ತಿಯ ವಿಠ್ಠಲ ನಗರದಲ್ಲಿ ರಸ್ತೆಗಳು ಅಭಿವೃದ್ಧಿ ಆಗಬೇಕು. ಹಳ್ಳ–ಗುಂಡಿ ಸೇರಿದಂತೆ ಸಾಕಷ್ಟು ಸಮಸ್ಯೆಗಳಿಂದ ಜನರು ಸಂಕಷ್ಟದಲ್ಲಿದ್ದಾರೆ. ಕುಡಿಯುವ ನೀರಿನ ಸಮಸ್ಯೆ ಹೆಚ್ಚಿದೆ. ಹಲವು ಬಾರಿ ಮನವಿ ಮಾಡಿಕೊಂಡಿದ್ದರೂ ಸರಿಪಡಿಸಿಲ್ಲ. ಕ್ಷೇತ್ರದಲ್ಲಿ ಸರಿಯಾದ ರೀತಿಯಲ್ಲಿ ಸ್ವಚ್ಛತೆ ಕಾಪಾಡಬೇಕು. ಎರಡು, ಮೂರು ತಿಂಗಳಿಗೊಮ್ಮೆ ಆದರೂ ಶಾಸಕರು ವಾರ್ಡ್‌ಗಳಲ್ಲಿ ಜನತಾ ದರ್ಶನ ಮಾಡಬೇಕು. ನಿರುದ್ಯೋಗ ಮಹಿಳೆಯರಿಗೆ ಮತ್ತು ಯುವಕರಿಗೆ ಅನುಕೂಲ ಕಲ್ಪಿಸಲು ಕೌಶಲ ತರಬೇತಿ ಕೇಂದ್ರ ಸ್ಥಾಪಿಸಬೇಕು. ಸಮಗ್ರ ಅಭಿವೃದ್ಧಿಗೆ ಹೆಚ್ಚು ಆದ್ಯತೆ ನೀಡಬೇಕು.

ರಮೇಶ್, ವಿಠಲ ನಗರ

ಸ್ವಚ್ಛತೆ ಆದ್ಯತೆ ಆಗಲಿ



ಆಜಾದ್ ನಗರ ಬಳಿಯ ಕುದುರೆ ಪಾರ್ಕ್ ಹತ್ತಿರ ಆಸ್ಪತ್ರೆ ನಿರ್ಮಿಸಲಾಗುತ್ತದೆ ಎಂದು ಹಲವು ಬಾರಿ ಹೇಳಲಾಗಿದೆ. ಆದರೆ, ಅದಿನ್ನೂ ಅನುಷ್ಠಾನವಾಗಿಲ್ಲ. ನಾಗರಿಕರ ಆರೋಗ್ಯ ರಕ್ಷಣೆ ಹಾಗೂ ಚಿಕಿತ್ಸೆಗೆ ಆದ್ಯತೆ ನೀಡಲೇಬೇಕು. ಇನ್ನು ಕಸ್ತೂರಿ ಬಾ ನಗರ ಬಳಿ ಬಹಳಷ್ಟು ಗಲೀಜು ಇರುತ್ತದೆ. ಇದರಿಂದ ಸೊಳ್ಳೆಗಳು ಹೆಚ್ಚಾಗಿವೆ. ಕಾಯಿಲೆಗಳು ಹರಡುವುದಕ್ಕೂ ಕಾರಣವಾಗಿವೆ. ಸೊಳ್ಳೆ ಔಷಧಿ ಸಿಂಪಡಿಸುವ ಕೆಲಸ ನಿರಂತರವಾಗಿ ಆಗುತ್ತಿಲ್ಲ. ಚಾಮರಾಜಪೇಟೆಯ ಬಹುತೇಕ ಪ್ರದೇಶಗಳಲ್ಲಿ ಸ್ವಚ್ಛತೆ ಇಲ್ಲ. ಈ ಬಗ್ಗೆ ಮುಂದಿನ ಶಾಸಕರು ಪ್ರಥಮವಾಗಿ ಕಾರ್ಯೋನ್ಮುಖರಾಗಬೇಕು.

ನಾಗರಾಜು ಎಂ. ಚಾಮರಾಜಪೇಟೆ

ಅಪರಾಧ ಪ್ರಕರಣಕ್ಕೆ ಕಡಿವಾಣ ಹಾಕಿ



ನಗರದ ಕೇಂದ್ರ ಬಿಂದು ಚಾಮರಾಜಪೇಟೆ ಕ್ಷೇತ್ರದಲ್ಲಿ ನೀರಿನ ಅಭಾವ ಹೆಚ್ಚಿದ್ದು, ರಾತ್ರಿ ಎದ್ದು ನೀರು ಹಿಡಿದರೆ ಮಾತ್ರ ಮನೆಗೆ ನೀರು ಸಿಗುವುದು ಎನ್ನುವ ಪರಿಸ್ಥಿತಿ ಇದೆ. ಈದ್ಗಾ ಮೈದಾನ ಬಳಿ ಬೃಹತ್ ನೀರಿನ ಟ್ಯಾಂಕ್ ನಿರ್ಮಿಸಬೇಕು. ಕ್ಷೇತ್ರದ ಜನತೆಗೆ ಬೆಳಿಗ್ಗೆ ನೀರು ಸಿಗುವಂತೆ ಮಾಡಬೇಕು. ಆರೋಗ್ಯಕ್ಕೆ ಆದ್ಯತೆ ನೀಡಬೇಕು. ಈಗಿರುವ ಹೆರಿಗೆ ಆಸ್ಪತ್ರೆಯನ್ನು ಹೈಟೆಕ್ ಆಸ್ಪತ್ರೆಯಾಗಿ ಮೇಲ್ದರ್ಜೆಗೇರಿಸಬೇಕು. ವಿಠಲ ನಗರದಲ್ಲಿ ಇತ್ತೀಚಿಗೆ ಬೈಕ್ ಕಳ್ಳತನ ಸೇರಿದಂತೆ ಅಪರಾಧ ಪ್ರಕರಣಗಳು ಹೆಚ್ಚಾಗುತ್ತಿವೆ. ಹೀಗಾಗಿ ಪೊಲೀಸ್ ವ್ಯವಸ್ಥೆ ಹೆಚ್ಚಿಸಬೇಕು. ಸುರಕ್ಷತೆಗೆ ಆದ್ಯತೆ ನೀಡಬೇಕು.

ವೇಣು ಗೋಪಾಲ್, ಚಾಮರಾಜಪೇಟೆ



ಯಲಹಂಕ

ಯಲಹಂಕ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಈಗಾಗಲೇ ಬಹು ಮಟ್ಟದ ಮೂಲಸೌಕರ್ಯ ಮತ್ತು ಅಭಿವೃದ್ಧಿ ಕಾಮಗಾರಿಗಳು ನಡೆದಿವೆ. ಆದರೆ, ಆರೋಗ್ಯ, ರೈತರ ಸಮಸ್ಯೆಗಳಿಗೆ ಪರಿಹಾರ ಸಿಕ್ಕಿಲ್ಲ ಎಂಬುದು ನಾಗರಿಕರ ಮಾತು.

ಸುಸಜ್ಜಿತ ಆಸ್ಪತ್ರೆ ಬೇಕಿದೆ



ಯಲಹಂಕ ಕ್ಷೇತ್ರದಲ್ಲಿ ತಕ್ಷಣ ಆಗಬೇಕಾದ ಮುಖ್ಯ ಕಾರ್ಯವೆಂದರೆ ಜಯದೇವ ಆಸ್ಪತ್ರೆಯಂತಹ ಸುಸಜ್ಜಿತ ಅತ್ಯಾಧುನಿಕ ತಂತ್ರಜ್ಞಾನದ ಸರ್ಕಾರಿ ಆಸ್ಪತ್ರೆ. ತುರ್ತು ಚಿಕಿತ್ಸಾ, ಶಸ್ತ್ರಚಿಕಿತ್ಸೆಗಳ ಸಂದರ್ಭಗಳಲ್ಲಿ ನಗರದ ಕೇಂದ್ರ ಭಾಗದಲ್ಲಿರುವ ಆಸ್ಪತ್ರೆಗಳನ್ನೇ ಅವಲಂಬಿಸಬೇಕಾಗಿದೆ. ಉಪನಗರ ಹೊರತುಪಡಿಸಿ ಬೇರೆಲ್ಲೂ ಸರ್ವೋಪಯೋಗಿ ಉದ್ಯಾನಗಳಿಲ್ಲ. ಪುಟ್ಟೇನಹಳ್ಳಿ ಕೆರೆಗೆ ಕಾಯಕಲ್ಪ ಆಗಬೇಕು. ರೈತ ಸಂತೆಯಲ್ಲಿ ದಲ್ಲಾಳಿಗಳಿಂದ ರೈತ ವ್ಯಾಪಾರಿಗಳು ಹಾಗೂ ಗ್ರಾಹಕರಿಗೆ ಆಗುತ್ತಿರುವ ಅನ್ಯಾಯ ಸರಿಪಡಿಸಬೇಕು.

ಎಸ್.ಶಕುಂತಲ, ಯಲಹಂಕ

ಸಂಚಾರ ದಟ್ಟಣೆ ನಿವಾರಿಸಿ



ಯಲಹಂಕದಲ್ಲಿ ಸಾಕಷ್ಟು ಅಭಿವೃದ್ಧಿ ಕೆಲಸಗಳು ನಡೆದಿವೆ. ರಸ್ತೆ ಅಭಿವೃದ್ಧಿ, ಹೊಸ ಉದ್ಯಾನ ನಿರ್ಮಾಣ, ಅಲಂಕಾರಿಕ ಬೀದಿ ದೀಪಗಳನ್ನು ಅಳವಡಿಸಲಾಗಿದೆ. ಬರೀ ಹೊಸ ಕಾಮಗಾರಿ ನಡೆಸಿದರೆ ಸಾಲದು. ಅವುಗಳ ನಿರ್ವಹಣೆಯನ್ನೂ ಮಾಡಬೇಕು. ಯಲಹಂಕ ನ್ಯೂಟೌನ್‌ನಲ್ಲಿ ಸಂಚಾರ ದಟ್ಟಣೆ ವಿಪರೀತವಾಗಿದೆ. ಈ ಸಮಸ್ಯೆ ನಿವಾರಿಸಬೇಕು. ಅಲ್ಲಾಳಸಂದ್ರ ಕೆರೆಯನ್ನೂ ದುರಸ್ತಿ ಮಾಡಲಾಗಿದೆ. ಆದರೆ, ಕಲುಷಿತ ನೀರು ಕೆರೆಯ ಒಡಲು ಸೇರುತ್ತಿದೆ. ಕಲುಷಿತ ನೀರು ಸೇರದಂತೆ ಮೊದಲು ತಡೆಗಟ್ಟಬೇಕು.

ಸಿ.ಎನ್.ಚಂದ್ರು, ಯಲಹಂಕ ಉಪನಗರ

ಗೋಮಾಳ ಜಾಗ ಕಬಳಿಕೆ ನಿಲ್ಲಿಸಿ



ಯಲಹಂಕ ಕ್ಷೇತ್ರದಲ್ಲಿ ರೌಡಿಗಳ ಅಟ್ಟಹಾಸ ಅತಿಯಾಗಿದ್ದು, ಎಲ್ಲಾ ಊರಿನಲ್ಲೂ ಸರ್ಕಾರಿ ಜಮೀನು ಕಬಳಿಕೆ ಆಗಿದೆ. ಹೆಣ ಸುಡುವುದಕ್ಕೂ ಜಾಗ ಇಲ್ಲ. ಪಾರ್ಕ್, ಆಟದ ಮೈದಾನ ಇಲ್ಲ. ರಸ್ತೆ, ಚರಂಡಿ, ಕುಡಿಯುವ ನೀರು ಸೇರಿದಂತೆ ಹಲವು ಭಾಗಗಳಲ್ಲಿ ಮೂಲ ಸೌಕರ್ಯ ಅವಶ್ಯಕತೆ ಇದೆ. ಟ್ರಾಫಿಕ್ ಕಿರಿಕಿರಿ ಅತಿಯಾಗಿದೆ. ರಸ್ತೆಗಳನ್ನು ವಿಸ್ತಾರವಾಗಿ ಮಾಡಲಾಗಿದ್ದರೂ, ಸುಗಮ ಸಂಚಾರಕ್ಕೆ ವ್ಯವಸ್ಥೆ ಆಗಿಲ್ಲ. ಮಾದಾವರದ ಬಿಐಇಸಿ ಸುತ್ತಮುತ್ತ ಸಂಚಾರ ಸಮಸ್ಯೆ ತೀವ್ರವಾಗಿದೆ. ಹಲವು ರಸ್ತೆಗಳಲ್ಲಿ ವಿದ್ಯುತ್ ದೀಪದ ಅಳವಡಿಕೆಯಾಗಬೇಕು.

ಭರತ್ ಹನುಮೇಗೌಡ, ಅಂಚೆಪಾಳ್ಯ, ಶ್ರೀಕಂಠಪುರ

ಪೂರ್ಣವಾಗದ ಒತ್ತುವರಿ ತೆರವು ಕಾರ್ಯಾಚರಣೆ, ಮತ್ತೆ ಆತಂಕದ ಕಾರ್ಮೋಡ

ತಪ್ಪದ ಪ್ರವಾಹ: ಬೇಕಿದೆ ಶಾಶ್ವತ ಪರಿಹಾರ

● ಆದಿತ್ಯ ಕೆ.ಎ.

ರಾಜಧಾನಿ ಒಡಲ ಧ್ವನಿ



ಕಳೆದ ಮಳೆಗಾಲದಲ್ಲಿ ಹೊರಮಾವು ಬಳಿಯ ಸಾಯಿ ಲೇಔಟ್ ಜಲಾವೃತಗೊಂಡಿರುವುದು(ಸಂಗ್ರಹ ಚಿತ್ರ)

ಬೆಂಗಳೂರು: ಉತ್ತಮ ವಾತಾವರಣಕ್ಕೆ ಹೆಸರಾದ 'ಸಿಲಿಕಾನ್ ಸಿಟಿ' ಬೆಂಗಳೂರು ದೇಶ– ವಿದೇಶದ ಜನರನ್ನೂ ತನ್ನತ್ತ ಸೆಳೆಯುತ್ತಿದೆ. ನವೋದ್ಯಮ, ಐ.ಟಿ–ಬಿ.ಟಿ, ಸಂಶೋಧನೆ ಹಾಗೂ ಕೈಗಾರಿಕಾ ಬೆಳವಣಿಗೆಯಲ್ಲಿ ನಗರ ಅಗ್ರಸ್ಥಾನದಲ್ಲಿದೆ ಎಂದು ಜನಪ್ರತಿನಿಧಿಗಳೇ ಹೇಳುತ್ತಾರೆ. ಅದಕ್ಕೆ ತಕ್ಕಂತೆ ಮೂಲಸೌಕರ್ಯಗಳು ವೃದ್ಧಿ ಆಗಿವೆಯೇ ಎಂಬ ಪ್ರಶ್ನೆ ಎದುರಾಗಿದೆ.

ರಾಜಧಾನಿಯಲ್ಲಿ ಮೂಲ ಸೌಕರ್ಯ ಕೊರತೆಯಿದ್ದು, ಜನರ ಬವಣೆ ಮಾತ್ರ ತಪ್ಪಿಲ್ಲ. ಶಾಶ್ವತ ಪರಿಹಾರ ದೂರವಾಗಿದೆ.

ಮಳೆಗಾಲದ 'ಪ್ರವಾಹ' ಪರಿಸ್ಥಿತಿಯು ಹಲವು ಬಡಾವಣೆಗಳ ನಿವಾಸಿಗಳನ್ನು ಹಿಂಡಿಹಿಪ್ಪೆ ಮಾಡುತ್ತಿದೆ. ಕೊಳೆಗೇರಿ, ಪ್ರತಿಷ್ಠಿತ ಬಡಾವಣೆಗಳು, ಐ.ಟಿ ಉದ್ಯೋಗಿಗಳು ನೆಲೆಸಿರುವ ಬಡಾವಣೆಗಳಲ್ಲೂ ಪ್ರವಾಹ ತಲೆದೋರುತ್ತಿದೆ. ಐ.ಟಿ ಕಂಪನಿಗಳ ಆವರಣದಲ್ಲೂ ನೀರು ಆವರಿಸುತ್ತಿದೆ.

ಮಲೆನಾಡು, ಕರಾವಳಿ ಜಿಲ್ಲೆಗಳಲ್ಲಿ ಮಳೆಗಾಲದಲ್ಲಿ ಧೋ... ಎಂದು ಸುರಿಯುವ ಮಳೆಯಿಂದ ಪ್ರವಾಹ ಸಹಜ. ಆದರೆ, ಮೂಲಸೌಕರ್ಯಕ್ಕೆ ಹೆಚ್ಚು ಅನುದಾನ ಬಳಕೆಯಾಗುತ್ತಿರುವ ಬೆಂಗಳೂರಿನಲ್ಲಿ ಎರಡು ದಿನಗಳ ಮಳೆಗೇ ತತ್ತರಿಸುವ ಸ್ಥಿತಿಯಿದೆ.

ರಾಜಧಾನಿಯ ಜನರು ಪ್ರವಾಹದ ಸಂಕಷ್ಟಕ್ಕೆ ಸಿಲುಕಿದಾಗ ಪರಿಸ್ಥಿತಿ ವೀಕ್ಷಣೆ ಮಾಡಿ ಭರವಸೆ ನೀಡುವ ಜನಪ್ರತಿನಿಧಿಗಳು, ಬಿಬಿಎಂಪಿ ಹಾಗೂ ಬಿಡಿಎ ಅಧಿಕಾರಿಗಳು ಬಳಿಕ ಅತ್ತ ತಿರುಗಿಯೂ ನೋಡುತ್ತಿಲ್ಲ. ಮತ್ತೊಂದು ಪ್ರವಾಹ ಬಂದಾಗಲೇ ಸ್ಥಳಕ್ಕೆ ಬರುತ್ತಾರೆ ಎಂಬ ಆರೋಪವಿದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಹಾಗೂ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ವೈಜ್ಞಾನಿಕವಾಗಿ ಕಾಮಗಾರಿ ನಡೆಸುತ್ತಿಲ್ಲ. ಹೀಗಾಗಿಯೇ ಪ್ರವಾಹ ಸ್ಥಿತಿ ಪ್ರತಿ ವರ್ಷವೂ ತಲೆದೋರುತ್ತಿದೆ ಎಂದು ಸ್ಥಳೀಯರು ದೂರುತ್ತಾರೆ.

2022ರ ಜುಲೈ ಹಾಗೂ ಆಗಸ್ಟ್‌ನಲ್ಲಿ ಸುರಿದ ಮಳೆಯಿಂದ ಬೆಂಗಳೂರು ಪೂರ್ವವಲಯದಲ್ಲಿ ಬಹುತೇಕ ಭಾಗವು ಪ್ರವಾಹದಲ್ಲಿ ಮುಳುಗಡೆಯಾಗಿತ್ತು. ರಸ್ತೆಗಳಲ್ಲಿ ಪ್ರವಾಹದ ನೀರು ಹರಿಯಿತು. ಅಪಾರ್ಟ್‌ಮೆಂಟ್, ವಿಲ್ಲಾಗಳು ಹಾಗೂ ಮನೆಗಳು ಮುಳುಗಿದ್ದವು. ನಿವಾಸಿಗಳನ್ನು ರಬ್ಬರ್ ಬೋಟ್‌ಗಳ ಮೂಲಕ ಮನೆಯಿಂದ ಹೊರಗೆ ಕರೆ ತರಬೇಕಾಯಿತು. ಸರ್ಜಾಪುರ ವ್ಯಾಪ್ತಿಯ ಪ್ರತಿಷ್ಠಿತ ಬಡಾವಣೆಗಳ ನಿವಾಸಿಗಳು ಆಶ್ರಯ ಕಳೆದುಕೊಂಡು ಲಾಡ್ಜ್‌ಗಳಲ್ಲಿ ವಾಸ್ತವ್ಯ ಹೂಡಿದ್ದರು. ಬಟ್ಟೆ, ಚಿನ್ನಾಭರಣ, ವಿದ್ಯಾರ್ಥಿಗಳ ಪುಸ್ತಕಗಳು ಪ್ರವಾಹದಲ್ಲಿ ಕೊಚ್ಚಿ ಹೋಗಿದ್ದವು. ಇದು ರಾಜಧಾನಿಯ ಒಡಲಿನ ಬಡಾವಣೆಗಳು ಮಳೆಗಾಲದಲ್ಲಿ ಪಡುವ ಪಾಡು.

ಕೆ.ಆರ್.ಪುರ ಕ್ಷೇತ್ರದ ಹೊರಮಾವು ವಾರ್ಡ್‌ನ ಸಾಯಿ ಬಡಾವಣೆ, ಕಾವೇರಿ ಲೇಔಟ್‌ನಲ್ಲಿ ಪ್ರತಿವರ್ಷದ ಮಳೆಗಾಲದಲ್ಲಿ ಜನರಿಗೆ ಸಂಕಷ್ಟ ತಪ್ಪಿಲ್ಲ. ಇತ್ತೀಚೆಗೆ ಸಮಸ್ಯೆ ತೀವ್ರವಾಗಿದೆ. ದೇವಸಂದ್ರ ವಾರ್ಡ್‌ನ ನೇತ್ರಾವತಿ ಲೇಔಟ್‌ನಲ್ಲೂ ರಾಜಕಾಲುವೆ ಒತ್ತುವರಿಯಾಗಿದೆ. ಇದರಿಂದ ಮಳೆಗಾಲದಲ್ಲಿ ಬಡಾವಣೆ ಹೊಳೆಯಂತಾಗುತ್ತಿದೆ. ಮಹದೇವಪುರದ 145 ಕಡೆ ಪ್ರವಾಹ ಪರಿಸ್ಥಿತಿ ಉದ್ಭವಿಸಿತ್ತು. ಆಗ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸ್ಥಳೀಯ ಶಾಸಕರು ಹಾಗೂ ಬಿಬಿಎಂಪಿ ಅಧಿಕಾರಿಗಳು ನಗರ ಪ್ರದಕ್ಷಿಣೆ ಮಾಡಿದ್ದರು. ಶಾಶ್ವತ ಪರಿಹಾರದ ಭರವಸೆ ನೀಡಿದ್ದರು. ಕೆಲವು ಭಾಗದಲ್ಲಿ ಒತ್ತುವರಿ ತೆರವು ಮಾಡಿದ್ದರೂ ಪೂರ್ಣ ಪ್ರಮಾಣದಲ್ಲಿ ಸಮಸ್ಯೆಗೆ ಪರಿಹಾರ ಸಿಕ್ಕಿಲ್ಲ.

ತೂಬರಹಳ್ಳಿ, ಹೆಣ್ಣೂರು ಬಂಡೆ, ಎಚ್.ಬಿ.ಆರ್. ಲೇಔಟ್, ಭೈರೇಶ್ವರ ಬಡಾವಣೆ, ಅರ್ಕಾವತಿ ಬಡಾವಣೆ, ಸೂರ್ಯ ಗಾರ್ಡನ್, ಥಣಿಸಂದ್ರ, ವಡ್ಡರಪಾಳ್ಯ ಬಸವನಪುರ ವ್ಯಾಪ್ತಿಯ ಅಪಾರ್ಟ್‌ಮೆಂಟ್‌ಗಳಲ್ಲಿ ಹಾಗೂ ಮನೆಗಳು ಪ್ರತಿಬಾರಿಯೂ ಪ್ರವಾಹಕ್ಕೆ ಸಿಲುಕುತ್ತಿವೆ. ರಾಜಕಾಲುವೆಗಳಲ್ಲಿ ತುಂಬಿರುವ ಹೂಳು, ಒತ್ತುವರಿ ಸಮಸ್ಯೆ, ಅವೈಜ್ಞಾನಿಕ ಬಡಾವಣೆ ನಿರ್ಮಾಣ, ಚರಂಡಿಗಳಿಗೆ ಪ್ಲಾಸ್ಟಿಕ್–ಕಸಕಡ್ಡಿ ಎಸೆಯುವುದರಿಂದ ಸಮಸ್ಯೆ ತೀವ್ರವಾಗುತ್ತಿದೆ.

ವಲಸೆ ಕಾರ್ಮಿಕರಿಗೂ ತೊಂದರೆ

ಹೊರ ಜಿಲ್ಲೆ ಮತ್ತು ರಾಜ್ಯಗಳಿಂದ ನಗರಕ್ಕೆ ಬರುವ ಕಾರ್ಮಿಕರು ಶೆಡ್‌ಗಳನ್ನು ನಿರ್ಮಿಸಿಕೊಂಡು ನೆಲೆಸುತ್ತಾರೆ. ಎಷ್ಟು ಜೋರು ಮಳೆ ಬಂದರೂ ಅವರಿಗೆ ಅದೇ ಶೆಡ್ ಆಶ್ರಯ ತಾಣ. ಕಳೆದ ವರ್ಷದ ಮಳೆಯಲ್ಲಿ ಸಾವಿರಾರು ಮಂದಿ ಸಂಕಷ್ಟಕ್ಕೆ ತುತ್ತಾಗಿದ್ದರು. ಅವರನ್ನು ಕಾಳಜಿ ಕೇಂದ್ರಕ್ಕೆ ಸ್ಥಳಾಂತರ ಮಾಡಲಾಗಿತ್ತು. ಅದನ್ನು ಬಿಟ್ಟರೆ ಪರ್ಯಾಯ ವ್ಯವಸ್ಥೆ ಮಾಡಲಿಲ್ಲ. ವಲಸೆ ಕಾರ್ಮಿಕರಿಗೆ ಸುರಕ್ಷಿತ ತಾಣದಲ್ಲಿ ಆಶ್ರಯ ಕಲ್ಪಿಸುವ ವ್ಯವಸ್ಥೆ ಆಗಬೇಕು ಎಂದು ಕಾರ್ಮಿಕ ಸಂಘಟನೆಗಳು ಆಗ್ರಹಿಸುತ್ತಿವೆ.

'ಮತ್ತೆ ಪ್ರವಾಹದ ಭೀತಿ'



ಕೆ.ಆರ್.ಪುರದ ಗಂಗಾಶೆಟ್ಟಿ ಕೆರೆಯಿಂದ ಬಸವನಪುರ ಕೆರೆ ಸಂಪರ್ಕ ಕಲ್ಪಿಸುವ ರಾಜಕಾಲುವೆ ಒತ್ತುವರಿಯಿಂದ ಹಲವು ಮನೆಗಳಿಗೆ ನೀರು ನುಗ್ಗುತ್ತದೆ. ಕಳೆದ ವರ್ಷ ಐಟಿ ಉದ್ಯೋಗಿಯೊಬ್ಬರು ಪ್ರವಾಹದಲ್ಲಿ ಕೊಚ್ಚಿ ಹೋಗಿದ್ದರು. ರಾಜಕಾಲುವೆ ಒತ್ತುವರಿ ಮಾಡಿ ಅಪಾರ್ಟ್‌ಮೆಂಟ್, ಮನೆ ನಿರ್ಮಿಸಿದ್ದರಿಂದ ಸಮಸ್ಯೆಯಾಗುತ್ತಿದೆ. ಮನೆಗಳಿಗೆ ನೋಟಿಸ್ ನೀಡಿ, ಒತ್ತುವರಿ ತೆರವು ಮಾಡಲು ಅಧಿಕಾರಿಗಳು ಮುಂದಾದ ವೇಳೆ ಗಲಾಟೆಗಳು ನಡೆದಿತ್ತು. ಹೊಸ ಹುರುಪಿನಲ್ಲಿ ಅಧಿಕಾರಿಗಳು ತೆರವು ಕಾರ್ಯಾಚರಣೆ ಆರಂಭಿಸಿದ್ದರು. ನಂತರ, ಯಾರ ಒತ್ತಡ ಬಂತೊ ಗೊತ್ತಿಲ್ಲ. ಕಾರ್ಯಾಚರಣೆ ಸ್ಥಗಿತಗೊಂಡಿದೆ. ಮತ್ತೆ ಮಳೆ ಆರಂಭವಾದರೆ ಪ್ರವಾಹ ಎದುರಾಗುವ ಸ್ಥಿತಿಯಿದೆ.

ರಾಘವೇಂದ್ರ, ದೇವಸಂದ್ರ ನಿವಾಸಿ, ಕೆ.ಆರ್.ಪುರ


'ಮತ್ತೆ ಸುಳಿಯದ ಅಧಿಕಾರಿಗಳು'



ನಲ್ಲೂರಹಳ್ಳಿ ಬಳಿ ರಾಜಕಾಲುವೆ ಗೋಡೆ ಕುಸಿದು ಈ ಭಾಗದ 10ಕ್ಕೂ ಹೆಚ್ಚು ಅಪಾರ್ಟ್‌ಮೆಂಟ್ ಜಲಾವೃತಗೊಂಡಿದ್ದವು. ಆಗ ಅಧಿಕಾರಿಗಳು ಸ್ಥಳಕ್ಕೆ ಬಂದಿದ್ದರು. ಮತ್ತೆ ಇತ್ತ ಸುಳಿದಿಲ್ಲ. ನಿವಾಸಿಗಳಿಗೆ ಪ್ರವಾಹದ ಆತಂಕವಿದೆ. ಈ ಬಾರಿಯ ಮಳೆಗಾಲಕ್ಕೂ ಮುನ್ನವೇ ಅಪಾರ್ಟ್‌ಮೆಂಟ್ ಖಾಲಿ ಮಾಡುವ ಸ್ಥಿತಿಯಿದೆ. ಹೊಸ ಸರ್ಕಾರವಾದರೂ ನಮ್ಮತ್ತ ಕಣ್ಣು ತೆರೆಯಲಿ.

ಮಂಜುನಾಥ್, ಪಟ್ಟಂದೂರು ಅಗ್ರಹಾರ

'ಸಮಸ್ಯೆ ಇನ್ನೂ ಜೀವಂತ'



ಕಳೆದ ವರ್ಷ ಸುರಿದ ನಿರಂತರ ಮಳೆಯಿಂದ ಕೆ.ಆರ್.ಪುರದ ಶ್ರೀಸಾಯಿ ಬಡಾವಣೆಯ ಮನೆಗಳಿಗೆ ನೀರು ನುಗ್ಗಿ ಜನಜೀವನ ಅಸ್ತವ್ಯಸ್ತಗೊಂಡಿತ್ತು. 150ಕ್ಕೂ ಹೆಚ್ಚು ಮನೆಗಳಿಗೆ ನೀರು ನುಗ್ಗಿತ್ತು. ಹೆಬ್ಬಾಳ ಸುತ್ತಮುತ್ತಲಿನ ಕಡೆಯಿಂದ ಕಲ್ಕೆರೆ ಕಡೆಗೆ ಸಂಪರ್ಕ ಕಲ್ಪಿಸುವ ರಾಜಕಾಲುವೆ ನೀರು ಮನೆಗಳಿಗೆ ನುಗ್ಗಿ ಅವಾಂತರ ಸೃಷ್ಟಿಯಾಗಿತ್ತು. ಗೆದ್ದಲಹಳ್ಳಿ ಬಳಿಯಿರುವ ರೈಲ್ವೆ ವೆಂಟ್‌ನಲ್ಲಿ ರಾಜಕಾಲುವೆ ನೀರು ಸರಾಗವಾಗಿ ಹರಿಯದೇ ಪಕ್ಕದಲ್ಲಿರುವ ಶ್ರೀಸಾಯಿ ಬಡಾವಣೆ ಜಲಾವೃತಗೊಂಡಿತ್ತು. ಈ ಸಮಸ್ಯೆಗೆ ಇನ್ನೂ ಪರಿಹಾರ ಸಿಕ್ಕಿಲ್ಲ. ಸರ್ಕಾರಗಳು ಬದಲಾಗುತ್ತವೆ. ಸಮಸ್ಯೆ ಮಾತ್ರ ಜೀವಂತವಾಗಿಯೇ ಉಳಿಯುತ್ತಿದೆ

ದಿಲೀಪ್, ಶ್ರೀಸಾಯಿ ಬಡಾವಣೆ ನಿವಾಸಿ

ಸೆಲೆಬ್ರಿಟಿ ಮಾತು



ಜವಾಬ್ದಾರಿಯಿಂದ ಮತ ಚಲಾಯಿಸಿ

ಮಂಸೋರೆ, ಚಿತ್ರನಿರ್ದೇಶಕ

ಪ್ರಜಾತಂತ್ರ ವ್ಯವಸ್ಥೆಯಲ್ಲಿ, ತನ್ನ ಸಮಾಜದ ಒಳಿತಿಗಾಗಿ, ಉತ್ತಮ ಸಮಾಜ ನಿರ್ಮಾಣಕ್ಕಾಗಿ ಸಂವಿಧಾನ ಕೊಟ್ಟಿರುವ ಅತ್ಯಂತ ಪ್ರಬಲ ಅಸ್ತ್ರ ಮತದಾನ. ಮೂಲ ಸೌಲಭ್ಯಗಳ ಆದಿಯಾಗಿ, ಸಮಾಜದ ಪ್ರತಿಯೊಂದು ಅಗತ್ಯಗಳನ್ನು ಪೂರೈಸಬೇಕಾದ, ಅದಕ್ಕೆ ಪೂರಕವಾದ ಶಾಸನಗಳನ್ನು ರೂಪಿಸಲು 'ಮಾನವೀಯ' ಗುಣವುಳ್ಳ ಸರ್ಕಾರವನ್ನು ಆಯ್ಕೆ ಮಾಡಿಕೊಳ್ಳುವುದು ಪ್ರತಿಯೊಬ್ಬ ಪ್ರಜೆಯ ಜವಾಬ್ದಾರಿಯಾಗಿದೆ.

ನಮ್ಮೆಲ್ಲರ ಹಕ್ಕಿನ ಮತವನ್ನು ಜವಾಬ್ದಾರಿಯುತವಾಗಿ ಚಲಾಯಿಸಿ ಉತ್ತಮ, ಸೌಹಾರ್ದಯುತ ಸಮಾಜ ಕಟ್ಟಲು ಪ್ರತಿಯೊಬ್ಬರೂ ಮತದಾನ ಮಾಡಬೇಕಿದೆ. ಒಂದು ವೇಳೆ ನಿಮ್ಮ ಕ್ಷೇತ್ರದ ಯಾವ ಅಭ್ಯರ್ಥಿಯೂ ನಿಮಗೆ ಸೂಕ್ತ ಅಲ್ಲ ಎಂದು ಎನಿಸಿದರೆ, ನಿಮಗೆ N.O.T.A ಆಯ್ಕೆ ಇದೆಯಲ್ಲವೇ. ಆ ಮೂಲಕ ನಿಮ್ಮ ಅಭಿಪ್ರಾಯವನ್ನು ನಿಮ್ಮ ಹಕ್ಕಿನ ಮೂಲಕವೇ ದಾಖಲಿಸಿ. ಸಿನಿಕತನ ಬಿಟ್ಟು, ಆಶಾವಾದಿಗಳಾಗೋಣ. ಪ್ರಜಾಪ್ರಭುತ್ವ ಉಳಿಯಲು ಎಲ್ಲರೂ ಮತದಾನ ಮಾಡೋಣ.

ಚಿತ್ರಾವಳಿ



ದಾಸರಹಳ್ಳಿ ವಿಧಾನಸಭಾ ಕ್ಷೇತ್ರದ ಜೆಡಿಎಸ್ ಶಾಸಕ ಆರ್.ಮಂಜುನಾಥ್ ಅವರು ಭಾನುವಾರ ಪ್ರಚಾರ ನಡೆಸಿದರು. ಸೂರ್ಯ ಎನ್‌ಕ್ಲೇವ್ ಬಡಾವಣೆಯಲ್ಲಿ ಸ್ಥಳೀಯರು ಭಗವದ್ಗೀತೆ ಪುಸ್ತಕ ನೀಡಿ ಸ್ವಾಗತಿಸಿದರು –ಪ್ರಜಾವಾಣಿ ಚಿತ್ರ



ಜಯನಗರ ವಿಧಾನಸಭಾ ಕ್ಷೇತ್ರದ ಭೈರಸಂದ್ರ ವಾರ್ಡ್‌ನಲ್ಲಿ ಚುನಾವಣಾ ಪೂರ್ವ ಸಿದ್ಧತಾ ಸಭೆ ಬಳಿಕ ಶಾಸಕಿ ಸೌಮ್ಯರೆಡ್ಡಿ ಕಾರ್ಯಕರ್ತರೊಂದಿಗೆ ಸಮಾಲೋಚನೆ ನಡೆಸಿದರು. ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾರೆಡ್ಡಿ, ಮುಖಂಡರಾದ ರಾಮೋಜಿಗೌಡ ಮತ್ತು ಎನ್.ನಾಗರಾಜು ಇದ್ದರು –ಪ್ರಜಾವಾಣಿ ಚಿತ್ರ

ಬಹುಮಹಡಿ ಕಟ್ಟಡಕ್ಕೂ ನೀರು ಸರಾಗ ಪೂರೈಕೆ: ಅಶ್ವತ್ಥ ನಾರಾಯಣ

ಪ್ರಜಾವಾಣಿ ವಾರ್ತೆ



ಮಲ್ಲೇಶ್ವರ ಕ್ಷೇತ್ರ ವ್ಯಾಪ್ತಿಯ ಅಪಾರ್ಟ್‌ಮೆಂಟ್ ನಿವಾಸಿಗಳ ಜತೆಗೆ ಸಚಿವ ಡಾ.ಸಿ.ಎನ್. ಅಶ್ವತ್ಥ ನಾರಾಯಣ ಭಾನುವಾರ ಸಂವಾದ ನಡೆಸಿದರು.

ಬೆಂಗಳೂರು: 'ಮಲ್ಲೇಶ್ವರ ಕ್ಷೇತ್ರಕ್ಕೆ ಆದ್ಯತೆ ಮೇರೆಗೆ ಮೂಲ ಸೌಕರ್ಯ ಕಲ್ಪಿಸಲಾಗಿದೆ' ಎಂದು ಸಚಿವ ಡಾ.ಸಿ.ಎನ್. ಅಶ್ವತ್ಥ ನಾರಾಯಣ ಹೇಳಿದರು.

ಯಶವಂತಪುರ ವೃತ್ತದ ಬಳಿಯ ಎಂಬೆಸ್ಸಿ ಹೆರಿಟೇಜ್, ಸಲಾರ್ ಪುರಿ ಸೇರಿದಂತೆ ಹಲವು ಅಪಾರ್ಟ್‌ಮೆಂಟ್ ನಿವಾಸಿಗಳ ಜತೆಗೆ ಭಾನುವಾರ ನಡೆದ ಸಂವಾದದಲ್ಲಿ ಅವರು ಮಾತನಾಡಿದರು.

ಕುಡಿಯುವ ನೀರು ಪೂರೈಕೆ, ಶಿಕ್ಷಣ, ಆರೋಗ್ಯ ವ್ಯವಸ್ಥೆಗೆ ಆದ್ಯತೆ ನೀಡಲಾಗಿದೆ. ಬಡತನ ಕಲಿಕೆಯ ಅವಕಾಶಗಳಿಗೆ ಅಡ್ಡಿಯಾಗದೇ ಎಲ್ಲರಿಗೂ ಸಮಾನ ಶಿಕ್ಷಣ ಲಭ್ಯವಾಗಬೇಕು ಎಂಬ ಆಶಯದೊಂದಿಗೆ ಸರ್ಕಾರಿ ಶಿಕ್ಷಣ ಸಂಸ್ಥೆಗಳನ್ನು ಅಭಿವೃದ್ಧಿಪಡಿಸಲಾಗಿದೆ ಎಂದು ತಿಳಿಸಿದರು.

ಕ್ಷೇತ್ರ ವ್ಯಾಪ್ತಿಯಲ್ಲಿ ನೀರಿನ ಸೋರಿಕೆಯನ್ನು ಶೇಕಡ 45 ರಿಂದ ಶೇಕಡ 14.72ಕ್ಕೆ ಇಳಿಸಲಾಗಿದೆ. ಹೀಗಾಗಿ ಮಹಡಿ ಮನೆಗಳಿಗೂ ನೀರು ಸರಾಗವಾಗಿ ಪೂರೈಕೆ ಆಗುತ್ತಿದೆ. ಸಮರ್ಪಕ ನೀರು ನಿರ್ವಹಣೆ ಬಗ್ಗೆ ಜನಜಾಗೃತಿ ಮೂಡಿಸಲು ಮಲ್ಲೇಶ್ವರ 18ನೇ ಕ್ರಾಸ್‌ನಲ್ಲಿ ವಾಟರ್ ಮ್ಯೂಸಿಯಂ ಸ್ಥಾಪಿಸಲಾಗಿದೆ ಎಂದು ಅವರು ವಿವರಿಸಿದರು.

ಸುಸ್ಥಿರ ನಗರ ಬೆಳವಣಿಗೆಗೆ ಸರ್ಕಾರ ಒತ್ತು ನೀಡಿದೆ. ಅದಕ್ಕೆ ಅನುಗುಣವಾಗಿ ಅಪಾರ್ಟ್‌ಮೆಂಟ್ ನಿವಾಸಿಗಳ ಹಿತರಕ್ಷಣೆಗೂ ಗಮನ ಹರಿಸಲಾಗಿದೆ. ನೀರಿನ ಬಿಲ್, ವಿದ್ಯುತ್ ಬಿಲ್ ಸೇರಿದಂತೆ ಯಾವುದೇ ನಾಗರಿಕ ಸೇವಾ ಶುಲ್ಕಗಳಲ್ಲಿ ತಾರತಮ್ಯ ಆಗದಂತೆ ಕ್ರಮ ವಹಿಸಲಾಗಿದೆ. ತ್ಯಾಜ್ಯ ನಿರ್ವಹಣೆಯಲ್ಲಿ ಅಪಾರ್ಟ್‌ಮೆಂಟ್ ನಿವಾಸಿಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡೇ ನೀತಿ ರೂಪಿಸಲಾಗುತ್ತಿದೆ ಎಂದು ಅವರು ಹೇಳಿದರು.

'ಯಾರಿಗೇ ಟಿಕೆಟ್ ನೀಡಿದರೂ ಒಟ್ಟಾಗಿ ಕೆಲಸ'

ಪೀಣ್ಯ ದಾಸರಹಳ್ಳಿ: 'ದಾಸರಹಳ್ಳಿ ವಿಧಾನಸಭಾ ಕ್ಷೇತ್ರಕ್ಕೆ ಕಾಂಗ್ರೆಸ್‌ನಿಂದ 8 ಮಂದಿ ಆಕಾಂಕ್ಷಿಗಳಿದ್ದಾರೆ. ಯಾರಿಗೇ ಟಿಕೆಟ್ ನೀಡಿದರೂ ಎಲ್ಲರೂ ಒಗ್ಗಟ್ಟಾಗಿ ಕೆಲಸ ಮಾಡುತ್ತೇವೆ. ದಾಸರಹಳ್ಳಿ ಕ್ಷೇತ್ರದಲ್ಲಿ ಕಾಂಗ್ರೆಸ್ ಬಾವುಟ ಹಾರಿಸುವುದು ನಿಶ್ಚಿತ' ಎಂದು ಟಿಕೆಟ್ ಆಕಾಂಕ್ಷಿ ಜಿ. ಧನಂಜಯ್ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಭಾನುವಾರ ಮಾತನಾಡಿ, 'ಗೊಂದಲಗಳು ಇದ್ದಿದ್ದು ನಿಜ. ಆದರೆ, ಮುಂದಿನ ದಿನಗಳಲ್ಲಿ ಗೊಂದಲಗಳು ಬರುವುದಿಲ್ಲ. ಈ ಹಿಂದೆ ನಾನು ಸಿಟ್ಟಿನಲ್ಲಿ ಮಾತನಾಡಿದ್ದೇನೆ. ಕುಟುಂಬ ಅಂದ ಮೇಲೆ ಮಾತು ಬರುತ್ತೆ ಹೋಗುತ್ತೆ. ಅಂತಿಮವಾಗಿ ಕ್ಷೇತ್ರದಲ್ಲಿ ಕಾಂಗ್ರೆಸ್ ಗೆಲುವು ಮುಖ್ಯ ಗುರಿ' ಎಂದು ತಿಳಿಸಿದರು.

'ಇತರೆ 7 ಕಾಂಗ್ರೆಸ್ ಆಕಾಂಕ್ಷಿಗಳು ಜೆಡಿಎಸ್ ಅಭ್ಯರ್ಥಿಯಿಂದ ಹಣ ಪಡೆದಿದ್ದಾರೆ ಎಂದು ಹೇಳಿದ್ದೆ. ಆ ಮಾತನ್ನು ಹಿಂಪಡೆದು ಅವರಲ್ಲಿ ಕ್ಷಮೆಯಾಚಿಸುತ್ತೇನೆ' ಎಂದರು.

ಕಾಂಗ್ರೆಸ್ ಮುಖಂಡರಾದ ವೈ.ವಿ. ಗೋವಿಂದರಾಜು, ಆರ್.ಕೆ.ಲಕ್ಷ್ಮೀ ಸಾಗರ್, ಎಂ.ಸಿದ್ದರಾಜು, ಕೆ.ಎಂ. ಗೋಪಾಲ್ ಇದ್ದರು.

'ಬದಲಾವಣೆ ಬಯಸುತ್ತಿರುವ ಜನತೆ'

ಬೆಂಗಳೂರು: 'ಶೇ 40ರಷ್ಟು ಕಮಿಷನ್ ಹಾಗೂ ಭ್ರಷ್ಟಾಚಾರದಲ್ಲಿ ಮುಳುಗಿರುವ ಬಿಜೆಪಿ ಸರ್ಕಾರದ ನಡೆಗಳಿಂದ ಜನರು ಭ್ರಮನಿರಸನಗೊಂಡಿದ್ದಾರೆ. ಈ ಬಾರಿ ಬದಲಾವಣೆ ಬಯಸುತ್ತಿರುವ ಜನ, ಕಾಂಗ್ರೆಸ್‌ಗೆ ಆಡಳಿತದ ಚುಕ್ಕಾಣಿ ನೀಡಲಿದ್ದಾರೆ' ಎಂದು ಶಾಸಕ ರಾಮಲಿಂಗಾರೆಡ್ಡಿ ಹೇಳಿದರು.

ಶಿವಾಜಿನಗರ ವಿಧಾನಸಭಾ ಕ್ಷೇತ್ರದಲ್ಲಿ ಭಾನುವಾರ ಆಯೋಜಿಸಿದ್ದ ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದರು. ಕಾಂಗ್ರೆಸ್ ಅಭ್ಯರ್ಥಿ ರಿಜ್ವಾನ್ ಅರ್ಷದ್, ಪಕ್ಷದ ಪ್ರತಿಯೊಬ್ಬ ಕಾರ್ಯಕರ್ತರು, ಮನೆ ಮನೆಗೆ ತೆರಳಿ ಪಕ್ಷದ ಪರ ಪ್ರಚಾರ ಮಾಡಿ ಕಾಂಗ್ರೆಸ್ ಅಧಿಕಾರಕ್ಕೆ ತರೋಣ' ಎಂದರು.

ಬಿಜೆಪಿ,ಕಾಂಗ್ರೆಸ್‌ನಲ್ಲಿ ಟಿಕೆಟ್ ವಂಚಿತರಿಗೆ ಗಾಳ

ಕಾದುನೋಡಲು ಜೆಡಿಎಸ್ ನಿರ್ಧಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ, ಕಾಂಗ್ರೆಸ್‌ನಲ್ಲಿ ಟಿಕೆಟ್ ವಂಚಿತರಾದ ಪ್ರಭಾವಿಗಳನ್ನು ತಮ್ಮತ್ತ ಸೆಳೆದು ಕಣಕ್ಕಿಳಿಸುವ ಲೆಕ್ಕಾಚಾರದಲ್ಲಿರುವ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ, ಕಾದುನೋಡುವ ತಂತ್ರದ ಮೊರೆ ಹೋಗಿದ್ದಾರೆ. ಹೀಗಾಗಿ ಬಿಜೆಪಿ, ಕಾಂಗ್ರೆಸ್ ಎಲ್ಲ ಕ್ಷೇತ್ರಗಳಿಗೂ ಅಭ್ಯರ್ಥಿಗಳನ್ನು ಪ್ರಕಟಿಸುವವರೆಗೆ ಜೆಡಿಎಸ್‌ನ ಎರಡನೇ ಪಟ್ಟಿ ಹೊರಬೀಳುವ ಸಾಧ್ಯತೆ ಇಲ್ಲ.

ಉಳಿದ ಪಕ್ಷಗಳಿಗಿಂತ ಮೊದಲೇ ಚುನಾವಣಾ ತಯಾರಿ ಆರಂಭಿಸಿದ್ದ ಜೆಡಿಎಸ್, 2022ರ ಡಿಸೆಂಬರ್‌ನಲ್ಲೇ 93 ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಪ್ರಕಟಿಸಿತ್ತು. ಚುನಾವಣಾ ವೇಳಾಪಟ್ಟಿ ಪ್ರಕಟವಾದ ಬೆನ್ನಲ್ಲೇ ಎರಡನೇ ಪಟ್ಟಿ ಪ್ರಕಟಣೆಗೂ ಸಿದ್ಧತೆ ನಡೆದಿತ್ತು. ಆದರೆ, ಹಾಸನ ವಿಧಾನಸಭಾ ಕ್ಷೇತ್ರದ ಟಿಕೆಟ್‌ಗೆ ಭವಾನಿ ರೇವಣ್ಣ ಅವರು ಪಟ್ಟು ಹಿಡಿದಿದ್ದರಿಂದ ವರಿಷ್ಠರು ಇಕ್ಕಟ್ಟಿಗೆ ಸಿಲುಕಿದರು. ಪಟ್ಟಿ ಪ್ರಕಟಣೆ ಮುಂದೂಡಿರುವ ಕುಮಾರಸ್ವಾಮಿ, ಈಗ ಬಿಜೆಪಿ ಮತ್ತು ಕಾಂಗ್ರೆಸ್‌ನಿಂದ ಹೊರ ಜಿಗಿಯುವವರಿಗಾಗಿ ಕಾಯುತ್ತಿದ್ದಾರೆ.

'ಬಿಜೆಪಿ ಮತ್ತು ಕಾಂಗ್ರೆಸ್‌ನಲ್ಲಿ ಪ್ರಬಲ ಆಕಾಂಕ್ಷಿಗಳಾಗಿದ್ದ ಹಲವರಿಗೆ ಟಿಕೆಟ್ ಕೈತಪ್ಪಲಿದೆ. ಅಂತಹ ಅನೇಕರು ಜೆಡಿಎಸ್ ಸೇರುವ ತವಕದಲ್ಲಿದ್ದಾರೆ. ಈಗಾಗಲೇ ಕೆಲವರು ಕುಮಾರಸ್ವಾಮಿ ಅವರ ಜತೆ ಚರ್ಚಿಸಿದ್ದಾರೆ. ಹಲವರು ತಮ್ಮ ಬೆಂಬಲಿಗರ ಮೂಲಕ ಜೆಡಿಎಸ್ ನಾಯಕರನ್ನು ಸಂಪರ್ಕಿಸುತ್ತಿದ್ದಾರೆ. ಪಕ್ಷದ 'ವಾರ್ ರೂಮ್' ಮೂಲಕ ವರದಿ ಪಡೆದುಕೊಂಡು, ಗೆಲ್ಲುವ ಸಾಧ್ಯತೆ ಇರುವವರನ್ನು ಸೇರಿಸಿಕೊಳ್ಳಲು ಸಿದ್ಧತೆ ನಡೆದಿದೆ' ಎಂದು ಜೆಡಿಎಸ್ ಮೂಲಗಳು ತಿಳಿಸಿವೆ.

ಇತರ ಪಕ್ಷಗಳ ನಾಯಕರನ್ನು ಜೆಡಿಎಸ್‌ಗೆ ಸೇರಿಸಿಕೊಂಡು ಟಿಕೆಟ್ ನೀಡುವುದು ಹಾಗೂ ವಿವಿಧ ಕ್ಷೇತ್ರಗಳಲ್ಲಿ ಪಕ್ಷದ ಅಭ್ಯರ್ಥಿಗಳ ಆಯ್ಕೆ ಕುರಿತು ಕುಮಾರಸ್ವಾಮಿ ಅವರೇ ನಿರ್ಧಾರ ಕೈಗೊಳ್ಳುತ್ತಾರೆ. ವಿವಿಧ ಕ್ಷೇತ್ರಗಳ ಸಂಭವನೀಯ ಅಭ್ಯರ್ಥಿಗಳ ಕುರಿತು ಪಕ್ಷದ ವರಿಷ್ಠ ಎಚ್.ಡಿ. ದೇವೇಗೌಡ ಅವರೊಂದಿಗೆ ನಿಯಮಿತವಾಗಿ ಚರ್ಚಿಸುತ್ತಿದ್ದಾರೆ. ಬಿಜೆಪಿ, ಕಾಂಗ್ರೆಸ್ ಪಟ್ಟಿ ಪ್ರಕಟವಾಗದೇ ಜೆಡಿಎಸ್ ಪಟ್ಟಿ ಹೊರಬೀಳುವ ಸಾಧ್ಯತೆ ತೀರಾ ಕಡಿಮೆ ಎಂದು ಮೂಲಗಳು ಹೇಳಿವೆ.

ಬಂಡೀಪುರದಲ್ಲಿ ಪ್ರಧಾನಿ ಸಫಾರಿ • ಮುದುಮಲೈಯಲ್ಲಿ ಬೆಳ್ಳಿ –ಬೊಮ್ಮ ದಂಪತಿ ಜೊತೆ ಕುಶಲೋಪರಿ

ಐದು ಗಣತಿಯಲ್ಲಿ ಹುಲಿ ಸಂಖ್ಯೆ ದುಪ್ಪಟ್ಟು

ಪ್ರಜಾವಾಣಿ ವಾರ್ತೆ

ಮೈಸೂರು / ಚಾಮರಾಜನಗರ / ಗುಂಡ್ಲುಪೇಟೆ: ದೇಶದಲ್ಲಿ 2006ರಿಂದ 2022ರ ಅವಧಿಯಲ್ಲಿ ಹುಲಿಗಳ ಸಂತತಿ ದ್ವಿಗುಣಗೊಂಡಿದೆ. 2006ರಲ್ಲಿ 1,411 ಇದ್ದ ಹುಲಿಗಳು, 2022ಕ್ಕೆ 3,167ಕ್ಕೇರಿದೆ.

ಹುಲಿ ಯೋಜನೆ ಕುರಿತ 2022ರ ವರದಿಯಲ್ಲಿ ಈ ಅಂಶ ಉಲ್ಲೇಖಿಸಿದ್ದು, ಹುಲಿ ಸಂರಕ್ಷಿತ ಪ್ರದೇಶದಲ್ಲಿ ಜಲ ನಕ್ಷೆಗಳನ್ನು ಸೇರಿಸಿರುವುದು ಈ ವರದಿಯ ವಿಶೇಷ! ಆದರೆ, ಯಾವ ರಾಜ್ಯದಲ್ಲಿ ಎಷ್ಟು ಹುಲಿಗಳಿವೆ ಎಂಬ ಮಾಹಿತಿ ಈ ವರದಿಯಲ್ಲಿ ಇಲ್ಲ.

ಜಗತ್ತಿನ ದೊಡ್ಡ ಜೀವವೈವಿಧ್ಯದ ಸಮೀಕ್ಷೆಗಳಲ್ಲಿ ಒಂದಾದ ರಾಷ್ಟ್ರೀಯ ಹುಲಿಗಣತಿ ವರದಿ-2022 ಪ್ರಕಾರ ಗಣತಿಯಲ್ಲಿ ಫೋಟೊಗಳನ್ನು ಗುರುತಿಸಲು ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಬಳಸಲಾಗಿದೆ. ಡ್ರೋನ್, ಇ-ಐ ಸಮೀಕ್ಷೆ, ಎಂ-ಸ್ಟ್ರೈಪ್ಸ್, ಕ್ಯಾಮೆರಾ ಟ್ರ್ಯಾಪ್ ಮೂಲಕ ಸಮೀಕ್ಷೆ ನಡೆದಿದೆ.

5 ವಲಯ: ಜೀವ ಭೂಗೋಳ, ಆವಾಸಸ್ಥಾನಗಳ ಸಂಪರ್ಕ ಹಾಗೂ ದೇಶದ ಭೂ ಸ್ವರೂಪವನ್ನು ಆಧರಿಸಿ 5 ಹುಲಿ ವಲಯ ವಿಂಗಡಿಸಲಾಗಿದೆ. 1. ಶಿವಾಲಿಕ್– ಗಂಗಾ ಮೈದಾನ ಪ್ರದೇಶ, 2.ಮಧ್ಯಭಾರತ ಮತ್ತು ಪೂರ್ವಘಟ್ಟಗಳು, 3. ಪಶ್ಚಿಮ ಘಟ್ಟಗಳು, 4. ಈಶಾನ್ಯ ಬೆಟ್ಟಗಳು ಮತ್ತು ಬ್ರಹ್ಮಪುತ್ರ ಪ್ರವಾಹ ಮೈದಾನ, 5. ಸುಂದರ್ ಬನ್ಸ್.

ಪಶ್ಚಿಮ ಘಟ್ಟದಲ್ಲಿ ಕುಸಿತ: ಶಿವಾಲಿಕ್–ಗಂಗಾ ಮೈದಾನ, ಈಶಾನ್ಯ ಬೆಟ್ಟಗಳು, ಸುಂದರ್ ಬನ್ಸ್, ಮಧ್ಯಭಾರತ-ಪೂರ್ವಘಟ್ಟ ವಲಯದಲ್ಲಿ ಹುಲಿಗಳ ಸಂಖ್ಯೆ ಹೆಚ್ಚಿದೆ. ಪಶ್ಚಿಮ ಘಟ್ಟದ ನೀಲಗಿರಿ ಜೀವವೈವಿಧ್ಯ ವಲಯವು ವಿಶ್ವದಲ್ಲೇ ಅತಿ ಹೆಚ್ಚು ಹುಲಿಗಳಿರುವ ಪ್ರದೇಶವೆಂಬ ಹೆಗ್ಗಳಿಕೆ ಪಡೆದಿದೆ.

ಪಶ್ಚಿಮಘಟ್ಟದಲ್ಲಿ 981ರಿಂದ 824ಕ್ಕೆ ಇಳಿದಿದೆ. ವಯನಾಡ್, ಬಿಳಿಗಿರಿ-ರಂಗನಬೆಟ್ಟ, ಗೋವಾ- ಕರ್ನಾಟಕ ಗಡಿ ಅರಣ್ಯ, ಮೂಕಾಂಬಿಕಾ- ಶರಾವತಿ-ಶಿರಸಿ ಪ್ರದೇಶದಲ್ಲಿ ಕಡಿಮೆಯಾಗಿವೆ. ಪಶ್ಚಿಮಘಟ್ಟ ವಲಯದಲ್ಲಿ 12 ಹುಲಿ ಸಂರಕ್ಷಿತ ಪ್ರದೇಶಗಳು, 20 ರಾಷ್ಟ್ರೀಯ ಉದ್ಯಾನಗಳು, 68 ವನ್ಯಜೀವಿ ಸಂರಕ್ಷಿತ ಪ್ರದೇಶಗಳಿವೆ.

ಅಣಶಿ– ದಾಂಡೇಲಿ ಪ್ರದೇಶ ಹೊರತು ಪಡಿಸಿ ಪಶ್ಚಿಮ ಘಟ್ಟಗಳಲ್ಲಿ ಹುಲಿಗಳ ಸಂಖ್ಯೆ ಇಳಿಮುಖವಾಗುತ್ತಿದೆ. ಮುದುಮಲೈ, ಪೆರಿಯಾರ್ ಹುಲಿ ಸಂರಕ್ಷಿತ ಪ್ರದೇಶಗಳ ಹುಲಿಗಳು ಸಂಖ್ಯೆಯಲ್ಲಿ ವ್ಯತ್ಯಾಸವಾಗಿಲ್ಲ. ಬಂಡೀಪುರ, ನಾಗರಹೊಳೆಯಲ್ಲಿ ವ್ಯಾಘ್ರಗಳು ಹೆಚ್ಚಾಗಿದ್ದರೂ ಅದಕ್ಕೆ ಹೊಂದಿಕೊಂಡಿರುವ ವೈನಾಡ್ ಹಾಗೂ ಬಿಳಿರಂಗನಬೆಟ್ಟ ಹುಲಿ ಸಂರಕ್ಷಿತಾರಣ್ಯಗಳಲ್ಲಿ ಹುಲಿ ಸಂಖ್ಯೆಯು ಕಡಿಮೆಯಾಗಿದೆ ಎಂದು ವರದಿ ಹೇಳಿದೆ.

ವನ್ಯಜೀವಿ ಕಳ್ಳಸಾಗಣೆ, ಬೇಟೆ ಜೊತೆ ಮಾನವ ಹಸ್ತಕ್ಷೇಪ ಮುಂದುವರಿದಿದೆ. ಮಾನವ– ವನ್ಯಜೀವಿ ಸಂಘರ್ಷ ಹೆಚ್ಚಳವಾಗಿದೆ. ಸ್ಥಳೀಯರ ಸಹಕಾರದಿಂದ ಪರಿಸರ ವ್ಯವಸ್ಥೆಯನ್ನು ರಕ್ಷಿಸುವ ಪ್ರಯತ್ನಗಳು ನಡೆದಿವೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಕರ್ನಾಟಕದ ಮೂಕಾಂಬಿಕಾ–ಶರಾವತಿ– ಶಿರಸಿ ವಲಯದಲ್ಲಿ ಹುಲಿ ಸಂಖ್ಯೆ ಇಳಿಕೆಯಾಗಿದ್ದರೆ, ಭದ್ರಾ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಸಂಖ್ಯೆಯು ಸ್ಥಿರವಾಗಿದೆ. ವಿಶ್ವದ ಜೀವವೈವಿಧ್ಯದ ಪ್ರಮುಖ ತಾಣ ಉಳಿಸಲು ಮಾನವ–ವನ್ಯಜೀವಿ ಸಂಘರ್ಷವನ್ನು ಕಡಿಮೆ ಮಾಡುವುದು ತುರ್ತು ಎಂದೂ ವರದಿ ಉಲ್ಲೇಖಿಸಿದೆ.



ಬೊಮ್ಮ ಬೆಳ್ಳಿ ಕಾವಾಡಿ ದಂಪತಿಯೊಂದಿಗೆ ಪ್ರಧಾನಿ ನರೇಂದ್ರ ಮೋದಿ —ಪಿಐಬಿ ಚಿತ್ರ

ಪ್ರಧಾನಿ ನಾವಿದ್ದಲ್ಲಿಗೇ ಬಂದು ಭೇಟಿ ಮಾಡಿರುವುದು ಖುಷಿ ನೀಡಿದೆ. ಮಕ್ಕಳ ಶಿಕ್ಷಣಕ್ಕೆ ಲ್ಯಾಪ್‌ಟಾಪ್ ಕೊಡಿಸಿ, ಜಾಗ, ಮನೆ ಬೇಕು ಎಂದು ಮನವಿ ಮಾಡಿದ್ದೇವೆ

ಬೊಮ್ಮ, ಬೆಳ್ಳಿ, ಕಾವಾಡಿ ದಂಪತಿ

ಬೊಮ್ಮ–ಬೆಳ್ಳಿ ದಂಪತಿ ಸೇವೆಗೆ ಶ್ಲಾಘನೆ

ಪ್ರಧಾನಿ ಮೋದಿ ಅವರು ತಮಿಳುನಾಡಿನ ಮುದುಮಲೈ ಹುಲಿ ಸಂರಕ್ಷಿತ ಪ್ರದೇಶದ ತೆಪ್ಪಕಾಡು ಆನೆ ಶಿಬಿರದಲ್ಲಿ, ಕಾವಾಡಿ ದಂಪತಿ, ಬೊಮ್ಮ-ಬೆಳ್ಳಿ ಅವರೊಂದಿಗೆ ಆತ್ಮೀಯವಾಗಿ ಬೆರೆತರು. ಈ ದಂಪತಿ ಆಸ್ಕರ್ ಪ್ರಶಸ್ತಿ ವಿಜೇತ ಸಾಕ್ಷ್ಯಚಿತ್ರಕ್ಕೆ 'ದಿ ಎಲಿಫೆಂಟ್ ವಿಸ್ಪರರ್ಸ್' ಈ ದಂಪತಿಯ ಬದುಕು ಆಧಾರ.

ಮೋದಿ ಅವರು ಬೆಳ್ಳಿ -ಬೊಮ್ಮ ಕಾವಾಡಿ ದಂಪತಿ ಮಾತನಾಡಿಸಿದರು. ಸಾಕ್ಷ್ಯಚಿತ್ರದಲ್ಲಿದ್ದ ರಘು, ಅಮ್ಮು ಎಂಬ ಆನೆ ಮರಿಗಳ ಮೈಸವರಿ, ಕಬ್ಬು ಕೊಟ್ಟು ಖುಷಿ ಪಟ್ಟರು. ತಾಯಿಯಿಂತ ಬೇರ್ಪಟ್ಟ ಆನೆ ಮರಿಗಳನ್ನು ಪ್ರೀತಿಯಿಂದ ಸಲಹುವ ದಂಪತಿ ಕಾರ್ಯಕ್ಕೆ ಮೆಚ್ಚುಗೆ ಸೂಚಿಸಿದರು. ಒಂದು ಗಂಟೆ ಕಾಲ ಅವರು ತೆಪ್ಪಕಾಡಿನಲ್ಲಿ ಸಮಯ ಕಳೆದರು.

ಶಿಬಿರದಲ್ಲಿನ ಆನೆಗಳನ್ನು ವೀಕ್ಷಿಸಿದ ಪ್ರಧಾನಿ, ರಾಣಿ ಹೆಸರಿನ ಆನೆಗೆ ಕಬ್ಬು ಕೊಟ್ಟು ಸೊಂಡಿಲು ಸವರಿದರು. ಆನೆ ಪಾಲಕರಾದ ಕಿರುಮಾರನ್, ಕುಳ್ಳನ್ ಮತ್ತು ದೇವನ್ ಅವರೊಂದಿಗೆ ಮಾತನಾಡಿ, ಆನೆಗಳ ಪಾಲನೆ ಬಗ್ಗೆ ಮಾಹಿತಿ ಪಡೆದರು.

ಕಳೆದ ವರ್ಷ ತೆಪ್ಪಕಾಡು ಭಾಗದಲ್ಲಿ ಉಪಟಳ ನೀಡುತ್ತಿದ್ದ ಹುಲಿಯನ್ನು ಸೆರೆ ಹಿಡಿದ ಸಿಬ್ಬಂದಿಯೊಂದಿಗೆ ಮಾತನಾಡಿ, ಅವರ ಕಾರ್ಯವನ್ನು ಶ್ಲಾಘಿಸಿದರು.

ಭೇಟಿಯ ನಂತರ ಈ ಬಗ್ಗೆ ಟ್ವೀಟ್ ಮಾಡಿರುವ ಅವರು, 'ಬೊಮ್ಮಿ (ಅಮ್ಮು) ಮತ್ತು ರಘು ಅವರೊಂದಿಗೆ ಅದ್ಭುತ ವ್ಯಕ್ತಿಗಳಾದ ಬೊಮ್ಮ ಮತ್ತು ಬೆಳ್ಳಿ ಅವರನ್ನು ಭೇಟಿಯಾಗಿರುವುದು ಎಂತಹ ಆನಂದ' ಎಂದು ಹೇಳಿದ್ದಾರೆ.

'ಸಿ.ಎಂ ಆಗಿದ್ದಾಗ ಆನೆ ಸಂರಕ್ಷಣೆ ಪಾಠ'

ಮೈಸೂರು: 'ತಾವು ಗುಜರಾತ್ ಮುಖ್ಯಮಂತ್ರಿಯಾಗಿದ್ದಾಗ ಆನೆಗಳ ಸಂರಕ್ಷಣೆಯಲ್ಲಿ ಕೆಲಸ ಮಾಡಿದ ಅನುಭವವು ನನಗೆ ಪಾಠ ಕಲಿಸಿದೆ' ಎಂದು ಪ್ರಧಾನಿ ಮೋದಿ ಸ್ಮರಿಸಿದರು.

'ವನ್ಯಜೀವಿ ಸಂರಕ್ಷಣೆಗೆ ಸ್ಥಳೀಯರು ಮತ್ತು ಪ್ರಾಣಿಗಳ ನಡುವೆ ಭಾವನಾತ್ಮಕ ಮತ್ತು ಆರ್ಥಿಕತೆಯ ನಂಟು ಕೂಡ ಏರ್ಪಡಬೇಕು. ಅದಕ್ಕಾಗಿಯೇ ಅಲ್ಲಿ ವನ್ಯ ಪ್ರಾಣಿ ಮಿತ್ರ ಯೋಜನೆಯನ್ನು ರೂಪಿಸಲಾಗಿತ್ತು. ನಗದು ಬಹುಮಾನವನ್ನೂ ನೀಡಲಾಗಿತ್ತು' ಎಂದರು.



'ಮಾಜಿ ಪ್ರಧಾನಿ ಇಂದಿರಾ ಗಾಂಧಿ ಅವರು ಸರಿಯಾಗಿ 50 ವರ್ಷಗಳ ಹಿಂದೆ ಕಾರ್ಬೆಟ್ ಉದ್ಯಾನದಲ್ಲಿ ಹುಲಿ ಯೋಜನೆಗೆ ಚಾಲನೆ ನೀಡಿದ್ದರು. ಹುಲಿಗಳ ರಕ್ಷಣೆ ಎಂದರೆ ಕಾಡುಗಳ ರಕ್ಷಣೆಯೇ ಎಂದು ಇಂದಿರಾ ಅವರು ಭಾವಿಸಿದ್ದರು' ಎಂದು ಕಾಂಗ್ರೆಸ್ ಪ್ರಧಾನಿ ಕಾರ್ಯದರ್ಶಿ ಜೈರಾಮ್ ರಮೇಶ್ ಅವರು ಟ್ವಿಟರ್‌ನಲ್ಲಿ ಹೇಳಿದ್ದು, ಹುಲಿ ಜೊತೆ ಇಂದಿರಾ ಅವರು ಇರುವ ಚಿತ್ರವನ್ನು ಹಂಚಿಕೊಂಡಿದ್ದಾರೆ —ಟ್ವಿಟರ್ ಚಿತ್ರ

ಪ್ರಧಾನಿಗೆ ಹುಲಿ ಏಕೆ ಕಾಣಿಸಲಿಲ್ಲ?

ಚಾಮರಾಜನಗರ: ಪ್ರಧಾನಿ ಮೋದಿ ಬಂಡೀಪುರದಲ್ಲಿ 22 ಕಿ.ಮೀ ಸಫಾರಿ ಮಾಡಿದರೂ ಹುಲಿ ಕಾಣಿಸದೇ ಇರಲು ಭೇಟಿಗೆ ನಡೆದಿದ್ದ ಸಿದ್ಧತೆಯೇ ಕಾರಣವಾಗಿರಬಹುದೇ ಎಂಬ ಚರ್ಚೆ ನಡೆದಿದೆ. ಬೆಳಗಿನ ಸಫಾರಿಯಲ್ಲಿ ಹುಲಿಗಳು ಹೆಚ್ಚು ಕಾಣಿಸಿಕೊಳ್ಳುತ್ತವೆ. ಭಾನುವಾರ ಬೆಳಿಗ್ಗೆ 8 ಗಂಟೆ ಸುಮಾರಿಗೆ ಪ್ರಧಾನಿ ಹೋಗಿದ್ದರೂ, ಹುಲಿಗಳು ಗೋಚರಿಸಿರಲಿಲ್ಲ.

'ಹುಲಿಗಳು ಸೂಕ್ಷ್ಮ ಪ್ರಾಣಿಗಳು. ಸಂಕೋಚ ಸ್ವಭಾವದವು. ಗೌಜು ಗದ್ದಲ ಇದ್ದರೆ ಕಾಣಿಸಿಕೊಳ್ಳುವುದಿಲ್ಲ. ಜನರ ಓಡಾಟ ಹೆಚ್ಚಿದ್ದರೆ ದೂರ ಉಳಿಯುತ್ತವೆ. ಪ್ರಧಾನಿ ಭೇಟಿಗೆ ನಡೆದಿದ್ದ ಸಿದ್ಧತೆ ಸಹಜವಾಗಿ ಪರಿಸರ ವ್ಯವಸ್ಥೆಯ ಮೇಲೆ ಪರಿಣಾಮ ಬೀರಿರುವ ಸಾಧ್ಯತೆಗಳಿವೆ' ಎಂದು ವನ್ಯಜೀವಿ ತಜ್ಞ ಕೃಪಾಕರ 'ಪ್ರಜಾವಾಣಿ'ಗೆ ತಿಳಿಸಿದರು.

'ಪ್ರಜಾವಾಣಿ'ಗೆ ಜೊತೆಗೆ ಮಾತನಾಡಿದ ಅವರು, ಸಫಾರಿ ವ್ಯಾಪ್ತಿಯಲ್ಲಿ ಆಗಾಗ್ಗೆ ಹುಲಿ ಕಾಣಿಸಿಕೊಳ್ಳುತ್ತವೆ. ಮೋದಿ ಭೇಟಿ ಕಾರಣಕ್ಕೆ 6 ರಿಂದಲೇ ಸಫಾರಿ ಸ್ಥಗಿತಗೊಳಿಸಿ, ಪ್ರವಾಸಿಗರ ಭೇಟಿ ನಿರ್ಬಂಧಿಸಲಾಗಿತ್ತು.

ಗಮನಸೆಳೆದ ಪ್ರಧಾನಿ ಪೋಷಾಕು

ಮೈಸೂರಿನಿಂದ ಬಂಡೀಪುರದತ್ತ ಬರುವಾಗ ಮೋದಿ ಅವರು ಸಫಾರಿಗೆ ಹೋಗುವ ಪೋಷಾಕಿನಲ್ಲಿದ್ದರು. ಸೇನಾ ಸಮವಸ್ತ್ರದ ಬಣ್ಣ ಹೋಲುವ ಹಸಿರು ಟೀ ಶರ್ಟ್, ಖಾಕಿ ಪ್ಯಾಂಟ್, ಅದರ ಮೇಲೆ ಬಂಡೀಪುರ ಹುಲಿ ಸಂರಕ್ಷಿತ ಲಾಂಛನ ಉಳ್ಳ ಕಂದು ಬಣ್ಣದ ಜಾಕೆಟ್, ಹ್ಯಾಟ್ ಮತ್ತು ತಂಪು ಕನ್ನಡಕದಲ್ಲಿ ಮಿಂಚುತ್ತಿದ್ದ ಮೋದಿ ಅವರ ಫೋಟೊಗಳು ಸಾಮಾಜಿಕ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದವು.

ಅದೇ ದಿರಿಸಿನಲ್ಲಿ ಸಫಾರಿ ಮಾಡಿ ತೆಪ್ಪಕಾಡು ಆನೆ ಶಿಬಿರಕ್ಕೂ ತೆರಳಿದರು. ಅಲ್ಲಿಂದ ಮರಳುವಾಗ ಎಂದಿನ ಕುರ್ತಾ, ಪೈಜಾಮ, ಜಾಕೆಟ್ ಧರಿಸಿದ್ದರು.

10 ವಾಹನಗಳು: ಅರಣ್ಯ ಇಲಾಖೆಯ ಸಿಬ್ಬಂದಿ ಮಧುಸೂದನ್, ಮೋದಿ ಅವರಿದ್ದ ಸಫಾರಿ ವಾಹನದ ಚಾಲಕರಾಗಿದ್ದರು. ಸಫಾರಿ ಜೀಪಿನೊಂದಿಗೆ ಅಧಿಕಾರಿಗಳು, ಎಸ್‌ಪಿಜಿ ಭದ್ರತಾ ಸಿಬ್ಬಂದಿ, ವೈದ್ಯರ ತಂಡಗಳಿದ್ದ ಆಂಬುಲೆನ್ಸ್ ಸೇರಿದಂತೆ ಒಂಬತ್ತು ವಾಹನಗಳಿದ್ದವು.


ಸುದ್ದಿ 2 ನಿಮಿಷ

'ಮೋದಿ ಭೇಟಿ ಕೆಲವರಿಗೆ ಸಂಕಟ'

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ಅವರು ಬಂಡೀಪುರಕ್ಕೆ ಭೇಟಿ ನೀಡಿ ಸಫಾರಿ ನಡೆಸಿದ್ದು, ಕಾಂಗ್ರೆಸ್ ಮತ್ತು ಜೆಡಿಎಸ್ ನಾಯಕರಿಗೆ ದುಃಖ– ಸಂಕಟ ತಂದಿದೆ ಎಂದು ಬಿಜೆಪಿ ರಾಜ್ಯ ಪ್ರಧಾನಕಾರ್ಯದರ್ಶಿ ಎನ್. ರವಿಕುಮಾರ್ ಹೇಳಿದರು.

ಡಿ.ಕೆ.ಶಿವಕುಮಾರ್, ಎಚ್.ಡಿ.ಕುಮಾರಸ್ವಾಮಿ ಅವರು ಪ್ರಧಾನಿ ಮೋದಿ ಭೇಟಿಯನ್ನು ಖಂಡಿಸಿದ್ದಾರೆ. ಇದಕ್ಕೆ ಅವರ ಸಣ್ಣತನವೇ ಕಾರಣ. ಇಂತಹ ಸಣ್ಣ ಮನಸ್ಸಿನ ವ್ಯಕ್ತಿಗಳು ದೊಡ್ಡ ನಾಯಕರಾಗಲು ಸಾಧ್ಯವಿಲ್ಲ ಎಂದು ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಪ್ರವಾಹ ಮತ್ತು ಕೋವಿಡ್ ಸಂದರ್ಭದಲ್ಲಿ ಮೋದಿ ಬಂದಿದ್ದರಾ ಎಂಬುದಾಗಿ ಪ್ರಶ್ನಿಸಿದ್ದಾರೆ. ಬಿಜೆಪಿಯ ಅಸಂಖ್ಯಾತ ಕಾರ್ಯಕರ್ತರು ಈ ಎರಡೂ ಸಂದರ್ಭಗಳಲ್ಲಿ ಜನರ ಸೇವೆಗಾಗಿ ಟೊಂಕ ಕಟ್ಟಿ ನಿಂತಿದ್ದರು. ಕೋವಿಡ್ ಸಾಂಕ್ರಾಮಿಕದ ಸಂದರ್ಭದಲ್ಲಿ ಸಕಾಲದಲ್ಲಿ ಲಸಿಕೆ ನೀಡಿ ಅಸಂಖ್ಯಾತ ಜನರನ್ನು ರಕ್ಷಿಸಿದ್ದು ಯಾರು? ಕಾಂಗ್ರೆಸ್‌ನ ಎಲ್ಲ ನಾಯಕರು ಮೋದಿ ಲಸಿಕೆ, ಬಿಜೆಪಿ ಲಸಿಕೆ ತೆಗೆದುಕೊಳ್ಳಬೇಡಿ ಎಂದು ಅಪ ಪ್ರಚಾರ ಮಾಡಿದ್ದರು. ಅವರ ಮಾತು ನಿರ್ಲಕ್ಷಿಸಿದ ಜನ ಲಸಿಕೆ ಹಾಕಿಸಿಕೊಂಡಿದ್ದರು. ಟೀಕೆ ಮಾಡಿದವರೇ ಆ ಬಳಿಕ ಲಸಿಕೆ ಹಾಕಿಸಿಕೊಂಡರು ಎಂದು ಅವರು ಛೇಡಿಸಿದರು.



ಗೋಹತ್ಯೆಯನ್ನು ಬೆಂಬಲಿಸುವವರು ಈಗ ನಂದಿನಿ ಬಗ್ಗೆ ಮಾತನಾಡುತ್ತಿದ್ದಾರೆ. ನಂದಿನಿ ಮಾತ್ರವಲ್ಲದೆ ರಾಜ್ಯದ ಹಸುಗಳನ್ನು ರಕ್ಷಿಸುವ ಜವಾಬ್ದಾರಿ ನಮ್ಮದು. ಅದಕ್ಕೆಂದೇ ಗೋಹತ್ಯಾ ನಿಷೇಧ ಮಾಡಿದ್ದೇವೆ. ಕಾಂಗ್ರೆಸ್, ಜೆಡಿಎಸ್ ಪಕ್ಷದ ನಾಯಕರದು ದ್ವಿಮುಖ ನೀತಿ. ಗೋಹತ್ಯೆ ಆಗುತ್ತಿರಬೇಕು. ಆದರೆ, ನಂದಿನಿ ಉಳಿಯಬೇಕೆಂದರೆ ಅದು ಹೇಗೆ ಸಾಧ್ಯ ಎಂದು ಪ್ರಶ್ನಿಸಿದರು.

ಪುನೀತ್, ನಾಲ್ವರು ಸಹಚರರು 7 ದಿನ ಪೊಲೀಸರ ವಶಕ್ಕೆ

ರಾಮನಗರ: ಇದ್ರಿಷ್ ಪಾಷಾ ಅನುಮಾನಾಸ್ಪದ ಸಾವು ಪ್ರಕರಣದ ಆರೋಪಿಗಳಾದ ಪುನೀತ್ ಕೆರೆಹಳ್ಳಿ ಹಾಗೂ ಅವರ ನಾಲ್ವರು ಸಹಚರರನ್ನು ನ್ಯಾಯಾಲಯವು ಏಳು ದಿನ ಪೊಲೀಸ್ ವಶಕ್ಕೆ ನೀಡಿದೆ.

ರಾಷ್ಟ್ರ ರಕ್ಷಣಾ ಪಡೆ ಸಂಘಟನೆಯ ಸಂಸ್ಥಾಪಕ ಪುನೀತ್ ಕೆರೆಹಳ್ಳಿ, ಕಾರ್ಯಕರ್ತರಾದ ಗೋಪಿ, ಪವನ್‌ಕುಮಾರ್, ಪಿಲ್ಲಿಂಗ್ ಅಂಬಿಗಾರ ಹಾಗೂ ಸುರೇಶ್‌ಕುಮಾರ್ ಅವರನ್ನು ಪೊಲೀಸರು ಭಾನುವಾರ ಕನಕಪುರದ ಜೆಎಂಎಫ್‌ಸಿ ಕೋರ್ಟ್‌ನ ನ್ಯಾಯಾಧೀಶ ಅಪ್ಪಣ್ಣ ಸವದಿ ಅವರ ಮುಂದೆ ಹಾಜರುಪಡಿಸಿದರು.

ಆರೋಪಿಗಳನ್ನು ಹತ್ತು ದಿನ ವಶಕ್ಕೆ ನೀಡಲು ಪೊಲೀಸರು ಕೋರಿದ್ದರು. ಕೋರ್ಟ್ ಏಳು ದಿನಗಳ ಅವಧಿಗೆ ಒಪ್ಪಿಸಿತು. ಆರೋಪಿಗಳ ಪರ ವಕೀಲರಾದ ನಿಶಾಂತ್ ಕುಶಾಲಪ್ಪ ಹಾಗೂ ಉಮಾಶಂಕರ್ ಹಾಜರಾಗಿದ್ದರು.

ಮಧ್ಯರಾತ್ರಿ ಏನು ನಡೆದಿತ್ತು?: ಜಾನುವಾರು ಸಾಗಿಸುತ್ತಿದ್ದ ವಾಹನವನ್ನು ಪುನೀತ್ ಹಾಗೂ ಸಹಚರರು ಮಾರ್ಚ್ 31ರ ಮಧ್ಯರಾತ್ರಿ ಕನಕಪುರ ತಾಲ್ಲೂಕಿನ ಸಾತನೂರು ಪೊಲೀಸ್ ಠಾಣೆ ಬಳಿ ಅಡ್ಡಗಟ್ಟಿ ದಾಳಿ ನಡೆಸಿದ್ದರು. ಮರು ದಿನ ಬೆಳಿಗ್ಗೆ ಇದ್ರಿಷ್ ಶವ ಸಿಕ್ಕಿತ್ತು. ಎಫ್‌ಐಆರ್ ದಾಖಲಾಗುತ್ತಲೇ ಆರೋಪಿಗಳು ಹೊರ ರಾಜ್ಯಕ್ಕೆ ಪರಾರಿ ಆಗಿದ್ದರು. ಆರೋಪಿಗಳನ್ನು ಇದೇ 5ರಂದು ರಾಜಸ್ಥಾನದ ಬಾನ್ಸವಾಡದಲ್ಲಿ ಬಂಧಿಸಿದ್ದರು. ಅಲ್ಲಿ ಟ್ರಾನ್ಸಿಟ್ ಕಸ್ಟಡಿಗೆ ಪಡೆದಿದ್ದ ಪೊಲೀಸರು ಶನಿವಾರ ರಾತ್ರಿ ಕನಕಪುರಕ್ಕೆ ಕರೆತರತಂದಿದ್ದರು.

'ಮನುಷ್ಯ–ವನ್ಯಜೀವಿ ಸಮಾನವಾಗಿ ನೋಡಿ'

ಪ್ರಜಾವಾಣಿ ವಾರ್ತೆ

ಚಳ್ಳಕೆರೆ: ವನ್ಯಜೀವಿಯಷ್ಟೇ ಮಾನವನ ಬದುಕಿಗೂ ಬೆಲೆ ಇದೆ. ಇದು ಪ್ರಧಾನಿ ಅವರಲ್ಲಿ ಕಾಣುತ್ತಿಲ್ಲ. ಮಾನವ, ಪ್ರಾಣಿಯನ್ನು ಸಮಾನವಾಗಿ ನೋಡಲಿ ಎಂದು ಎಚ್.ಡಿ.ಕುಮಾರಸ್ವಾಮಿ ಹೇಳಿದರು.

'ಕನ್ನಡಕ, ಟೋಪಿ ಧರಿಸಿ ಹುಲಿ ವೀಕ್ಷಿಸಿದ್ದಾರೆ. ಹುಲಿ, ಚಿರತೆ ದಾಳಿಯಿಂದ ಅಲ್ಲಿ ಅನೇಕರು ಸತ್ತಿದ್ದಾರೆ. ಮೂಲನಿವಾಸಿಗಳನ್ನು ಒಕ್ಕಲೆಬ್ಬಿಸಲಾಗಿದೆ. ಆ ಜನರತ್ತಲೂ ಆಸಕ್ತಿ ತೋರಿಸಲಿ' ಎಂದರು.

'ಧರ್ಮದ ಹೆಸರಿನಲ್ಲಿ ಅಮಾಯಕರನ್ನು ಬಲಿ ಪಡೆದು ದೇಶ ಕಟ್ಟುವ ಮಾತು ಆಡುತ್ತಿದ್ದಾರೆ. ಮನುಷ್ಯನ ಜೀವಕ್ಕೆ ಬೆಲೆ ನೀಡದ ಇವರು, ವನ್ಯಜೀವಿ ಸಂರಕ್ಷಣೆಗೆ ತೋರುತ್ತಿರುವ ಕಾಳಜಿ ಹಾಸ್ಯಾಸ್ಪದವಾಗಿದೆ. ವನ್ಯಜೀವಿ ಸಂರಕ್ಷಣೆ ಮಾತ್ರವಲ್ಲ. ಮಾನವ ಸಂರಕ್ಷಕ ಎಂಬ ಬಿರುದು ಪಡೆಯಿರಿ' ಎಂದು ಕುಟುಕಿದರು.

'ಹುಲಿ ಇರುವ ಕಾಡುಗಳು ಸಂರಕ್ಷಿತ ಪ್ರದೇಶಗಳ ವ್ಯಾಪ್ತಿಗೆ'

'ಹುಲಿಗಳು ಇರುವ ಎಲ್ಲಾ ಅರಣ್ಯ ಪ್ರದೇಶ-ಗಳನ್ನು ಹುಲಿ ಸಂರಕ್ಷಿತ ಪ್ರದೇಶಗಳ ವ್ಯಾಪ್ತಿಗೆ ತರಬೇಕು' ಎಂದು 'ಅಮೃತ ಕಾಲದ ಹುಲಿ ಮುನ್ನೋಟ'ದ ಆಶಯದಲ್ಲಿ ವಿವರಿಸಲಾಗಿದೆ. ಹುಲಿ ಯೋಜನೆಗೆ 50 ವರ್ಷ ತುಂಬಿದ ಸಲುವಾಗಿ ಹತ್ತಾರು ಕ್ರಮಗಳನ್ನು ಒಳಗೊಂಡ ಮುನ್ನೋಟವನ್ನು ಪ್ರಧಾನಿ ನರೇಂದ್ರ ಮೋದಿ ಭಾನುವಾರ ಬಿಡುಗಡೆ ಮಾಡಿದ್ದಾರೆ. ಮುನ್ನೋಟದ ಗುರಿಯಲ್ಲೂ ಇದನ್ನೇ ವಿವರಿಸಲಾಗಿದೆ.

ಮುನ್ನೋಟದ ಮುಖ್ಯಾಂಶಗಳು

- **ಕೇಂದ್ರದ ನೆರವು ಹೆಚ್ಚಳ:** ತುರ್ತು ಸಂದರ್ಭದಲ್ಲಿ ಕಾರ್ಯಾಚರಣೆಗೆ ಅತ್ಯಾಧುನಿಕ ವಿಶೇಷ ವಾಹನಗಳು ಮತ್ತು ಹೆಲಿಕಾಪ್ಟರ್‌ಗಳನ್ನು ಒದಗಿಸಲಾಗುವುದು
- ದೇಶದ ಹುಲಿ ಧಾರಣಾ ಸಾಮರ್ಥ್ಯ-ವನ್ನು ನಿಗದಿ ಮಾಡಲಾಗುವುದು. ಪ್ರತಿ ಆವಾಸಸ್ಥಾನದ ಹುಲಿ ಧಾರಣೆ ಸಾಮರ್ಥ್ಯಕ್ಕೆ ಮಿತಿ ಹಾಕಲಾಗುವುದು
- ಹವಾಮಾನ ಬದಲಾವಣೆ ನಿಯಂತ್ರಣಕ್ಕೆ ಹುಲಿ ಸಂರಕ್ಷಣೆಯ ಸಾಧನೆಗಳನ್ನು ಬಳಸಿ-ಕೊಳ್ಳಲಾಗುವುದು. ಇದಕ್ಕಾಗಿ ವಾಣಿಜ್ಯ ಸಚಿವಾಲಯ ಮತ್ತು ಕಾರ್ಪೊರೇಟ್ ಸಹಕಾರ ಪಡೆಯಲಾಗುವುದು
- ಪ್ರವಾಸೋದ್ಯಮ ಸಚಿವಾಲಯದ ನೆರವಿನೊಂದಿಗೆ ಪರಿಸರ ಪ್ರವಾಸಕ್ಕೆ ಉತ್ತೇಜನ
- ವನ್ಯಜೀವಿಗಳಿಗೆ ತಗಲುವ ಸೋಂಕು, ರೋಗಗಳ ನಿಯಂತ್ರಣ ಮತ್ತು ಅಧ್ಯಯನಕ್ಕೆ ಕ್ರಮ

ಕರಾವಳಿ ಜಿಲ್ಲೆಗಳಲ್ಲಿ ಮಳೆ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರಾವಳಿ ವ್ಯಾಪ್ತಿಯ ಎಲ್ಲ ಜಿಲ್ಲೆಗಳಲ್ಲಿ ಮುಂದಿನ 24 ಗಂಟೆಗಳಲ್ಲಿ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಶಿವಮೊಗ್ಗ, ಚಿಕ್ಕಮಗಳೂರು, ಕೊಡಗು ಹಾಗೂ ಹಾಸನ ಜಿಲ್ಲೆಯ ಕೆಲವು ಸ್ಥಳಗಳಲ್ಲಿ ಗುಡುಗು ಹಾಗೂ ಮಿಂಚು ಸಹಿತ ಮಳೆಯಾಗಲಿದೆ. ಒಳನಾಡಿನಲ್ಲಿ ಒಣಹವೆ ಇದ್ದರೆ, ಬೆಂಗಳೂರಿನಲ್ಲಿ ಭಾಗಶಃ ಮೋಡ ಕವಿದ ವಾತಾವರಣ ಇರಲಿದೆ ಎಂದು ತಿಳಿಸಿದೆ.

ಭಾನುವಾರ ಬೆಳಿಗ್ಗೆ 8.30ಕ್ಕೆ ಕೊನೆಯಾದಂತೆ ಧಾರವಾಡದಲ್ಲಿ 2 ಸೆಂ.ಮೀ ಹಾಗೂ ಬೆಳಗಾವಿ ಜಿಲ್ಲೆಯ ಲೋಂಡದಲ್ಲಿ 1 ಸೆಂ.ಮೀ ಮಳೆಯಾಗಿದೆ.

ದೇಶದಲ್ಲಿ 3,167 ಹುಲಿಗಳು

ಒಂದನೇ ಪುಟದಿಂದ

ವಿಶ್ವಮೈತ್ರಿ ಅಗತ್ಯ: 'ವನ್ಯಜೀವಿ ಸಂರಕ್ಷಣೆ ಒಂದು ದೇಶದ ಜವಾಬ್ದಾರಿಯಷ್ಟೇ ಅಲ್ಲ. ಅದು ವಿಶ್ವಾತ್ಮಕ ಹೊಣೆಗಾರಿಕೆ. ಅದಕ್ಕಾಗಿ ವಿಶ್ವಮೈತ್ರಿ ಏರ್ಪಡಿಸಿಕೊಳ್ಳಬೇಕಾದ್ದು ಈ ಕಾಲದ ತುರ್ತು' ಎಂದು ಕರೆ ನೀಡಿದರು.

'2019ರಲ್ಲಿ ವಿಶ್ವ ಹುಲಿ ದಿನದಂದು ಬೇಟೆ ಮತ್ತು ಅಕ್ರಮ ವನ್ಯಜೀವಿ ಮಾರಾಟದ ವಿರುದ್ಧ ವಿಶ್ವಮೈತ್ರಿ ಅಗತ್ಯವನ್ನು ಒತ್ತಿ ಹೇಳಿದ್ದೆ. ಹುಲಿಗಳ ಸಂರಕ್ಷಣೆ ಕುರಿತ ವಿಶ್ವಮೈತ್ರಿ ಇದೇ ಆಶಯ ಹೊಂದಿದೆ' ಎಂದರು.

'ಹುಲಿ, ಸಿಂಹ, ಚಿರತೆ, ಹಿಮ ಚಿರತೆ, ಜಾಗ್ವಾರ್, ಚೀತಾ ಹಾಗೂ ಕೂಗರ್‌ನ ಸಂರಕ್ಷಣೆಯೇ ಮೈತ್ರಿಯ ಪ್ರಮುಖ ಉದ್ದೇಶ. ಈ ಜೀವಿಗಳಿರುವ ದೇಶಗಳು ಮೈತ್ರಿಗೆ ಜೊತೆಗೂಡಿ ಸಂರಕ್ಷಣೆಗೆ ಒತ್ತು ನೀಡಬಹುದು. ಸಂಶೋಧನೆ, ತರಬೇತಿ, ಸಾಮರ್ಥ್ಯ ಅಭಿವೃದ್ಧಿಗೂ ಮೈತ್ರಿ ಆದ್ಯತೆ ಕೊಡಲಿದೆ. ನಾವೆಲ್ಲರೂ ಸೇರಿಕೊಂಡು ಅವುಗಳಿಗಾಗಿ ಸುರಕ್ಷಿತ ವ್ಯವಸ್ಥೆಯನ್ನು ರೂಪಿಸೋಣ. ನಮ್ಮ ಪರಿಸರ ಸುರಕ್ಷಿತವಾಗಿದ್ದರೆ ಮಾತ್ರ ಮನುಷ್ಯ ಕುಲಕ್ಕೆ ಒಳಿತಾಗುತ್ತದೆ' ಎಂದರು.

'ದೇಶದಲ್ಲಿ ಚೀತಾಗಳು ನಿರ್ನಾಮವಾಗಿದ್ದವು. ನಮೀಬಿಯಾ ಮತ್ತು ದಕ್ಷಿಣಾ ಆಫ್ರಿಕಾದಿಂದ ಚೀತಾಗಳನ್ನು ದೇಶಕ್ಕೆ ತಂದ ಬಳಿಕ, ಈ ನೆಲದಲ್ಲಿ ನಾಲ್ಕು ಚೀತಾ ಮರಿಗಳು ಜನಿಸಿವೆ. ಇದೊಂದು ಶುಭಾರಂಭ. ಜೈವಿಕ ವೈವಿಧ್ಯ ಸಂರಕ್ಷಣೆ ಮತ್ತು ಸಮೃದ್ಧಿಗೆ ವಿಶ್ವಮೈತ್ರಿ ಬಹಳ ಮಹತ್ವಪೂರ್ಣವಾದದ್ದು' ಎಂದರು.

ಆದಿವಾಸಿಗಳ ಉಲ್ಲೇಖ: 'ವನ್ಯಜೀವಿಗಳು ಮತ್ತು ಜೀವವೈವಿಧ್ಯ ಸಂರಕ್ಷಣೆಯಲ್ಲಿ ಆದಿವಾಸಿಗಳ ಜೀವನ, ಸಂಸ್ಕೃತಿ ವಿಶ್ವಕ್ಕೇ ಉತ್ತಮ ನಿದರ್ಶನ. ಸಹ್ಯಾದ್ರಿ, ಪಶ್ಚಿಮ ಘಟ್ಟಗಳಲ್ಲಿರುವ ಆದಿವಾಸಿಗಳು ಹುಲಿ ಸೇರಿದಂತೆ ಜೀವ ವೈವಿಧ್ಯವನ್ನು ಸಂರಕ್ಷಿಸುತ್ತಿದ್ದಾರೆ. ವಿದೇಶಗಳ ಅತಿಥಿಗಳು ಇದನ್ನು ಗಮನಿಸಬೇಕು' ಎಂದು ಹೇಳಿದರು.

ಹುಲಿಯ ಸ್ವರ್ಣ ಚಿತ್ರವುಳ್ಳ ಫಲಕವನ್ನು ಕೇಂದ್ರ ಅರಣ್ಯ ಸಚಿವ ಭೂಪೇಂದ್ರ ಯಾದವ್ ಪ್ರಧಾನಿಗೆ ನೀಡಿದರು. ಪರಿಸರ, ಅರಣ್ಯ ಹಾಗೂ ಹವಾಮಾನ ಬದಲಾವಣೆ ಖಾತೆಯ ರಾಜ್ಯ ಸಚಿವ ಅಶ್ವಿನಿ ಕುಮಾರ್ ಚೌಬೆ ಇದ್ದರು.

'ಅಮೃತ್ ಕಾಲ್ ಕಾ ಟೈಗರ್ ವಿಷನ್' ಕೃತಿ, ಹುಲಿ ಯೋಜನೆಯ ಸುವರ್ಣ ಮಹೋತ್ಸವ ಸ್ಮರಣೆಯ ನಾಣ್ಯ, ಮ್ಯಾನೇಜ್‌ಮೆಂಟ್ ಎಫೆಕ್ಟಿವ್‌ನೆಸ್ ಇವಾಲ್ಯುಯೇಷನ್ ಆಫ್ ಟೈಗರ್ಸ್ ರಿಸರ್ವ್ಸ್ ಇನ್ ಇಂಡಿಯಾ 2022ರ ಐದನೇ ಆವೃತ್ತಿಯನ್ನು ಮೋದಿ ಇದೇ ಸಂದರ್ಭದಲ್ಲಿ ಲೋಕಾರ್ಪಣೆ ಮಾಡಿದರು.

ಕೆಪಿಸಿಸಿ ಕಾರ್ಯಾಧ್ಯಕ್ಷರಾಗಿ ಚಂದ್ರಪ್ಪ ನೇಮಕ

ಪ್ರಜಾವಾಣಿ ವಾರ್ತೆ



ಬಿ.ಎನ್ ಚಂದ್ರಪ್ಪ

ಬೆಂಗಳೂರು: ಮಾಜಿ ಸಂಸದ ಆರ್. ಧ್ರುವನಾರಾಯಣ ಅವರ ನಿಧನದಿಂದ ತೆರವಾಗಿದ್ದ ಕೆಪಿಸಿಸಿ ಕಾರ್ಯಾಧ್ಯಕ್ಷ ಸ್ಥಾನಕ್ಕೆ ಮತ್ತೊಬ್ಬ ಮಾಜಿ ಸಂಸದ, ಎಡಗೈ ನಾಯಕ ಬಿ.ಎನ್. ಚಂದ್ರಪ್ಪ ಅವರನ್ನು ಎಐಸಿಸಿ ನೇಮಿಸಿದೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಚಂದ್ರಪ್ಪ ಅವರನ್ನು ನೇಮಿಸಿದ್ದು, ಈ ಕುರಿತು ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಅವರು ಭಾನುವಾರ ಆದೇಶ ಹೊರಡಿಸಿದ್ದಾರೆ. ಈ ನೇಮಕ ತಕ್ಷಣದಿಂದಲೇ ಜಾರಿಗೆ ಬರಲಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಬಲಗೈ ಸಮುದಾಯಕ್ಕೆ ಸೇರಿದ್ದ ಧ್ರುವನಾರಾಯಣ ಅವರ ನೇಮಕದ ಬೆನ್ನಲ್ಲೇ ಎಡಗೈ ನಾಯಕರೊಬ್ಬರ-ನ್ನೂ ಕೆಪಿಸಿಸಿ ಕಾರ್ಯಾಧ್ಯಕ್ಷರನ್ನಾಗಿ ನೇಮಿಸಬೇಕೆಂಬ ಬೇಡಿಕೆ ಇತ್ತು. ಎಡಗೈ ಸಮುದಾಯದ ನಾಯಕರಾದ ಕೆ.ಎಚ್. ಮುನಿಯಪ್ಪ, ಎಚ್. ಆಂಜನೇಯ, ಬಿ.ಎನ್. ಚಂದ್ರಪ್ಪ, ಎಲ್. ಹನುಮಂತಯ್ಯ ಸೇರಿದಂತೆ ಅನೇಕರ ನಿಯೋಗ ಪಕ್ಷದ ಹಿರಿಯ ನಾಯಕರ ಬಳಿ ಅಸಮಾಧಾನ ತೋಡಿಕೊಂಡು, ಆಂಜನೇಯ ಅವರಿಗೂ ಕಾರ್ಯಾಧ್ಯಕ್ಷ ಸ್ಥಾನ ನೀಡಬೇಕು ಎಂದು ಮನವಿ ಸಲ್ಲಿಸಿತ್ತು.

ಚಂದ್ರಪ್ಪ ಅವರು ಪರಿಶಿಷ್ಟ ಜಾತಿಯ ಎಡಗೈ (ಮಾದಿಗ) ಸಮುದಾಯಕ್ಕೆ ಸೇರಿದ್ದಾರೆ. 2014 -2019ರ ಅವಧಿಯಲ್ಲಿ ಚಿತ್ರದುರ್ಗ ಸಂಸದರಾಗಿ ಕಾರ್ಯನಿರ್ವಹಿಸಿದ್ದ ಅವರು, ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಪಾವಗಡ ಕ್ಷೇತ್ರದಿಂದ ಟಿಕೆಟ್ ಆಕಾಂಕ್ಷಿಯಾಗಿದ್ದರು. ಆದರೆ, ಅಲ್ಲಿ ಹಾಲಿ ಶಾಸಕ ವೆಂಕಟರಮಣ-ಪ್ಪ ಅವರ ಮಗನಿಗೆ ಕಾಂಗ್ರೆಸ್ ಟಿಕೆಟ್ ಘೋಷಿಸಿದೆ. ಆ ಬಳಿಕ ಚಂದ್ರಪ್ಪ ಅವರನ್ನು ಕರೆಸಿಕೊಂಡು ಖರ್ಗೆ ಚರ್ಚಿಸಿದ್ದರು.

ಪರಿಶಿಷ್ಟರಲ್ಲಿ ಒಳಮೀಸಲಾತಿ ಘೋಷಿಸಿ, ಮಾದಿಗ ಸಮುದಾಯದ ಮತಗಳನ್ನು ಗುರಿಯಾಗಿಸಿ ತಾನು ಸಾಮಾಜಿಕ ನ್ಯಾಯದ ಪರ ಎಂದು ಬಿಜೆಪಿ ಪ್ರಚಾರ ಮಾಡುತ್ತಿದೆ. ಅಸ್ಪೃಶ್ಯ ಸಮುದಾಯದ ಬೇಡಿಕೆಯನ್ನು ಈಡೇರಿಸದೆ ಆ ವರ್ಗವನ್ನು ಕೇವಲ ಮತ ಬ್ಯಾಂಕ್ ಆಗಿ ಕಾಂಗ್ರೆಸ್ ಬಳಕೆ ಮಾಡಿಕೊಳ್ಳುತ್ತಿದೆ ಎಂದೂ ಆರೋಪಿಸುತ್ತಿದೆ. ಈ ಮಧ್ಯೆ, ತನ್ನ ಸಾಂಪ್ರದಾಯಿಕ ಮತಗಳು ಚದುರಿ ಹೋಗದಂತೆ ನಿಭಾಯಿಸಲು ಚಂದ್ರಪ್ಪ ಅವರಿಗೆ ಕಾಂಗ್ರೆಸ್ ಕಾರ್ಯಾಧ್ಯಕ್ಷ ಸ್ಥಾನ ನೀಡಿದೆ ಎಂದು ರಾಜಕೀಯ ವಲಯದಲ್ಲಿ ವಿಶ್ಲೇಷಿಸಲಾಗಿದೆ.

ಕಾಡಾನೆ ಸೆರೆಗೆ ಕಾರ್ಯಾಚರಣೆ ಶೃಂಗಾರ ಭಾಗ್ ಅರಣ್ಯದಲ್ಲಿ ಪತ್ತೆ

ಪ್ರಜಾವಾಣಿ ವಾರ್ತೆ

ದಾವಣಗೆರೆ: ಚನ್ನಗಿರಿ ತಾಲ್ಲೂಕಿನ ಸೋಮಲಾಪುರದಲ್ಲಿ ಶನಿವಾರ ವಿದ್ಯಾರ್ಥಿನಿ ಸಾವಿಗೆ ಕಾರಣವಾದ ಕಾಡಾನೆ ಸೆರೆಗೆ ಅರಣ್ಯ ಇಲಾಖೆ ಸಿಬ್ಬಂದಿ ಶೋಧ ನಡೆಸಿದ್ದು, ಬಸವಾಪಟ್ಟಣ ಸಮೀಪದ ಶೃಂಗಾರ ಭಾಗ್ ಅರಣ್ಯದಲ್ಲಿ ಭಾನುವಾರ ಸಂಜೆ ಪತ್ತೆಯಾಗಿದೆ.

ಶನಿವಾರ ಯುವತಿ ಕವನಾ ಮತ್ತು ಅವರ ತಾಯಿ ಮೇಲೆ ದಾಳಿ ನಂತರ ಆನೆ ಸೂಳೆಕೆರೆ ಹಿನ್ನೀರಿನಲ್ಲಿ ಕಾಣಿಸಿತ್ತು. ಸಿಬ್ಬಂದಿ ಅದರ ಚಲನವಲನಗಳ ಮೇಲೆ ನಿಗಾ ಇರಿಸಿದ್ದರು. ಕಾಡಾನೆ ಸೆರೆಗೆ ಶಿವಮೊಗ್ಗದ ಸಕ್ರೆಬೈಲು ಶಿಬಿರದಿಂದ ಮೂರು ಆನೆಗಳನ್ನು ಕರೆತರಲಾಗಿತ್ತು. ಭಾನುವಾರ ಬೆಳಗ್ಗೆಯಿಂದ ಹುಡುಕಾಟ ನಡೆಸಿದ್ದರು. ಸಂಜೆಯ ವೇಳೆಗೆ ಡ್ರೋಣ್ ಕ್ಯಾಮೆರಾದಲ್ಲಿ ಆನೆ ಗೋಚರಿಸಿದೆ.

ಆನೆಯು ಸೂಳೆಕೆರೆಯಿಂದ, ಅರಿಶಿನ ಘಟ್ಟ, ಗುಡ್ಡದ ಕೊಮಾರನಹಳ್ಳಿ, ಗುಡ್ಡದ ಬೇನಕನಹಳ್ಳಿ, ಮಧುರನಾಯಕನ ಹಳ್ಳಿ, ಯಲೋದಹಳ್ಳಿ ಮೂಲಕ ಶೃಂಗಾರ ಭಾಗ್ ಅರಣ್ಯ ಪ್ರದೇಶಕ್ಕೆ ಬಂದಿರಬಹುದು ಎಂದು ಭದ್ರಾವತಿ ಡಿಎಫ್‌ಒ ಶಿವಶರಣಯ್ಯ ಮಾಹಿತಿ ನೀಡಿದ್ದಾರೆ.

'ರಾಜಕಾರಣಕ್ಕಾಗಿ ಅಮುಲ್ ಪ್ರಸ್ತಾಪ'

ಒಂದನೇ ಪುಟದಿಂದ...

'ಅಮುಲ್ ಹಾಲು ಆನ್‌ಲೈನ್‌ನಲ್ಲಿ ಲೀಟರ್‌ಗೆ ₹57ಕ್ಕೆ ಮಾರಾಟ ಆಗುತ್ತದೆ. ನಾವು ನಂದಿನಿ ಹಾಲು ಲೀಟರ್‌ಗೆ ₹39ಕ್ಕೆ ಮಾರಾಟ ಮಾಡುತ್ತೇವೆ. ನಂದಿನಿ ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ತಮಿಳುನಾಡು ಸೇರಿದಂತೆ ಹಲವು ರಾಜ್ಯಗಳಿಗೆ ಕಳಿಸುತ್ತೇವೆ. ನಂದಿನಿ ಬ್ರ್ಯಾಂಡ್ ಸದೃಢವಾಗಿದ್ದು, ಅದನ್ನು ಅಳಿಸಲು ಅಸಾಧ್ಯ. ಗುಜರಾತ್ ಅಮುಲ್ ಅನ್ನು ಬೆಳೆಸಿದ ಮಾದರಿಯಲ್ಲಿ ನಾವೂ ನಂದಿನಿಯನ್ನು ಬೆಳೆಸಿದರೆ ಇನ್ನಷ್ಟು ಎತ್ತರಕ್ಕೆ ಬೆಳೆಯಲು ಸಾಧ್ಯ' ಎಂದು ವಿವರಿಸಿದರು.

ಕೆಎಂಎಫ್ ಬಗ್ಗೆ ತಿಳಿಯದವರು ಮಾತ್ರ ತಪ್ಪಾಗಿ ಮಾತನಾಡಲು ಸಾಧ್ಯ. ಅಮುಲ್ ಸೇರಿ ಯಾವುದೇ ಉತ್ಪನ್ನಗ-ಳನ್ನು ಎದುರಿಸಲು ನಂದಿನಿ ಉತ್ಪನ್ನಗಳು ಅತ್ಯಂತ ಸಮರ್ಥವಾಗಿವೆ. ಕೆಎಂಎಫ್‌ಗೆ ಅಭದ್ರತೆಯ ಪ್ರಶ್ನೆಯೇ ಇಲ್ಲ. ಎಸ್.ಎಂ.ಕೃಷ್ಣ ಅವರ ಅವಧಿಯಿಂದಲೂ ಕೆಎಂಎಫ್ ಸುಭದ್ರವಾಗಿದೆ ಮತ್ತು ಲಾಭದಲ್ಲಿದೆ. ಹಾಲಿನ ಕೃತಕ ಅಭಾವ ಸೃಷ್ಟಿ ಆಗಿಲ್ಲ. ಕಾಂಗ್ರೆಸ್ ಮತ್ತು ಜೆಡಿಎಸ್ ಚುನಾವಣಾ ರಾಜಕಾರ-ಣಕ್ಕಾಗಿ ವದಂತಿ ಹಬ್ಬಿಸುವ ಕೆಲಸ ಮಾಡುತ್ತಿವೆ' ಎಂದು ಸೋಮಶೇಖರ್ ದೂರಿದರು.

'ನಮ್ಮ ನಂದಿನಿ ಮುಕ್ಕಲು ಹೊರಟಿದ್ದೀರಾ'

ಒಂದನೇ ಪುಟದಿಂದ...

'ಕೇಂದ್ರ ಸಹಕಾರ ಸಚಿವ ಅಮಿತ್ ಶಾ ಅವರು ಅಮುಲ್ ಜೊತೆ ಕೆಎಂಎಫ್ ವಿಲೀನದ ಪ್ರಸ್ತಾವ ಮಾಡಿದ ದಿನದಿಂದ ನಂದಿನಿ ಹಾಲು ಮತ್ತು ಹಾಲಿನ ಉತ್ಪನ್ನಗಳ ಮೇಲೆ ಪ್ರಹಾರ ಶುರುವಾಗಿದೆ. ಇದ್ದಕ್ಕಿ-ದ್ದಂತೆ ಮಾರುಕಟ್ಟೆಯಿಂದ ನಂದಿನಿ ಹಾಲು ಮತ್ತಿತರ ಉತ್ಪನ್ನಗಳು ಮಾಯವಾಗುತ್ತಿವೆ. ಅಮುಲ್ ಪ್ರವೇಶದಿಂದ ನಂದಿನಿಯ ಬೇಡಿಕೆ ಇನ್ನಷ್ಟು ಕುಸಿದು ಕೆಎಂಎಫ್ ಹಾಲಿನ ಸಂಗ್ರಹ ಕಡಿಮೆಯಾಗಲಿದೆ. ಗ್ರಾಮೀಣ ಭಾಗದಲ್ಲಿ ಕೃಷಿಕರ ಆದಾಯದ ಮೂಲವಾದ ಹೈನುಗಾರಿಕೆಗೆ ಯಾಕೆ ಕಲ್ಲು ಹಾಕುತ್ತಿದ್ದೀರಾ? ಇದು ನೀವು ಮತ್ತು ಶಾ ಕೂಡಿ ಕೆಎಂಎಫ್ ವಿರುದ್ಧ ಮಾಡಿರುವ ಷಡ್ಯಂತ್ರವೇ' ಎಂದೂ ಪ್ರಶ್ನಿಸಿದ್ದಾರೆ.

ನಂದಿನಿ ಬ್ರ್ಯಾಂಡ್‌ನಲ್ಲಿ ಏನು ಲೋಪವಿದೆ ಎಂದು ಮೋದಿ, ಶಾ ಹೇಳಬೇಕು. ಉತ್ಪನ್ನಗಳ ಮೇಲೆ ಕನ್ನಡ ಭಾಷೆ ಬಳಕೆಯಾಗಿರುವುದು ನಿಮ್ಮ ಸಮಸ್ಯೆಯೇ?

ಗೌರವ್ ವಲ್ಲಭ್, ಎಐಸಿಸಿ ವಕ್ತಾರ

ಬಿಜೆಪಿ ಪ್ರಧಾನ ಕಾರ್ಯದರ್ಶಿ ಅಶ್ವತ್ಥನಾರಾಯಣ ಮಾತನಾಡಿ, 'ಕೆಎಂಎಫ್ ಸುಮಾರು ₹20 ಸಾವಿರದಿಂದ ₹22 ಸಾವಿರ ಕೋಟಿ ವಹಿವಾಟು ನಡೆಸುತ್ತಿದೆ. ಸಹಕಾರ ಇಲಾಖೆಯ ಒಪ್ಪಿಗೆ ಇಲ್ಲದೇ, ಮಾತುಕತೆ ಇಲ್ಲದೇ ಇನ್ನೊಂದು ರಾಜ್ಯದ ಸಂಸ್ಥೆ ಜೊತೆ ವಿಲೀನ ಅಸಾಧ್ಯ. ಮಹಾಸಭೆಯ ಒಪ್ಪಿಗೆ, ಸಂಪುಟ ಸಭೆಯ ಒಪ್ಪಿಗೆಯೂ ಬೇಕು' ಎಂದರು.

ಹಾಸನದ ಟಿಕೆಟ್ ಗೊಂದಲವನ್ನು ಮುಚ್ಚಿ ಹಾಕಲು ಎಚ್.ಡಿ.ಕುಮಾರಸ್ವಾಮಿ ಅವರು ಅಮುಲ್– ನಂದಿನಿ ವಿಚಾರವನ್ನು ಮುನ್ನೆಲೆಗೆ ತಂದಿದ್ದಾರೆ. ಐಟಿಐ ಮತ್ತು ಎನ್‌ಜಿಇಎಫ್ ಯಾರ ಕಾಲದಲ್ಲಿ ಮುಚ್ಚಿದ್ದು, ಕಾಂಗ್ರೆಸ್ ಕಾಲದಲ್ಲಿ ಅಲ್ಲವೇ ಎಂದು ಅವರು ಪ್ರಶ್ನಿಸಿದರು.

ರಾಜ್ಯದ ಜನರ ದಾರಿ ತಪ್ಪಿಸಲು ಕನ್ನಡ- ಮಾರ್ವಾಡಿ ಎಂಬ ಪದಗಳನ್ನು ಬಳಸಿ ಸಿದ್ದರಾಮಯ್ಯ ಮತ್ತು ಎಚ್.ಡಿ.ಕುಮಾರಸ್ವಾಮಿ ಅತ್ಯಂತ ಬೇಜವಾಬ್ದಾರಿ ಹೇಳಿಕೆಗಳನ್ನು ನೀಡುತ್ತಿದ್ದಾರೆ ಎಂದು ಹರಿಹಾಯ್ದರು.

ಫಂಗಸ್ ದಾಳಿ, ಅಕಾಲಿಕ ಮಳೆ, ಪರಾಗಸ್ಪರ್ಶ ಸಮಸ್ಯೆ–ಇಳುವರಿ ಕುಂಠಿತ

ಅಪ್ಪೆ ಮಿಡಿ ಮಾವಿಗೆ ಭರ್ಜರಿ ದರ

• ರಾಜೇಂದ್ರ ಹೆಗಡೆ

ಶಿರಸಿ: ವಿಶಿಷ್ಟ ಗುಣಗಳಿಂದ ಸದಾ ಬೇಡಿಕೆಯಲ್ಲಿರುವ ಕಾಡು ಮಾವಿನ ಜನಪ್ರಿಯ ವಿಧವಾದ 'ಅಪ್ಪೆ ಮಿಡಿ' ಈ ಬಾರಿ ಇಳುವರಿ ಕೊರತೆ ಇದೆ. ಹೀಗಾಗಿ ಮಾರುಕಟ್ಟೆಯಲ್ಲಿ ದರ ತೀವ್ರ ಏರಿಕೆಯಾಗಿದೆ.

ಉತ್ತರ ಕನ್ನಡದ ಘಟ್ಟದ ಮೇಲಿನ ತಾಲ್ಲೂಕುಗಳ ದಟ್ಟಾರಣ್ಯ, ನದಿ ಪಾತ್ರದಲ್ಲಿ ಸಹಜವಾಗಿ ಬೆಳೆವ ಅಪ್ಪೆ ಮಾವು ರುಚಿ ಮತ್ತು ಸುವಾಸನೆ ಹೊಂದಿವೆ. ಉಪ್ಪಿನಲ್ಲಿ ಹಾಕಿಟ್ಟರೆ ಸುಮಾರು ಎರಡು ವರ್ಷ ಹಾಳಾಗದೇ ಉಳಿಯುವ ವಿಶಿಷ್ಟ ಕಾರಣಕ್ಕೆ ಇಲ್ಲಿನ ಅನಂತ ಅಪ್ಪೆ, ಕಂಚಳ್ಳಿ ಸಪ್ಪೆ, ಸೋಮನಹಳ್ಳಿ ಅಪ್ಪೆ, ಸಣ್ಣಪ್ಪೆ, ಜೀರಿಗೆ ಅಪ್ಪೆ, ಕೆಂಗ್ರೆ ಅಪ್ಪೆ, ಚಾಲ್ತಿ ಅಪ್ಪೆ ತಳಿಗಳು ಹೆಸರಾಗಿವೆ.

ಅಪ್ಪೆ ಮಾವಿನ ಉಪ್ಪಿನಕಾಯಿಗೆ ಬೇಡಿಕೆ ಹೆಚ್ಚಿದೆ. ಆದರೆ ಈ ಬಾರಿ ಬಹುತೇಕ ಅಪ್ಪೆ ಮರದಲ್ಲಿ ಇಳುವರಿ ಇಳಿಕೆಯಾಗಿದೆ. ವಾರ್ಷಿಕವಾಗಿ ಜಿಲ್ಲೆಯಲ್ಲಿ 350 ಟನ್ ಗೂ ಹೆಚ್ಚಿನ ಇಳುವರಿ ಬರುತ್ತಿದ್ದ ಮಿಡಿ ಮಾವು ಈ ಬಾರಿ ಶೇ 30ಕ್ಕೆ ಕುಸಿದಿದೆ ಎಂದು ಅಂದಾಜಿಸಲಾಗಿದೆ.



ಜೀರಿಗೆ ಪರಿಮಳದ ಅಪ್ಪೆಮಿಡಿ

ಹೆಚ್ಚುತ್ತಿರುವ ದರ: ಅಪರೂಪಕ್ಕೆಂಬಂತೆ ಮಾರುಕಟ್ಟೆಗೆ ಬರುವ ಅಪ್ಪೆ ಮಿಡಿ ಖರೀದಿಸಲು ಜನ ಮುಗಿಬೀಳುತ್ತಿದ್ದಾರೆ. ನಗರದ ಮಾರುಕಟ್ಟೆಯಲ್ಲಿ 100 ಅಪ್ಪೆ ಮಿಡಿ ₹200 ರಿಂದ ₹300ಕ್ಕೆ ಲಭ್ಯವಾಗುತ್ತಿತ್ತು. ಈ ವರ್ಷ 100 ಕಾಯಿಗಳಿಗೆ ₹500ರಿಂದ ₹700, ಜೀರಿಗೆ ಸುವಾಸನೆ ಅಪ್ಪೆ ಮಿಡಿ 100ಕ್ಕೆ ₹800ರಿಂದ ಸಾವಿರದವರೆಗೂ ದರ ನಿಗದಿಯಾಗಿದೆ.

ಗ್ರಾಮೀಣ ಭಾಗದಿಂದ ನಗರ ಮಾರುಕಟ್ಟೆಗೆ ಬರುತ್ತಿದ್ದ ಅಪ್ಪೆ ಮಿಡಿ ಈ ಬಾರಿ ತೀರಾ ವಿರಳವಾಗಿದೆ. ಗ್ರಾಹಕರು ಖರೀದಿಸಲಾಗದ ದರ ಮಾರುಕಟ್ಟೆಯಲ್ಲಿದೆ

ಸರೋಜಾ ಜೋಗಳೇಕರ್, ಗ್ರಾಹಕಿ

'ಕಳೆದ ಬಾರಿ ಹೊರ ರಾಜ್ಯದ ಉಪ್ಪಿನಕಾಯಿ ತಯಾರಿಕಾ ಘಟಕಗಳು ಸರಾಸರಿ 50 ಟನ್ ಅಪ್ಪೆ ಮಿಡಿ ಖರೀದಿಸಿದ್ದರು. ಈ ವರ್ಷ ಬೇಡಿಕೆ ಇದ್ದರೂ ಪೂರೈಸಲಾಗುತ್ತಿಲ್ಲ' ಎನ್ನುತ್ತಾರೆ ಮಾವು ವ್ಯಾಪಾರಿ ಆನಂದ ಮುಕ್ರಿ.

'ಎರಡು ವರ್ಷಗಳಲ್ಲಿ ಅಪ್ಪೆ ಮಾವು ಹೂವು ಬಿಡುವ ವೇಳೆ ಹೆಚ್ಚು ಮಂಜು ಬೀಳುತ್ತಿರುವು-ದರಿಂದ ಫಂಗಸ್ ದಾಳಿ ಮಾಡಿ ಕಾಯಿಕಚ್ಚದಂತೆ ಮಾಡಿವೆ. ಅಕಾಲಿಕ ಮಳೆ ಕಾಯಿಗಳನ್ನು ಬಾಧಿಸಿದೆ. ಮಿಸರಿ ಜೇನಿನ ಕೊರತೆಯಿಂದ ಪರಾಗಸ್ಪರ್ಶ ಸರಿಯಾಗಿ ಆಗಿಲ್ಲ. ಹೀಗಾಗಿ ಇಳುವರಿ ಕುಂಠಿತವಾಗಿದೆ' ಎಂದು ಅಪ್ಪೆ ಮಾವು ಸಂಶೋಧನೆಯಲ್ಲಿ ತೊಡಗಿರುವ ಡಾ.ಆರ್.ವಾಸುದೇವ 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

ಹಲವು ವರ್ಷಗಳ ಪ್ರಯತ್ನದ ಫಲವಾಗಿ ಅಪ್ಪೆಹುಳಿ ಎಸೆನ್ಸ್ ಮಾರುಕಟ್ಟೆಗೆ ಬಂದಿದೆ. ಅದನ್ನು ನಕಲಿಸಿ ವಂಚಿಸುವವರು ಹೆಚ್ಚಾಗಿದ್ದಾರೆ.

ವಿಶ್ವೇಶ್ವರ ಭಟ್, ಕದಂಬ ಸಂಸ್ಥೆ ಸಲಹೆಗಾರ


'ಜಿಲ್ಲೆಯೊಂದರಲ್ಲೇ ಅಪ್ಪೆ ಮಿಡಿ ಮೌಲ್ಯವರ್ಧನೆಯ ಭಾಗವಾದ ಅಪ್ಪೇಹುಳಿ ಎಸೆನ್ಸ್ ವ್ಯಾಪಕವಾಗಿ ಮಾರಾಟವಾಗುತ್ತಿದೆ. ಸುಮಾರು ₹35 ಲಕ್ಷಕ್ಕಿಂತ ಹೆಚ್ಚಿನ ಮಾಲು ಗ್ರಾಹಕರ ಕೈ ಸೇರುತ್ತಿದೆ. ಆದರೆ ಮಿಡಿ ಮಾವು ಕೊರತೆಯ ಪರಿಣಾಮ ಎಸೆನ್ಸ್ ನಕಲಾಗುತ್ತಿದೆ' ಎಂಬುದು ಕದಂಬ ಮಾರ್ಕೆಂಟಿಂಗ್ ಸಂಸ್ಥೆ ಸಲಹೆಗಾರ ವಿಶ್ವೇಶ್ವರ ಭಟ್ ಅಭಿಪ್ರಾಯ.

ಕೋವಿಡ್: ಇಂದು, ನಾಳೆ ಅಣಕು ಕಾರ್ಯಾಚರಣೆ

ನವದೆಹಲಿ: ಕೋವಿಡ್ ಪರಿಸ್ಥಿತಿಯನ್ನು ಎದುರಿಸುವುದಕ್ಕೆ ಸಂಬಂಧಿಸಿ ಆಸ್ಪತ್ರೆಗಳ ಸನ್ನದ್ಧತೆಯನ್ನು ಖಾತ್ರಿಪಡಿಸುವ ಸಲುವಾಗಿ ದೇಶದಾದ್ಯಂತ ಸೋಮವಾರ ಹಾಗೂ ಮಂಗಳವಾರ ಅಣಕು ಕಾರ್ಯಾಚರಣೆ ಹಮ್ಮಿಕೊಳ್ಳಲಾಗಿದೆ.

ಸಾರ್ವಜನಿಕ ಹಾಗೂ ಖಾಸಗಿ ಆಸ್ಪತ್ರೆಗಳು ಈ ಕಾರ್ಯಾಚರಣೆಯ-ಲ್ಲಿ ಭಾಗಿಯಾಗಲಿವೆ. ಕೇಂದ್ರ ಆರೋಗ್ಯ ಸಚಿವ ಮನ್ಸುಖ್ ಮಾಂಡವೀಯ ಅವರು ಹರಿಯಾಣದ ಝಜ್ಜರ್‌ನ-ಲ್ಲಿರುವ ಏಐಐಎಂಎಸ್ ಶಾಖೆಗೆ ಸೋಮವಾರ ಭೇಟಿ ನೀಡಿ, ಪರಿಶೀಲನೆ ನಡೆಸುವರು ಎಂದು ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

ದೇಶದಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ, ಸಚಿವ ಮಾಂಡವೀಯ ಅಧ್ಯಕ್ಷತೆಯಲ್ಲಿ ಶುಕ್ರವಾರ ಪರಿಶೀಲನಾ ಸಭೆ ನಡೆದಿತ್ತು. ಆಸ್ಪತ್ರೆಗಳಲ್ಲಿನ ಮೂಲಸೌಕರ್ಯ-ಗಳು ಹಾಗೂ ಕೋವಿಡ್ ಪರಿಸ್ಥಿತಿ ನಿರ್ವಹಣೆಗೆ ಸಂಬಂಧಿಸಿ ಅವುಗಳ ಸನ್ನದ್ಧತೆ ಪರಿಶೀಲಿಸಲು ಏ.10 ಹಾಗೂ 11ರಂದು ಅಣಕು ಕಾರ್ಯಾಚರಣೆ ನಡೆಸಲು ತೀರ್ಮಾನಿಸಲಾಗಿತ್ತು.



ಸಾಧನೆಗೆ ಸಂಜೀವಿನಿ ಸ್ವಾಟ್ ಅನಾಲಿಸಿಸ್

ಪ್ರದೀಪ್ ವೆಂಕಟರಾಮ್

ನಿಮ್ಮ ಸಾಮರ್ಥ್ಯ, ದೌರ್ಬಲ್ಯ, ಯಾವುದರ ಬಗೆಗೆ ಅಂಜಿಕೆ ಇದೆ ಎಂಬುದನ್ನು 'ಸ್ವಾಟ್ ವಿಶ್ಲೇಷಣೆ' ಮೂಲಕ ಅರಿತುಕೊಂಡರೆ, ಸರಿಯಾದ ಕೋರ್ಸ್/ವೃತ್ತಿ ಯೋಜನೆ ಮಾಡಬಹುದು.

'ಎಸ್ಸೆಸ್ಸೆಲ್ಸಿ ಮುಗಿಸಿದ್ದೇನೆ. ಪಿಯುಸಿ ನಂತರ, ಸಿಇಟಿಗೆ ತಯಾರಿಯಾದರೆ ಸಾಕಾ ಅಥವಾ ಇಂಟಿಗ್ರೇಟೆಡ್ ಕೋರ್ಸ್ ಓದಿ ಜೆಇಇ-ನೀಟ್' ಪರೀಕ್ಷೆಗೂ ಈಗಿನಿಂದಲೇ ಸಿದ್ಧಗೊಳಿಸುವ ಕಾಲೇಜಿಗೆ ಹೋಗಬೇಕಾ.. ?

****


'ನನಗೆ ಗಣಿತ ಕಷ್ಟ. ಬರೀ ಬಯಾಲಜಿ ಕಾಂಬಿನೇಷನ್ ಸಬ್ಜೆಕ್ಟ್ ಓದಿದರೆ ಸಾಕಲ್ಲವಾ...? ಆಗ ಬರೀ ಲೈಫ್ ಸೈನ್ಸ್ ಪದವಿಯನ್ನಷ್ಟೇ ಓದಬೇಕು, ಎಐ, ರೊಬೊಟಿಕ್ಸ್ ಸೈನ್ಸ್ ಎಲ್ಲ ಓದೋಕಾಗಲ್ಲವಲ್ಲಾ.. ಏನು ಮಾಡೋದು.. ?'

****

'ಪಿಯುಸಿ ಮುಗಿಯುತ್ತಿದೆ. ಪದವಿಯಲ್ಲಿ ಯಾವ ಸ್ಟ್ರೀಮ್ ಆಯ್ಕೆ ಮಾಡ್ಕೋಬೇಕು.. ಡಿಪ್ಲೊಮಾ, ಎಂಜಿನಿಯರಿಂಗ್, ವೈದ್ಯಕೀಯ.. ಅದರಲ್ಲಿ ಆಯುರ್ವೇದ.. ಡೆಂಟಲ್.. ಯಾವುದನ್ನು ಆಯ್ಕೆ ಮಾಡ್ಕೊಳ್ಳಲಿ? ಈ ಕೋರ್ಸ್‌ಗಳಿಗೆಲ್ಲ ಭವಿಷ್ಯ ಇದೆಯಾ, ನಾನು ಓದೋಕೆ ಆಗುತ್ತಾ... ?'

****

ಇನ್ನೊಂದು ಶೈಕ್ಷಣಿಕ ವರ್ಷ ಮುಗಿದಿದೆ. ದ್ವಿತೀಯ ಪಿಯುಸಿ ಪರೀಕ್ಷೆಗಳು ಮುಗಿದಿವೆ. ಎಸ್ಸೆಸ್ಸೆಲ್ಸಿ ಪರೀಕ್ಷೆಗಳು ಮುಗಿಯುವ ಹಂತದಲ್ಲಿವೆ. ಪದವಿ ಪರೀಕ್ಷೆಗಳು ಇನ್ನೇನು ಆರಂಭವಾಗಬೇಕು. ಈಗ ಮನೆ ಮನೆಗಳಲ್ಲಿ ಮಕ್ಕಳು ಮತ್ತು ಪೋಷಕರ ನಡುವೆ ಇಂಥದ್ದೇ ಚರ್ಚೆಗಳು ನಡೆಯುತ್ತಿವೆ. ಚರ್ಚೆಗಳೆಲ್ಲ ಗೊಂದಲ ಮೂಡಿಸುವ ಪ್ರಶ್ನೆಗಳೊಂದಿಗೆ ಅಂತ್ಯವಾಗುತ್ತಿವೆ.



ಸ್ವಾಟ್ ಅನಾಲಿಸಿಸ್

ಹೀಗೆ ಗೊಂದಲ ಸೃಷ್ಟಿಯಾಗಲು ಪ್ರಮುಖವಾದ ಕಾರಣ, ಮಕ್ಕಳು(ವಿದ್ಯಾರ್ಥಿಗಳು) ತಮ್ಮನ್ನು ತಾವು ಅರ್ಥ ಮಾಡಿಕೊಳ್ಳದೆ, ವೃತ್ತಿಯೋಜನೆಯನ್ನೂ ಮಾಡಿಕೊಳ್ಳದೇ, ವೃತ್ತಿ/ಕೋರ್ಸ್ ಆಯ್ಕೆ ಪ್ರಕ್ರಿಯೆಯಲ್ಲಿ ತೊಡಗಿಕೊಳ್ಳುವುದು. ಅಷ್ಟೇ ಅಲ್ಲ, ಕೆಲವೊಮ್ಮೆ ಏಕಕಾಲಕ್ಕೆ ತೀರಾ ವಿಭಿನ್ನವಾದ ಕೋರ್ಸ್/ವೃತ್ತಿಗಳನ್ನು ಪರಿಗಣಿಸುವುದರಿಂದಲೂ, ಆಯ್ಕೆ ಮಾಡಿಕೊಳ್ಳುವುದು ಕಷ್ಟವಾಗುತ್ತದೆ.

ಹಾಗಾದರೆ, ತಮ್ಮನ್ನು ತಾವು ಸಂಪೂರ್ಣವಾಗಿ ಅರಿತು ಮುಂದಿನ ವೃತ್ತಿ/ಕೋರ್ಸ್ ಆಯ್ಕೆ ಮಾಡಿಕೊಳ್ಳುವುದು ಹೇಗೆ?

ಇಂಥ ಸಂದರ್ಭ ಎದುರಾದಾಗ, ಅದನ್ನು ಸಮರ್ಥವಾಗಿ ಎದುರಿಸಲು ಕಾರ್ಪೊರೇಟ್ ಸಂಸ್ಥೆಗಳು ಉಪಯೋಗಿಸುವ ಪ್ರಮುಖ ಸಾಧನವೆಂದರೆ, ಅದು 'ಸ್ವಾಟ್ ಅನಾಲಿಸಿಸ್'(SWOT Analysis). ಈ ವಿಶ್ಲೇಷಣೆಯಲ್ಲಿ ವ್ಯಕ್ತಿಯೊಬ್ಬನಲ್ಲಿರುವ ಶಕ್ತಿ(Strength), ದೌರ್ಬಲ್ಯ(Weakness), ಅವಕಾಶಗಳು (Opportunities) ಹಾಗೂ ಅಂಜಿಕೆ(Threats)ಗಳನ್ನು ಗುರುತಿಸಬೇಕು. ಅದೇ ರೀತಿ ಈ ಸ್ವಾಟ್ ವಿಧಾನವನ್ನು ವೃತ್ತಿ /ಕೋರ್ಸ್ ಆಯ್ಕೆ ಪ್ರಕ್ರಿಯೆಯಲ್ಲಿ ನಮ್ಮನ್ನು ನಾವು ಕಂಡುಕೊಳ್ಳಲು ಬಳಸಿಕೊಳ್ಳಬಹುದು. ಇದು, ಶಾಲಾಕಾಲೇಜುಗಳಲ್ಲಿ ಅನೇಕ ವರ್ಷಗಳಿಂದ ನಡೆಸುತ್ತಿರುವ ವೃತ್ತಿಯೋಜನೆ ಕಾರ್ಯಾಗಾರಗಳಿಂದ ಲಭಿಸಿರುವ ಮಾಹಿತಿ ಮತ್ತು ಅನುಭವವೂ ಹೌದು.

ಸ್ವಾಟ್ ವಿಶ್ಲೇಷಣೆ ಹೇಗೆ?

ನಿಮ್ಮನ್ನು ನೀವೇ ಪ್ರಶ್ನಿಸಿಕೊಳ್ಳುತ್ತಾ(ಸ್ವಯಂ-ಪ್ರಶ್ನೆಗಾರಿಕೆಯಿಂದ) ನಿಮ್ಮ ಸಾಮರ್ಥ್ಯಗಳು, ದೌರ್ಬಲ್ಯಗಳು, ಅವಕಾಶಗಳು ಮತ್ತು ಅಂಜಿಕೆಗಳನ್ನು ನಿಷ್ಪಕ್ಷಪಾತವಾಗಿ ಗುರುತಿಸಿ, ಸ್ವವಿಮರ್ಶೆಯನ್ನು ಮಾಡಬೇಕು. ಈ ವಿಶ್ಲೇಷಣೆಯಲ್ಲಿ ನಿಮಗೆ ನೀವೇ ಹಾಕಿಕೊಳ್ಳುವ ಪ್ರಶ್ನೆಗಳು ಈ ರೀತಿಯಲ್ಲಿರಬಹುದು:

ಸಾಮರ್ಥ್ಯ(ಇದನ್ನು ಹೆಚ್ಚಿಸುವ, ವರ್ಧಿಸುವ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಬೇಕು)

- ನನಗೆ ಯಾವ ವಿಷಯಗಳಲ್ಲಿ ಹೆಚ್ಚಿನ ಆಸಕ್ತಿಯಿದೆ?
- ನನಗೆ ಯಾವ ವಿಷಯಗಳನ್ನು ವೇಗವಾಗಿ ಗ್ರಹಿಸಲು ಆಗುತ್ತದೆ?
- ನನ್ನ ವೈಯಕ್ತಿಕ ಗುಣಲಕ್ಷಣಗಳು, ಕೌಶಲಗಳು (ಸಂವಹನ, ನಾಯಕತ್ವದ ಗುಣಗಳು, ಆಶಾವಾದ, ಸಕಾರಾತ್ಮಕ ಮನೋಭಾವ, ಸಮಯದ ನಿರ್ವಹಣೆ, ಶಿಸ್ತು ಇತ್ಯಾದಿ) ಯಾವುವು?
- ಸಹಪಾಠಿಗಳಿಗಿಂತ ಯಾವ ಕಾರ್ಯಗಳನ್ನು ನಾನು ಉತ್ತಮವಾಗಿ ಮಾಡಬಹುದು?
- ನನ್ನ ಕೌಟುಂಬಿಕ ಹಿನ್ನೆಲೆ, ಸಂಪನ್ಮೂಲಗಳೇನು?
- ನನ್ನ ವೈಯಕ್ತಿಕ ಮೌಲ್ಯಗಳೇನು (ಪ್ರಾಮಾಣಿಕತೆ, ನೈತಿಕತೆ, ನಿಷ್ಠೆ ಇತ್ಯಾದಿ)

ದೌರ್ಬಲ್ಯ (ನಿಯಂತ್ರಿಸಿಕೊಳ್ಳಬೇಕು/ ಪರಿಹರಿಸಿಕೊಳ್ಳಬೇಕು)

- ನನಗೆ ಕಷ್ಟವೆನಿಸುವ ವಿಷಯಗಳೇನು? ಕ್ಷೇತ್ರಗಳೇನು?
- ನನ್ನ ದೌರ್ಬಲ್ಯಗಳೇನು? (ಮುಂಗೋಪ, ಋಣಾತ್ಮಕ ಮನೋಭಾವ, ನಿರಾಶಾವಾದ, ಅಸ್ತವ್ಯಸ್ತತೆ, ಸೋಮಾರಿತನ ಇತ್ಯಾದಿ
- ದೌರ್ಬಲ್ಯಗಳನ್ನು ನಿಯಂತ್ರಿಸುವುದು/ ಪರಿಹರಿಸುವುದು ಹೇಗೆ?
- ನನಗೆ ಯಾವ ಕೆಲಸಗಳನ್ನು ನಿರ್ವಹಿಸಲು ಆಗುವುದಿಲ್ಲ/ಇಚ್ಛಿಸುವುದಿಲ್ಲ?

ಅವಕಾಶಗಳು (ಪರಿಣಾಮಕಾರಿಯಾಗಿ ಬಳಸಿಕೊಳ್ಳಬೇಕು)

- ನನಗಿರುವ ಸಾಮರ್ಥ್ಯವನ್ನು ಪರಿಗಣಿಸಿದರೆ ಇರುವ ಶೈಕ್ಷಣಿಕ ಅವಕಾಶಗಳೇನು?
- ನನ್ನ ಬದುಕಿನ ಕನಸುಗಳೇನು, ಗುರಿಗಳೇನು?
- ಅವುಗಳನ್ನು ಸಾಧಿಸಲು ಶೈಕ್ಷಣಿಕ/ವೃತ್ತಿ ಜೀವನವನ್ನು ಹೇಗೆ ರೂಪಿಸಿಕೊಳ್ಳಬೇಕು?
- ನನಗಿರುವ ವೃತ್ತಿಯ ಅವಕಾಶಗಳೇನು? (ಖಾಸಗಿ, ಸರ್ಕಾರಿ, ಸ್ವಂತ ಉದ್ದಿಮೆ, ವಿದೇಶಿ ಅಧ್ಯಯನ ಇತ್ಯಾದಿ)

ಅಂಜಿಕೆಗಳು (ಪುನರ್ಮೌಲ್ಯಗೊಳಿಸಿ, ತಡೆಗಟ್ಟಬೇಕು)

- ನಾನು ಅಪೇಕ್ಷಿಸುವ ಕ್ಷೇತ್ರದಲ್ಲಿ ನನ್ನ ದೌರ್ಬಲ್ಯಗಳಿಂದ ತೊಂದರೆಗಳಾಬಹುದೇ?
- ಈ ಕ್ಷೇತ್ರದಲ್ಲಿ ಬೇಡಿಕೆ ಇನ್ನೂ ಇರುತ್ತದೆಯೇ?
- ನಾನು ಅಪೇಕ್ಷಿಸುವ ಕ್ಷೇತ್ರದಲ್ಲಿನ ಸ್ಪರ್ಧಾತ್ಮಕ ಅಂಶಗಳೇನು?
- ಬಾಹ್ಯ ಕ್ಷೇತ್ರದ ಬದಲಾವಣೆಗಳಿಂದ (ಸರ್ಕಾರದ ನೀತಿ, ನಿಯಮಗಳು, ಕಾನೂನು, ತಂತ್ರಜ್ಞಾನ, ಆವಿಷ್ಕಾರಗಳು, ಗ್ರಾಹಕರ ಆದ್ಯತೆಗಳು ಇತ್ಯಾದಿ) ಆಗಬಹುದಾದ ಪರಿಣಾಮಗಳೇನು?

ಅಂತಿಮ ನಿರ್ಧಾರ ಸುಲಭ

ಈ ರೀತಿ ಹಲವಾರು ಪ್ರಶ್ನೆಗಳಿಗೆ ಉತ್ತರಗಳನ್ನು ಕಂಡುಕೊಳ್ಳುತ್ತಾ ಹೋದಂತೆ, ಸ್ವವಿಮರ್ಶೆ ಸಂಪೂರ್ಣವಾಗಿಯೂ, ಸಮಗ್ರವಾಗಿಯೂ ಆಗುತ್ತದೆ. ಸ್ವವಿಮರ್ಶೆಯ ಈ ಪ್ರಕ್ರಿಯೆಯಿಂದ ಹೊಸದೊಂದು, ಅಮೂಲ್ಯವಾದ ವ್ಯಕ್ತಿತ್ವದ ಒಳನೋಟ ಸಿಗುತ್ತದೆ. ಹಾಗಾಗಿ, ವಿವಿಧ ಕೋರ್ಸ್‌ಗಳಿಗೆ ಅಗತ್ಯವಿರುವ ಜ್ಞಾನ, ಕೌಶಲಗಳು ಮತ್ತು ಮನೋಧೋರಣೆಗಳಿಗೂ ವ್ಯಕ್ತಿತ್ವದ ಗುಣಲಕ್ಷಣಗಳಿಗೂ ಹೋಲಿಸಿ, ಯಾವ ಕೋರ್ಸ್ ಮತ್ತು ವೃತ್ತಿ ಸೂಕ್ತವೆಂದು ಸುಲಭವಾಗಿ ನಿರ್ಧರಿಸಬಹುದು.

ವಿಶೇಷವಾಗಿ, ವಿದ್ಯಾರ್ಥಿಗಳು ಹಲವಾರು ಆಯ್ಕೆಗಳನ್ನು ಪರಿಗಣಿಸುವಾಗ ಸ್ವಾಟ್ ವಿಶ್ಲೇಷಣೆಯ ಸಾಧನವನ್ನು ಸಮರ್ಪಕವಾಗಿ ಉಪಯೋಗಿಸಿದರೆ, ಸರಿಯಾದ ಕೋರ್ಸ್/ವೃತ್ತಿಯ ಆಯ್ಕೆ ಮಾಡಿ, ಬದುಕಿನ ಕನಸುಗಳನ್ನು ಸಾಕಾರಗೊಳಿಸಬಹುದು.

(ಲೇಖಕರು ಶಿಕ್ಷಣ ತಜ್ಞರು ಮತ್ತು ವೃತ್ತಿ ಸಲಹೆಗಾರರು)

ಇದೊಂದು ಮಾದರಿ ಗಮನಿಸಿ..

ಸಂತೋಷ್, ಇತ್ತೀಚೆಗೆ ಪಿಯುಸಿ ಮುಗಿಸಿದ. ಅವನು ಸ್ವಾಟ್ ಅನಾಲಿಸಿಸ್ ಮೂಲಕ ತನ್ನ ಶಕ್ತಿ-ಸಾಮರ್ಥ್ಯ-ದೌರ್ಬಲ್ಯ ಹಾಗೂ ಅಂಜಿಕೆಗಳೂ ಏನು ಎಂಬುದನ್ನು ಅರಿತು, ಅದಕ್ಕೆ ತಕ್ಕಂತೆ ಕೋರ್ಸ್/ವೃತ್ತಿ ಯೋಜನೆ ರೂಪಿಸಿಕೊಂಡು, ಯಶಸ್ವಿಯಾದ. ಈ ಪ್ರಕ್ರಿಯೆ ಹೇಗಾಯ್ತು ಎಂಬುದನ್ನು ಅವನ ಉದಾಹರಣೆ ಮೂಲಕ ಗಮನಿಸೋಣ.

ಅವಕಾಶಗಳು

- ಪದವಿ ಕೋರ್ಸ್ ನಂತರ ಉನ್ನತ ಶಿಕ್ಷಣಕಾಗಿ ಎಂಬಿಎ, ಶೈಕ್ಷಣಿಕ ಸಾಲ.
- ಆರ್ಥಿಕವಾಗಿ ಫಲದಾಯಕವಾದ ಮಾರ್ಕೆಟಿಂಗ್ ವೃತ್ತಿಯಿಂದ ತೃಪ್ತಿಕರವಾದ ಜೀವನಶೈಲಿ. ಎಂಬಿಎ ನಂತರ ಉದ್ಯೋಗದಲ್ಲಿ ಮತ್ತಷ್ಟು ಪ್ರಗತಿ.

ಸಾಮರ್ಥ್ಯಗಳು

- ಆಕರ್ಷಕ ವ್ಯಕ್ತಿತ್ವ, ಸಕಾರಾತ್ಮಕ ಧೋರಣೆ, ಮಾತುಗಾರಿಕೆ, ಅಂತರ್-ವೈಯಕ್ತಿಕ ಕೌಶಲ,

ದೌರ್ಬಲ್ಯಗಳು

- ಪಿಯುಸಿ ಪರೀಕ್ಷೆಯಲ್ಲಿ ಸಾಧಾರಣ ಫಲಿತಾಂಶ, ಗಣಿತ, ಆರ್ಥಿಕ ಸಮಸ್ಯೆಗಳು.
- ಅಜಾಗರೂಕತೆ, ಅಸ್ತವ್ಯಸ್ತತೆ, ಗಡಿಬಿಡಿ, ಚಂಚಲತೆ.


ಅಂಜಿಕೆಗಳು

- ಇ-ಕಾಮರ್ಸ್ ಜನಪ್ರಿಯವಾಗುತ್ತಿರುವುದರಿಂದ, ಮಾರ್ಕೆಟಿಂಗ್ ವೃತ್ತಿಯ ಮೇಲಿನ ಪರಿಣಾಮಗಳು.
- ಬಿ.ಎಸ್ಸಿ, ಎಂಬಿಎ ಮಾಡಲು ಆಗುವ ಐದು ವರ್ಷಗಳಲ್ಲಿ ಮಾನವ ಸಂಪನ್ಮೂಲಕ್ಕೆ ಬೇಡಿಕೆಗಿಂತ ಪೂರೈಕೆ ಹೆಚ್ಚಾಗುವ ಸಾಧ್ಯತೆ.

ಕೋರ್ಸ್/ವೃತ್ತಿ ಯೋಜನೆ

ಈ ಎಲ್ಲಾ ಅಂಶಗಳನ್ನು ವಿಶ್ಲೇಷಿಸಿ, ಬಿ.ಎಸ್ಸಿ ಕೋರ್ಸ್ ಆಯ್ಕೆ. ವಾರಾಂತ್ಯದಲ್ಲಿ ಮಾರ್ಕೆಟಿಂಗ್ ಸಂಬಂಧಿತ ಅರೆಕಾಲಿಕ ಕೆಲಸಗಳು. ಬಿ.ಎಸ್ಸಿ ನಂತರ ಮಾರ್ಕೆಟಿಂಗ್ ವೃತ್ತಿಯನ್ನು ಅನುಸರಿಸಿ, ಸಂಜೆ ಕಾಲೇಜಿನ ಮೂಲಕ ಎಕ್ಸಿಕ್ಯೂಟಿವ್ ಎಂಬಿಎ ಮಾಡುವ ನಿರ್ಧಾರ.

ಬಿ.ಎಸ್ಸಿ ಕಲಿತವರು ಟೆಕ್ನಿಕಲ್ ಕೋರ್ಸ್ ಮಾಡಬಹುದೇ?



ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ಪ್ರದೀಪ್ ಕುಮಾರ್ ವಿ

1. ನಾನು ಬಿ.ಎಸ್ಸಿ (ಪಿಸಿಎಂ) ಮುಗಿಸಿದ್ದೇನೆ. ಯಾವುದಾದರೂ ಟೆಕ್ನಿಕಲ್ ಕೋರ್ಸ್ ಮಾಡಬಹುದೇ?. ಮುಂದಿನ ಅವಕಾಶಗಳ ಬಗ್ಗೆ ಮಾಹಿತಿ ಕೊಡಿ.

ಹೆಸರು, ಊರು ತಿಳಿಸಿಲ್ಲ.

ಮೊದಲಿಗೆ, ಬಿ.ಎಸ್ಸಿ ನಂತರದ ನಿಮ್ಮ ವೃತ್ತಿಜೀವನದ ಕನಸುಗಳೇನು ಎನ್ನುವುದರ ಬಗ್ಗೆ ಸ್ಪಷ್ಟತೆಯಿರಬೇಕು. ಈ ಅವಕಾಶಗಳನ್ನು ಪರಿಶೀಲಿಸಿ:

- ಬಿ.ಎಸ್ಸಿ ನಂತರ ನಿಮಗಿಷ್ಟವಿರುವ ವಿಷಯದಲ್ಲಿ ಎಂ.ಎಸ್ಸಿ/ಪಿಎಚ್.ಡಿ ಮಾಡಬಹುದು. ಇದಾದ ನಂತರ ಕಾಲೇಜು, ವಿಶ್ವವಿದ್ಯಾಲಯಗಳಲ್ಲಿ ಬೋಧಿಸಬಹುದು.
- ಟೆಕ್ನಿಕಲ್ ಕೋರ್ಸ್ ಮಾಡುವ ಇಚ್ಛೆಯಿದ್ದರೆ, ಅಲ್ಪಾವಧಿ ಸರ್ಟಿಫಿಕೆಟ್/ ಡಿಪ್ಲೊಮಾ ಕೋರ್ಸ್ ಮಾಡಬಹುದು. ಹೆಚ್ಚಿನ ತಜ್ಞತೆಗಾಗಿ, ಪರ್ಯಾಯ ಪ್ರವೇಶದ ಮೂಲಕ ಎಂಜಿನಿಯರಿಂಗ್ ಮಾಡಬಹುದು.
- ಎಂಬಿಎ ಮಾಡಿ ಆಕರ್ಷಕ ವೃತ್ತಿಯ ಅವಕಾಶಗಳನ್ನು ಬಳಸಿಕೊಳ್ಳಬಹುದು.
- ಬಿ.ಎಸ್ಸಿ ನಂತರ ವೃತ್ತಿಯನ್ನು ಅರಸಿ, ದೂರಶಿಕ್ಷಣದ ಮೂಲಕ ವಿದ್ಯಾಭ್ಯಾಸ ಮುಂದುವರೆಸಬಹುದು.

ನಿಮ್ಮ ಆಸಕ್ತಿ, ಅಭಿರುಚಿ ಮತ್ತು ಸ್ವಾಭಾವಿಕ ಪ್ರತಿಭೆಯಂತೆ ವೃತ್ತಿಯೋಜನೆಯನ್ನು ಮಾಡಿ, ಅದಕ್ಕೆ ಅನುಗುಣವಾಗಿ ಕೋರ್ಸ್ ಆಯ್ಕೆ ಮಾಡಬೇಕು. ವೃತ್ತಿಯೋಜನೆಯನ್ನು ಮಾಡದೆ ಕೋರ್ಸ್ ಮಾಡಿದರೆ, ಇಂತಹ ಗೊಂದಲಗಳಿಂದ, ಮುಂದಿನ ಬದುಕಿನ ಬಗ್ಗೆ ಗೊಂದಲಗಳು ಮೂಡುವುದು ಸಹಜ. ನಿಮ್ಮ ಭವಿಷ್ಯದ ಕನಸಿನಂತೆ, ವೃತ್ತಿ ಯೋಜನೆಯನ್ನು ಮಾಡಿ, ಅದರಂತೆ ಮುಂದಿನ ನಿರ್ಧಾರಗಳನ್ನು ತೆಗೆದುಕೊಳ್ಳುವುದು ಸೂಕ್ತ. ಹೆಚ್ಚಿನ ಮಾರ್ಗದರ್ಶನಕ್ಕಾಗಿ ಈ ವಿಡಿಯೊ ವೀಕ್ಷಿಸಿ: https://www.youtube.com/watch?v=MHnPg_sp6E0

2. ನಾನು ಪಿಯುಸಿ ಮುಗಿಸಿದ್ದೇನೆ. ಫೊರೆನ್ಸಿಕ್ ಸೈನ್ಸ್ ಮಾಡಬೇಕೆಂದಿದ್ದೇನೆ. ವೃತ್ತಿಯ ಅವಕಾಶಗಳ ಬಗ್ಗೆ ತಿಳಿಸಿ.

ಪವನ್, ಊರು ತಿಳಿಸಿಲ್ಲ.

ನಿಮ್ಮ ಇಚ್ಛೆಯಂತೆ ಬಿ.ಎಸ್ಸಿ ವಿಧಿ ವಿಜ್ಞಾನ (ಫೊರೆನ್ಸಿಕ್ ಸೈನ್ಸ್) ಕೋರ್ಸ್ ಮಾಡಬಹುದು. ವಿಧಿ ವಿಜ್ಞಾನ ಬೇಡಿಕೆಯಲ್ಲಿರುವ ಕ್ಷೇತ್ರ. ಈ ಕ್ಷೇತ್ರದಲ್ಲಿ ವೃತ್ತಿಯ ಯಶಸ್ಸಿಗೆ ಬೇಕಾಗುವ ಕೌಶಲಗಳೆಂದರೆ ತಾರ್ಕಿಕ ಯೋಚನಾ ಶಕ್ತಿ, ವಿಶ್ಲೇಷಣಾ ಮತ್ತು ಸಂಶೋಧನಾ ಕೌಶಲ, ವಿವರಗಳ ಕಡೆ ಗಮನ, ಒತ್ತಡದಲ್ಲಿ ಕೆಲಸ ಮಾಡುವ ಸಾಮರ್ಥ್ಯ, ಸಮಯದ ನಿರ್ವಹಣೆ ಇತ್ಯಾದಿ. ವಿದ್ಯಾಭ್ಯಾಸದ ನಂತರ ಸಂಶೋಧನಾ ಸಂಸ್ಥೆಗಳು, ಖಾಸಗಿ ಮತ್ತು ಸರ್ಕಾರಿ ಪತ್ತೇದಾರಿ ಸಂಸ್ಥೆಗಳು, ಪೊಲೀಸ್ ಇಲಾಖೆ, ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳು, ಕಾಲೇಜುಗಳಲ್ಲಿ ವೃತ್ತಿಯನ್ನು ಅರಸಬಹುದು.

3. ನಾನು 2018ರಲ್ಲಿ ಬಿಇ (ಸಿವಿಲ್) ಮಾಡಿದ್ದು, ಕಾರಣಾಂತರಗಳಿಂದ ವೃತ್ತಿಜೀವನವನ್ನು ಕ್ರಮಬದ್ಧವಾಗಿ ರೂಪಿಸಿಕೊಳ್ಳಲು ಈವರೆಗೆ ಸಾಧ್ಯವಾಗಿಲ್ಲ. ಸ್ಥಿರವಾದ ವೃತ್ತಿಜೀವನವನ್ನು ರೂಪಿಸಿಕೊಳ್ಳಲು, ಈಗ ನನಗಿರುವ ಆಯ್ಕೆಗಳಾದ ಬಿ.ಇಡಿ, ಎಂಇ, ಎಂಬಿಎ ಕೋರ್ಸ್‌ಗಳಲ್ಲಿ ಯಾವುದನ್ನು ಆರಿಸಿಕೊಳ್ಳಬಹುದು?

ಲತಾ ಎಂ, ಊರು ತಿಳಿಸಿಲ್ಲ.

ನೀವು ಗುರುತಿಸಿರುವ ಮೂರೂ ಆಯ್ಕೆಗಳಿಗೆ ಬೇಕಾಗುವ ಜ್ಞಾನ ಮತ್ತು ಕೌಶಲಗಳು ವಿಭಿನ್ನ ಮತ್ತು ಈ ಎಲ್ಲಾ ಕ್ಷೇತ್ರಗಳಲ್ಲೂ ವೃತ್ತಿಯ ಅವಕಾಶಗಳಿವೆ. ಉನ್ನತ ಶಿಕ್ಷಣದ ಮಾರ್ಗದರ್ಶನಕ್ಕಾಗಿ ಈ ವಿಡಿಯೊ ವೀಕ್ಷಿಸಿ: https://www.youtube.com/watch?v=oyUMPrEKPPU

ಇನ್ನಷ್ಟು ಪ್ರಶ್ನೋತ್ತರಗಳಿಗಾಗಿ www.prajavani.net/education-career ಜಾಲತಾಣಕ್ಕೆ ಭೇಟಿ ನೀಡಿ.

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು shikshana@prajavani.co.in ಗೆ ಕಳಿಸಬಹುದು.

ನೀತಿ ಇಂಟರನ್‌ಷಿಪ್ ಸ್ಕೀಮ್ 2023

ವಿದ್ಯಾರ್ಥಿ ವೇತನ ಕೈಪಿಡಿ

ನೀತಿ ಇಂಟರನ್‌ಷಿಪ್ ಸ್ಕೀಮ್ 2023 – ಇದು ಕೇಂದ್ರ ಸರ್ಕಾರದ ನೀತಿ ಆಯೋಗ, ಪಿಯುಸಿ/ಪದವಿ/ಸ್ನಾತಕೋತ್ತರ ಪದವಿ ಅಥವಾ ಪಿ ಎಚ್.ಡಿಗೆ ನೋಂದಣಿ ಮಾಡಿಸಿರುವ ಅಭ್ಯರ್ಥಿಗಳಿಗಾಗಿ ರೂಪಿಸಿರುವ ಉಪಕ್ರಮವಾಗಿದೆ. ಯುವ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ತರಬೇತಿಯ ಜೊತೆಗೆ, ನೀತಿ ಆಯೋಗದ ಕಾರ್ಯಗಳಲ್ಲೂ ನೆರವಾಗುವ ಮೂಲಕ ಪರಸ್ಪರ ಅನುಕೂಲವಾಗುವಂತೆ ಮಾಡುವುದು ಈ ಸ್ಕೀಂ ಉದ್ದೇಶವಾಗಿದೆ.

ಅರ್ಹತೆ: ಭಾರತ ಅಥವಾ ವಿದೇಶಗಳಲ್ಲಿರುವ ಮಾನ್ಯತೆ ಪಡೆದ ವಿಶ್ವವಿದ್ಯಾಲಯಗಳು/ಶೈಕ್ಷಣಿಕ ಸಂಸ್ಥೆಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳು ಈ ಇಂಟರನ್‌ಷಿಪ್‌ಗೆ ಅರ್ಜಿ ಸಲ್ಲಿಸಬಹುದು.

ಪದವಿ ಓದುತ್ತಿರುವ ವಿದ್ಯಾರ್ಥಿಗಳು, ಹಿಂದಿನ ವರ್ಷದ ಪರೀಕ್ಷೆಯಲ್ಲಿ ಪಾಸಾಗಿರಬೇಕು ಮತ್ತು ಶೇ 85ರಷ್ಟು ಅಂಕಪಡೆದಿರಬೇಕು.

ಆರ್ಥಿಕ ನೆರವು/ ಪುರಸ್ಕಾರ: ಅನುಭವ ಪ್ರಮಾಣ ಪತ್ರ ನೀಡಲಾಗುತ್ತದೆ

ಅರ್ಜಿ ಸಲ್ಲಿಸಲು ಕೊನೆ ದಿನ: 10-05-2023

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್

ಮಾಹಿತಿಗೆ: www.b4s.in/praja/NIPS4

ಪಿಯುಸಿ- ಸಿಇಟಿ ಪರೀಕ್ಷೆ ದಿಕ್ಸೂಚಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು

CHEMISTRY

41) Conductivity of a saturated solution of a sparingly soluble salt AB at 298 K is 1.85×10^{-5} S m^{-1}. Solubility product of the salt AB at 298 K is ....

(Given: Λ^o_m (AB) = 140×10^{-4} S m^2 mol^{-1})

(a) 5.7×10^{-12} (b) 1.32×10^{-12}

(c) 7.5×10^{-12} (d) 1.74×10^{-12}

Soln: (d) : Using the realationship between solubility of sparingly soluble salt and Λ^o_m,

$$K = 1.85 \times 10^{-5}\ S\ m^{-1} = 1.85 \times 10^{-7}\ S\ cm^{-1}$$

$$\Lambda^0_m = 140 \times 10^{-4}\ S\ m^2\ mol^{-1} = 140\ S\ cm^2\ mol^{-1}$$

$$s = \frac{k \times 1000}{\Lambda^o_m} = \frac{1.85 \times 10^{-7} \times 1000}{140} = 1.32 \times 10^{-6}$$

$$K_{sp} = (s)^2 \quad \text{[For AB type of salt]}$$

$$= (1.32 \times 10^{-6})^2 = 1.74 \times 10^{-12}$$

42) If 3.01×10^{20} molecules are removed from 98mg of H_2SO_4, then the number of moles of H_2SO_4 left are

a) 0.1×10^{-3} mol b) 0.5×10^{-3} mol

c) 1.66×10^{-3} mol d) 9.95×10^{-2} mol

Answer: (b)

Expln:- Number of moles of H_2SO_4 left = N / Na

Now, finding N

For 98 gm of H_2SO_4 the molecules are 6.02×10^{20}

H_2SO_4 left = $6.02 \times 10^{20} - 3.01 \times 10^{20} = 3.01 \times 10^{20}$

Number of moles of H_2SO_4 left = N / NA

$$= 3.01 \times 10^{20} / 6.02 \times 10^{23}$$
$$= 0.5 \times 10^{-3} \text{ mol}$$

43) The correct set of quantum number for the unpaired electrons of the chlorine atom is

a) 2, 0, 0, + 1 / 2 b) 2, 1, – 1 , + 1 / 2

c) 3, 1 , 1, ± 1 / 2 d) 3, 0, 0, ± 1 / 2

Ans: (c)

Expln:- For finding out unpaired electron of chlorine atom we have to find electronic configuration $Cl = 1S^2\ 2S^2\ 2P^6\ 3S^2\ 3P^5$

$$n = 3, l = 1, m = 1, s = \pm 1/2$$

50) An incorrect statement with respect to S_N1 and S_N2 mechanism for alkyl halide is

(a) a strong nucleophile in an apotic solvent increases the rate of favours S_N2 reaction

(b) Competing reaction for an S_N2 reaction is rearrangement

(c) S_N1 reactions can be catalyzed by some Lewis acids

(d) a weak nucleophile and a protic solvent increase the rate of favours S_N1 reaction.

Soln: (b): Competing reaction for an S_N2 reaction is rearrangement.

51) Butylated hydroxyl toluene as a food additive acts as

(a) antioxidant (b) flavouring agent

(c) colouring agent (d) emulsifier.

Soln: (a) antioxidant

52) Terylene is NOT a..............................

(a) Copolymer (b) Polyester fiber

(c) Chain growth polymer

(d) Step growth polymer

Soln: (c) Chain growth polymer.

53) The correct statement is ....


(a) cyclohexadiene and cyclohexene cannot be isolated with ease during controlled hydrogenation of benzene

(b) One mole each of benzene and hydrogen when reacted gives 1/3 mole of cyclohexene and 2/3 mole unreacted hydrogen

(c) hydrogenation of benzene to cyclohexene is an endothermic process

(d) It is essier to hydrogenate benzene when compared to cyclohexene.

Soln: (a) During the hydrogenation of benzene, only cyclohexane can be isolated.



54) Which of the following is not the characteristic of ionic solids?

a) Very low value of electrical conductivity in the molten state.

b) Brittle nature.

c) very strong forces of interactions.

d) Anisotropic nature.

Ans:-a

55) Among the elements from atomic number 1 to 36, the number of elements which have an unpaired electron in their s-subshell is

(a) 4 (b) 7

(c) 6 (d) 9

Soln: (C)

$_1H = 1s^1$; $_3Li = 2s^1$; $_{11}Na = 3s^1$; $_{19}K = [Ar]\ 4s^1$ $_{24}Cr = [Ar]\ 3d^5\ 4s^1$ $_{29}Cu = [Ar]\ 3d^{10} 4s^1$

PHYSICS

30) The intensity of electric field inside a charged spherical shell is ....

a) 1 .b) 0

c) ∝ d) none

Ans:-b

31) A car moving with a velocity of 20 ms^{-1} is stopped in a distance of 40 m. If the same car is travelling at double the velocity, the distance travelled by it for the same retardation is

a) 640 m b) 320 m

c) 1280 m d) 160 m

Ans: (d)

Expln:- Let the initial speed of car be u = 20 m / s

Final speed of car; V = 0 m / s

Retardation = a

Case – I

$V^2 = u^2 + 2as$

$0 = u^2 + 2as$

$-400 / [2 * 40] = a$

$[a = -5\ m/s^2]$

Case – II

$u = 40$ m / s

$v = 0$ m / s

$a = -5\ m/s^2$

$s = ?$

$V^2 = u^2 + 2as$

$0 = (40)^2 + 2(-5).S$

$S = 1600 / 10$

$S = 160$ m

32) A hollow metal sphere of radius 10 cm is charged such that the potential on its surface is 5V. What is the potential at the centre of sphere?

.a) 5 V b) 10 V

c) ∝ d) 0

Ans:- a

33) What is the electrostatic potential due to an electric dipole at an equatorial point?

a) 1 b) 0

c) ∝ d) none

Ans:- b

34) Consider a current carrying wire (current *I*) in the shape of a circle. Note that as the current progresses along the wire, the direction of j (current density) charges in an exact manner, while the current *I* remain unaffected. The agent that is *essentially* responsible for is ....

a) source of emf.

b) electric field produced by charges accumulated on the surface of wire.

c) the charges just behind a given segment of wire which push them just the right way by repulsion.

d) the charges ahead.

Ans:-b

35) A solenoid of inductance 2 H carries a current of 1 A. What is the magnetic energy stored in a solenoid?

a) 4 J b) 2 J

c) 5 J d) 1 J

Soln: (d) : Here,

Inductance, $L = 2$ H, current, $I = 1$ A

Magmnetic energy stored in the solenoid is

$$U = \frac{1}{2}LI^2 = \frac{1}{2} \times 2 \times (1)^2 = 1\ J$$

36) The angle between velocity and acceleration of a particle describing uniform circular motion is

a) 45° b) 60°

c) 90° d). 180°

Answer: c

Expln:- In a circular motion, velocity is always tangential to the circular path. Also in a uniform circular motion, tangential acceleration is zero. Hence, the net acceleration will be centripetal acceleration which always acts towards the centre of the circular path. Hence, velocity and acceleration of a particle describing uniform circular motion are at a right angle to each other.

37) The self inductance L of a solenoid of length *l* and area of cross section A, with a fixed number of turns N increases as

a) *l* and A increase.

b) *l* decreases and A increases.

c) *l* increases and A decreases.

d) both l and A decrease. **Ans:- b**

38) A body of mass 50 kg, is suspended using a spring balance inside a lift at rest. If the lift starts falling freely, the reading of the spring balance is

a) = 50 kg b) > 50 kg

c) < 50 kg d) = 0

Ans: (d)

Expln:- As the lift is falling freely, therefore its acceleration = g (downwards)


Let, the force acting on body due to spring is "F"

$\therefore (50g) - F = (50)\ a$

$50g - F = 50\ g$

$F = 0$

Thus, no force is acting on the body due to spring. So, the reading of spring balance is zero.




ಸುಭಾಷಿತ

ಜ್ಞಾನಕ್ಕೂ ಅಹಂಗೂ ನೇರಾನೇರ ಸಂಬಂಧ ಇರುತ್ತದೆ. ಜ್ಞಾನ ಕಡಿಮೆ ಇದ್ದಷ್ಟೂ ಅಹಂಕಾರ ಹೆಚ್ಚಾಗಿ ಇರುತ್ತದೆ.

–ಆಲ್ಬರ್ಟ್ ಐನ್‌ಸ್ಟೀನ್

ಎನ್‌ಸಿಇಆರ್‌ಟಿಯಿಂದ ಪಠ್ಯ ಬದಲಾವಣೆ ವಿದ್ಯಾರ್ಥಿಗಳಲ್ಲಿ ಸಿದ್ಧಾಂತ ತುರುಕುವ ಯತ್ನ

ರಾಷ್ಟ್ರೀಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಮಂಡಳಿಯು (ಎನ್‌ಸಿಇಆರ್‌ಟಿ) ಸಿದ್ಧಪಡಿಸಿರುವ ಹನ್ನೊಂದು ಮತ್ತು ಹನ್ನೆರಡನೇ ತರಗತಿಯ ಇತಿಹಾಸ ಮತ್ತು ರಾಜ್ಯಶಾಸ್ತ್ರ ಪಠ್ಯಪುಸ್ತಕಗಳು ಹೊಸತೇ ಆದ ಇತಿಹಾಸವನ್ನು ಮುಂದಿಟ್ಟಿವೆ ಮತ್ತು ಇಲ್ಲದ ಇತಿಹಾಸವನ್ನು ಮಂಡಿಸಿವೆ. ಈ ಬದಲಾವಣೆಯು ಶೈಕ್ಷಣಿಕ ಅಗತ್ಯಗಳಿಗೆ ಬೇಕಾದಂತೆ ಆಗಿಲ್ಲ, ಬದಲಿಗೆ, ರಾಜಕಾರಣಕ್ಕೆ ಬೇಕಾದ ಬದಲಾವಣೆಗಳನ್ನು ಮಾಡಲಾಗಿದೆ. ಇದು ಇತಿಹಾಸವನ್ನು ತಿರುಚುವ ಕೆಲಸ. ದೇಶ ವಿಭಜನೆಗೆ ಮೊದಲು ಮತ್ತು ನಂತರ ಹಿಂದೂ–ಮುಸ್ಲಿಂ ಸಮುದಾಯಗಳ ನಡುವೆ ಸಾಮರಸ್ಯ ಮೂಡಿಸಲು ಮಹಾತ್ಮ ಗಾಂಧಿ ನಡೆಸಿದ ಪ್ರಯತ್ನಗಳು, ಅವರ ಹತ್ಯೆಯ ಬಳಿಕ ಆರ್‌ಎಸ್‌ಎಸ್ ಮೇಲೆ ಹೇರಿದ ನಿಷೇಧ ಎಲ್ಲವನ್ನೂ ಹೊಸ ಸಂಕಲನದ ಮೂಲಕ ಕಟ್ಟಿಕೊಡಲಾಗಿದೆ. ಹಿಂದೂ ತೀವ್ರವಾದಿಗಳ ಚಟುವಟಿಕೆಗಳ ಕುರಿತ ವಿವರಗಳನ್ನು ಪಠ್ಯದಿಂದ ಕೈಬಿಡಲಾಗಿದೆ. 2002ರಲ್ಲಿ ಗುಜರಾತ್‌ನಲ್ಲಿ ನಡೆದ ಕೋಮು ಗಲಭೆಗೆ ಸಂಬಂಧಿಸಿದ ಉಲ್ಲೇಖಗಳು, ವರ್ಗ, ಧರ್ಮ ಮತ್ತು ಜನಾಂದೋಲನಗಳು ಹೇಗೆ ಜನರನ್ನು ಪ್ರತ್ಯೇಕಿಸುತ್ತವೆ ಎಂಬುದರ ವಿವರಗಳನ್ನು ಅಳಿಸಿಹಾಕಲಾಗಿದೆ. ದೆಹಲಿಯಲ್ಲಿ ಸುಲ್ತಾನರ ಆಳ್ವಿಕೆ ಮತ್ತು ಮೊಘಲ್ ಯುಗದ ಇತಿಹಾಸವೂ ಪಠ್ಯದಿಂದ ಕಾಣೆಯಾಗಿದೆ. ಈ ಹಿಂದಿನ ಹಲವು ಶತಮಾನಗಳ ಅವಧಿಯಲ್ಲಿ ದೇಶದಲ್ಲಿ ಏನು ನಡೆದಿದೆ ಎಂಬುದರ ಅರಿವೇ ಇಲ್ಲದ ವಿದ್ಯಾರ್ಥಿಗಳು ಬೆಳೆಯಲು ಕಾರಣವಾಗುವಂತೆ ಪಠ್ಯಪುಸ್ತಕವನ್ನು ಬದಲಾಯಿಸಲಾಗಿದೆ.



ಎನ್‌ಸಿಇಆರ್‌ಟಿ ಈಗ ಮಾಡಿರುವ ಬದಲಾವಣೆಗಳು ಇತಿಹಾಸವನ್ನು ರಾಜಕಾರಣದ ಅಡಿಯಾಳನ್ನಾಗಿಸಿವೆ

ಪಠ್ಯವನ್ನು ತರ್ಕಬದ್ಧಗೊಳಿಸುವಿಕೆಯ ಹೆಸರಿನಲ್ಲಿ ಎನ್‌ಸಿಇಆರ್‌ಟಿ ಈ ಬದಲಾವಣೆಗಳನ್ನು ಮಾಡಿದೆ. ತರ್ಕಬದ್ಧಗೊಳಿಸುವಿಕೆ ಎಂಬುದು ಆಡಳಿತಾರೂಢ ಪಕ್ಷದ ರಾಜಕೀಯ ಸಿದ್ಧಾಂತಕ್ಕೆ ಅನುಗುಣವಾಗಿ ಇತಿಹಾಸವನ್ನು ತಿರುಚುವುದು ಅಲ್ಲ. ಭಾರತದ ಇತಿಹಾಸದ ಬರೆಯುವಿಕೆಯಲ್ಲಿ ಎಡಪಂಥೀಯ ಇತಿಹಾಸಕಾರರೇ ಪ್ರಾಬಲ್ಯ ಮೆರೆದಿದ್ದಾರೆ ಎಂಬ ತಕರಾರನ್ನು ಹಿಂದೂ ಬಲಪಂಥೀಯವಾದಿಗಳು ಹಿಂದಿನಿಂದಲೂ ಎತ್ತುತ್ತಾ ಬಂದಿದ್ದಾರೆ. ಹಾಗಾಗಿಯೇ ಆಗಿರುವ ತಪ್ಪುಗಳನ್ನು ಸರಿಪಡಿಸಿ ದೇಶದ 'ನಿಜವಾದ' ಇತಿಹಾಸವನ್ನು ಬರೆಯುವುದು ಬಲಪಂಥೀಯವಾದಿಗಳ ಉದ್ದೇಶವಾಗಿದೆ. ಆದರೆ, 'ನಿಜ ಇತಿಹಾಸ'ವನ್ನು ಬರೆಯುವುದು ಎಂದರೆ ಇತಿಹಾಸದಲ್ಲಿ ಜರುಗಿದ, ಆಡಳಿತ ಪಕ್ಷಕ್ಕೆ ಅನುಕೂಲಕರ ಅಲ್ಲ ಎನ್ನಿಸುವಂತಹ ಎಲ್ಲವನ್ನೂ ಅಳಿಸಿಹಾಕುವುದೇ ಆಗಿದೆ. ಈ ಉದ್ದೇಶವನ್ನು ಈಡೇರಿಸುವುದಕ್ಕಾಗಿ ಆಡಳಿತ ಪಕ್ಷವು ಸಮಗ್ರವಾದ ಯೋಜನೆಯೊಂದನ್ನು ರೂಪಿಸಿದೆ. ಅದರಲ್ಲಿ ಹೆಸರುಗಳ ಬದಲಾವಣೆ, ವ್ಯಕ್ತಿಗಳ ನೆನಪು ಮಾಸುವಂತೆ ಮಾಡುವುದು, ಹೊಸ ವ್ಯಕ್ತಿಗಳು ಮತ್ತು ವಿದ್ಯಮಾನಗಳನ್ನು ಸೃಷ್ಟಿಸುವುದು, ಯುಗ–ಯುಗಗಳನ್ನೇ ಮರೆಮಾಚುವುದು, ಇಡೀ ಭೂತಕಾಲವನ್ನು ಪುನರ್ ರಚಿಸುವುದು ಅಥವಾ ಮರು ವ್ಯಾಖ್ಯಾನ ಮಾಡುವುದೆಲ್ಲವೂ ಈ ಸಮಗ್ರ ಯೋಜನೆಯ ಭಾಗಗಳು. ಇದರ ಪರಿಣಾಮವಾಗಿ ಹುಸಿ ಇತಿಹಾಸ ಸೃಷ್ಟಿಯಾಗುತ್ತದೆ. ಈ ಹಿಂದೆ ಏನು ನಡೆದಿತ್ತು ಎಂಬುದಕ್ಕಿಂತ ಆಡಳಿತ ಪಕ್ಷಕ್ಕೆ ಏನು ಬೇಕಾಗಿದೆ ಎಂಬುದೇ ಇತಿಹಾಸವಾಗಿಬಿಡುತ್ತದೆ.

ವಿವಾದಾತ್ಮಕವಾದ ಈ ಬದಲಾವಣೆಗಳನ್ನು ಗುಟ್ಟಾಗಿ ಮಾಡಲಾಗಿದೆ ಮತ್ತು ಬದಲಾಯಿಸಿದವರು ಈ ಕೃತ್ಯವನ್ನು ದುರುದ್ದೇಶದಿಂದಲೇ ಎಸಗಿದ್ದಾರೆ ಎಂಬುದು ಸ್ಪಷ್ಟ. ಕಳೆದ ಜೂನ್‌ನಲ್ಲಿ ಪ್ರಸ್ತಾಪಿಸಲಾದ ಬದಲಾವಣೆಗಳ ಪಟ್ಟಿಯಲ್ಲಿ ಈಗ ಮಾಡಿರುವ ಹಲವು ಬದಲಾವಣೆಗಳ ಕುರಿತ ಮಾಹಿತಿ ಇರಲಿಲ್ಲ. ಕಣ್ತಪ್ಪಿನಿಂದಾಗಿ ಅದು ಸೇರಿರಲಿಲ್ಲ ಎಂದು ಎನ್‌ಸಿಇಆರ್‌ಟಿ ನಿರ್ದೇಶಕ ಡಿ.ಪಿ. ಸಕಲಾನಿ ಹೇಳಿದ್ದಾರೆ. ಬದಲಾವಣೆಗೆ ನೀಡಿದ ಸಮರ್ಥನೆಗಳಲ್ಲಿ ತರ್ಕಬದ್ಧಗೊಳಿಸುವಿಕೆ ಮಾತ್ರವಲ್ಲ, ವಿದ್ಯಾರ್ಥಿಗಳ ಮೇಲಿನ ಹೊರೆ ತಗ್ಗಿಸಲು ಈ ಕ್ರಮ ಎಂಬುದೂ ಸೇರಿದೆ. ಪರಿಣತರ ಅಭಿಪ್ರಾಯಗಳನ್ನು ಪಡೆದುಕೊಂಡೇ ಬದಲಾವಣೆಗಳನ್ನು ಮಾಡಲಾಗಿದೆ ಎಂದೂ ಸಕಲಾನಿ ಹೇಳಿದ್ದಾರೆ. ಆದರೆ, ಆ ಪರಿಣತರು ಯಾರು ಎಂಬುದನ್ನು ಅವರು ಬಹಿರಂಗಪಡಿಸಿಲ್ಲ. ಪೂರ್ವಗ್ರಹಗಳು ಮತ್ತು ತಪ್ಪುಗ್ರಹಿಕೆಗಳನ್ನು ಸರಿಪಡಿಸುವುದಕ್ಕಾಗಿ ಹೊಸ ಸಂಶೋಧನೆಗಳ ಆಧಾರದಲ್ಲಿ ಪಠ್ಯವನ್ನು ಕಾಲಕಾಲಕ್ಕೆ ಪರಿಷ್ಕರಿಸುವುದು ಅಗತ್ಯ. ಹೊಸ ದೃಷ್ಟಿಕೋನಗಳು ಮತ್ತು ಚಿಂತನೆಗಳನ್ನು ಅಳವಡಿಸಿಕೊಳ್ಳುವುದು ಕೂಡ ಬೇಕಿದೆ. ಆದರೆ, ಎನ್‌ಸಿಇಆರ್‌ಟಿ ಈಗ ಮಾಡಿರುವ ಬದಲಾವಣೆಗಳು ಇತಿಹಾಸವನ್ನು ರಾಜಕಾರಣದ ಅಡಿಯಾಳನ್ನಾಗಿಸಿವೆ. ವಿದ್ಯಾರ್ಥಿಗಳ ತಲೆಯಲ್ಲಿ ಸಿದ್ಧಾಂತವನ್ನು ತುರುಕುವುದೇ ಈಗಿನ ಬದಲಾವಣೆಗಳ ಉದ್ದೇಶ ಎಂಬುದರಲ್ಲಿ ಅನುಮಾನವೇನೂ ಇಲ್ಲ.

ದಿನದ ಟ್ವೀಟ್

ಆರೋಗ್ಯಕರ ಸ್ಪರ್ಧೆ ಇರಲಿ



ಮುಕ್ತ ಮಾರುಕಟ್ಟೆ ವ್ಯವಸ್ಥೆಯಲ್ಲಿ, ಹಲವಾರು ಖಾಸಗಿ ಕಂಪನಿಗಳ ಅಸ್ತಿತ್ವ ಈಗಾಗಲೇ ಇರುವ ಕರ್ನಾಟಕದ ಮಾರುಕಟ್ಟೆಯಲ್ಲಿ ವಹಿವಾಟು ನಡೆಸುವ ಹಕ್ಕು ಅಮುಲ್ ಸಹಕಾರ ಸಂಸ್ಥೆಗೆ ಇದೆ. ಈಗ ಆರೋಪಿಸಲಾಗುತ್ತಿರುವ ಕುಟಿಲ ತಂತ್ರವು ರಾಜಕಾರಣಿಗಳಲ್ಲಿ ಇಲ್ಲ ಎಂದಾದರೆ, ನಮ್ಮ ನೆಲದ ನಂದಿನಿ ಬ್ರ್ಯಾಂಡ್‌ಗೆ ಈ ಮಾರುಕಟ್ಟೆ ಸ್ಪರ್ಧೆಯು ಇನ್ನಷ್ಟು ಒಳಿತನ್ನು ಉಂಟುಮಾಡುತ್ತದೆ.

ಗೌತಮ್ ಮಾಚಯ್ಯ, ಪತ್ರಕರ್ತ

ಕಿಡಿನುಡಿ



ಹಿಡಿದು ಮಾರಿಬಿಡುತ್ತಾರೆ ಅನ್ನುವ ಭಯಕ್ಕೆ ಯಾವ ಗುಹೆಯೊಳಗೆ ಅಡಗಿ ಕೂತಿದೆಯೋ... ಅಯ್ಯೋ ಪಾಪ...! ಇನ್ನು ಕೆಲವೇ ದಿನಗಳಲ್ಲಿ #SaveBandipur (ಬಂಡೀಪುರ ಉಳಿಸಿ) ಎಂಬ ಅಭಿಯಾನವನ್ನು ಕನ್ನಡಿಗರು ಶುರು ಮಾಡುವಂತೆ ಆಗದಿರಲಿ. ಅದೇ ನೀವು ಕರುನಾಡಿಗೆ ಮಾಡುವ ದೊಡ್ಡ ಉಪಕಾರ ನರೇಂದ್ರ ಮೋದಿಜೀ...

(ಬಂಡೀಪುರ ಅರಣ್ಯದಲ್ಲಿ ಮೋದಿ ಸಂಚಾರ: 22 ಕಿ.ಮೀ. ಸಫಾರಿ ವೇಳೆ ಕಾಣದ ಹುಲಿರಾಯ ಸುದ್ದಿಗೆ ಪ್ರತಿಕ್ರಿಯೆ)

ಸಿದ್ದರಾಮಯ್ಯ, ಕಾಂಗ್ರೆಸ್ ಮುಖಂಡ

25 ವರ್ಷಗಳ ಹಿಂದೆ

ಶುಕ್ರವಾರ, 10-4-1998

- **ಮೆಕ್ಕಾ: ನೂಕುನುಗ್ಗಲಿಗೆ 150 ಜನರ ಬಲಿ**

ಮೆಕ್ಕಾ (ಸೌದಿ ಅರೇಬಿಯಾ), ಏ. 9 (ಎಪಿ)– ಹಜ್ ಯಾತ್ರೆ ನಿಮಿತ್ತ ಇಲ್ಲಿ ಸೇರಿದ್ದ ಭಾರಿ ಜನಸಂದಣಿಯ ನೂಕುನುಗ್ಗಲಿನಲ್ಲಿ ಕನಿಷ್ಠ 150 ಮುಸ್ಲಿಮರು ಸತ್ತಿದ್ದಾರೆ. ಇವರಲ್ಲಿ ಬಹುತೇಕ ಇಂಡೊನೇಷಿಯಾ ಮತ್ತು ಮಲೇಷಿಯಾ ದೇಶದವರಾಗಿದ್ದಾರೆ ಎಂದು ಪ್ರಾಥಮಿಕ ವರದಿಗಳು ತಿಳಿಸಿವೆ.

ಸ್ಥಳೀಯ ಕಾಲಮಾನದ ಪ್ರಕಾರ, ನೂಕುನುಗ್ಗಲು ಮಧ್ಯಾಹ್ನ 12.40ಕ್ಕೆ ಸಂಭವಿಸಿತು. ರಿಯಾದ್‌ನಿಂದ ಬಂದ ವರದಿಗಳ ಪ್ರಕಾರ, ಸತ್ತವರಲ್ಲಿ 40ರಿಂದ 50 ಜನರು ಭಾರತೀಯರು ಸೇರಿದ್ದಾರೆ.

'ದೆವ್ವಕ್ಕೆ ಕಲ್ಲು ಹೊಡೆಯುವ' ಸಂಪ್ರದಾಯ ಆಚರಣೆ ಮಾಡುತ್ತಿದ್ದ ಸಂದರ್ಭದಲ್ಲಿ ಈ ದುರ್ಘಟನೆ ನಡೆಯಿತು. ಕೆಲವು ವಯೋವೃದ್ಧರು ಹಾಗೂ ಅನಾರೋಗ್ಯದಿಂದ ನರಳುತ್ತಿದ್ದ ಯಾತ್ರಿಕರು ದುರಂತದಲ್ಲಿ ಸತ್ತಿದ್ದಾರೆ.

- **ಅಜರ್–ಜಡೇಜಾ ವಿಶ್ವದಾಖಲೆ**

ಕಟಕ್, ಏ. 9– ನಾಯಕ ಮಹ್ಮದ್ ಅಜರುದ್ದೀನ್ (153) ಮತ್ತು ಅಜಯ್ ಜಡೇಜ (116) ಮುರಿಯದ 4ನೇ ವಿಕೆಟ್ ಜೊತೆಯಾಟದಲ್ಲಿ 275 ರನ್ ಸೇರಿಸಿ ವಿಶ್ವದಾಖಲೆಯನ್ನು ಬರೆಯುವುದರೊಂದಿಗೆ ಭಾರತವು ಪೆಪ್ಸಿ ಕಪ್ ಮೂರು ರಾಷ್ಟ್ರಗಳ ಕ್ರಿಕೆಟ್ ಸರಣಿಯ ತನ್ನ ಕೊನೆಯ ಲೀಗ್ ಪಂದ್ಯದಲ್ಲಿ ಜಿಂಬಾಬ್ವೆಯನ್ನು 32 ರನ್‌ಗಳಿಂದ ಸೋಲಿಸಿತು.

50 ವರ್ಷಗಳ ಹಿಂದೆ

ಮಂಗಳವಾರ, 10-4-1973

- **ಇಬ್ಬರು ಮಂತ್ರಿಗಳ ನಿಯೋಗ; ವಿರೋಧಿ ಸದಸ್ಯರಿಗೂ ಆಹ್ವಾನ**

ಬೆಂಗಳೂರು, ಏ. 9– ಬರಗಾಲಪೀಡಿತ ಸಂಕಷ್ಟಗಳನ್ನು ವಿಚಾರಿಸಿ ಸ್ಥಳದಲ್ಲೇ ಪರಿಹಾರ ದೊರಕಿಸುವ ವ್ಯವಸ್ಥೆಗಾಗಿ ಮಂತ್ರಿ ನಿಯೋಗವನ್ನು ಕಳುಹಿಸುವ ನಿರ್ಧಾರವನ್ನು ಮುಖ್ಯಮಂತ್ರಿ ಶ್ರೀ ಡಿ.ದೇವರಾಜ ಅರಸು ಅವರು ಇಂದು ವಿಧಾನಸಭೆಯಲ್ಲಿ ಪ್ರಕಟಿಸಿದರು.

ಆಯೋಗದಲ್ಲಿ ಸೇರಲು ವಿರೋಧಪಕ್ಷದ ಸದಸ್ಯರಿಗೆ ಆಹ್ವಾನ ನೀಡಿದರು. ನಿಲುವಳಿ ಸೂಚನೆಯ ಮೂಲಕ ಪರಿಹಾರ ಕಾರ್ಯದಲ್ಲಿರುವ ಲೋಪದೋಷ ಹಾಗೂ ಬರಗಾಲ ಪೀಡಿತರ ಬವಣೆಯ ಬಗ್ಗೆ ಸರ್ಕಾರದ ಗಮನವನ್ನು ಸೆಳೆದು, ಮಂತ್ರಿಗಳು ಅಲ್ಲೇ ಹೋಗಿ ಲೋಪಗಳನ್ನು ತಿದ್ದಬೇಕೆಂದು ಆಗ್ರಹಪಡಿಸಲು ಧರಣಿ ಹೂಡಿದ್ದ ವಿರೋಧಪಕ್ಷದ ಸದಸ್ಯರಿಗೆ, 'ಲೋಕೋಪಯೋಗಿ ಸಚಿವ ಶ್ರೀ ಎಚ್.ಎಂ.ಚನ್ನಬಸಪ್ಪ ಮತ್ತು ಮತ್ತೊಬ್ಬ ಮಂತ್ರಿಗಳನ್ನು ಕೂಡಲೇ ಕಳುಹಿಸುತ್ತೇನೆ' ಎಂದು ಹೇಳಿದ ಮುಖ್ಯಮಂತ್ರಿಗಳು 'ಲೋಪದೋಷ ಇದ್ದರೆ ತಿದ್ದಿ ಜನಕ್ಕೆ ಸಮರ್ಪಕ ಸಹಾಯ ಅವರು ಮಾಡುತ್ತಾರೆ' ಎಂದು ಸಮಾಧಾನ ಹೇಳಿದರು.

- **ಒತ್ತಡಕ್ಕೆ ಮಣಿದು ಬಾಂಗ್ಲಾದೇಶಕ್ಕೆ ಪಾಕ್ ಮನ್ನಣೆ ಇಲ್ಲವೆಂದು ಭುಟ್ಟೊ**

ನವದೆಹಲಿ, ಏ. 9– ಪಾಕಿಸ್ತಾನವು ಯಾವುದೇ ಒತ್ತಾಯಕ್ಕೆ ಮಣಿದು ಬಾಂಗ್ಲಾದೇಶಕ್ಕೆ ಮನ್ನಣೆ ನೀಡುವುದಿಲ್ಲ ಎಂದು ಅಧ್ಯಕ್ಷ ಭುಟ್ಟೊ ಸ್ಪಷ್ಟಪಡಿಸಿದ್ದಾರೆ.

ಅಮೆರಿಕದ ತ್ರೈಮಾಸಿಕ ಪತ್ರಿಕೆ 'ಫಾರಿನ್ ಅಫೇರ್ಸ್'ನ ಈಚಿನ ಸಂಚಿಕೆಯಲ್ಲಿ ಅವರು ಬರೆದಿರುವ ಲೇಖನದಲ್ಲಿ 'ಉಪಖಂಡದಲ್ಲಿ ಪರಿಸ್ಥಿತಿ ಸುಧಾರಿಸಲು ಭಾರತ ಅಡ್ಡಿಯಾಗಿದೆ' ಎಂದು ಆರೋಪಿಸಿದ್ದಾರೆ ಎಂದು ಪಾಕಿಸ್ತಾನ ರೇಡಿಯೊ ವರದಿ ಮಾಡಿದೆ.

ಭಾರತವು ಪಾಕ್ ಯುದ್ಧಕೈದಿಗಳನ್ನು ಬಂಧನದಲ್ಲಿಟ್ಟಿರುವುದರಿಂದ ಉಪಖಂಡದಲ್ಲಿ ಪರಿಸ್ಥಿತಿ ಸುಧಾರಿಸಲು ಯಾವ ರೀತಿಯಲ್ಲೂ ಸಹಾಯಕವಲ್ಲ ಎಂದರು.

ಗೋಮಾಳ ನಾಶ, ಪಶುರೋಗ, ಅಧಿಕ ಉತ್ಪಾದನಾ ವೆಚ್ಚದಿಂದಾಗಿ ಹೈನೋದ್ಯಮ ಕುಸಿಯುತ್ತಿದೆ

ಗೋವಳರು ಬಾಳಿದರೆ ನಂದಿನಿ ಉಳಿದಾಳು!



ವಿಶ್ಲೇಷಣೆ

ಡಾ. ಕೇಶವ ಎಚ್. ಕೊರ್ಸೆ

ಹಾಲಿನಂಥ ಅತ್ಯಗತ್ಯ ಆಹಾರ ಸಾಮಗ್ರಿಯೊಂದು, ಚುನಾವಣೆಯ ಸಮಯದಲ್ಲಿ ಸಾರ್ವಜನಿಕ ಚರ್ಚೆಯ ಸಂಗತಿಯಾಗಿರುವುದು ಸ್ವಾಗತಾರ್ಹವೇ. ಬೇಸಿಗೆಯ ಈ ದಿನಗಳಲ್ಲಿ ಕೆಎಂಎಫ್ ಪ್ರತಿದಿನ ಉತ್ಪಾದಿಸುವ ಹಾಲು ಸುಮಾರು 96 ಲಕ್ಷ ಕೆ.ಜಿ.ಯಿಂದ 76 ಲಕ್ಷ ಕೆ.ಜಿ.ಗೆ ಇಳಿದಿರುವುದರಿಂದ, ರಾಜ್ಯದಾದ್ಯಂತ 'ನಂದಿನಿ' ಹಾಲಿನ ಪೂರೈಕೆಯಲ್ಲಿ ವ್ಯತ್ಯಯವಾಗಿರುವುದು ದಿಟ. ಈ ಸಮಯವನ್ನೇ ಬಳಸಿ ಕೆಲವು ಖಾಸಗಿ ಹಾಗೂ ಹೊರರಾಜ್ಯಗಳ ಹಾಲಿನ ಉತ್ಪನ್ನಗಳು ಮಾರುಕಟ್ಟೆಯನ್ನು ವ್ಯಾಪಿಸುತ್ತಿರುವುದು, ಹೈನುಗಾರರಿಗೆ ವೈಜ್ಞಾನಿಕ ಪ್ರೋತ್ಸಾಹಧನ ನೀಡುವಲ್ಲಿ ಸರ್ಕಾರದ ವಿಳಂಬ ಧೋರಣೆ, ಹಾಲು ಸಹಕಾರಿ ಸಂಘಗಳ ಆಡಳಿತದಲ್ಲಿ ಸರ್ಕಾರಿ ಹಸ್ತಕ್ಷೇಪ- ಇವೆಲ್ಲ ವಿಷಯಗಳು ಈಗ ರಾಜಕೀಯ ವಿವಾದದ ಸ್ವರೂಪ ಪಡೆಯುತ್ತಿವೆ.

ಉದಾರೀಕರಣ ನೀತಿಯು ಆರ್ಥಿಕತೆಯ ಎಲ್ಲ ಮಜಲುಗಳನ್ನೂ ತೀವ್ರವಾಗಿ ತಟ್ಟುತ್ತಿರುವ ಈ ಕಾಲಘಟ್ಟದಲ್ಲಿ, ಹಾಲಿನ ಮಾರುಕಟ್ಟೆಯ ಈ ವಿದ್ಯಮಾನಗಳು ಅನಿರೀಕ್ಷಿತವೇನೂ ಅಲ್ಲ. ನಾಡಿನ ಹಿತ ಕಾಯುವ ಸೂಕ್ತ ಹೈನೋದ್ಯಮ ನೀತಿಯೊಂದನ್ನು ರೂಪಿಸಲು ರಾಜ್ಯ ಸರ್ಕಾರ ಶಕ್ತವಾಗುವುದೇ ಎಂಬುದು ಮಾತ್ರ ಈಗ ಉಳಿದಿರುವ ಕುತೂಹಲ.

ಮಾರುಕಟ್ಟೆಯ ಸವಾಲುಗಳು ಹೈನೋದ್ಯಮದ ಒಂದು ಆಯಾಮ ಮಾತ್ರ. ರಾಜ್ಯದ ಒಟ್ಟೂ ಆರ್ಥಿಕತೆಯ (ಎಸ್‌ಜಿಡಿಪಿ) ಸುಮಾರು ಶೇ 16ರಿಂದ ಶೇ 17ರಷ್ಟು ಪಾಲು ಕೃಷಿಕ್ಷೇತ್ರದ್ದಾಗಿದ್ದು, ಇದರಲ್ಲಿ ಹೈನುಗಾರಿಕೆಯ ಪಾಲೂ ಮಹತ್ವದ್ದಿದೆ. ಬೆಳೆಗಳ ಉತ್ಪಾದನೆಯ ಏಳು-ಬೀಳುಗಳನ್ನು ಎದುರಿಸುವಲ್ಲಿ ಹಾಗೂ ಹಳ್ಳಿಗಳಲ್ಲಿ ಉದ್ಯೋಗಾವಕಾಶ ಸೃಷ್ಟಿಸುವಲ್ಲಿ ಹೈನುಗಾರಿಕೆಯ ಕೊಡುಗೆ ಗಮನಾರ್ಹವಾದುದು. ಆದರೆ, ಸುಮಾರು ಎರಡು– ಮೂರು ದಶಕಗಳಿಂದ ಸೂಕ್ತ ಹೈನೋದ್ಯಮ ನೀತಿಯೇ ಇಲ್ಲದಾಗಿ, ಈ ಕ್ಷೇತ್ರದ ಶ್ರೇಯೋಭಿವೃದ್ಧಿ ಸಾಧಿಸಬಲ್ಲ ವಾತಾವರಣವನ್ನು ಪೋಷಿಸಲು ಸರ್ಕಾರಕ್ಕೆ ಸಾಧ್ಯವಾಗುತ್ತಿಲ್ಲ! ಇದರಿಂದಾಗಿ, ಹೈನುಗಾರಿಕೆ ತೀವ್ರ ಸಂಕಷ್ಟ ಎದುರಿಸುತ್ತಿದೆ. ಮಾರುಕಟ್ಟೆ ಸಮಸ್ಯೆಯ ಹೊರತಾಗಿಯೂ ಈ ಪರಿಸ್ಥಿತಿಗೆ ಕಾರಣವಾದ ಮೂರು ಪ್ರಮುಖ ಸವಾಲುಗಳನ್ನು ಇಲ್ಲಿ ಚರ್ಚಿಸೋಣ.

ಮೊದಲಿನದು, ಮೇವಿನ ಮೂಲಾಧಾರವಾದ ಗೋಮಾಳ ನಾಶವಾಗುತ್ತಿರುವುದು. ಕರಾವಳಿ, ಮಲೆನಾಡು ಹಾಗೂ ಒಳನಾಡು- ಎಲ್ಲೆಡೆಯೂ ಹಿಂದಿನ ಮೂರು ದಶಕಗಳಿಂದ ಸಾಮೂಹಿಕ ಗೋಮಾಳಭೂಮಿ ನಾಶವಾಗುತ್ತಲೇ ಇದೆ. ಹಾಡಿ, ಬೆಟ್ಟ, ಕುಮ್ಕಿ, ಕಾವಲ್, ಗುಂಡುತೋಪುಗಳೆಂದೆಲ್ಲ ಗುರುತಿಸಲಾಗುವ ಮೇವಿನತಾಣಗಳೆಲ್ಲ ಅವೈಜ್ಞಾನಿಕ ಕಾಮಗಾರಿ, ಕೃಷಿ ವಿಸ್ತರಣೆ, ಅಕ್ರಮ ಭೂಪರಿವರ್ತನೆ, ಭೂಕಬಳಿಕೆಯಂತಹವುಗಳಿಗೆ ಬಲಿಯಾಗುತ್ತಿವೆ. ಕುಡಿಯುವ ನೀರು ಹಾಗೂ ಹಸಿರುಮೇವು ಒದಗಿಸುತ್ತಿದ್ದ ಕೆರೆಯಂಚು, ನದಿತೀರ, ಜೌಗುಗದ್ದೆಗಳು ಕಣ್ಮರೆಯಾಗುತ್ತಿವೆ. ಇತ್ತೀಚಿನ ಅಧ್ಯಯನದ ಪ್ರಕಾರ, ಹಿಂದಿನ ದಶಕವೊಂದರಲ್ಲೇ ಶೇ 30ಕ್ಕೂ ಹೆಚ್ಚು ಇಂಥ ಸಮೃದ್ಧ ಮೇವಿನಭೂಮಿ ನಾಶವಾಗಿದೆ. ಅನಾದಿಯಿಂದ ಹಳ್ಳಿ ಗಾಡಿನಲ್ಲಿ ಮೇಯುತ್ತಲೇ ಹಳ್ಳಿಗರ ಬದುಕನ್ನು ಹಸನಾಗಿಸಿದ್ದ ಹೈನುಗಳಿಗೆ ಈಗ ಓಡಾಡಲೂ ಸ್ಥಳವಿಲ್ಲ!

ಇದರ ಪರಿಣಾಮವೇನು? ಅಮೃತಮಹಲ್, ಹಳ್ಳಿಕಾರ್, ಮಲೆನಾಡುಗಿಡ್ಡ, ಕಿಲಾರಿ, ದೇವಣಿ, ಕಾಸರಗೋಡು ತರಹದ ನಾಡಿನ ಉತ್ಕೃಷ್ಟ ದೇಸಿ ತಳಿಗಳನ್ನು ಉಳಿಸಿಕೊಳ್ಳಲು ರೈತರು ಸೋಲುತ್ತಿದ್ದಾರೆ. ಸುರಟಿ, ಮುರ್ರಾ, ಪಂಢರಾಪುರಿ, ಧಾರವಾಡಿಯಂಥ ಸಶಕ್ತ ಎಮ್ಮೆ ತಳಿಗಳು ಕಣ್ಮರೆಯಾಗುತ್ತಿವೆ. ಈ ಅನನ್ಯ ದೇಸಿ ಹೈನು ತಳಿವೈವಿಧ್ಯವೆಲ್ಲ ಕರಗಿ ಬರೀ ಜರ್ಸಿ, ಎಚ್.ಎಫ್.ನಂಥ ಬೆರಳೆಣಿಕೆಯ ವಿದೇಶಿ ಮಿಶ್ರತಳಿಗಳು ಕೊಟ್ಟಿಗೆಯಲ್ಲಿ ಉಳಿಯುತ್ತಿವೆ. ಮೂಲತಃ ತಂಪು ಪ್ರದೇಶದ ಈ ತಳಿಗಳನ್ನು ಇಲ್ಲಿನ ಉಷ್ಣ ವಾತಾವರಣಕ್ಕೆ ಒಗ್ಗಿಸಿ ಉಳಿಸಿಕೊಳ್ಳಲು ರೈತರು ಹಗಲಿರುಳು ಶ್ರಮಿಸಬೇಕಾಗಿದೆ. ಉದ್ಯಮವೊಂದು ಅರಳಿ ಉಳಿಯಬೇಕೆಂದರೆ, ಮಾನವ ಸಂಪನ್ಮೂಲ, ಆರ್ಥಿಕ ಸಂಪನ್ಮೂಲ ಹಾಗೂ ಮಾರುಕಟ್ಟೆ ಸೌಲಭ್ಯದ ಜೊತೆ, ಅದನ್ನು ಪೋಷಿಸುವ ನೈಸರ್ಗಿಕ ಪರಿಸರವೂ ಅತ್ಯಗತ್ಯವೆನ್ನುವ ಅರ್ಥಶಾಸ್ತ್ರದ ಪ್ರಾಥಮಿಕ ಜ್ಞಾನವನ್ನೇ ಮರೆತ ಸರ್ಕಾರಿ ನೀತಿಯ ಪರಿಣಾಮವಿದು!

ಎರಡನೇ ಸವಾಲೆಂದರೆ, ಹೆಚ್ಚುತ್ತಿರುವ ಪಶುರೋಗಗಳು. ಮಿಶ್ರತಳಿಗಳು ಹೆಚ್ಚಾದಂತೆಲ್ಲ, ಅವುಗಳ ರೋಗಗಳೂ ಹೆಚ್ಚಾಗುತ್ತಿವೆ. ಜಂತುಹುಳುವಿಗೆ ಆರು ತಿಂಗಳಿಗೊಮ್ಮೆ ಔಷಧಿ ಹಾಕಬೇಕು. ಕಾಲುಬಾಯಿ ಬೇನೆ ಮಣಿಸಲು ವರ್ಷಕ್ಕೆ ಎರಡು ಬಾರಿ ಲಸಿಕೆ ಬೇಕು. ಗಂಟಲುಬೇನೆ, ಚಪ್ಪೆಬೇನೆ ಎದುರಿಸಲೂ ವರ್ಷಕ್ಕೊಮ್ಮೆ ಲಸಿಕೆ ಬೇಕೇಬೇಕು. ಹೀಗಾಗಿ, ಪಶುರೋಗ ನಿರ್ವಹಣೆಯೆಂದರೆ ರೈತರಿಗೆ ಸದಾ ಆತಂಕದ ಮತ್ತು ವೆಚ್ಚ ತರುವ ಸಂಗತಿಯೇ. ಹಿಂದಿನ ವರ್ಷ ತೀವ್ರವಾಗಿ ಹರಡಿದ ಲಂಪಿ ಚರ್ಮರೋಗ, ರಾಜ್ಯದಲ್ಲಿ ಸುಮಾರು ಐವತ್ತು ಸಾವಿರ ಆಕಳುಗಳನ್ನು ಬಲಿ ಪಡೆಯಿತಲ್ಲ!

ಹಸಿಮೇವು, ಕುಡಿಯಲು ಸ್ವಚ್ಛ ನೀರು, ಅಡ್ಡಾಡಲು ಒಂದಷ್ಟು ಸಹಜ ಜಾಗ- ಇವು ಇರದಿದ್ದುದರ ಪರಿಣಾಮವಿದು. ಈ ಬಗೆಯ ರೋಗವೈವಿಧ್ಯಕ್ಕೆ ಹವಾಮಾನ ಬದಲಾವಣೆಯೂ ಇಂಬು ಕೊಡುತ್ತಿದೆ. ದಶಕಗಳ ಮೊದಲು, ವಿಶೇಷ ಔಷಧೋಪಚಾರವೇ ಇಲ್ಲದೆ ಆರೋಗ್ಯಕರವಾಗಿರುತ್ತಿದ್ದ ರಾಸುಗಳಿಗೆ ಈಗ ಪ್ರತಿದಿನವೂ ಬಗೆಬಗೆಯ ಔಷಧಿಯನ್ನು ನುಂಗಿಸಿಯೇ ಸಾಕಬೇಕಾಗಿದೆ!



ಅಂತಿಮವಾಗಿ, ಮಾರುಕಟ್ಟೆಯಲ್ಲಿನ ಹಾಲಿನ ಗುಣಮಟ್ಟದ ಕುರಿತು. ನಂದಿನಿ, ಅಮುಲ್ ತರಹದ ಬ್ರ್ಯಾಂಡುಗಳೇನೋ ಗುಣಮಟ್ಟವನ್ನು ಕಾಯ್ದುಕೊಂಡಿರಬಹುದು. ಆದರೆ, ಇನ್ನುಳಿದ ಹಾಲಿನ ಮೂಲ ಹಾಗೂ ಸ್ವರೂಪವನ್ನು ಮಾತ್ರ ಗುರುತಿಸುವುದೇ ಸಾಧ್ಯವಾಗುತ್ತಿಲ್ಲ. ನೀರು ಹಾಗೂ ಯೂರಿಯಾ ಕಲಬೆರಕೆ ಪ್ರಕರಣಗಳಂತೂ ಹೆಚ್ಚುತ್ತಲೇ ಇವೆ. ರೋಗವಿರುವ ಹಾಗೂ ಚಿಕಿತ್ಸೆಯಲ್ಲಿರುವ ರಾಸುಗಳ ಹಾಲು ಹಿಂಡಬಾರದೆನ್ನುವ ನಿಯಮವಿದ್ದರೂ ಅಂಥ ಹಾಲು ಗ್ರಾಹಕರ ಕೈಸೇರುತ್ತಿದೆ. ಸ್ಟ್ರೆಪ್ಟೋಮೈಸಿನ್, ಟೆಟ್ರಾಸೈಕ್ಲಿನ್‌ನಂಥ ಪ್ರತಿವಿಷಗಳು, ಬಿಎಸ್‌ಟಿ ಹಾಗೂ ಆಕ್ಸಿಟೋಸಿನ್ ತರಹದ ಹಾರ್ಮೋನುಗಳು, ಸ್ಟಿರಾಯ್ಡ್, ಕ್ರಿಮಿನಾಶಕ, ಕಳೆನಾಶಕ- ಇವೆಲ್ಲ ಅಪಾಯಕಾರಿ ರಾಸಾಯನಿಕ ಶೇಷವಿರುವ ಸಂದರ್ಭಗಳು ಹೆಚ್ಚುತ್ತಿವೆ.

ಹಿಂಡುವಲ್ಲಿಂದ ಬಳಕೆದಾರರಿಗೆ ತಲುಪುವವರೆಗೆ ಹಾಲಿನ ಗುಣಮಟ್ಟವನ್ನು ಕಾಯ್ದುಕೊಳ್ಳಲು ಸೂಕ್ತ ನಿಯಮಾವಳಿಗಳ ಅನುಷ್ಠಾನ ಇರದಿರುವುದರ ಪರಿಣಾಮವಿದು. ಹೈನೋದ್ಯಮದಲ್ಲಿ 'ಹಾಲಾಹಲ' ಎನ್ನದೆ ವಿಧಿಯುಂಟೇ?

ಹೀಗಾಗಿ, ಈ ಸವಾಲುಗಳನ್ನೆಲ್ಲ ಮೀರಿ ಗುಣಮಟ್ಟದ ಹಾಲು ನೀಡಲು ಪ್ರಾಮಾಣಿಕವಾಗಿ ಶ್ರಮಿಸುತ್ತಿರುವ ನಾಡಿನ ಹೈನುಗಾರರು ಅಪಾರ ಸಂಕಷ್ಟ ಎದುರಿಸುತ್ತಿದ್ದಾರೆ. ಹಸುವೊಂದು ವರ್ಷಕ್ಕೆ ಒಂದಾದರೂ ಕರು ಹಾಕುವಂತೆ ನೋಡಿಕೊಳ್ಳಬೇಕು. ನಿರಂತರ ಔಷಧೋಪಚಾರ ಮಾಡಬೇಕು. ಪ್ರತಿದಿನವೂ ಶುದ್ಧನೀರು, ಗುಣಮಟ್ಟದ ಹಸಿಮೇವು, ರಸಮೇವು, ಲವಣಾಂಶ ಒದಗಿಸಬೇಕು.

ಇಷ್ಟೆಲ್ಲ ಮಾಡಿ ಹಾಲು ಉತ್ಪಾದಿಸಲು ಲೀಟರಿಗೆ ಕನಿಷ್ಠ ₹ 30 ಖರ್ಚಾಗುತ್ತದೆ ಎಂದು ರಾಷ್ಟ್ರೀಯ ಹೈನು ಅಭಿವೃದ್ಧಿ ಮಂಡಳಿ (ಎನ್‌ಡಿಡಿಬಿ) ಅಧಿಕೃತವಾಗಿಯೇ ಹೇಳಿದೆ. ಆದರೆ, ಹಳ್ಳಿಯಲ್ಲಿ ಹಸು ಕಟ್ಟಿ ಹಾಲು ಮಾರುವವರಿಗೆ ಇಂದಿಗೂ ₹ 28-30ಕ್ಕಿಂತ ಹೆಚ್ಚು ದೊರಕುತ್ತಿಲ್ಲ. ಅಕ್ಷರಶಃ ಲಾಭವಿಲ್ಲ! ಶ್ರಮವಿಟ್ಟು ದುಡಿದರೂ ಒಂದಿನಿತೂ ಲಾಭವಿರದೆ ಬೇಸತ್ತ ರೈತರು ಹೈನುಗಾರಿಕೆಯಿಂದ ಹಿಮ್ಮುಖರಾಗುತ್ತಿರುವುದಕ್ಕೆ ಯಾರನ್ನು ದೂಷಿಸಬೇಕು?

ದೇಶದ ಹಾಲಿನ ಉತ್ಪಾದನೆಯಲ್ಲಿ ಗುಜರಾತ್ ನಂತರ ಎರಡನೆಯ ಸ್ಥಾನದಲ್ಲಿರುವ ಕರ್ನಾಟಕದ ಹೈನೋದ್ಯಮವು ಅಪಾಯಕ್ಕೆ ಸಿಲುಕಿರುವ ಪರಿಯಿದು. ಇಲ್ಲಿರುವ ಇನ್ನೊಂದು ವಿಪರ್ಯಾಸವನ್ನೂ ಗಮನಿಸಿ. ಹರಿಯಾಣದಲ್ಲಿರುವ ರಾಷ್ಟ್ರೀಯ ಹೈನುಗಾರಿಕಾ ಸಂಶೋಧನಾ ಸಂಸ್ಥೆಯ (ಎನ್‌ಡಿಆರ್‌ಐ) ವಿಜ್ಞಾನಿಗಳು, ಹೆಚ್ಚು ಹಾಲು ನೀಡುವ ದೇಸಿ ತಳಿಯಾದ ಗೀರ್ ಆಕಳನ್ನು ಮೊದಲ ಬಾರಿಗೆ ತದ್ರೂಪಿ ತಂತ್ರಜ್ಞಾನದಲ್ಲಿ (ಕ್ಲೋನಿಂಗ್) ಯಶಸ್ವಿಯಾಗಿ ವಂಶಾಭಿವೃದ್ಧಿ ಮಾಡಿರುವ ಯಶಸ್ಸನ್ನು ಇದೀಗ ಸಂಭ್ರಮಿಸುತ್ತಿದ್ದಾರೆ. ಆದರೆ, ನಾಡಿನಾದ್ಯಂತ ರೈತರು ಗೀರ್ ಸೇರಿದಂತೆ ಆಕಳು ಸಾಕುವ ಜೀವನೋಪಾಯವನ್ನೇ ಕೈಬಿಡುತ್ತಿದ್ದಾರೆ!

ಹೈನುಗಾರರ ಸಮಸ್ಯೆಗಳಿಗೆ ಸ್ಪಂದಿಸುವುದು ಹಾಗೂ ಗ್ರಾಹಕರಿಗೆ ಗುಣಮಟ್ಟದ ಹಾಲನ್ನು ನ್ಯಾಯಯುತ ಬೆಲೆಯಲ್ಲಿ ಒದಗಿಸುವುದು ಸರ್ಕಾರದ ಜವಾಬ್ದಾರಿ. ಈ ದಿಸೆಯಲ್ಲಿ ಸೂಕ್ತ ನೀತಿಯನ್ನು ಶೀಘ್ರದಲ್ಲಿ ಜಾರಿಗೆ ತರಲೇಬೇಕಿದೆ. ಹೈನೋದ್ಯಮವೆಂಬ 'ನಂದಿನಿ' ಬಾಳಿ ಬೆಳಗಬೇಕಾದರೆ, ಗೋವಳರ ನೋವುಗಳನ್ನು ಸರ್ಕಾರ ಕೇಳಿಸಿಕೊಳ್ಳಲೇಬೇಕಿದೆ.

ಚುರುಮುರಿ



ಬೆಕ್ಕಣ್ಣನ ಬ್ರ್ಯಾಂಡ್ ವಾದ

• ಸುಮಂಗಲಾ

'ನಂದಿನಿ ಹಾಲು ಕುಡಿದು ಕುಡಿದು ಬ್ಯಾಸರಕಿ ಬಂದೈತಿ. ಅಮುಲ್ ಹಾಲು ತರಿಸು ಇವತ್ತು' ಎಂದು ಬೆಕ್ಕಣ್ಣ ಅಪ್ಪಣೆ ಹೊರಡಿಸಿತು.

'ಮಂಗ್ಯಾನಂಥವ್ನೆ... ನಾವು ಅಮುಲ್ ಬೇಬಿಗಳಲ್ಲಲೇ, ಕನ್ನಡದ ಕಲಿಗಳು. ಯಾರಾರ ಬ್ಯಾರೆ ರಾಜ್ಯದವ್ರು ಬಂದು ನಮ್ಮ ನಂದಿನಿ ವ್ಯಾಪಾರ ಕಡಿಮೆಯಾಗಾಕೆ ನಾವು ಬಿಡಂಗಿಲ್ಲ' ಎಂದೆ ಅಭಿಮಾನದಿಂದ.

'ನಿಮ್ಮಂಥೋರಿನ್ನ ನೋಡಿಯೇ ನಮ್ ಸಿಟಿ ರವಿಯಣ್ಣ ಸರಿಯಾಗಿ ಹೇಳ್ಯಾನ, ನಿಮಗೆ ಆ ಇಟಲಿಯವರು ಆಳಿದರೆ ಅಡ್ಡಿಲ್ಲ, ನಮ್ಮದೇ ಭಾರತೀಯ ಬ್ರ್ಯಾಂಡ್ ಅಮುಲ್ ಇಲ್ಲಿ ಬಂದು ವ್ಯಾಪಾರ ಮಾಡಿದ್ರೆ ಭಾರೀ ಪ್ರಾಬ್ಲಮ್ ಆಗತೈತಿ ಅಂದಾನ' ಎಂದು ನನ್ನ ಮೂತಿಗೆ ತಿವಿಯಿತು.

'ಅಲ್ಲಲೇ... ನಮ್ ಭಾರತೀಯ ಸಂಸ್ಕೃತಿವಳಗ ಹೆಣ್ಮಕ್ಕಳು ಮದುವಿಯಾದ ಮ್ಯಾಗೆ ಗಂಡನ ಮನಿಗೇ ಪೂರಾ ಸೇರತಾರ, ಗಂಡನ ಮನೆ ಅಡ್ಡಹೆಸರೇ ಅವರಿಗೆ ಬರತೈತಿ ಅಂತ ಹೇಳತೀರಿ. ಇನ್ನಾತನಕ ಸೋನಿಯಮ್ಮಂಗ ಇಟಲಿಯಾಕೆ ಅಂತ ಹಂಗಿಸೂದು ಬಿಡಂಗಿಲ್ಲ. ಆ ರಿಷಿ ಸುನಕ್ ಬ್ರಿಟನ್ನಿನ ಪ್ರಧಾನಿಯಾದಾಗ ಭಾರತ ಮೂಲದವನು, ನಮ್ ಕರ್ನಾಟಕದ ಅಳಿಯ ಅಂತ ಹೆಮ್ಮೆಯಿಂದ ಬೀಗತಿದ್ದಿರಿ. ಭಾರತದ ಮೂಲದವನು ಅಂತ ಅವ್ರು ಅವನಿಗೆ ಹಂಗಿಸತರಾನು?' ಎಂದು ನಾನೂ ಇಷ್ಟುದ್ದ ಭಾಷಣ ಕುಟ್ಟಿದೆ.

'ನೋಡಾ... ಸಾಫ್ ಸೀದಾ ಹೇಳತೀವಿ, ಎರಡು ವಿಷ್ಯ ತಿಳಕೋ. ಭಾರತೀಯ ಮೂಲದವರು ಬ್ಯಾರೆ ದೇಶದೊಳಗ ಪ್ರಧಾನಿಯಿಂದ ಹಿಡಿದು ಎಲ್ಲಾ ಥರದ ಮೇಲಿನ ಸ್ಥಾನಕ್ಕೆ ಹೋಗಾಕೆ ಜನ್ಮಸಿದ್ಧಹಕ್ಕು ಪಡೆದಿರತಾರೆ. ಆದ್ರ ನಮ್ಮ ದೇಶದೊಳಗೆ ಮಾತ್ರ ವಿದೇಶಿ ಮೂಲದವರು ಒಂದೆರಡು ತಲೆಮಾರು ಇಲ್ಲೇ ಹುಟ್ಟಿಬೆಳೆದ್ರೂ ಅವರು ವಿದೇಶಿ ಮೂಲದವರೇ. ಎರಡನೇದ್ದು - ಗುಜರಾತಿ ಮೂಲದ ಸಹಕಾರಿ ಮಂಡಳಿ ಇರಬೌದು, ಕಂಪನಿ ಇರಬೌದು, ಅವ್ರಿಗೆ ಯಾವುದೇ ರಾಜ್ಯದಾಗೆ ಬೇಕಾದಂಗೆ ವ್ಯಾಪಾರ ಮಾಡಾಕೆ ಜನ್ಮಸಿದ್ಧಹಕ್ಕು ಐತೆ. ಹಂಗಂತ ಗುಜರಾತೊಳಗ ನಂದಿನಿ ವ್ಯಾಪಾರ ಶುರು ಮಾಡೂ ಹಂಗಿಲ್ಲ ಅಷ್ಟೆ, ತಿಳಕೋ' ಎಂದು ಬೆಕ್ಕಣ್ಣ ಗುರುಗುಟ್ಟಿತು!

ಸಂಗತ

ಬಿಸಿಲಲ್ಲಿ ಬಾಡದಿದ್ದರೆ...

ಸೂರ್ಯನ ಪ್ರಖರ ಬೆಳಕು ಯಥೇಚ್ಛವಾಗಿ ಸಿಗುವ ನಾಡಿನಲ್ಲಿ ವಾಸಿಸುವವರೂ ಡಿ ಜೀವಸತ್ವದ ಕೊರತೆಯಿಂದ ಬಳಲುತ್ತಿರುವುದಕ್ಕೆ ಅಜ್ಞಾನವೇ ಕಾರಣ

• ಡಾ. ಎಚ್.ಬಿ.ಚಂದ್ರಶೇಖರ್


ವಾಡಿಕೆಯಂತೆ ವರ್ಷಕ್ಕೊಮ್ಮೆ ವೈದ್ಯಕೀಯ ತಪಾಸಣೆಗೆ ಅಗತ್ಯವಾದ ರಕ್ತಪರೀಕ್ಷೆ ಮಾಡಿಸುವಾಗ ಈ ಬಾರಿ ಡಿ ಜೀವಸತ್ವದ ಪರೀಕ್ಷೆಯನ್ನು ಹೊಸದಾಗಿ ಮಾಡಿಸಿದೆ. ಫಲಿತಾಂಶದಲ್ಲಿ ಡಿ ಜೀವಸತ್ವದ ಕೊರತೆ ಇರುವುದು ಕಂಡು ಅಚ್ಚರಿಯಾಯಿತು. ಬಿಸಿಲಿನ ಜೀವಸತ್ವ ಎಂದೇ ಹೆಸರಾಗಿರುವ ಡಿ ಜೀವಸತ್ವ ಸೂರ್ಯನ ಬಿಸಿಲಿನಲ್ಲಿ ಉಚಿತವಾಗಿ ದೊರಕುತ್ತದೆ. ಬಿಸಿಲಿನಲ್ಲಿ ಸಾಮಾನ್ಯವಾಗಿ ಅಡ್ಡಾಡುವ ಹಾಗೂ ಸೂರ್ಯನ ಪ್ರಖರ ಬೆಳಕು ಯಥೇಚ್ಛವಾಗಿ ಸಿಗುವ ನಾಡಿನಲ್ಲಿ ವಾಸಿಸುವವರಿಗೂ ಡಿ ಜೀವಸತ್ವದ ಕೊರತೆ ಇರುತ್ತದೆ ಎಂಬುದನ್ನು ನಾವು ಊಹಿಸುವುದಿಲ್ಲ.

ಮೀನು, ಹಾಲಿನ ಉತ್ಪನ್ನಗಳು, ಮೊಟ್ಟೆ, ಅಣಬೆ, ಕಿತ್ತಳೆ, ಸೋಯಾದಂತಹ ಆಹಾರ ಪದಾರ್ಥಗಳಿಂದ ಡಿ ಜೀವಸತ್ವವನ್ನು ಪಡೆಯಬಹುದು. ದೇಹವನ್ನು ಬಿಸಿಲಿಗೆ ಒಡ್ಡಿದಾಗಲೂ ಡಿ ಜೀವಸತ್ವವನ್ನು ನಮ್ಮ ದೇಹವು ಸಹಜವಾಗಿ ತಯಾರಿಸಿಕೊಳ್ಳುತ್ತದೆ. ಸೂರ್ಯನ ಬಿಸಿಲಿನಲ್ಲಿರುವ ನೇರಳಾತೀತ ಬಿ ಕಿರಣಗಳು ಚರ್ಮಕ್ಕೆ ತಾಗಿದಾಗ, ಚರ್ಮದಲ್ಲಿರುವ ಕೊಲೆಸ್ಟ್ರಾಲ್‌ನಿಂದ ಡಿ ಜೀವಸತ್ವವು ಉತ್ಪತ್ತಿಯಾಗುತ್ತದೆ. ನಮಗೆ ಅಗತ್ಯವಾದ ಕ್ಯಾಲ್ಸಿಯಂ ಅನ್ನು ನಮ್ಮ ದೇಹ ಹೀರಿಕೊಳ್ಳಲು ಡಿ ಜೀವಸತ್ವದ ಅಗತ್ಯ ಇದೆ. ಮೂಳೆಗಳ ಆರೋಗ್ಯ, ದೇಹದಲ್ಲಿ ರೋಗಪ್ರತಿರೋಧಕ ಶಕ್ತಿಗೆ ಡಿ ಜೀವಸತ್ವ ತುಂಬಾ ಅಗತ್ಯ ಎನ್ನುತ್ತಾರೆ ವೈದ್ಯರು. ಪದೇಪದೇ ಆಯಾಸ, ಖಿನ್ನತೆ, ಕೂದಲು ಉದುರುವಿಕೆಯಂತಹ ಸಮಸ್ಯೆಗಳಿಗೂ ಡಿ ಜೀವಸತ್ವದ ಕೊರತೆಯೇ ಕಾರಣ ಎನ್ನಲಾಗುತ್ತದೆ.

ಒಂದು ಅಂದಾಜಿನ ಪ್ರಕಾರ, ಜಗತ್ತಿನಲ್ಲಿ 100 ಕೋಟಿ ಹಾಗೂ ಭಾರತದಲ್ಲಿ 49 ಕೋಟಿಗೂ ಅಧಿಕ ಜನರು ಡಿ ಜೀವಸತ್ವದ ತೀವ್ರತರ ಕೊರತೆಯಿಂದ ಬಳಲುತ್ತಿದ್ದಾರೆ. ಪ್ರಪಂಚದ ಒಟ್ಟು ಜನಸಂಖ್ಯೆಯ ಶೇ 50ರಷ್ಟು ಜನರಿಗೆ ಡಿ ಜೀವಸತ್ವದ ಕೊರತೆ ಇದೆ ಎನ್ನಲಾಗಿದೆ. ಯುರೋಪಿನ ಶೇ 40ರಷ್ಟು ಜನರು ಡಿ ಜೀವಸತ್ವದ ಕೊರತೆ ಹೊಂದಿದ್ದು, ಶೇ 13ರಷ್ಟು ಜನರಿಗೆ ತೀವ್ರ ಕೊರತೆ ಇದೆ ಎನ್ನಲಾಗಿದೆ. ಸಾಮಾನ್ಯವಾಗಿ ದೇಹಕ್ಕೆ ಅವಶ್ಯವಾದ ಡಿ ಜೀವಸತ್ವವನ್ನು ಸೂರ್ಯನ ಬಿಸಿಲಿನ ಮೂಲಕವೇ ಪಡೆಯಲು ಸಾಧ್ಯವಿದೆ. ಆದರೆ ಇದರ ತೀವ್ರ ಕೊರತೆಯಿದ್ದಲ್ಲಿ ಆಹಾರ ಹಾಗೂ ಸೂರ್ಯನ ಬೆಳಕಿನ ಮೂಲಕ ದೇಹಕ್ಕೆ ಅಗತ್ಯವಿರುವಷ್ಟು ದೊರೆಯುವುದಿಲ್ಲ. ಇಂತಹವರಿಗೆ ವೈದ್ಯರು ಮಾತ್ರೆ ಅಥವಾ ಇಂಜೆಕ್ಷನ್ ರೂಪದಲ್ಲಿ ಡಿ ಜೀವಸತ್ವವನ್ನು ನೀಡುತ್ತಾರೆ.

ಜೀವಜಗತ್ತಿಗೆಲ್ಲಾ ಪ್ರಾಣಸೆಲೆಯಾದ ಸೂರ್ಯ ಮನುಜರಿಗೂ ಅನಿವಾರ್ಯ. ಡಿ ಜೀವಸತ್ವದ ಕುರಿತು ಯಾವುದೇ ಮಾಹಿತಿ ಇಲ್ಲದ ಕಾಲದಲ್ಲಿ ನಮ್ಮ ಹಿರಿಯರು ಸೂರ್ಯನ ಬಿಸಿಲಿಗೆ ಮೈಯೊಡ್ಡಿ ಸಹಜವಾಗಿ ತಮಗೆ ಅಗತ್ಯವಾದ ಚೈತನ್ಯ, ಶಕ್ತಿಯನ್ನು ಪಡೆಯುತ್ತಿದ್ದರು. ಕಾಲಾನಂತರ ಜನರು ಮನೆ ಬಿಟ್ಟು ಹೊರಬಂದರೆ ವಾಹನಗಳನ್ನು ಆಶ್ರಯಿಸುತ್ತಾರೆ. ಡಿ ಜೀವಸತ್ವ ದೊರೆಯುವ ವೇಳೆಯಲ್ಲಿ ಬಹುಪಾಲು ಜನರು ತಮ್ಮ ಕಚೇರಿ, ಶಾಲೆ, ಕಾಲೇಜುಗಳಲ್ಲಿ ಇರುತ್ತಾರೆ. ಜೊತೆಗೆ ತುಂಬುತೋಳಿನ ಶರ್ಟ್, ಪ್ಯಾಂಟ್ ಹಾಗೂ ಇತರ ದಿರಿಸುಗಳು ಸೂರ್ಯನ ಕಿರಣಗಳು ಮೈಸೋಕದಂತೆ ಮಾಡುತ್ತವೆ. ಇದರಿಂದ ಡಿ ಜೀವಸತ್ವದ ಕೊರತೆ ಸಾಮಾನ್ಯ ಎಂಬಂತಾಗಿದೆ.

ಸೂರ್ಯನ ದರ್ಶನ ಅಪರೂಪ ಎಂಬಂತಿರುವ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿನ ಕೆಲವರು ಸೂರ್ಯನ ಬಿಸಿಲಿಗಾಗಿ ಭಾರತದಂತಹ ದೇಶಗಳಿಗೆ ಬಂದು, ಇಲ್ಲಿನ ಸಮುದ್ರ ತೀರಗಳಲ್ಲಿ ಕಡಿಮೆ ಬಟ್ಟೆಯನ್ನು ಧರಿಸಿ ಸೂರ್ಯಸ್ನಾನ ಮಾಡುತ್ತಾರೆ. ಆದರೆ ಸೂರ್ಯನ ಬಿಸಿಲು ಸಾಕೆನ್ನುವಷ್ಟು ದೊರೆಯುವ ನಮ್ಮ ದೇಶದಲ್ಲಿ ಜಾಗೃತಿಯ ಕೊರತೆಯಿಂದ ಶೇ 90ಕ್ಕೂ ಅಧಿಕ ಮಕ್ಕಳಿಗೆ ಡಿ ಜೀವಸತ್ವದ ಕೊರತೆ ಇದೆ ಎಂಬ ವರದಿಗಳು ಗಾಬರಿ ಹುಟ್ಟಿಸುತ್ತವೆ.



ಸಾಮಾನ್ಯವಾಗಿ ಮಕ್ಕಳು ಮುಂಜಾನೆಯ ಸಾಮೂಹಿಕ ಪ್ರಾರ್ಥನೆಯನ್ನು ಪೂರೈಸಿ, ತರಗತಿಯೊಳಗೆ ಸೇರುತ್ತಾರೆ. ಎಲ್ಲೋ ಕೆಲವು ಶಾಲೆಗಳ ಮಕ್ಕಳು ಸಂಜೆಯ ವೇಳೆಗೆ ಶಾಲಾ ಮೈದಾನಕ್ಕೆ ಆಟವಾಡಲು ಬಂದರೂ ಡಿ ಜೀವಸತ್ವ ತಯಾರಿಗೆ ಅಗತ್ಯವಾದ ಬಿಸಿಲು ಸಂಜೆಯ ಬಿಸಿಲಿನಲ್ಲಿ ಇರುವುದಿಲ್ಲ. ಮಧ್ಯಾಹ್ನ 11ರಿಂದ 1ರ ಸಮಯದ ಬಿರು ಬಿಸಿಲಿಗೆ ಪ್ರತಿದಿನ ಕೆಲ ನಿಮಿಷ ಮೈಯೊಡ್ಡಿದಲ್ಲಿ ಡಿ ಜೀವಸತ್ವದ ಕೊರತೆ ಕಾಡದು ಎನ್ನುತ್ತಾರೆ ತಜ್ಞರು.

ಈ ಕಾರಣದಿಂದ ಫುಡ್ ಸೇಫ್ಟಿ ಮತ್ತು ಸ್ಟ್ಯಾಂಡರ್ಡ್ ಅಥಾರಿಟಿ ಆಫ್ ಇಂಡಿಯಾ ಸಂಸ್ಥೆಯು ಎನ್‌ಸಿಇಆರ್‌ಟಿ ಹಾಗೂ ಇತರ ಸಂಸ್ಥೆಗಳ ಸಹಯೋಗದೊಂದಿಗೆ 2018ರಲ್ಲಿ ದೆಹಲಿಯಲ್ಲಿನ ಶಾಲೆಗಳಲ್ಲಿ 'ಬಿಸಿಲು ಯೋಜನೆ'ಯನ್ನು ಹಮ್ಮಿಕೊಂಡು, ಮಕ್ಕಳಲ್ಲಿ ಅಗತ್ಯ ಜಾಗೃತಿ ಮೂಡಿಸುವ ಜೊತೆ ಶಾಲೆಯ ಸಾಮೂಹಿಕ ಪ್ರಾರ್ಥನೆಯ ಸಮಯವನ್ನು ಮಧ್ಯಾಹ್ನ 11ರಿಂದ 1ರ ಸಮಯಕ್ಕೆ ಬದಲಾಯಿಸಲು ಪ್ರಯತ್ನಿಸಿತ್ತು. ರಾಜ್ಯದ ಶಾಲೆ ಕಾಲೇಜು, ಕಚೇರಿಗಳಲ್ಲಿಯೂ ಮಕ್ಕಳು ಮತ್ತು ವಯಸ್ಕರಲ್ಲಿನ ಡಿ ಜೀವಸತ್ವದ ಕೊರತೆಯ ನಿವಾರಣೆಗೆ ಬಿಸಿಲಿಗೆ ಮೈಯೊಡ್ಡುವ ಯೋಜನೆಯನ್ನು ಜಾರಿಗೆ ತರುವ ಅಗತ್ಯ ಇದೆ.

ವಾಚಕರ ವಾಣಿ

ಕುಮಾರ್ಗಕ್ಕೆ ಕಾವಲುಗಾರರಾದವರು...

ಎಸ್‌ಎಸ್‌ಎಲ್‌ಸಿಯಲ್ಲಿ ಸಾಮೂಹಿಕ ನಕಲು ಮಾಡಲು ಸಹಕರಿಸಿದ 16 ಶಿಕ್ಷಕರನ್ನು ಅಮಾನತು ಮಾಡಿರುವ ಸುದ್ದಿ (ಪ್ರ.ವಾ., ಏ. 8) ಓದಿ ಕೆಲ ಕ್ಷಣ ದಂಗಾದೆ. ಅಕ್ಕನ ವಚನ 'ತಾಯಿಯ ಮೊಲೆ ಹಾಲು ನಂಜಾದಡೆ...' ನೆನಪಿಗೆ ಬಂದಿತು. ಸುಮಾರ್ಗದಲ್ಲಿ ನಡೆಯಲು ಕಲಿಸಬೇಕಾದ ಗುರುಗಳೇ ಕುಮಾರ್ಗಕ್ಕೆ ಕಾವಲುಗಾರರಂತೆ ನಿಂತದ್ದನ್ನು ಕಂಡು ಅಳಬೇಕೋ ನಗಬೇಕೋ ತಿಳಿಯಲಿಲ್ಲ. ಈ ವ್ಯವಸ್ಥೆ ಹಾಳಾಗುವುದಕ್ಕೆ ಕಾರಣಕರ್ತರಾಗಿ ಮೊದಲ ಸಾಲಿನಲ್ಲಿ ತಪ್ಪಿತಸ್ಥರಾಗಿ ನಿಲ್ಲಬೇಕಾದವರು ಶಿಕ್ಷಕರೆಂದು ವಿಧಿಯಿಲ್ಲದೆ ಹೇಳಬೇಕಾಗುತ್ತದೆ.

ಸಾಮಾನ್ಯವಾಗಿ ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ತಪ್ಪು ಮಾಡಿದರೆ, ನಕಲು ಮಾಡಿದರೆ ಗುರುಗಳು ವಿದ್ಯಾರ್ಥಿಗಳನ್ನು ಡಿಬಾರ್ ಮಾಡಿ ಒಂದೆರಡು ಪರೀಕ್ಷೆ ತಪ್ಪಿಸುತ್ತಿದ್ದರು. ಆದರೆ ಶಿಕ್ಷಕರೇ ಕಳ್ಳತನ ಮಾಡಿಸುವುದು, ವಿದ್ಯಾರ್ಥಿಗಳಿಗೆ ಕಾಪಿ ಮಾಡಲು ಸಹಕಾರ ನೀಡಿ ತಾವೇ ಡಿಬಾರ್ ಆಗಿರುವುದು ಕುತೂಹಲಕಾರಿ ವಿಷಯ. ಶಿಕ್ಷಕರು ಈ ರೀತಿ 'ವಿದ್ಯಾದಾನ' ನೀಡಿ ಸಾರ್ವಜನಿಕವಾಗಿ ಬೆತ್ತಲಾಗಿರುವುದು ಬಲು ಬೇಸರದ ಸಂಗತಿ. ಶಿಕ್ಷಣರಂಗ ಇಂಥ ಅಪಸವ್ಯಗಳಿಗೆ ಮಾಧ್ಯಮದಲ್ಲಿ ಸ್ಥಾನ, ಸಮಯ ಪಡೆಯುತ್ತಿರುವುದು ವಿಷಾದನೀಯ.

ಬಿ.ಆರ್.ಅಣ್ಣಾಸಾಗರ, ಸೇಡಂ

ದೇವತೆ ಮಾಡಲು ಕೇಳಿದ್ದವರಾರು?

'ಕೆಟ್ಟದಾಗಿ ಬಟ್ಟೆ ಧರಿಸುವ ಹುಡುಗಿಯರು ಶೂರ್ಪನಖಿಯರು' ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಕೈಲಾಶ್ ವಿಜಯ ವರ್ಗೀಯ ಅವರು ಹೇಳಿರುವುದು (ಪ್ರ.ವಾ., ಏ. 9) ಅಸಮಂಜಸವಾಗಿದೆ. ನಮ್ಮ ಕೆಲವು ಜನಪ್ರತಿನಿಧಿಗಳು ಹೆಣ್ಣುಮಕ್ಕಳ ಬಗ್ಗೆ ಈ ರೀತಿ ಹಿಂದಿನಿಂದಲೂ ಅವಹೇಳನ ಮಾಡುತ್ತಲೇ ಬಂದಿದ್ದಾರೆ. ಹಣೆಗೆ ಇಟ್ಟುಕೊಳ್ಳಬೇಕು ಅಥವಾ ಪೂರ್ಣವಾಗಿ ಮೈ ಮುಚ್ಚುವ ರೀತಿಯಲ್ಲಿ ಬಟ್ಟೆ ಧರಿಸಬೇಕು ಎಂಬಂಥ ಹಲವು ರೀತಿಯ ಹೇರಿಕೆಗಳು ನಡೆಯುತ್ತಲೇ ಬಂದಿವೆ. ಇದಕ್ಕೆಲ್ಲಾ ಯಾವಾಗ ಕಡಿವಾಣ ಬೀಳುತ್ತದೆ?

...ಹಾಗೆ ಬಟ್ಟೆ ಧರಿಸದ ಮಹಿಳೆಯರು ರಾಮಾಯಣದಲ್ಲಿ ಬರುವ ಶೂರ್ಪನಖಿ ರಾಕ್ಷಸಿಯ ಹಾಗೆ ಕಾಣುತ್ತಾರೆ ಎನ್ನುವುದು ಎಷ್ಟರಮಟ್ಟಿಗೆ ಸರಿ? ತಮಗೆ ಇಷ್ಟ ಬಂದ ರೀತಿಯಲ್ಲಿ ಬಟ್ಟೆ ಧರಿಸುವುದು ಮಹಿಳೆಯರ ಹಕ್ಕು. ಅದನ್ನು ಕೇಳಲು ನೀವು ಯಾರು? ನಮ್ಮನ್ನು ದೇವತೆ ಮಾಡಿ ಎಂದು ನಾವು ನಿಮ್ಮನ್ನು ಕೇಳಿದ್ದೆವಾ? ಸುಖಾಸುಮ್ಮನೆ ದೇವತೆಗಳಿಗೆ ಹೋಲಿಸಿ ನಮ್ಮ ವೈಯಕ್ತಿಕ ಸ್ವಾತಂತ್ರ್ಯವನ್ನು ಕಸಿಯಬೇಡಿ.

ಬಿನಿತಾ ಜಿ., ಕಲಬುರಗಿ

ಅಮೃತ ಮಹೋತ್ಸವ ಸಾರ್ಥಕವಾಗಲಿ

'ಆರೋಗ್ಯವೇ ಭಾಗ್ಯ' ಎಂಬ ನಾಣ್ಣುಡಿ ಇಂದು ಕ್ಲೀಷೆಯಾಗಿ ಕಂಡರೂ ಕೋವಿಡ್ ಸಂದರ್ಭದಲ್ಲಿ ಆ ಮಾತಿಗೆ ಹೆಚ್ಚಿನ ಮಹತ್ವ ಒದಗಿಬಂದಿತ್ತು. ಏಕೆಂದರೆ ರೋಗ ಪ್ರತಿರೋಧಕ ಶಕ್ತಿಯಿಂದಲೇ ಭಾರತೀಯರು ಕೋವಿಡ್ ಅನ್ನು ಎದುರಿಸಿದ್ದು ಅಂದರೆ ತಪ್ಪಾಗಲಾರದು. ಆ ದಿಸೆಯಲ್ಲಿ ಡಾ. ಕೆ.ಎಸ್.ಪವಿತ್ರ ಅವರ ಲೇಖನ (ಪ್ರ.ವಾ., ಏ. 7) ಹೆಚ್ಚು ಪ್ರಸ್ತುತವೆನಿಸುತ್ತದೆ. ಭಾರತ ಸರ್ಕಾರದ ಆರೋಗ್ಯ ಬಜೆಟ್ ಇಂಡೊನೇಷ್ಯಾ ಮತ್ತು ಫಿಲಿಪ್ಪೀನ್ಸ್‌ನಂತಹ ರಾಷ್ಟ್ರಗಳಿಗಿಂತಲೂ ಕಡಿಮೆಯಿದೆ ಎಂಬುದು ತಿಳಿದಾಗ ನಿಜಕ್ಕೂ ನಮ್ಮ ಬಗ್ಗೆ ನಮಗೇ ಮರುಕ ಹುಟ್ಟುತ್ತದೆ.

ಇಂದು ನಮ್ಮನ್ನು ಆಳುವವರ ವೈದ್ಯಕೀಯ ಕಾಲೇಜುಗಳು ಮತ್ತು ಜಿಲ್ಲೆಗೊಂದರಂತೆ ಸ್ಥಾಪನೆಯಾಗುತ್ತಿರುವ ಸರ್ಕಾರಿ ವೈದ್ಯಕೀಯ ಕಾಲೇಜುಗಳ ನಡುವೆಯೂ ಆರೋಗ್ಯ ಕ್ಷೇತ್ರವನ್ನು ಸೇವಾ ವಲಯದಿಂದ ದೂರ ಸರಿಸಿ ಉದ್ಯಮ ವಲಯವನ್ನಾಗಿಸಿರುವುದು ಗೋಚರಿಸುತ್ತಿದೆ. ಎಷ್ಟೋ ರಾಜಕಾರಣಿಗಳಿಗೆ ಆರೋಗ್ಯ ಕ್ಷೇತ್ರ ನಿಜಕ್ಕೂ ಉತ್ತಮ ಹೂಡಿಕೆಯ ವಲಯವಾಗಿದೆ. ಇದನ್ನು ಸುಧಾರಿಸಬೇಕಾದರೆ 'ಆಸ್ಪತ್ರೆಯಿಂದ, ಹಣದಿಂದ ಔಷಧಿ ಮತ್ತು ಗುಳಿಗೆಗಳನ್ನು ಕೊಳ್ಳಬಹುದೇ ವಿನಾ ಆರೋಗ್ಯವನ್ನಲ್ಲ' ಎಂಬ ಮಾತನ್ನು ನಾವು ನೆನಪಿನಲ್ಲಿ ಇಡಬೇಕಾಗುತ್ತದೆ. ಸದೃಢ ಸಮಾಜ ನಿರ್ಮಿಸಲು ಸದೃಢ ಜನರ ಅಗತ್ಯವಿದ್ದು, ಸರ್ಕಾರವು ಆಸ್ಪತ್ರೆ, ಆರೋಗ್ಯ ವಿಮೆಗಳಿಗಿಂತ ಮಕ್ಕಳು, ಮಹಿಳೆಯರ ಅಪೌಷ್ಟಿಕತೆ ನಿವಾರಣೆ, ಗರ್ಭಿಣಿಯರ ಸಾವಿನ ಪ್ರಮಾಣ ನಿಲ್ಲಿಸುವುದು, ನಾಗರಿಕರಿಗೆ ಸಾಧ್ಯವಾದಷ್ಟು ಪೌಷ್ಟಿಕ ಆಹಾರ, ಉತ್ತಮ ಕ್ರೀಡಾಂಗಣ, ಜಿಮ್‌ನಂತಹ ಸೌಲಭ್ಯಗಳನ್ನು ಒದಗಿಸುವ ಮೂಲಕ ಅವರನ್ನು ಆಸ್ಪತ್ರೆಗಳಿಂದ ದೂರ ಇರಿಸುವುದೇ ಆರೋಗ್ಯದ ಅಮೃತ ಮಹೋತ್ಸವದ ಸಾರ್ಥಕತೆಯಾಗುತ್ತದೆ.

ರಘು ಗಂಕಾರನಹಳ್ಳಿ, ಪುರವರ, ಮಧುಗಿರಿ

ದೃಢತೆ ಇಲ್ಲದ ನಾಯಕರಿಂದ ನಿರೀಕ್ಷಿಸುವುದೇನು?

ಚುನಾವಣಾ ಅಭ್ಯರ್ಥಿಗಳ ಆಯ್ಕೆ ಪಟ್ಟಿಯ ಸಾಲಿನಲ್ಲಿ ಇವರ ಹೆಸರು ಕೈ ಬಿಟ್ಟ ಕ್ಷಣಕ್ಕೆ ಪಕ್ಷನಿಷ್ಠ, ತತ್ವನಿಷ್ಠ ಅಭ್ಯರ್ಥಿಗಳ ನಿಲುವು ಕೂಡ ಬದಲಾಗತೊಡಗುತ್ತದೆ! ವ್ಯಕ್ತಿಗಿಂತ ಪಕ್ಷನಿಷ್ಠೆ, ತತ್ವನಿಷ್ಠೆ ಮಿಗಿಲು ಎನ್ನುವವರ ನಿಷ್ಠೆ ದಿಢೀರ್ ಎಂದು ಬದಲಾಗಿ ಅವರು ಬಂಡಾಯ ಏಳಲು ಕಾರಣವೇನು? ಅಭ್ಯರ್ಥಿಗಳ ಆಯ್ಕೆ ಪಟ್ಟಿಯಲ್ಲಿ ಇರುವವರೆಲ್ಲರಿಗೂ ಅವಕಾಶ ಸಿಗುವುದಿಲ್ಲ ಎಂದು ತಿಳಿದಿದ್ದೂ ಈ ಬಂಡಾಯವೇಕೆ? ಹಾಗಾದರೆ ತಾವು ಬಹಳ ವರ್ಷಗಳಿಂದ ನಂಬಿಕೊಂಡು ಬಂದ ತತ್ವ, ಸಿದ್ಧಾಂತಕ್ಕೆ ಎಳ್ಳುನೀರು ಬಿಟ್ಟು, ಹಲವು ವರ್ಷಗಳಿಂದ ಇವರನ್ನು ಬೆಳೆಸಿದ ಪಕ್ಷಕ್ಕೆ ಬೆನ್ನು ತೋರಿಸಿ, ಮತ್ತೊಂದು ತತ್ವ, ಸಿದ್ಧಾಂತಕ್ಕೆ ತಮ್ಮನ್ನು ದಿಢೀರ್ ಎಂದು ಒಗ್ಗಿಸಿಕೊಂಡು ಇನ್ನೊಂದು ಪಕ್ಷಕ್ಕೆ ನಿಷ್ಠೆ ತೋರಿಸುವುದನ್ನು ಕಂಡರೆ ಇವರಿಗೆ ಯಾವ ನೈತಿಕತೆ ಇದೆ ಎನಿಸುತ್ತದೆ.

ಇಂತಹ ನಾಯಕರನ್ನು ನಂಬಿ ಬಂದ ಹಿಂಬಾಲಕರ ಪರಿಸ್ಥಿತಿ ಏನಾಗಬೇಡ? ಇಷ್ಟಕ್ಕೂ ಹೀಗೆ ಪಕ್ಷಾಂತರ ಮಾಡುವವರಿಗೆ ಯಾವ ಬದ್ಧತೆಯೂ ಇರಲು ಸಾಧ್ಯವಿಲ್ಲ. ಇವರಿಗೆ ಪ್ರಜಾತಂತ್ರ ಎನ್ನುವುದು ಒಂದು ವ್ಯಾಪಾರದ ಸರಕು ಅಷ್ಟೇ. ಶತಾಯಗತಾಯ ಸದಾ ಅಧಿಕಾರದಲ್ಲಿದ್ದು ವಾಮಮಾರ್ಗದಲ್ಲಿ ಹಣ ಗಳಿಸುವುದೇ ಇವರ ಗುರಿ. ಇಂತಹವರು ಪಕ್ಷದ ನಿಷ್ಠೆಯನ್ನು ಎಷ್ಟು ಬಾರಿ ಬೇಕಾದರೂ ಬದಲಾಯಿಸುತ್ತಾರೆ. ಇವರು ನಂಬಿದಂತೆ ನಟಿಸುವ ತತ್ವ, ಸಿದ್ಧಾಂತಗಳನ್ನು ಯಾವಾಗ ಬೇಕಾದರೂ ಗಾಳಿಗೆ ತೂರಿಬಿಡುತ್ತಾರೆ. ದೃಢತೆ ಇಲ್ಲದ ಇಂತಹ ನಾಯಕರಿಂದ ಈ ನಾಡು, ಈ ನಾಡಿನ ಜನ ಏನನ್ನು ನಿರೀಕ್ಷಿಸಲು ಸಾಧ್ಯ? ಈ ಬಗ್ಗೆ ಅಭ್ಯರ್ಥಿಗಳು, ಅವರ ಹಿಂಬಾಲಕರು, ಮತದಾರರು ಎಲ್ಲರೂ ಆತ್ಮಾವಲೋಕನ ಮಾಡಿಕೊಳ್ಳಬೇಕಾಗಿದೆ.

ಅಶೋಕ ಪ. ಹೊನಕೇರಿ, ಧಾರವಾಡ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಹುಲಿ ಯೋಜನೆಗೆ ಅನುದಾನ ಭಾರಿ ಕಡಿತ



ಹುಲಿ ಯೋಜನೆಗೆ ಅತ್ಯಾಧುನಿಕ ವಾಹನಗಳು ಮತ್ತು ಹೆಲಿಕಾಪ್ಟರ್‌ಗಳನ್ನು ಒದಗಿಸಲಾಗುವುದು ಎಂದು ಕೇಂದ್ರ ಸರ್ಕಾರವು ತನ್ನ 'ಅಮೃತ ಕಾಲದ ಹುಲಿ ಮುನ್ನೋಟ'ದಲ್ಲಿ ಘೋಷಿಸಿದೆ. ಆದರೆ, ಸರ್ಕಾರವು ಹುಲಿ ಯೋಜನೆಗೆ ನೀಡುತ್ತಿರುವ ಅನುದಾನವನ್ನು ಎಂಟು ವರ್ಷಗಳಲ್ಲಿ ಕಡಿಮೆ ಮಾಡುತ್ತಲೇ ಬಂದಿದೆ

ಈ ಸಾಲಿನಲ್ಲಿನ ಅನುದಾನವೆಷ್ಟು?

ಕೇಂದ್ರ ಸರ್ಕಾರವು ಪ್ರತಿ ವರ್ಷ ತನ್ನ ಬಜೆಟ್‌ನಲ್ಲಿ ಹುಲಿ ಯೋಜನೆಗೆ ಮತ್ತು ಆನೆ ಯೋಜನೆಗೆ ಪ್ರತ್ಯೇಕವಾಗಿ ಅನುದಾನವನ್ನು ತೆಗೆದಿರಿಸುತ್ತಿತ್ತು. ಆದರೆ, 2023–24ನೇ ಸಾಲಿನ ಬಜೆಟ್‌ನಲ್ಲಿ ಎರಡೂ ಯೋಜನೆಗಳನ್ನು ಒಟ್ಟಿಗೆ ಸೇರಿಸಿ ಅನುದಾನವನ್ನು ₹331 ಕೋಟಿ ಅನುದಾನವನ್ನು ಘೋಷಿಸಿದೆ. ಇದರಲ್ಲಿ ಹುಲಿ ಯೋಜನೆಗೆ ಎಷ್ಟು ಅನುದಾನ ಮತ್ತು ಆನೆ ಯೋಜನೆಗೆ ಎಷ್ಟು ಅನುದಾನ ಎಂಬುದನ್ನು ಸರ್ಕಾರವು ತನ್ನ ಬಜೆಟ್‌ನಲ್ಲಿ ನಿಖರವಾಗಿ ಹೇಳಿಲ್ಲ.

ಈ ಹಿಂದಿನ ಬಜೆಟ್‌ಗಳಲ್ಲಿ ಆನೆ ಯೋಜನೆಗೆ ಪ್ರತಿ ವರ್ಷ ₹30 ಕೋಟಿಯಿಂದ ₹35 ಕೋಟಿಯಷ್ಟು ಅನುದಾನವನ್ನು ತೆಗೆದಿರಿಸಲಾಗಿದೆ. ಆ ಪ್ರಕಾರ 2023–24ರಲ್ಲಿ ಆನೆ ಯೋಜನೆಗೆ ₹35 ಕೋಟಿಯಷ್ಟು ಅನುದಾನವನ್ನು ತೆಗೆದರಿಸಿದರೆ, ಹುಲಿ ಯೋಜನೆಗೆ ₹296 ಕೋಟಿಗಳಷ್ಟು ಅನುದಾನ ಉಳಿಯುತ್ತದೆ. ಪರಿಷ್ಕೃತ ಬಜೆಟ್‌ನಲ್ಲೂ ಇಷ್ಟೇ ಅನುದಾನವನ್ನು ಉಳಿಸಿದರೆ, ಈ ಹಿಂದಿನ ಆರ್ಥಿಕ ವರ್ಷಕ್ಕಿಂತ ಹೆಚ್ಚು ಅನುದಾನ ದೊರೆತಂತಾಗುತ್ತದೆ. ಕಡಿತ ಮಾಡಿದರೆ, ಅನುದಾನದ ಮೊತ್ತ ತಾನಾಗೇ ಕಡಿಮೆಯಾಗಲಿದೆ.

● ಜಯಸಿಂಹ ಆರ್., ಅಮೃತ ಕಿರಣ್ ಬಿ.ಎಂ.


'ಹುಲಿ ಯೋಜನೆ'ಯ 50ನೇ ವರ್ಷಾಚರಣೆಗೆ ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ಚಾಲನೆ ನೀಡಿದ್ದಾರೆ. ಇದೇ ವೇಳೆ ಹುಲಿ ಸಂರಕ್ಷಣೆ ಕುರಿತ 'ಅಮೃತ ಕಾಲದ ಹುಲಿ ಮುನ್ನೋಟ' ಅನ್ನು ಪ್ರಧಾನಿ ಬಿಡುಗಡೆ ಮಾಡಿದ್ದಾರೆ. ಭಾರತದ ಹುಲಿ ಸಂರಕ್ಷಣೆಯು ಭಾರತಕ್ಕೆ ಮಾತ್ರ ಮುಖ್ಯವಲ್ಲ, ಬದಲಿಗೆ ಜಗತ್ತಿಗೇ ಅಗತ್ಯವಾದುದು ಎಂದು ಈ ಮುನ್ನೋಟದಲ್ಲಿ ವಿವರಿಸಲಾಗಿದೆ. ಜತೆಗೆ, 'ಹುಲಿ ಸಂರಕ್ಷಿತ ಪ್ರದೇಶಗಳ ಕೇಂದ್ರ ಭಾಗಗಳಿಗೆ ತುರ್ತಾಗಿ ತೆರಳಲು ಅನುಕೂಲವಾಗುವಂತೆ ಕೇಂದ್ರ ಸರ್ಕಾರದಿಂದ ಅತ್ಯಾಧುನಿಕ ವಾಹನಗಳು, ಹೆಲಿಕಾಪ್ಟರ್‌ಗಳನ್ನು ಒದಗಿಸಲಾಗುವುದು. ಹುಲಿ ಸಂರಕ್ಷಿತ ಪ್ರದೇಶಗಳಲ್ಲಿ ಅಗತ್ಯವಿರುವ ಅತ್ಯಾಧುನಿಕ ಸಲಕರಣೆಗಳನ್ನು ಒದಗಿಸಲಾಗುವುದು ಮತ್ತು ಖಾಲಿ ಇರುವ ಎಲ್ಲಾ ಹುದ್ದೆಗಳನ್ನು ಭರ್ತಿ ಮಾಡಲಾಗುವುದು' ಎಂದು ಈ ಮುನ್ನೋಟ ವರದಿಯಲ್ಲಿ ಉಲ್ಲೇಖಿಸಲಾಗಿದೆ. ಆದರೆ, ಕೇಂದ್ರ ಸರ್ಕಾರವು ಹುಲಿ ಯೋಜನೆಗೆ ಪ್ರತಿ ವರ್ಷ ನೀಡುತ್ತಿರುವ ಅನುದಾನವನ್ನು ಕಡಿತ ಮಾಡುತ್ತಲೇ ಇದೆ. 2023–24ನೇ ಸಾಲಿನಲ್ಲಿ ಹುಲಿ ಯೋಜನೆ ಮತ್ತು ಆನೆ ಯೋಜನೆಗಳನ್ನು ವಿಲೀನ ಮಾಡಿ ಅನುದಾನ ಘೋಷಿಸಲಾಗಿದೆ. ಈ ಬಾರಿ ಹುಲಿ ಯೋಜನೆಗೆ ಎಷ್ಟು ಅನುದಾನ ನೀಡಲಾಗಿದೆ ಎಂಬುದರ ನಿಖರ ಮಾಹಿತಿಯೇ ಇಲ್ಲ.

ಕೇಂದ್ರ ಸರ್ಕಾರವು ಪ್ರತಿ ವರ್ಷ ತನ್ನ ಬಜೆಟ್‌ನಲ್ಲಿ ಹುಲಿ ಯೋಜನೆಗೆ ಎಂದು ಪ್ರತ್ಯೇಕ ಅನುದಾನವನ್ನು ತೆಗೆದಿರಿಸುತ್ತದೆ. 2016–17ರಲ್ಲಿ ಹುಲಿ ಯೋಜನೆಗೆ ಎಂದು ₹375 ಕೋಟಿ ಮೊತ್ತದ ಅನುದಾನವನ್ನು ಕೇಂದ್ರ ಸರ್ಕಾರ ತನ್ನ ಬಜೆಟ್‌ನಲ್ಲಿ ಘೋಷಿಸಿತ್ತು. 2016–17ರಿಂದ 2023–24ರವರೆಗಿನ ಎಂಟು ಆರ್ಥಿಕ ವರ್ಷಗಳಲ್ಲಿ ಇದೇ ಗರಿಷ್ಠ ಮೊತ್ತದ ಅನುದಾನವಾಗಿದೆ. ಆನಂತರದ ಯಾವ ವರ್ಷವೂ ₹375 ಕೋಟಿಗಿಂತ ಹೆಚ್ಚಿನ ಅನುದಾನವನ್ನು ಸರ್ಕಾರ ಘೋಷಿಸಿಯೇ ಇಲ್ಲ. ಈ ಅನುದಾನದ ಮೊತ್ತದಲ್ಲಿ ಪ್ರತಿ ವರ್ಷ ಇಳಿಕೆಯಾಗುತ್ತಲೇ ಇದೆ. ಈ ಎಂಟು ವರ್ಷಗಳಲ್ಲಿ ಅತ್ಯಂತ ಕಡಿಮೆ ಮೊತ್ತದ ಅನುದಾನ ಘೋಷಿಸಿದ್ದು 2021–22ರಲ್ಲಿ. ಆ ಆರ್ಥಿಕ ವರ್ಷದ ಬಜೆಟ್‌ನಲ್ಲಿ ಹುಲಿ ಯೋಜನೆಗೆ ₹250 ಕೋಟಿಯನ್ನಷ್ಟೇ ಘೋಷಿಸಲಾಗಿತ್ತು. 2016–17ರಲ್ಲಿ ಘೋಷಿಸಿದ್ದ ಅನುದಾನಕ್ಕೆ ಹೋಲಿಸಿದರೆ, 2021–22ರಲ್ಲಿ ಘೋಷಿಸಿದ್ದ ಅನುದಾನದ ಮೊತ್ತದಲ್ಲಿ ಶೇ 33.33ರಷ್ಟು ಇಳಿಕೆಯಾಗಿತ್ತು. 2023–24ರಲ್ಲಿ ಹುಲಿ ಯೋಜನೆ ಮತ್ತು ಆನೆ ಯೋಜನೆ ಎರಡನ್ನೂ ಸೇರಿಸಿ ₹331 ಕೋಟಿ ಅನುದಾನವನ್ನು ಘೋಷಿಸಿದೆ. 2016–17ಕ್ಕೆ ಹೋಲಿಸಿದರೆ 2023–24ರ ಅನುದಾನದಲ್ಲಿ ಶೇ 12ರಷ್ಟು ಕಡಿಮೆಯಾಗಿದೆ.


ಕೇಂದ್ರ ಸರ್ಕಾರವು ಹುಲಿ ಯೋಜನೆಗೆ ಬಜೆಟ್‌ನಲ್ಲಿ ಘೋಷಿಸುತ್ತಿರುವ ಅನುದಾನವನ್ನು ಪೂರ್ಣ ಪ್ರಮಾಣದಲ್ಲಿ ಬಿಡುಗಡೆ ಮಾಡುತ್ತಿಲ್ಲ. ಪರಿಷ್ಕೃತ ಅಂದಾಜಿನಲ್ಲೇ ಹುಲಿ ಯೋಜನೆಯ ಅನುದಾನವನ್ನು ಕಡಿತ ಮಾಡಲಾಗುತ್ತಿದೆ. 2016–17ರಲ್ಲಿ ₹375 ಕೋಟಿ ಅನುದಾನವನ್ನು ಘೋಷಿಸಿದ್ದರೆ, ಪರಿಷ್ಕೃತ ಅಂದಾಜಿನಲ್ಲಿ ಅನುದಾನವನ್ನು ₹364 ಕೋಟಿಗೆ ಇಳಿಸಲಾಗಿತ್ತು. 2017–18 ಮತ್ತು 2018–19ನೇ ಆರ್ಥಿಕ ವರ್ಷ ಹೊರತುಪಡಿಸಿ, ಉಳಿದೆಲ್ಲಾ ವರ್ಷದ ಪರಿಷ್ಕೃತ ಅಂದಾಜಿನಲ್ಲೂ ಅನುದಾನವನ್ನು ಇದೇ ರೀತಿ ಕಡಿತ ಮಾಡಲಾಗಿದೆ. ಪರಿಷ್ಕೃತ ಅಂದಾಜಿನ ವೇಳೆ ಹುಲಿ ಯೋಜನೆಯ ಅನುದಾನವನ್ನು 2019–20ರಲ್ಲಿ ₹282.23 ಕೋಟಿಗೆ, 2020–21ರಲ್ಲಿ ₹195 ಕೋಟಿಗೆ, 2021–22ರಲ್ಲಿ ₹220 ಕೋಟಿಗೆ ಮತ್ತು 2022–23ರಲ್ಲಿ ₹188 ಕೋಟಿಗೆ ಕಡಿತ ಮಾಡಲಾಗಿತ್ತು. 2022–23ರ ಪರಿಷ್ಕೃತ ಅಂದಾಜಿನಲ್ಲಿ ಈ ಎಂಟು ವರ್ಷದಲ್ಲೇ ಅತ್ಯಂತ ಕಡಿಮೆ ಮೊತ್ತದ ಅನುದಾನವನ್ನು ನೀಡಲಾಗಿದೆ.


ಆಯಾ ಆರ್ಥಿಕ ವರ್ಷದ ಅಂತ್ಯದ ವೇಳೆಗೆ ಹುಲಿ ಯೋಜನೆಗೆ ಸರ್ಕಾರವು ಬಿಡುಗಡೆ ಮಾಡಿದ ವಾಸ್ತವಿಕ ಅನುದಾನವು, ಪರಿಷ್ಕೃತ ಅಂದಾಜಿಗಿಂತ ತುಸು ಕಡಿಮೆಯೇ ಇದೆ. ಸರ್ಕಾರವು ಬಜೆಟ್‌ನಲ್ಲಿ ಘೋಷಿಸುತ್ತಿರುವ ಅನುದಾನಕ್ಕೂ, ವಾಸ್ತವಿಕವಾಗಿ ನೀಡುತ್ತಿರುವ ಅನುದಾನಕ್ಕೂ ವ್ಯತ್ಯಾಸವಿದೆ. 2016-17ರಲ್ಲಿ ವಾಸ್ತವಿಕ ಅನುದಾನದಲ್ಲಿ ಶೇ 9ರಷ್ಟು ಕಡಿತವಾಗಿತ್ತು. ಎಲ್ಲಾ ವರ್ಷಗಳಲ್ಲೂ ಅನುದಾನವನ್ನು ದೊಡ್ಡ ಪ್ರಮಾಣದಲ್ಲೇ ಕಡಿತ ಮಾಡಲಾಗಿದೆ. 2022–23ರ ಬಜೆಟ್‌ನಲ್ಲಿ ಘೋಷಿಸಿದ್ದ ಅನುದಾನಕ್ಕೆ ಹೋಲಿಸಿದರೆ, ಪರಿಷ್ಕೃತ ಅಂದಾಜಿನಲ್ಲಿ ಹೇಳಲಾಗಿರುವ ಅನುದಾನದ ಮೊತ್ತದಲ್ಲಿ ಶೇ 37.33ರಷ್ಟು ಕಡಿತವಾಗಿದೆ. ಆ ಸಾಲಿನಲ್ಲಿ ವಾಸ್ತವಿಕವಾಗಿ ಎಷ್ಟು ಅನುದಾನವನ್ನು ನೀಡಲಾಗಿದೆ ಎಂಬುದರ ಮಾಹಿತಿ ಲಭ್ಯವಿಲ್ಲ. ಆ ಮೊತ್ತವು ಪರಿಷ್ಕೃತ ಅಂದಾಜಿಗಿಂತ ಕಡಿಮೆ ಇದ್ದರೆ, ಈ ಎಂಟು ವರ್ಷದಲ್ಲೇ ಅದು ಅತ್ಯಂತ ಕಡಿಮೆ ಅನುದಾನ ಎನಿಸಿಕೊಳ್ಳಲಿದೆ.

ಅನುದಾನ: ಬಜೆಟ್ ಘೋಷಣೆ ಮತ್ತು ಮಂಜೂರಾದ ಮೊತ್ತ



ವರ್ಷ ಪ್ರತಿ ನೂರು ಸಾವು





9 ವರ್ಷಗಳಲ್ಲಿ 193 ಹುಲಿಗಳ ಬೇಟೆ

ದೇಶದಲ್ಲಿ ಹುಲಿಗಳ ಸಂರಕ್ಷಣೆಗೆ ವ್ಯಾಪಕ ಕ್ರಮಗಳನ್ನು ತೆಗೆದುಕೊಂಡಿದ್ದರೂ, ಹುಲಿ ಬೇಟೆ ಹಾಗೂ ಕಳ್ಳಸಾಗಣೆ ನಿಂತಿಲ್ಲ ಎಂಬುದನ್ನು ದತ್ತಾಂಶಗಳು ಸೂಚಿಸುತ್ತವೆ. ಸಹಜವಾಗಿ ಮೃತಪಡುವ ಹುಲಿಗಳ ಸಂಖ್ಯೆಯೇ ಹೆಚ್ಚಿದೆ ಎಂದು ಪ್ರಾಧಿಕಾರದ ಜಾಲತಾಣದಲ್ಲಿ ವಿವರಿಸಲಾಗಿದೆ. ಆದರೆ, ಸರಿಸುಮಾರು ಇಷ್ಟೇ ಸಂಖ್ಯೆಯ ಹುಲಿಗಳು ಅಥವಾ ಇದಕ್ಕೂ ಹೆಚ್ಚಿನ ಸಂಖ್ಯೆಯ ಹುಲಿಗಳು ಬೇಟೆ ಹಾಗೂ ಅಸಹಜ ಕಾರಣಕ್ಕೆ ಬಲಿಯಾಗಿವೆ ಎಂಬುದು ಇಲ್ಲಿ ಉಲ್ಲೇಖಾರ್ಹ.

ಉದಾಹರಣೆಗೆ, 2012ರಲ್ಲಿ 42 ಹುಲಿಗಳು ವಯಸ್ಸಿನ ಕಾರಣಕ್ಕೆ ಸಹಜವಾಗಿ ಮೃತಪಟ್ಟಿವೆ. ಇದೇ ವರ್ಷದಲ್ಲಿ ಹುಲಿ ದೇಹದ ಅವಶೇಷ ಪತ್ತೆಯೂ ಸೇರಿದಂತೆ ಬೇಟೆ, ಅಸಹಜ ಸಾವಿನಿಂದ 46 ಹುಲಿಗಳು ಮೃತಪಟ್ಟಿದ್ದವು. 2018ರಲ್ಲಿ 53 ಹುಲಿಗಳು ಸಹಜ ಸಾವನ್ನಪ್ಪಿದ್ದರೆ, 48 ಹುಲಿಗಳು ಬೇಟೆ ಹಾಗೂ ಅಸಹಜವಾಗಿ ಸತ್ತಿದ್ದವು. 9 ವರ್ಷಗಳಲ್ಲಿ 193 ಹುಲಿಗಳು ಬೇಟೆಗೆ ಬಲಿಯಾಗಿವೆ ಎಂದು ಪ್ರಾಧಿಕಾರದ ದತ್ತಾಂಶಗಳು ಹೇಳುತ್ತವೆ. 2016–22ರ ಅವಧಿಯಲ್ಲಿ 76 ಹುಲಿಗಳ ದೇಹದ ವಿವಿಧ ಅವಶೇಷಗಳನ್ನು ಜಪ್ತಿ ಮಾಡಲಾಗಿದೆ ಎಂದು ಪ್ರಾಧಿಕಾರದ ಜಾಲತಾಣ ತಿಳಿಸಿದೆ. ಹುಲಿಯ ದೇಹದ ಭಾಗಗಳಾದ ಉಗುರು, ಚರ್ಮ, ಹಲ್ಲು ಮೊದಲಾದ ಅವಶೇಷಗಳು ಬೇಟೆ ಅಥವಾ ಕಳ್ಳಸಾಗಣೆಯ ಕಾರಣಕ್ಕೆ ಹುಲಿಗಳು ಮೃತಪಟ್ಟಿವೆ ಎಂಬುದನ್ನು ದೃಢಪಡಿಸುತ್ತವೆ.

ಹುಲಿಗಳ ಪ್ರಮುಖ ಆವಾಸಸ್ಥಾನವಾಗಿರುವ ಭಾರತದಲ್ಲಿ ಹುಲಿಗಳ ಸಂಖ್ಯೆ ಪ್ರತೀ ವರ್ಷ ಏರಿಕೆಯಾಗುತ್ತಿದೆ. ಪ್ರತೀ ವರ್ಷ ವಿವಿಧ ಕಾರಣಗಳಿಂದ ಮೃತಪಡುವ ಹುಲಿಗಳ ದತ್ತಾಂಶವನ್ನೂ ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರ ತನ್ನ ವರದಿಗಳಲ್ಲಿ ಉಲ್ಲೇಖಿಸಿದೆ. 2016ರಿಂದ 2022ರವರೆಗೆ ದೇಶದಲ್ಲಿ 800ಕ್ಕೂ ಹೆಚ್ಚು ಹುಲಿಗಳು ಸಹಜ ಸಾವು, ಬೇಟೆ ಮೊದಲಾದ ಕಾರಣಗಳಿಂದ ಮೃತಪಟ್ಟಿವೆ.

ಅಂದರೆ, ವರ್ಷಕ್ಕೆ ಸರಿಸುಮಾರು 100 ಹುಲಿಗಳು ಮೃತಪಡುತ್ತಿವೆ ಎಂದು ದತ್ತಾಂಶಗಳು ತಿಳಿಸುತ್ತವೆ. 2019ರಲ್ಲಿ ಮಾತ್ರ 85 ಹುಲಿಗಳು ಮೃತಪಟ್ಟಿದ್ದವು. 2021ರಲ್ಲಿ ಅತಿಹೆಚ್ಚು ಅಂದರೆ, 118 ಹುಲಿಗಳು ಮೃತಪಟ್ಟಿದ್ದವು.

ಪ್ರತೀ ವರ್ಷ ಮಧ್ಯಪ್ರದೇಶದಲ್ಲಿ ಅತಿಹೆಚ್ಚು ಹುಲಿಗಳು ಮೃತಪಟ್ಟಿವೆ. 2016–22ರ ಅವಧಿಯಲ್ಲಿ ಮಧ್ಯಪ್ರದೇಶ ವ್ಯಾಪ್ತಿಯಲ್ಲಿರುವ ಹುಲಿ ಸಂರಕ್ಷಿತ ಅರಣ್ಯದಲ್ಲಿ 222 ಹುಲಿಗಳು ಮೃತಪಟ್ಟಿವೆ. ಇದೇ ಅವಧಿಯಲ್ಲಿ ಮಹಾರಾಷ್ಟ್ರದಲ್ಲಿ 152 ಹಾಗೂ ಕರ್ನಾಟಕದಲ್ಲಿ 100 ಹುಲಿಗಳು ವಿವಿಧ ಕಾರಣದಿಂದ ಸಾವನ್ನಪ್ಪಿವೆ. ಬಾಂಧವಗಡ ಹುಲಿ ಸಂರಕ್ಷಿತ ಪ್ರದೇಶದ ವ್ಯಾಪ್ತಿಯೊಂದರಲ್ಲೇ 2012–22ರ ಅವಧಿಯಲ್ಲಿ ಅತಿಹೆಚ್ಚು (66) ಹುಲಿಗಳು ಸಾವನ್ನಪ್ಪಿವೆ. ಕರ್ನಾಟಕದ ನಾಗರಹೊಳೆಯಲ್ಲಿ 51, ಬಂಡೀಪುರದಲ್ಲಿ 49 ಹುಲಿ ಸಾವನ್ನಪ್ಪಿವೆ.

ವೈಜ್ಞಾನಿಕ ವಿಧಾನ ಪಾಲನೆ: ದೇಶದ ಯಾವುದೇ ಹುಲಿ ಸಂರಕ್ಷಿತ ಪ್ರದೇಶದ ವ್ಯಾಪ್ತಿಯಲ್ಲಿ ಹುಲಿಗಳು ಮೃತಪಟ್ಟ ಬಗ್ಗೆ ವರದಿಯಾದ ಕೂಡಲೇ ಅದನ್ನು ನೇರವಾಗಿ ದತ್ತಾಂಶಕ್ಕೆ ಸೇರಿಸುವುದಿಲ್ಲ. ಸಾವಿನ ನಿಖರ ಕಾರಣವನ್ನು ವಿಶ್ಲೇಷಣೆಗೆ ಒಳಪಡಿಸಿ, ಸಾವಿನ ಸ್ವರೂಪವನ್ನು ಉಲ್ಲೇಖಿಸಲಾಗುತ್ತದೆ. ಹುಲಿಯು ವಯಸ್ಸಾಗಿ ಸಹಜವಾಗಿ ಸಾವನ್ನಪ್ಪಿದೆಯೇ ಅಥವಾ ಬೇಟೆಗೆ ಬಲಿಯಾಗಿದೆಯೇ ಎಂಬುದನ್ನು ವಿವರಿಸಲಾಗುತ್ತದೆ. ಹುಲಿಯೊಂದು ಮೃತಪಟ್ಟ ಮಾಹಿತಿಯನ್ನು ವರದಿ ಮಾಡುವುದು ಆಯಾ ಹುಲಿ ಸಂರಕ್ಷಿತ ಪ್ರದೇಶಗಳ ವ್ಯಾಪ್ತಿಯ ರಾಜ್ಯಗಳ ಜವಾಬ್ದಾರಿ. ಹುಲಿ ಸಾವಿನ ಬಗ್ಗೆ ಬೇರೊಂದು ಮೂಲದಿಂದ ಪ್ರಾಧಿಕಾರಕ್ಕೆ ಮಾಹಿತಿ ಸಿಕ್ಕರೂ, ಅದನ್ನು ರಾಜ್ಯಗಳು ದೃಢಪಡಿಸಿದ ಬಳಿಕವೇ ದತ್ತಾಂಶದಲ್ಲಿ ಸೇರಿಸುವ ನಿಯಮ ಪಾಲಿಸಾಗುತ್ತಿದೆ. ಈ ಪ್ರಕ್ರಿಯೆಯು ವೈಜ್ಞಾನಿಕ ವಿಧಾನದಲ್ಲೇ ನಡೆಯುತ್ತದೆ.

ಹುಲಿಯ ಮರಣೋತ್ತರ ಪರೀಕ್ಷಾ ವರದಿ, ಚಿತ್ರಗಳು, ವಿಧಿವಿಜ್ಞಾನ ವರದಿ ಹಾಗೂ ಮಾರ್ಗಸೂಚಿಯಲ್ಲಿ ಹೇಳಲಾಗಿರುವ ಇತರೆ ವರದಿಗಳನ್ನು ರಾಜ್ಯಗಳು ಪ್ರಾಧಿಕಾರಕ್ಕೆ ಕಳುಹಿಸಿಕೊಡಬೇಕಿದೆ. ಈ ವರದಿಗಳ ಆಧಾರದಲ್ಲಿ ಹುಲಿ ಸಾವಿಗೆ ನಿಖರ ಕಾರಣವನ್ನು ವಿಶ್ಲೇಷಿಸಲಾಗುತ್ತದೆ. ವಿಶ್ಲೇಷಣೆ ಮುಗಿಯುವವರೆಗೆ ಸಾವಿಗೆ ಕಾರಣವನ್ನು ನಿರ್ಧರಿಸುವುದಿಲ್ಲ. 2012ರಿಂದ 2022ರ ಅವಧಿಯಲ್ಲಿ ಶೇ 72ರಷ್ಟು ಪ್ರಕರಣಗಳಲ್ಲಿ ಹುಲಿಗಳ ಸಾವಿನ ಸ್ವರೂಪವನ್ನು ನಿರ್ಧರಿಸಲಾಗಿದೆ. ಉಳಿದ ಶೇ 28ರಷ್ಟು ಪ್ರಕರಣಗಳಲ್ಲಿ ಸಾವಿನ ಸ್ವರೂಪ ಇನ್ನಷ್ಟೇ ತಿಳಿಯಬೇಕಿದೆ.

ಆಧಾರ: ಕೇಂದ್ರ ಸರ್ಕಾರದ ಬಜೆಟ್ ದಾಖಲೆಗಳು, ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರದ ವರದಿಗಳು, ಹುಲಿ ಸ್ಥಿತಿಗತಿ ವರದಿಗಳು, ಅಮೃತ ಕಾಲದ ಹುಲಿ ಮುನ್ನೋಟ ವರದಿ

ಸಿನಿ ಬಿಟ್ಸ್

ಇನ್ನು ತೆರೆ ಮೇಲೆ ಸ್ಕ್ಯಾಮ್



ರಂಜನ್

ಶಿಕ್ಷಣ ವ್ಯವಸ್ಥೆ ಮತ್ತು ವಿದ್ಯಾರ್ಥಿಗಳ ಕುರಿತ ಕಥಾಹಂದರದ 'ಸ್ಕ್ಯಾಮ್ (1770)' ನಿರ್ಮಾಣವಾಗುತ್ತಿದೆ. ಇತ್ತೀಚೆಗೆ ಈ ಚಿತ್ರದ ಪೋಸ್ಟರ್ ಬಿಡುಗಡೆ ನಡೆಯಿತು.

ಡಿ.ಕ್ರಿಯೇಷನ್ಸ್ ಲಾಂಛನದಲ್ಲಿ ದೇವರಾಜ್ ಆರ್. ನಿರ್ಮಿಸಿರುವ ಈ ಚಿತ್ರವನ್ನು ವಿಕಾಸ್ ಪುಷ್ಪಗಿರಿ ನಿರ್ದೇಶಿಸಿದ್ದಾರೆ. 'ಪ್ರಸ್ತುತ ಶಿಕ್ಷಣ ವ್ಯವಸ್ಥೆಯಲ್ಲಿ ನಡೆಯುವ ಘಟನೆಗಳನ್ನು ಆಧಾರವಾಗಿಟ್ಟುಕೊಂಡು ಕಥೆ ಹೆಣೆದಿದ್ದೇವೆ' ಎಂದಿದ್ದಾರೆ ವಿಕಾಸ್ ಪುಷ್ಪಗಿರಿ.

ಡಿ.ಕ್ರಿಯೇಷನ್ಸ್ ಇತ್ತೀಚೆಗೆ 'ಆಕ್ಟ್-1978' ಮತ್ತು '19.20.21' ಎಂಬ ಚಿತ್ರಗಳನ್ನು ನೀಡಿತ್ತು. ದೇವರಾಜ್ ಆರ್. ಅವರ ನಿರ್ಮಾಣದ ಈ ಚಿತ್ರಕ್ಕೆ ಡಾ.ಇಂದು ನಟೇಶ್ ಹಾಗೂ ನೇತ್ರಾವತಿ ಅವರು ಕಥೆ ಬರೆದಿದ್ದಾರೆ. ಚಿತ್ರಕಥೆಯನ್ನು ಶಂಕರ್ ರಾಮನ್ ಹಾಗೂ ವಿಕಾಸ್ ಪುಷ್ಪಗಿರಿ ಬರೆದಿದ್ದಾರೆ. ಸಂಭಾಷಣೆ ಶಂಕರ್ ರಾಮನ್ ಅವರದು. ಸತೀಶ್ ಆರ್ಯನ್ ಸಂಗೀತ ನಿರ್ದೇಶನ, ಶೋಯೆಬ್ ಛಾಯಾಗ್ರಹಣ, ಸುರೇಶ್ ಆರ್ಮುಗಂ ಸಂಕಲನ, ಕಲೈ - ರಾಮು ನೃತ್ಯ ನಿರ್ದೇಶನ ಹಾಗೂ ಚಂದ್ರು ಬಂಡೆ ಸಾಹಸ ನಿರ್ದೇಶನವಿದೆ. ರಂಜನ್, ಬಿ.ಸುರೇಶ್, ಅವಿನಾಶ್, ಶ್ರೀನಿವಾಸಪ್ರಭು, ರಮೇಶ್ ಪಂಡಿತ್, ರಾಘು ಶಿವಮೊಗ್ಗ, ನಾರಾಯಣ ಸ್ವಾಮಿ, ಉಗ್ರಂ ಸಂದೀಪ್, ಹರಿಣಿ, ಹಂಸ, ಸುನೇತ್ರ ಪಂಡಿತ್, ಶೃತಿ ನಾಯಕ್ ತಾರಾಬಳಗದಲ್ಲಿದ್ದಾರೆ.

ವಿಷ್ಣುಪ್ರಿಯಾದಲ್ಲಿ ಶ್ರೇಯಸ್



ಶ್ರೇಯಸ್ ಕೆ. ಮಂಜು
ಪ್ರಿಯಾ ವಾರಿಯರ್

ರಾಣಾ ಚಿತ್ರದ ನಂತರ ಶ್ರೇಯಸ್ ಮಂಜು (ನಿರ್ಮಾಪಕ ಕೆ. ಮಂಜು ಪುತ್ರ) ಮತ್ತೆ ತೆರೆ ಮೇಲೆ ಕಾಣಿಸಿಕೊಳ್ಳುತ್ತಿದ್ದಾರೆ. ಆ ಚಿತ್ರದ ಹೆಸರು 'ವಿಷ್ಣುಪ್ರಿಯಾ'. ಶ್ರೇಯಸ್ ಅವರು ಚಿತ್ರರಂಗಕ್ಕೆ ಪರಿಚಯವಾದದ್ದು ವಿಷ್ಣು ಪಾತ್ರದ ಮೂಲಕವೇ.

ಚಿತ್ರದಲ್ಲಿ ನಾಯಕನ ಹೆಸರು ವಿಷ್ಣು, ನಾಯಕಿ ಪ್ರಿಯಾ (ಪ್ರಿಯಾ ವಾರಿಯರ್). 90ರ ದಶಕದ ಪ್ರೇಮಕಥೆಯೊಂದನ್ನು ಹೇಳುವ ಪ್ರಯತ್ನ ಇಲ್ಲಿದೆ. ಕೆ. ಮಂಜು ಅವರೇ ಈ ಚಿತ್ರದ ನಿರ್ಮಾಪಕರು. ಮಲಯಾಳಂನ ಖ್ಯಾತ ನಿರ್ದೇಶಕ ವಿ.ಕೆ. ಪ್ರಕಾಶ್ ಈ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳಿದ್ದಾರೆ. ಗೋಪಿಸುಂದರ್ ಅವರ ಸಂಗೀತವಿದೆ. ನಿರ್ದೇಶಕ ರವಿ ಶ್ರೀವತ್ಸ ಚಿತ್ರಕಥೆ ಹಾಗೂ ಸಂಭಾಷಣೆಗಳನ್ನು ಬರೆದಿದ್ದಾರೆ. ಅಚ್ಯುತ್ ಕುಮಾರ್, ಸುಚೇಂದ್ರ ಪ್ರಸಾದ್, ನಿಹಾಲ್ ತಾರಾಗಣದಲ್ಲಿದ್ದಾರೆ. 'ಚಿತ್ರ ಜೂನ್‌ನಲ್ಲಿ ತೆರೆ ಕಾಣಲಿದೆ. ಮಲಯಾಳಂನಲ್ಲೂ ಬಿಡುಗಡೆಯಾಗಲಿದೆ' ಎಂದರು ಮಂಜು.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ಪ್ರಕೃತಿ – ವಿಕೃತಿ

ಪ್ರಕೃತಿಯನವರತ ಮನುಜನ ತಿದ್ದುತಿರುವಂತೆ |
ವಿಕೃತಿಗೊಳಿಸುವನವನುಮ್ ಆಕೆಯಂಗಗಳ ||
ಭೂಕೃಷಿಕ ರಸತಂತ್ರಿ ಶಿಲ್ಪಿ ವಾಹನಯಂತ್ರಿ |
ವ್ಯಾಕೃತಿಸರೇನವಳ ? – ಮಂಕುತಿಮ್ಮ || 859 ||

ಪದ-ಅರ್ಥ: ಪ್ರಕೃತಿಯನವರತ = ಪ್ರಕೃತಿಯನು- + ಅನವರತ(ನಿರಂತರವಾಗಿ),ವಿಕೃತಿಗೊಳಿಸುವನವನುಮ್ = ವಿಕೃತಿಗೊಳಿಸುವನು + ಅವನುವ(ಅವನು), ಆಕೆಯಂಗಗಳ = ಆಕೆಯ + ಅಂಗಗಳ, ವ್ಯಾಕೃತಿಸರೇನವಳ = ವ್ಯಾಕೃತಿಸರೇನು(ವಿಕೃತಗೊಳಿಸರೇನ) + ಅವಳ.

ವಾಚ್ಯಾರ್ಥ: ಪ್ರಕೃತಿಯು ಮನುಷ್ಯನನ್ನು ಸದಾಕಾಲ ತಿದ್ದುತಿರುವಂತೆ, ಮನುಷ್ಯನು ಪ್ರಕೃತಿಯ ಅಂಗಗಳನ್ನು ವಿಕೃತಗೊಳಿಸುತ್ತಾನೆ. ಕೃಷಿಕ, ಭೂವಿಜ್ಞಾನಿ, ಶಿಲ್ಪಿ, ವಾಹನಗಳನ್ನು ನಿರ್ಮಿಸುವವನು ಇವರೆಲ್ಲ ಪ್ರಕೃತಿಯನ್ನು ವಿಕೃತಗೊಳಿಸುತ್ತಲೇ ಇರುತ್ತಾರೆ.

ವಿವರಣೆ: ಮಹಾತ್ಮಾ ಗಾಂಧೀಜಿ ಹೇಳಿದರು, "ಭೂಮಿಯು ನಮ್ಮ ಅಗತ್ಯತೆಗಳಿಗೆ ಸಾಕಷ್ಟು ಸಂಪನ್ಮೂಲಗಳನ್ನು ಹೊಂದಿದೆ ಆದರೆ ನಮ್ಮ ದುರಾಸೆಗಳಿಗಾಗಿ ಅಲ್ಲ". ಅವರ ಈ ಉಲ್ಲೇಖ ಪ್ರಕೃತಿ ಮತ್ತು ಪರಿಸರದ ಬಗ್ಗೆ ಅವರ ಕಾಳಜಿಯನ್ನು ಚಿತ್ರಿಸುತ್ತದೆ. ಈ ಕಗ್ಗ ಅದೇ ಕಾಳಜಿಯನ್ನು ವ್ಯಕ್ತಪಡಿಸುತ್ತದೆ. ಪ್ರಕೃತಿಯು ಸೃಷ್ಟಿಸುವ ಆಕರ್ಷಣೆ ಮನುಷ್ಯನಲ್ಲಿ ಹೊಸ ಹೊಸ ಹಸಿವುಗಳನ್ನು ಹುಟ್ಟು ಹಾಕುತ್ತದೆ. ಆ ಹಸಿವನ್ನು ತೀರಿಸಿಕೊಳ್ಳಲು ಮನುಷ್ಯ ಪ್ರಕೃತಿಯನ್ನೇ ವಿಕೃತಗೊಳಿಸುತ್ತಾನೆ. ಅದರ ಅಂಗಗಳಾದ ಗಾಳಿ, ನದಿ, ನೆಲ, ಪರ್ವತಗಳು, ಸಮುದ್ರ, ಗಿಡ-ಮರಗಳು ಇವೆಲ್ಲವನ್ನು ಹಾಳು ಮಾಡಿ ಬಿಡುತ್ತಾನೆ. ನಗರೀಕರಣದಿಂದ ಕೃಷಿ ಭೂಮಿ ಕಡಿಮೆಯಾಗುತ್ತಿದೆ. ಅದಕ್ಕೆ ಮನುಷ್ಯ ಅರಣ್ಯನಾಶಮಾಡಿ ನೆಲವನ್ನು ಕೃಷಿಗೆ ಪಡೆಯುತ್ತಿದ್ದಾನೆ. ಅರಣ್ಯನಾಶದಿಂದ ಭೂಮಿಯ ಉಷ್ಣತೆ ಹೆಚ್ಚಾಗುತ್ತಿದೆ. ಆಧುನಿಕ ಕೃಷಿಯಲ್ಲಿ ಅಪಾರ ಪ್ರಮಾಣದ ರಾಸಾಯನಿಕ ಗೊಬ್ಬರಗಳನ್ನು ಬಳಸಿ ಮುಂದೆ ಭೂಮಿ ಕೃಷಿಗೆ ಪ್ರಯೋಜನವಿಲ್ಲದಂಥ ಪರಿಸ್ಥಿತಿ ಬರುತ್ತಿದೆ. ನಮ್ಮ ಬದುಕಿಗೆ ಅನೇಕ ವಸ್ತುಗಳು ಬೇಕು. ಅದಕ್ಕಾಗಿ ತರತರಹದ ಕಾರ್ಖಾನೆಗಳು ಬರುತ್ತಿವೆ. ಅವುಗಳಿಂದ ಹೊರಬರುವ ರಸಾಯನಿಕ ವಸ್ತುಗಳು ನೆಲದಲ್ಲಿಳಿದು ನೀರಿನ ಮೂಲಗಳನ್ನೇ ಹಾಳು ಮಾಡುತ್ತಿವೆ. ನಮ್ಮ ನದಿಗಳನ್ನು ಅವು ಸೇರಿ ಕಲುಷಿತ ಮಾಡಿವೆ. ಇಂದು ನಮ್ಮ ದೇಶದ ಯಾವ ನದಿಯ ನೀರೂ ಮನುಷ್ಯನ ಬಳಕೆಗೆ ಅನರ್ಹವಾಗಿದೆ ಎಂಬ ವರದಿ ತಲ್ಲಣವನ್ನು ಸೃಷ್ಟಿಸುತ್ತದೆ. ನಮಗೆ ಲೋಹಗಳ ಅವಶ್ಯಕತೆ ಇದೆ. ಅದಕ್ಕಾಗಿ ಭೂಮಿಯ ಅಗೆತ ನಿರಂತರವಾಗಿದೆ. ವಾಹನಗಳ ಇಂಧನಕ್ಕಾಗಿ ನೆಲದ ಕೊರೆತ, ಅಗೆತ ಭೂಮಿಯನ್ನು ಬರಡಾಗಿಸುವ, ಪೊಳ್ಳಾಗಿಸುವ ದಿನಗಳು ದೂರವಿಲ್ಲ. ನಮ್ಮ ಅನಿಯಂತ್ರಿತ ಕಟ್ಟಡಗಳ ಅವಶ್ಯಕತೆ ಬೆಟ್ಟ, ಗುಡ್ಡಗಳನ್ನು ಸವರಿ ಹಾಕಿದೆ. ಹವಾನಿಯಂತ್ರಕಗಳ ಬಳಕೆ ನಮ್ಮನ್ನು ರಕ್ಷಿಸುವ ಓಜೋನ್ ಪದರವನ್ನೇ ಕರಗಿಸುತ್ತಿದೆ. ಇದೊಂದು ವಿಚಿತ್ರ ಸ್ಥಿತಿ. ಪ್ರಕೃತಿ ಹೊಸ ಆಸೆಗಳನ್ನು ಪ್ರೇರೇಪಿಸುತ್ತದೆ. ಅವುಗಳನ್ನು ಪಡೆದುಕೊಳ್ಳಲು ಮನುಷ್ಯ ಪ್ರಕೃತಿಯನ್ನೇ ವಿಕೃತಗೊಳಿಸುತ್ತಿದ್ದಾನೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಸೋಮವಾರ ಏಪ್ರಿಲ್ 10, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ವಸಂತ ಋತು ತಿಥಿ: ಚೈತ್ರ ಕೃಷ್ಣ ಚತುರ್ಥಿ ಗಂ. 08-38 ನಕ್ಷತ್ರ: ಅನುರಾಧ ಗಂ. 13-39 ಯೋಗ: ವ್ಯತೀಪಾತ ಗಂ. 20-11, ಕರಣ: ಬಾಲವ ಗಂ. 08-38, ಮೀನ ಮಾಸದ 26ನೇ ದಿನ, ಮಳೆನಕ್ಷತ್ರ: ರೇವತಿ 3
ರಾಹುಕಾಲ : ಬೆಳಿಗ್ಗೆ 07-30 –09-00
ಸೂರ್ಯೋದಯ : 06-24 ಸೂರ್ಯಾಸ್ತ : 06-39
ಮುಸ್ಲಿಂ ದಿನಾಂಕ : 18 ರಂಜಾನ್
ಅದೃಷ್ಟ ಸಂಖ್ಯೆ : 8, 3

ಮೇಷ: ಜೀವನದಲ್ಲಿ ಹೊಸ ರೀತಿಯ ಚಲನೆ ಇಲ್ಲದೆ ಬಂದ ಬೇಸರವು ದಿನಚರಿಯ ಬದಲಾವಣೆಯಿಂದ ನಿವಾರಣೆಯಾಗಬಹುದು. ದೌರ್ಬಲ್ಯವನ್ನು ನೀವಾಗಿಯೇ ಇತರರ ಮುಂದೆ ಪ್ರದರ್ಶಿಸಿಕೊಂಡು ಕಷ್ಟಕ್ಕೊಳಗಾಗಬೇಡಿ.

ವೃಷಭ: ಜನರ ಅಭಿಪ್ರಾಯವನ್ನು ಸಂಗ್ರಹಿಸಲು ಹೋಗಿ ಅದರಿಂದ ಅಪಮಾನಕ್ಕೊಳಗಾಗುವ ಸಾಧ್ಯತೆ ಇದೆ. ಅಪರಾತ್ರಿಯ ವೇಳೆ ಸಂಚರಿಸುವಾಗ ನಿಶಾಚರಿಗಳಿಂದ ತೊಂದರೆಗೊಳಗಾಗುವ ಸಾಧ್ಯತೆಗಳು ಇವೆ.

ಮಿಥುನ: ಕರಗತವಾಗಿರುವ ಕೆಲಸವನ್ನೇ ಇಂದು ನಿಮಗೆ ಮಾಡಲು ಹೇಳಿದಾಗ ಗಡಿಬಿಡಿಯ ಕಾರಣವಾಗಿ ವ್ಯತ್ಯಾಸಗಳಾಗಬಹುದು. ಸಮಾರಂಭದಲ್ಲಿ ಮಾಡಿದ ಭೋಜನವು ವ್ಯತಿರಿಕ್ತವಾದ ಪರಿಣಾಮವಾಗುವುದು.

ಕರ್ಕಾಟಕ: ಚಾರಣಿಗರಿಗೆ ಬಯಸಿದ ಸ್ಥಾನಕ್ಕೆ ತೆರಳುವ ಅವಕಾಶವು ಸಿಗದೆಯೆ ಬಹಳ ಬೇಸರವಾಗುತ್ತದೆ. ಅನ್ನ ಸಂತರ್ಪಣೆಯನ್ನು ಮಾಡುವುದರಿಂದ ಸಂತೃಪ್ತಿ ಹೊಂದುವಿರಿ. ಕೃತಕ ಜಾಹೀರಾತುಗಳಿಗೆ ಮಾರುಹೋಗದಿರಿ.

ಸಿಂಹ: ಪರಿಶುದ್ಧತೆ ಅರಸಿ ನೀವು ಮಾಡಿದ ಸಂಶೋಧನೆಯು ಜಗದ್ವಿಖ್ಯಾತಗೊಳ್ಳುತ್ತದೆ. ಉನ್ನತ ವ್ಯಾಸಂಗದ ವಿಚಾರದಲ್ಲಿ ನಿಮ್ಮ ನಿಲುವನ್ನು ನಿಮ್ಮ ನಿಕಟವರ್ತಿ ಉಪಾಧ್ಯಾಯರಲ್ಲಿ ತಿಳಿಸಿ ಅವರ ಅಭಿಪ್ರಾಯ ಪಡೆದುಕೊಳ್ಳಿ.

ಕನ್ಯಾ: ಇತಿಹಾಸ ಅಧ್ಯಯನವನ್ನು ಮಾಡುವವರಿಗೆ ಬ್ರಿಟಿಷರ ಕಾಲದ ಭಾರತದ ಹೋರಾಟವನ್ನು ಆಳವಾಗಿ ತಿಳಿದು ರೋಮಾಂಚನವಾಗುವುದು. ಸಕಲ ವಿಘ್ನ ಕಳೆದುಕೊಂಡು ಕಾರ್ಯಸಾಧನೆಗಾಗಿ ಗಣಪತಿಯನ್ನು ಪ್ರಾರ್ಥಿಸಿ.

ತುಲಾ: ದೂರದ ಬೆಟ್ಟ ಕಣ್ಣಿಗೆ ನುಣ್ಣಗೆ ಎನ್ನುವಂತೆ ಇಂದೊಬ್ಬರ ದಿನದ ಚಟುವಟಿಕೆಗಳನ್ನು ನೋಡಿ ಕಲ್ಪನೆಯ ವಿರುದ್ಧ ರೀತಿಯಲ್ಲಿರುವುದು ಕಂಡು ಅತ್ಯಾಶ್ಚರ್ಯ ಹೊಂದುವಿರಿ. ಸಂಗಾತಿಯೊಂದಿಗೆ ವಿರುದ್ಧ ಅಭಿಪ್ರಾಯ ಬೇಡ.

ವೃಶ್ಚಿಕ: ಜೀವನ ಉತ್ತಮ ಸ್ಥಾನದಲ್ಲಿರಲು ಕಾರಣೀಭೂತರಾದವರನ್ನು ಯಾವುದೇ ಕಾರಣಕ್ಕೂ ನಿರ್ಲಕ್ಷಿಸಬೇಡಿ. ಮಧುರ ಖಾದ್ಯಗಳ ಉತ್ಪಾದಕರಿಗೆ ಬೇಡಿಕೆ ಹೆಚ್ಚಾಗುವುದರಲ್ಲಿ ಸಂಶಯವಿಲ್ಲ.

ಧನು: ತಂದೆಯ ಅನಿರೀಕ್ಷಿತ ಪ್ರಶ್ನಾಸರಣಿಗೆ ಬೆಚ್ಚಿಬೀಳುವ ಸಾಧ್ಯತೆ ಇದೆ. ನೀವು ಶಿಕ್ಷಕರಾಗಿದ್ದರೆ ಗಿಳಿಪಾಠದಿಂದ ಯಾವುದೇ ಪ್ರಯೋಜನವಿಲ್ಲ ಎಂಬುದನ್ನು ಮನದಟ್ಟು ಮಾಡಿಕೊಳ್ಳಬೇಕು. ದೂಳಿನಿಂದ ಸಮಸ್ಯೆಗಳಾಗಬಹುದು.

ಮಕರ: ಬೇಳೆ ಕಾಳುಗಳನ್ನು ಹೆಚ್ಚಾಗಿ ಸೇವಿಸುವುದರ ಮೂಲಕ ಉಂಟಾಗಿರುವ ನಿಶ್ಶಕ್ತಿಯನ್ನು ನಿವಾರಿಸಿಕೊಳ್ಳಬಹುದು. ಉಳಿತಾಯದ ಹೆಸರಿನಲ್ಲಿ ದೊಡ್ಡ ದೊಡ್ಡ ಮೇಳಗಳಲ್ಲಿ ಖರೀದಿ ಮಾಡಲು ಹೋಗಿ ಮೋಸ ಹೋಗದಿರಿ.

ಕುಂಭ: ಉಪಯುಕ್ತ ಮಾಹಿತಿಗಳನ್ನು ಬಂಧು ಮಿತ್ರರೊಂದಿಗೆ ಹಂಚಿಕೊಳ್ಳುವುದರಿಂದ ಪ್ರಶಂಸೆಗೆ ಪಾತ್ರರಾಗುವಿರಿ. ಅಮೂಲ್ಯ ವಸ್ತುವಿನ ಪ್ರಾಪ್ತಿಯಿಂದ ಸಂತೋಷ ಹೊಂದುವಿರಿ. ಸಣ್ಣ ವಿಷಯಗಳಿಂದ ದುಃಖ ಹೊಂದಬೇಡಿ.

ಮೀನ: ಸುಖಕರ ಜೀವನ ನಡೆಸುತ್ತಿರುವಾಗ ಸಣ್ಣಪುಟ್ಟ ಕಷ್ಟಗಳು ಬಂದದ್ದೇ ಹೆಚ್ಚಾಗಿ ಕಾಣಬಹುದು. ಗೃಹ ಪ್ರವೇಶವನ್ನು ಮುಂದುಹಾಕುವುದು ಅನಿವಾರ್ಯವಾಗಬಹುದು. ತವರಿನ ಸೆಳೆತ ಹೆಚ್ಚಾಗುತ್ತದೆ.

ಪದಬಂಧ 5284


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಬೇಧಿಯಾಗಲು ಕೊಡುವ ಔಷಧ (4)
3.ಮಧುರವಾಗಿರುವ ತುಟಿ (3)
4.ಜೊತೆಯಲ್ಲಿ ವಾಸಿಸುವಿಕೆ (4)
6.ಪಚ್ಚೆಯ ಬಣ್ಣ (3)
8.ಮೊಟ್ಟೆಯಿಂದ ಹುಟ್ಟಿದುದುದು (3)
9.ಮಂದಿಗೆಲ್ಲ ಯಜಮಾನ (5)
10.ಮೊದಲನೆಯ ವಿಭಕ್ತಿ (3)
11.ಆತಂಕ ಹುಟ್ಟಿಸಿದ ಯಮನಿಲ್ಲಿ ತಿರುಗಿದ್ದಾನೆ (3)
13.ಪದಗಳ ಅರ್ಥವನ್ನು ವಿವರಿಸುವ ಗ್ರಂಥ (4)
15.ಬಣವೆ ಹಾಕುವಾಗ ಪಟ್ಟಿರುವ ತೊಂದರೆ (3)
16.ಮರದಲ್ಲಿರುವ ಹೆಬ್ಬಾಗಿಲು (4)

ಮೇಲಿಂದ ಕೆಳಕ್ಕೆ

1.ಅಗಲಿಕೆ ಈ ತರಹ ಬಂದಿದೆ (3)
2.ಕನಸಲ್ಲಿರುವ ಗಲೀಜು (2)
3.ನಿಷೇಧಿಸಿರುವ ಸ್ಥಳಕ್ಕೆ ಪ್ರವೇಶ ಮಾಡುವುದು (7)
5.ಸಮಾಜವನ್ನು ತಿದ್ದುವುದು (7)
7.ದುಃಖಾಂತವಾದ ನಾಟಕ (5)
8.ಪರೀಕ್ಷೆಯಲ್ಲಿ ನೀಡುವ ಗುಣಾಂಕ (2)
9.ಶೇಖರಣೆ ಅಥವಾ ಆದಾಯ (2)
12.ಕೊನೆಗೆ ಕ್ಷಾಮ ಬಂದಾಗ ನೋಡಿದ ಆಕಾಶ (3)
14.ಮನೋನಿಗ್ರಹವಿದು (2)



5283ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ವಿತರಕ 3.ಸನ್ಮತಿ
5.ಮರುಕ 7.ಉಪಾಯ
8.ಕಾಲಹರಣ 11.ಸಾರಣೆ
12.ಮಲ್ಲಿಗೆ 15.ನಗರ
16.ಸಮುದಾಯ

ಮೇಲಿಂದ ಕೆಳಕ್ಕೆ:
1.ವಿರಾಮ 2.ಕಫ
3.ಸಮಯ 4.ತಿರುಮಂತ್ರ
6.ಕಯಿಕಾ 7.ಉದಾಹರಣೆ
9.ಣರಮ 10.ಉಪಮಾನ
11.ಸಾವಿರ 13.ಗೆಳೆಯ
14.ಮೋಸ

ಸುಡೊಕು 5670

		1		7		6		2
		5	2		9			
2	8			1			9	5
	5		7			8		
	2			8		5		9
8		6		9				
6				5		9		7
		8					5	
5		3		6		1		8

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5669 ಸುಡೊಕು

9	2	1	6	5	7	8	4	3
8	5	7	3	4	9	6	2	1
6	4	3	2	1	8	9	5	7
1	3	2	5	9	4	7	8	6
5	8	6	1	7	2	3	9	4
7	9	4	8	3	6	2	1	5
3	1	8	9	6	5	4	7	2
2	7	5	4	8	3	1	6	9
4	6	9	7	2	1	5	3	8

ಸ್ವಾಭಿಮಾನಕ್ಕೆ ಪೆಟ್ಟು: ಕಡೂರಿನಲ್ಲಿ ಸ್ವಾಭಿಮಾನಿ ಕಾರ್ಯಕರ್ತರ ಸಮಾವೇಶದಲ್ಲಿ ಘೋಷಣೆ

ಪಕ್ಷೇತರವಾಗಿ ಸ್ಪರ್ಧೆ: ವೈ.ಎಸ್.ವಿ ದತ್ತ

ಪ್ರಜಾವಾಣಿ ವಾರ್ತೆ

ಕಡೂರು: 'ಕಾಂಗ್ರೆಸ್ ಪಕ್ಷವು ಟಿಕೆಟ್ ನಿರಾಕರಿಸಿ ನನ್ನ ಸ್ವಾಭಿಮಾನಕ್ಕೆ ಪೆಟ್ಟು ನೀಡಿದೆ, ಈ ಚುನಾವಣೆಯಲ್ಲಿ ಪಕ್ಷೇತರನಾಗಿ ಸ್ಪರ್ಧಿಸಲು ನಿರ್ಧರಿಸಿದ್ದೇನೆ. ಕಡೂರು ಕ್ಷೇತ್ರದ ಸ್ವಾಭಿಮಾನವನ್ನು ಇಡೀ ರಾಜ್ಯಕ್ಕೆ ತೋರಿಸುವ ಛಲ ತೊಟ್ಟಿದ್ದೇನೆ' ಎಂದು ಮಾಜಿ ಶಾಸಕ ವೈ.ಎಸ್.ವಿ. ದತ್ತ ಪ್ರಕಟಿಸಿದರು.

ಪಟ್ಟಣದ ವೆಂಕಟೇಶ್ವರ ಕಲ್ಯಾಣ ಮಂದಿರದಲ್ಲಿ ಭಾನುವಾರ ಏರ್ಪಡಿಸಿದ್ದ ಸ್ವಾಭಿಮಾನಿ ಕಾರ್ಯಕರ್ತರ ಸಮಾವೇಶದಲ್ಲಿ ಮಾತನಾಡಿದ ಅವರು, 'ಈ ಬಾರಿ ಕ್ಷೇತ್ರದಲ್ಲಿ ವಿಶೇಷ ಪರಿಸ್ಥಿತಿ ತಲೆದೋರಿದೆ. ಐತಿಹಾಸಿಕ ಬದಲಾವಣೆಗೆ ಕ್ಷೇತ್ರ ಸನ್ನದ್ಧವಾಗಿದೆ. ಅದಕ್ಕೆ ಪೂರಕವಾಗಿ ನಾನು 50 ವರ್ಷಗಳ ಜೆಡಿಎಸ್ ನಂಟು ಬಿಟ್ಟು ಕಾಂಗ್ರೆಸ್ ಸೇರಿದೆ. ಟಿಕೆಟ್ ಸಿಗುತ್ತದೆ ಎಂಬ ವಿಶ್ವಾಸವನ್ನು ಪಕ್ಷ ಹುಸಿ ಮಾಡಿದೆ. ಅಭಿಮಾನಿಗಳು ಅದನ್ನು ಸ್ವಾಭಿಮಾನಕ್ಕೆ ಬಿದ್ದ ಪೆಟ್ಟು ಎಂದೇ ಭಾವಿಸಿದ್ದಾರೆ. ಹೀಗಾಗಿ, ಪಕ್ಷೇತರವಾಗಿ ಕಣಕ್ಕಿಳಿಯಲು ತೀರ್ಮಾನಿಸಿದ್ದೇನೆ' ಎಂದರು.



ಕಡೂರಿನಲ್ಲಿ ಪಕ್ಷೇತರರಾಗಿ ಸ್ಪರ್ಧಿಸುವ ಘೋಷಣೆ ಮಾಡಿದ ಮಾಜಿ ಶಾಸಕ ವೈ.ಎಸ್.ವಿ. ದತ್ತ ಅವರಿಗೆ ಎಮ್ಮೆದೊಡ್ಡಿ ವೀರಶೈವ ಸಮಾಜದ ಮುಖಂಡ ತಿಪ್ಪೇಶ್ ₹2 ಲಕ್ಷದ ಚೆಕ್ ನೀಡಿದರು.

'ಜನರ ಬಳಿ ತೆರಳಿ ಧನಸಹಾಯ ಜೊತೆಗೆ ಮತ ಭಿಕ್ಷೆ ಬೇಡುತ್ತೇನೆ. ಸ್ವಾಭಿಮಾನ ಎಂದರೆ ಏನು ಎಂಬುದನ್ನು ಅಭಿಮಾನಿಗಳು ತೋರಿಸಲಿದ್ದಾರೆ. ನಾಮಪತ್ರ ಸಲ್ಲಿಕೆ ಇತ್ಯಾದಿ ಕುರಿತು ಅಭಿಮಾನಿಗಳೊಂದಿಗೆ ಇದೇ 13ರಂದು ಚರ್ಚಿಸಿ ನಿರ್ಧರಿಸುತ್ತೇನೆ' ಎಂದರು.

'ಈಗ ಅಭ್ಯರ್ಥಿ ಆಯ್ಕೆಗೆ ಮಾನದಂಡ ಶುರುವಾಗುವುದೇ ಮೊದಲು ಜಾತಿ, ನಂತರ ಹಣಬಲದಿಂದ. ಆದರೆ, ನನಗೆ ಜಾತಿ, ಹಣ ಬಲ ಎರಡೂ ಇಲ್ಲ. ಇರುವುದು ಜನರ ಪ್ರೀತಿ ಮಾತ್ರ. ನನಗೆ ಕಾಂಗ್ರೆಸ್ ಟಿಕೆಟ್ ಕೊಡಲಿಲ್ಲ ಎಂದು ತಿಳಿದು ಕೆಲವರು ಪಟಾಕಿ ಸಿಡಿಸಿ ಸಂಭ್ರಮಿಸಿದರು. ಇದು ಪ್ರಸ್ತುತ ರಾಜಕಾರಣದ ರೀತಿ' ಎಂದು ಬೇಸರ ವ್ಯಕ್ತಪಡಿಸಿದರು.

ಸುಳ್ಳು ಸುದ್ದಿ ಹಬ್ಬಿಸಿದ್ದರು: 'ಕಳೆದ ಬಾರಿ ಚುನಾವಣೆಯಲ್ಲಿ ನಾನು ಮತ ಚಲಾಯಿಸಿ ಹೊರಬಂದಾಗ, ನನ್ನ ಪತ್ನಿ ನಿಧನರಾಗಿದ್ದಾರೆ ಎಂದು ಕೆಲವರು ಸುಳ್ಳು ಸುದ್ದಿ ಹಬ್ಬಿಸಿದ್ದರು. ನನ್ನನ್ನು ಸಾಕಿ ಬೆಳೆಸಿದ್ದ ಸಹೋದರಿ ನಾನು ಕ್ಷೇತ್ರದಲ್ಲಿ ಪಾದಯಾತ್ರೆ ಮಾಡುವ ಸಮಯದಲ್ಲಿ ನಿಧನರಾದರು. ಕುಟುಂಬದವರ ಯೋಗಕ್ಷೇಮ ವಿಚಾರಿಸಲೂ ಸಮಯವಾಗುತ್ತಿರಲಿಲ್ಲ. ಅಷ್ಟರಮಟ್ಟಿಗೆ ಕೇತ್ರದಲ್ಲಿ ತೊಡಗಿಸಿಕೊಂಡಿದ್ದೆ. ಅಭಿಮಾನಿಗಳೇ ನನ್ನ ಕುಟುಂಬ' ಎಂದು ದತ್ತ ಭಾವುಕರಾದರು.

ಸಭೆಯಲ್ಲಿ ಹಣ ಸಂಗ್ರಹ

'ಗಾಂಧೀಜಿಯಿಂದ ಪ್ರೇರಿತನಾಗಿ ಸರಳತೆ, ಅಹಿಂಸೆ ಅಳವಡಿಸಿಕೊಂಡಿದ್ದೇನೆ. ಅಂಬೇಡ್ಕರ್ ರಚಿಸಿದ ಸಂವಿಧಾನದ ಆಶಯಗಳಿಗೆ ಬದ್ಧನಾಗಿದ್ದೇನೆ. ಅಭಿಮಾನಿಗಳ ತೀರ್ಮಾನವೇ ಅಂತಿಮ, ಅವರೇ ಈ ನಿರ್ಧಾರಕ್ಕೆ ಪ್ರೇರಣೆ' ಎಂದು ಹೇಳಿ ದತ್ತ ಅವರು ಟವಲ್ ಚಾಚಿದಾಗ ಹಲವು ಅಭಿಮಾನಿಗಳು ಧನ ಸಹಾಯ ನೀಡಿದರು. ಹಾಲಪ್ಪ ಎಂಬುವರು ₹50 ಸಾವಿರ ನೀಡಿದರೆ, ಎಮ್ಮೆದೊಡ್ಡಿಯ ತಿಪ್ಪೇಶ್ ಎಂಬುವರು ₹ 2 ಲಕ್ಷದ ಚೆಕ್ ನೀಡಿದರು.

ದತ್ತಗೆ ಕರೆ ಮಾಡಿದ ಸಿದ್ದರಾಮಯ್ಯ

ಟಿಕೆಟ್ ಸಿಗದ ಕಾರಣಕ್ಕೆ ತೀವ್ರ ಅಸಮಾಧಾನಗೊಂಡಿರುವ ವೈ.ಎಸ್.ವಿ. ದತ್ತ ಅವರಿಗೆ ಕರೆ ಮಾಡಿ ಸಿದ್ದರಾಮಯ್ಯ ಮಾತನಾಡಿದರು.

ಟಿಕೆಟ್ ನೀಡಿರುವ ಆನಂದ್ ಪರ ಕೆಲಸ ಮಾಡುವಂತೆಯೂ ಕಿವಿಮಾತು ಹೇಳಿದರು. ಅಲ್ಲದೆ, ಮುಂದಿನ ದಿನಗಳಲ್ಲಿ ಸೂಕ್ತ ಸ್ಥಾನಮಾನ ನೀಡುವುದಾಗಿ ದತ್ತಾ ಅವರಿಗೆ ಭರವಸೆ ನೀಡಿದರು.

ಸ್ವತಂತ್ರ ಅಭ್ಯರ್ಥಿಯಾಗಿ ಸೌಭಾಗ್ಯ ಬಸವರಾಜನ್ ಕಣಕ್ಕೆ

ತಪ್ಪಿದ 'ಕೈ' ಟಿಕೆಟ್, ಎಸ್.ಕೆ. ಬಸವರಾಜನ್ ಬಂಡಾಯ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಕಾಂಗ್ರೆಸ್ ಟಿಕೆಟ್ ಕೈತಪ್ಪಿದ್ದರಿಂದ ಬಂಡಾಯ ಎದ್ದಿರುವ ಮಾಜಿ ಶಾಸಕ ಎಸ್.ಕೆ. ಬಸವರಾಜನ್, ಪತ್ನಿ ಸೌಭಾಗ್ಯ ಅವರನ್ನು ಚಿತ್ರದುರ್ಗ ಕ್ಷೇತ್ರದಿಂದ ಸ್ವತಂತ್ರ ಅಭ್ಯರ್ಥಿಯನ್ನಾಗಿ ಚುನಾವಣೆಯ ಕಣಕ್ಕೆ ಇಳಿಸುವುದಾಗಿ ಘೋಷಿಸಿದರು.

'ಕಾಂಗ್ರೆಸ್ ಟಿಕೆಟ್ ಸಿಗುವ ಭರವಸೆ ಇತ್ತು. ಪಕ್ಷದ ಮುಖಂಡರನ್ನು ಭೇಟಿ ಮಾಡಿ ಚರ್ಚಿಸಿದ್ದೆ. ಟಿಕೆಟ್ ಕೈತಪ್ಪಿದ ಬಳಿಕ ಕ್ಷೇತ್ರದ ಬೆಂಬಲಿಗರು ಹಾಗೂ ಹಿತೈಷಿಗಳ ಸಭೆ ನಡೆಸಿ ಅಭಿಪ್ರಾಯ ಸಂಗ್ರಹಿಸಿದ್ದು, ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷರೂ ಆಗಿರುವ ಪತ್ನಿ ಸೌಭಾಗ್ಯ ಅವರನ್ನು ಕಣಕ್ಕಿಳಿಸಲು ತೀರ್ಮಾನಿಸಲಾಯಿತು' ಎಂದು ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ನಾವಿಬ್ಬರೂ ಮೂರು ದಶಕಗಳಿಂದ ರಾಜಕೀಯದಲ್ಲಿದ್ದೇವೆ. ಕ್ಷೇತ್ರದ ಜನರ ಜೊತೆಗೆ ನಿರಂತರ ಸಂಪರ್ಕ ಇಟ್ಟುಕೊಂಡಿದ್ದೇವೆ. ಜನರ ಕಷ್ಟ, ಸುಖಕ್ಕೆ ಸ್ಪಂದಿಸಿದ್ದೇವೆ. ನಮ್ಮ ಕುಟುಂಬ ಚುನಾವಣೆಗೆ ಸ್ಪರ್ಧಿಸಬೇಕು ಎಂಬುದು ಜನರ ಅಪೇಕ್ಷೆ. ಚುನಾವಣೆಯಲ್ಲಿ ಗೆಲ್ಲುವ ಸಂಪೂರ್ಣ ವಿಶ್ವಾಸವಿದೆ' ಎಂದರು.

'ವಿಧಾನಪರಿಷತ್ ಮಾಜಿ ಸದಸ್ಯ ಜಿ.ರಘು ಆಚಾರ್ ಮನೆಗೆ ಧಾವಿಸಿ ಜೆಡಿಎಸ್‌ಗೆ ಆಹ್ವಾನ ನೀಡಿದರು. ಸೌಭಾಗ್ಯ ಅವರನ್ನು ಹೊಸದುರ್ಗ ಅಥವಾ ಹಿರಿಯೂರು ಕ್ಷೇತ್ರಗಳಲ್ಲಿ ಕಣಕ್ಕಿಳಿಸಲು ಸಲಹೆ ನೀಡಿದರು. ಸ್ವಕ್ಷೇತ್ರ ಬಿಟ್ಟು ಇನ್ನೆಲ್ಲೋ ಸ್ಪರ್ಧಿಸಲು ನಮಗೆ ಇಷ್ಟವಿಲ್ಲ. ಚುನಾವಣೆಗೆ ಹಣವೇ ಮುಖ್ಯ ಆಗುವುದಿಲ್ಲ' ಎಂದರು.

ಎಂತಹ ಕಷ್ಟ ಕಾಲದಲ್ಲಿಯೂ ಕ್ಷೇತ್ರದ ಜನರು ಕುಟುಂಬದ ಕೈಬಿಟ್ಟಿಲ್ಲ. ಜನರ ಅಪೇಕ್ಷೆ ಮೇರೆಗೆ ಸ್ಪರ್ಧಿಸಲು ತೀರ್ಮಾನಿಸಿದ್ದೇವೆ.
ಸೌಭಾಗ್ಯ ಬಸವರಾಜನ್
ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷೆ

ಸೌಭಾಗ್ಯ ಬಸವರಾಜನ್ ಮಾತನಾಡಿ, '1993ರಲ್ಲಿ ಮೊದಲ ಬಾರಿಗೆ ಗ್ರಾಮ ಪಂಚಾಯಿತಿಗೆ ಆಯ್ಕೆ ಆಗಿದ್ದೆ. ಬಳಿಕ ತಾಲ್ಲೂಕು, ಜಿಲ್ಲಾ ಪಂಚಾಯಿತಿಗೆ ಆಯ್ಕೆಯಾಗಿದ್ದು, ಜಿಲ್ಲಾ ಪಂಚಾಯಿತಿ ಅಧ್ಯಕ್ಷೆಯಾಗಿದ್ದೆ. ಈವರೆಗೆ ಯಾವುದೇ ಚುನಾವಣೆಯಲ್ಲಿ ಸೋತಿಲ್ಲ. ಹಿತೈಷಿಗಳ ಒತ್ತಾಯದ ಮೇರೆಗೆ ಪತಿಯ ಬದಲು ನಾನು ಸ್ವತಂತ್ರ ಅಭ್ಯರ್ಥಿ ಆಗುತ್ತಿದ್ದೇನೆ' ಎಂದು ತಿಳಿಸಿದರು.

'ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಮೀಸಲಾತಿ ಇರುವ ಕಾರಣಕ್ಕೆ ಮಹಿಳೆಯರನ್ನು ಕರೆತಂದು ಚುನಾವಣಾ ಕಣಕ್ಕೆ ನೂಕಲಾಗುತ್ತದೆ. ಆದರೆ, ವಿಧಾನಸಭೆ ಚುನಾವಣೆಯಲ್ಲಿ ಅವಕಾಶ ಸಿಗುವುದೇ ಕಷ್ಟ. 2018ರ ಚುನಾವಣೆಯಲ್ಲಿ ಸ್ಪರ್ಧಿಸಲು ಪ್ರಯತ್ನಿಸಿ ವಿಫಲರಾಗಿದ್ದೆವು. ಈ ಬಾರಿ ಸ್ಪರ್ಧಿಸಲಿದ್ದೇನೆ' ಎಂದು ಅವರು ವಿವರಿಸಿದರು.

ಟಿಕೆಟ್ ಹರಾಜು ಆರೋಪ

ಕಾಂಗ್ರೆಸ್ ಪಕ್ಷವು ವಿಧಾನಸಭೆ ಚುನಾವಣೆಯ ಟಿಕೆಟ್ ಹರಾಜು ಹಾಕಿದೆ. ಅಭ್ಯರ್ಥಿಯೊಬ್ಬರು ಚುನಾವಣೆಯಲ್ಲಿ ಖರ್ಚು ಮಾಡುವಷ್ಟು ಹಣವನ್ನು ಟಿಕೆಟ್‌ಗೆ ವ್ಯಯಿಸಿದ್ದಾರೆ ಎಂದು ಮಾಜಿ ಶಾಸಕ ಎಸ್.ಕೆ.ಬಸವರಾಜನ್ ಆರೋಪಿಸಿದರು.

ಕಾಂಗ್ರೆಸ್‌ನ ಪ್ರಾಥಮಿಕ ಸದಸ್ಯತ್ವಕ್ಕೆ ಅಧಿಕೃತವಾಗಿ ರಾಜೀನಾಮೆ ನೀಡಲಿದ್ದೇನೆ.
ಎಸ್.ಕೆ.ಬಸವರಾಜ್, ಮಾಜಿ ಶಾಸಕ

'ಪಕ್ಷದ ಟಿಕೆಟ್ ಹರಾಜು ಹಾಕಿ ಕೂಗಿರುವ ಪ್ರಕ್ರಿಯೆ ನಡೆದಿದೆ ಎಂಬುದನ್ನು ಕಾಂಗ್ರೆಸ್‌ನವರೇ ಹೇಳುತ್ತಿದ್ದಾರೆ. ಈ ಬಗ್ಗೆ ಕೆಪಿಸಿಸಿ ಅಂಗಳದಲ್ಲಿಯೇ ಚರ್ಚೆಗಳು ನಡೆಯುತ್ತಿವೆ' ಎಂದು ದೂರಿದರು.

'ಕಾಂಗ್ರೆಸ್ ಟಿಕೆಟ್ ಕೋರಿ ಕೆಪಿಸಿಸಿಗೆ ಅರ್ಜಿ ಸಲ್ಲಿಸಿದ್ದೆ. ಮಲ್ಲಿಕಾರ್ಜುನ ಖರ್ಗೆ, ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಸೇರಿ ಅನೇಕರನ್ನು ಭೇಟಿಯಾಗಿ ಚರ್ಚಿಸಿದ್ದೆ. ಎಲ್ಲರೂ ಟಿಕೆಟ್ ಭರವಸೆ ನೀಡಿದ್ದರು. ಆದರೂ ಟಿಕೆಟ್ ಕೈತಪ್ಪಿತು' ಎಂದು ಬೇಸರ ವ್ಯಕ್ತಪಡಿಸಿದರು.

ರಾಹುಲ್ ರ‍್ಯಾಲಿ: ಪ್ರಿಯಾಂಕಾ ಕಚೇರಿ ಸಿಬ್ಬಂದಿ ಪರಿಶೀಲನೆ

ಕೋಲಾರ: ರಾಹುಲ್ ಗಾಂಧಿ ನೇತೃತ್ವದಲ್ಲಿ ಏ.16ರಂದು ಇಲ್ಲಿ ನಡೆಯುವ 'ಜೈ ಭಾರತ್' ಪ್ರತಿಭಟನಾ ರ‍್ಯಾಲಿ ಸಿದ್ಧತೆಗಳನ್ನು ಪ್ರಿಯಾಂಕಾ ಗಾಂಧಿ ಕಚೇರಿ ಸಿಬ್ಬಂದಿ ಜಯಮಂಗಲ್ ಹಾಗೂ ತಂಡದವರು ಭಾನುವಾರ ವೀಕ್ಷಿಸಿದರು.

ನಗರದ ಟಮಕದ 11 ಎಕರೆ ಮೈದಾನದಲ್ಲಿ ನಿರ್ಮಿಸಿರುವ ಪೆಂಡಾಲ್‌ಗೆ ಭೇಟಿ ನೀಡಿದ ಸಿಬ್ಬಂದಿ ಕೆಲ ಸಲಹೆ ನೀಡಿದರು. ವೇದಿಕೆ ಹಿಂಬದಿ ನಿರ್ಮಿಸಿರುವ ಹೆಲಿಪ್ಯಾಡ್ ವೀಕ್ಷಿಸಿದರು. ಕೆಲ ದಿನಗಳ ಹಿಂದೆ ರಾಹುಲ್ ಗಾಂಧಿ ಅವರ ಕಚೇರಿಯ ಸಿಬ್ಬಂದಿ ಸುಶಾಂತ್ ಎಂಬುವರು ಸ್ಥಳ ಹಾಗೂ ಸಿದ್ಧತೆ ಪರಿಶೀಲಿಸಿದ್ದರು.

'ರಾಹುಲ್ ಗಾಂಧಿ ಅವರು 16ರಂದು ಮುಳಬಾಗಿಲಿನ ಕುರುಡುಮಲೆ ದೇಗುಲದಲ್ಲಿ ಪೂಜೆ ಸಲ್ಲಿಸಿ ಕೋಲಾರಕ್ಕೆ ಬರಲಿದ್ದಾರೆ. ಮೂರು ಹೆಲಿಪ್ಯಾಡ್ ನಿರ್ಮಿಸಲಾಗಿದೆ. ಬೃಹತ್ ಪೆಂಡಾಲ್ ಹಾಕಿದ್ದು, ಲಕ್ಷಕ್ಕೂ ಅಧಿಕ ಆಸನ ವ್ಯವಸ್ಥೆ ಮಾಡಿದ್ದೇವೆ' ಎಂದು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಿ.ಲಕ್ಷ್ಮಿನಾರಾಯಣ ಸುದ್ದಿಗಾರರಿಗೆ ತಿಳಿಸಿದರು.

'ಇದು ಐತಿಹಾಸಿಕ ಕಾರ್ಯಕ್ರಮ ಆಗಲಿದೆ. ರಾಜ್ಯ, ದೇಶಕ್ಕೆ ರಾಹುಲ್ ಹೊಸ ಸಂದೇಶ ನೀಡಲಿದ್ದಾರೆ' ಎಂದು ತಿಳಿಸಿದರು.

ರ‍್ಯಾಲಿಗೂ ಮುನ್ನ ಕೋಲಾರ ಕ್ಷೇತ್ರದ ಅಭ್ಯರ್ಥಿ ವಿಚಾರ ಅಂತಿಮಗೊಳ್ಳಲಿದೆ. ಎರಡು ದಿನಗಳಲ್ಲಿ ಘೋಷಿಸುವ ಸಾಧ್ಯತೆ ಇದೆ. ಸಿದ್ದರಾಮಯ್ಯ ಅವರೇ ಅಭ್ಯರ್ಥಿಯಾಗಲಿದ್ದಾರೆ ಎಂಬುದು ನಮ್ಮೆಲ್ಲರ ನಂಬಿಕೆ.
ಸಿ.ಲಕ್ಷ್ಮಿನಾರಾಯಣ, ಅಧ್ಯಕ್ಷ, ಕೋಲಾರ ಜಿಲ್ಲಾ ಕಾಂಗ್ರೆಸ್

ಟಿಕೆಟ್: 'ಕೈ' ಶಾಸಕರಲ್ಲಿ ಆತಂಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಟಿಕೆಟ್ ಕೈತಪ್ಪಬಹುದೆಂಬ ಆತಂಕದಲ್ಲಿರುವ ಪುಲಕೇಶಿನಗರ ಕ್ಷೇತ್ರದ ಶಾಸಕ ಅಖಂಡ ಶ್ರೀನಿವಾಸಮೂರ್ತಿ ಮತ್ತು ಹರಿಹರ ಕ್ಷೇತ್ರದ ಶಾಸಕ ರಾಮಪ್ಪ ಅವರು ಸಿದ್ದರಾಮಯ್ಯ ಅವರನ್ನು ಭಾನುವಾರ ಮತ್ತೊಮ್ಮೆ ಭೇಟಿ ಮಾಡಿದರು.

ಕಾಂಗ್ರೆಸ್ ಎರಡು ಹಂತಗಳಲ್ಲಿ 166 ಕ್ಷೇತ್ರಗಳಿಗೆ ಈಗಾಗಲೇ ಟಿಕೆಟ್ ಘೋಷಿಸಿದೆ. ಆದರೆ, ಪಕ್ಷದ ಶಾಸಕರಿರುವ ಐದು ಕ್ಷೇತ್ರಗಳಿಗೆ (ಪುಲಕೇಶಿನಗರ, ಹರಿಹರ, ಶಿಡ್ಲಘಟ್ಟ, ಕುಂದಗೋಳ, ಲಿಂಗಸುಗೂರು) ಇನ್ನೂ ಟಿಕೆಟ್ ಘೋಷಿಸಿಲ್ಲ.

ಮೂಡಿಗೆರೆ ಕ್ಷೇತ್ರದಿಂದ ಮಗಳು ನಯನಾ ಅವರಿಗೆ ಟಿಕೆಟ್ ಕೊಡಿಸಲು ಮುಂದಾಗಿರುವ ಮೋಟಮ್ಮ ಕೂಡಾ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಕೆಲಹೊತ್ತು ಚರ್ಚೆ ನಡೆಸಿದರು. ಅಲ್ಲದೆ, ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ ಜಾರಕಿಹೊಳಿ ಮತ್ತು ಶಾಸಕ ಜಮೀರ್ ಅಹಮ್ಮದ್ ಕೂಡಾ ಸಿದ್ದರಾಮಯ್ಯ ಅವರನ್ನು ಭಾನುವಾರ ಭೇಟಿ ಮಾಡಿದರು.

ಇದೇ ವೇಳೆ ಚಿಕ್ಕಪೇಟೆ ಕ್ಷೇತ್ರದ ಟಿಕೆಟ್ ಆಕಾಂಕ್ಷಿ ಆರ್.ವಿ. ದೇವರಾಜ್ ಅವರು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರನ್ನು ಭೇಟಿ ಮಾಡಿದರು. ಈ ಕ್ಷೇತ್ರದ ಟಿಕೆಟ್‌ಗಾಗಿ ಮಾಜಿ ಮೇಯರ್ ಗಂಗಾಂಬಿಕೆ ಮಲ್ಲಿಕಾರ್ಜುನ ಸೇರಿ ಇನ್ನೂ ಕೆಲವರು ಲಾಬಿ ನಡೆಸುತ್ತಿದ್ದಾರೆ. ಹೀಗಾಗಿ ಟಿಕೆಟ್ ಹಂಚಿಕೆ ಕಗ್ಗಂಟಾಗಿದೆ.

ಟಿಕೆಟ್ ತಪ್ಪಿದರೆ ಪಕ್ಷೇತರವಾಗಿ ಸ್ಪರ್ಧೆ

ಸುಳ್ಯ: ಒಂದು ವಾರದೊಳಗೆ ಸುಳ್ಯ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಯನ್ನು ಬದಲಿಸಿ, ಎಚ್.ಎಂ. ನಂದಕುಮಾರ್ ಅವರಿಗೆ ಟಿಕೆಟ್ ಘೋಷಿಸಬೇಕು. ಇಲ್ಲದಿದ್ದರೆ, ನಂದಕುಮಾರ್ ಅವರನ್ನು 'ಸ್ವಾಭಿಮಾನದ ಅಭ್ಯರ್ಥಿ' ಯಾಗಿ ಪಕ್ಷೇತರರಾಗಿ ಕಣಕ್ಕಿಳಿಸಲು ಅಭಿಮಾನಿಗಳು ತೀರ್ಮಾನಿಸಿದ್ದಾರೆ.

ಇಲ್ಲಿನ ನಿಂತಿಕಲ್‌ನಲ್ಲಿ ಭಾನುವಾರ ಸಂಜೆ ನಡೆದ ನಂದಕುಮಾರ್ ಅಭಿಮಾನಿ ಬಳಗದ ಸಮಾವೇಶದಲ್ಲಿ ಈ ನಿರ್ಧಾರ ಕೈಗೊಳ್ಳಲಾಯಿತು. ಬಳಗದ ಸಂಚಾಲಕ ಹಾಗೂ ಕಡಬ ಬ್ಲಾಕ್ ಕಾಂಗ್ರೆಸ್ ಮಾಜಿ ಅಧ್ಯಕ್ಷ ಬಾಲಕೃಷ್ಣ ಬಳ್ಳೇರಿ ಸಮಾವೇಶದ ನಿರ್ಧಾರವನ್ನು ಪ್ರಕಟಿಸಿದರು.

ಕಾಂಗ್ರೆಸ್ ಕಚೇರಿಗೆ ಮುತ್ತಿಗೆ

ಹಾವೇರಿ: 'ಶಿಗ್ಗಾವಿ- ಸವಣೂರ ಕ್ಷೇತ್ರದಿಂದ ಮುಖ್ಯಮಂತ್ರಿ ಬೊಮ್ಮಾಯಿ ವಿರುದ್ಧ ಸಲೀಂ ಅಹಮದ್ ಸ್ಪರ್ಧಿಸಬೇಕು ಇಲ್ಲವೇ ಅಲ್ಪಸಂಖ್ಯಾತರಿಗೆ ಟಿಕೆಟ್ ಕೊಡಬೇಕು' ಎಂದು ಕಾಂಗ್ರೆಸ್ ಕಾರ್ಯಕರ್ತರು ಭಾನುವಾರ ಹಾವೇರಿ ಜಿಲ್ಲಾ ಕಾಂಗ್ರೆಸ್ ಕಚೇರಿಗೆ ಮುತ್ತಿಗೆ ಹಾಕಿದರು.

ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹಮದ್ ಭಾನುವಾರ ಜಿಲ್ಲಾ ಕಾಂಗ್ರೆಸ್ ಕಚೇರಿಗೆ ಆಗಮಿಸಿದ್ದರು. ಸಭೆ ಆರಂಭಿಸಬೇಕು ಎನ್ನುವಷ್ಟರಲ್ಲಿ ನೂರಾರು ಕಾರ್ಯಕರ್ತರು, ಅಜ್ಜಂಪೀರ್ ಖಾದ್ರಿ ಬೆಂಬಲಿಗರು ಮುತ್ತಿಗೆ ಹಾಕಿದರು.

'ಪ್ರಧಾನಿ ಭೇಟಿಯಿಂದ ಪ್ರಯೋಜನವಿಲ್ಲ'

ಅರಸೀಕೆರೆ (ಹಾಸನ): 'ಪ್ರಧಾನಿ ನರೇಂದ್ರ ಮೋದಿ ಎಷ್ಟು ಬಾರಿ ರಾಜ್ಯಕ್ಕೆ ಬಂದರೂ ಪ್ರಯೋಜನವಾಗದು' ಎಂದು ವಿಧಾನಸಭೆ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಪ್ರತಿಪಾದಿಸಿದರು.

ಪಟ್ಟಣದಲ್ಲಿ ಶುಕ್ರವಾರ ಮಾಜಿ ಶಾಸಕ ಕೆ.ಎಂ. ಶಿವಲಿಂಗೇಗೌಡರ ಕಾಂಗ್ರೆಸ್ ಸೇರ್ಪಡೆಗೂ ಮುನ್ನ ಮಾತನಾಡಿ, 'ಕಾಂಗ್ರೆಸ್ ನೀಡಿರುವ ಗ್ಯಾರಂಟಿಗಳನ್ನು ಈಡೇರಿಸಲು ವಿಫಲವಾದರೆ ನಾವು ಒಂದು ನಿಮಿಷ ಅಧಿಕಾರದಲ್ಲಿ ಇರುವುದಿಲ್ಲ' ಎಂದರು.

'1999ರಲ್ಲಿ ರೂಪುಗೊಂಡ ಜೆಡಿಎಸ್‌ನಲ್ಲಿ ನಾನೇ ಅಧ್ಯಕ್ಷನಾಗಿದ್ದೆ. ಅಲ್ಲಿಂದ ಈವರೆಗೆ ಅದು ಸ್ವಂತ ಬಲದ ಮೇಲೆ ಅಧಿಕಾರಕ್ಕೆ ಬಂದಿದೆಯಾ? ಕುಮಾರಸ್ವಾಮಿ ಹೇಗೆ ಮುಖ್ಯಮಂತ್ರಿಯಾಗುತ್ತಾರೆ? ಎಂದು ಪ್ರಶ್ನಿಸಿದರು.

'ಟಿಕೆಟ್ ಕೊಡುತ್ತೇವೆಂದು ಯಾರನ್ನೂ ಕರೆಸಿಕೊಂಡಿಲ್ಲ. ದತ್ತ ಅವರಿಗೆ ಒಳ್ಳೆಯ ಸ್ಥಾನಮಾನ ಕೊಡುತ್ತೇವೆ. ಪಕ್ಷ ಸೇರುವಾಗ ಹೇಳಿದ್ದನ್ನು ಗಮನಿಸಿ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹೇಳಿದರು.

'ಮಲ್ಲಿಕಾರ್ಜುನ ಖರ್ಗೆಯವರೊಡನೆ ಕೆಲಸ ಮಾಡಲು ಸಿದ್ಧ' ಎಂಬ ತಮ್ಮ ಹೇಳಿಕೆ ಸಮರ್ಥಿಸಿಕೊಂಡ ಅವರು, 'ಅವರಿಗೆ ಬೆಂಬಲಿಸಲಿಲ್ಲ. ಅವರ ನಾಯಕತ್ವ ಬೆಂಬಲಿಸಲಿಲ್ಲವೆಂದರೆ ನಾವೇನು ಮನುಷ್ಯರಾ? ಅಧಿಕಾರ ಮುಖ್ಯವಲ್ಲ, ಪಕ್ಷ ಅಧಿಕಾರಕ್ಕೆ ಬರುವುದು ಮುಖ್ಯ' ಎಂದರು.

ಆಮ್ಲಜನಕ ನೀಡದೆ ಕೊಲೆ ಮಾಡಿದ್ದಾರೆ– ಡಿಕೆಶಿ

ಬೆಂಗಳೂರು: 'ನಾವು ಕೋವಿಡ್ ಸಮಯದಲ್ಲಿ ಜೀವ ಉಳಿಸಿದ್ದೇವೆ. ನಮ್ಮ ಸರ್ಕಾರಕ್ಕೆ ಬೆಂಬಲ ನೀಡಿ' ಎಂಬ ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಅವರ ಹೇಳಿಕೆಗೆ ತಿರುಗೇಟು ನೀಡಿರುವ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, 'ಅವರು ಯಾರ ಜೀವ ಉಳಿಸಿದ್ದಾರೆ. ಆಮ್ಲಜನಕ ನೀಡದೇ ಜನರನ್ನು ಕೊಲೆ ಮಾಡಿದ್ದಾರೆ' ಎಂದರು.

₹99 ಕೋಟಿಗೂ ಹೆಚ್ಚು ಮೌಲ್ಯದ ಸ್ವತ್ತು ವಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚುನಾವಣಾ ಅಕ್ರಮ ತಡೆಗೆ ಸ್ಥಾಪಿಸಿರುವ ತನಿಖಾ ಠಾಣೆಗಳು ಮತ್ತು ನೇಮಿಸಿರುವ ಜಾಗೃತ ದಳಗಳು ಮಾರ್ಚ್ 29ರಿಂದ ಈವರೆಗೆ ವಶಪಡಿಸಿಕೊಂಡಿರುವ ನಗದು, ಮದ್ಯ, ಉಚಿತ ಕೊಡುಗೆಗೆ ಬಳಸುವ ಉತ್ಪನ್ನಗಳ ಒಟ್ಟು ಮೌಲ್ಯ ₹ 99.18 ಕೋಟಿ ತಲುಪಿದೆ ಎಂದು ರಾಜ್ಯ ಮುಖ್ಯ ಚುನಾವಣಾಧಿಕಾರಿ ಕಚೇರಿ ತಿಳಿಸಿದೆ.

ಶನಿವಾರ ಒಂದೇ ದಿನ ₹ 88.50 ಲಕ್ಷ ನಗದು, ₹ 30.86 ಲಕ್ಷ ಮೌಲ್ಯದ ಉಚಿತ ಕೊಡುಗೆಗಳ ಉತ್ಪನ್ನಗಳು,₹ 1.67 ಕೋಟಿ ಮೌಲ್ಯದ 55,498 ಲೀಟರ್ ಮದ್ಯ, ₹ 16.97 ಲಕ್ಷ ಮೌಲ್ಯದ 19.2 ಕೆ.ಜಿ. ಗಾಂಜಾ, ₹ 16.07 ಲಕ್ಷ ಮೌಲ್ಯದ 310 ಗ್ರಾಂ. ಚಿನ್ನ, ₹ 3.20 ಲಕ್ಷ ಮೌಲ್ಯದ 5.45 ಕೆ.ಜಿ. ಬೆಳ್ಳಿಯನ್ನು ವಶಪಡಿಸಿಕೊಳ್ಳಲಾಗಿದೆ.

ಈವರೆಗೆ ₹36.80 ಕೋಟಿ ನಗದು, ಮತದಾರರಿಗೆ ಉಚಿತವಾಗಿ ವಿತರಿಸಲು ಬಳಸುವ ₹ 15.46 ಕೋಟಿ ಮೌಲ್ಯದ ವಿವಿಧ ವಸ್ತುಗಳು, ₹ 26.53 ಕೋಟಿ ಮೌಲ್ಯದ 5.20 ಕೋಟಿ ಲೀಟರ್ ಮದ್ಯ, ₹ 2.89 ಕೋಟಿ ಮೌಲ್ಯದ 336 ಕೆ.ಜಿ. ಮಾದಕವಸ್ತುಗಳು, ₹ 14.93 ಕೋಟಿ ಮೌಲ್ಯದ 34.31 ಕೆ.ಜಿ. ಚಿನ್ನ ಹಾಗೂ ₹ 17.48 ಕೋಟಿ ಮೌಲ್ಯದ 404 ಕೆ.ಜಿ. ಬೆಳ್ಳಿಯನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಮುಖ್ಯ ಚುನಾವಣಾಧಿಕಾರಿ ಕಚೇರಿ ಮಾಹಿತಿ ನೀಡಿದೆ.

ನಗದು, ಮದ್ಯ ಸೇರಿದಂತೆ ವಿವಿಧ ವಸ್ತುಗಳನ್ನು ವಶಪಡಿಸಿಕೊಂಡಿರುವ ಪ್ರಕರಣಗಳಲ್ಲಿ ಒಟ್ಟು 792 ಎಫ್ಐಆರ್ ದಾಖಲಿಸಲಾಗಿದೆ. ಸಿ-ವಿಜಿಲ್ ತಂತ್ರಾಂಶದ ಮೂಲಕ 1,760 ದೂರುಗಳು ಬಂದಿವೆ. ಅವುಗಳಲ್ಲಿ 1,348 ದೂರುಗಳು ನಿಜವೆಂದು ಕಂಡುಬಂದಿದ್ದು ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿಸಿದೆ.

ದಾಖಲೆಯಿಲ್ಲದ ಚಿನ್ನ- ಬೆಳ್ಳಿ ಆಭರಣ, ನಗದು ಜಪ್ತಿ- (ಬೆಳಗಾವಿ): ದಾಖಲೆ ಇಲ್ಲದೆ ಸಾಗಿಸುತ್ತಿದ್ದ ₹ 4.15 ಲಕ್ಷ ಮೌಲ್ಯದ ಚಿನ್ನ- ಬೆಳ್ಳಿ ಆಭರಣಗಳನ್ನು ಕಿತ್ತೂರು ಚನ್ನಮ್ಮನ ಚೆಕ್‌ಪೋಸ್ಟ್‌ನಲ್ಲಿ ಭಾನುವಾರ ಜಪ್ತಿ ಮಾಡಲಾಗಿದೆ. ನಿಪ್ಪಾಣಿ ಚೆಕ್‌ಪೋಸ್ಟ್‌ನಲ್ಲಿ ₹ 5.96 ಲಕ್ಷ ನಗದು ವಶಪಡಿಸಿಕೊಳ್ಳಲಾಗಿದೆ.

ಜಮಖಂಡಿ ತಾಲ್ಲೂಕಿನ ಚಿಕ್ಕಲಕಿ ಕ್ರಾಸ್ ಚೆಕ್ ಪೋಸ್ಟ್ ಬಳಿ ವಾಹನದಲ್ಲಿ ಸಾಗಿಸುತ್ತಿದ್ದ ₹ 16 ಲಕ್ಷ ಮೌಲ್ಯದ 307 ಗ್ರಾಂ ಚಿನ್ನ ಜಪ್ತಿ ಮಾಡಲಾಗಿದೆ. ಇದೇ ಚೆಕ್ ಪೋಸ್ಟ್‌ನಲ್ಲಿ ₹1.50 ಲಕ್ಷ ನಗದು, ಬಾಗಲಕೋಟೆ, ತೇರದಾಳ ಸೇರಿದಂತೆ ವಿವಿಧೆಡೆ ₹ 24,892 ಮೌಲ್ಯದ ಮದ್ಯ ವಶಪಡಿಸಿಕೊಳ್ಳಲಾಗಿದೆ.

ಅಮಾನತು (ಧಾರವಾಡ): 'ಚುನಾವಣಾ ಕರ್ತವ್ಯ ನಿರ್ವಹಿಸದೆ, ನಿರ್ಲಕ್ಷ್ಯ ತೋರಿದ ಹೆಸ್ಕಾಂ ಕಾರ್ಯನಿರ್ವಾಹಕ ಎಂಜಿನಿಯರ್ ನಾಗರಾಜ ಕೂಬಳ್ಳಿ ಅವರನ್ನು ಅಮಾನತು ಮಾಡಲಾಗಿದೆ' ಎಂದು ಜಿಲ್ಲಾ ಚುನಾವಣಾಧಿಕಾರಿ ಗುರುದತ್ತ ಹೆಗಡೆ ತಿಳಿಸಿದ್ದಾರೆ.

₹5.59 ಲಕ್ಷ ನಗದು, ₹19 ಲಕ್ಷದ ಮದ್ಯ ಜಪ್ತಿ

ಮೈಸೂರು: ಚುನಾವಣೆ ನೀತಿ ಸಂಹಿತೆ ಹಿನ್ನೆಲೆಯಲ್ಲಿ ಕಾರ್ಯಾಚರಣೆ ನಡೆಸಿದ ವಿಶೇಷ ದಳ, ಪೊಲೀಸರು ಮತ್ತು ಅಬಕಾರಿ ಅಧಿಕಾರಿಗಳ ತಂಡ ₹ 5.59 ಲಕ್ಷ ನಗದು, ₹19 ಲಕ್ಷ ಮೌಲ್ಯದ ಮದ್ಯವನ್ನು ವಶಪಡಿಸಿಕೊಂಡಿದ್ದಾರೆ.

ಕಾಂಗ್ರೆಸ್ ಅಧಿಕಾರಕ್ಕೆ: ತರೂರ್ ವಿಶ್ವಾಸ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಿಜೆಪಿ ಸರ್ಕಾರದ ದುರಾಡಳಿತದಿಂದ ಬೇಸರಗೊಂಡಿರುವ ರಾಜ್ಯದ ಜನರು ಕಾಂಗ್ರೆಸ್ ಕಡೆ ಒಲವು ತೋರುತ್ತಿದ್ದಾರೆ. ಪಕ್ಷ ಸ್ಪಷ್ಟ ಬಹುಮತದೊಂದಿಗೆ ಅಧಿಕಾರಕ್ಕೆ ಬರುವುದು ನಿಶ್ಚಿತ' ಎಂದು ಕಾಂಗ್ರೆಸ್ ಮುಖಂಡ ಶಶಿ ತರೂರ್ ವಿಶ್ವಾಸ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಭಾನುವಾರ ಮಾತನಾಡಿದ ಅವರು, 'ನಾನು ಎರಡು ದಿನಗಳಿಂದ ರಾಜ್ಯದಲ್ಲಿದ್ದು, ಯುವ ಮತದಾರರ ಜತೆ ಮಾತುಕತೆ ನಡೆಸಿದ್ದೇನೆ. ಶಿಕ್ಷಕರ ಜತೆಯಲ್ಲೂ ಚರ್ಚೆ ಮಾಡಿದ್ದೇನೆ. ಕಾಂಗ್ರೆಸ್ ಸರ್ಕಾರವನ್ನು ಜನರು ಬಯಸುತ್ತಿರುವುದು ಗೊತ್ತಾಗಿದೆ' ಎಂದರು.

'ಬೆಂಗಳೂರು ಅತಿ ಹೆಚ್ಚು ವಿದೇಶಿ ಬಂಡವಾಳವನ್ನು ಆಕರ್ಷಿಸುತ್ತಿತ್ತು. ಆದರೆ, ಮೂರ್ನಾಲ್ಕು ವರ್ಷಗಳಲ್ಲಿ ಬಂಡವಾಳ ಹೂಡಿಕೆ ಬೇರೆ ರಾಜ್ಯಗಳ ಪಾಲಾಗುತ್ತಿವೆ. ಇದು ದುರಾಡಳಿತಕ್ಕೆ ಸಾಕ್ಷಿ. ರಾಜ್ಯದಲ್ಲಿ ಬದಲಾವಣೆ ಅಗತ್ಯವಾಗಿದ್ದು, ಈ ಬಾರಿ ಉತ್ತಮ ಫಲಿತಾಂಶ ಬರುವ ನಿರೀಕ್ಷೆ ಇದೆ. ಆದರೆ, ಬಿಜೆಪಿಯ ಆಪರೇಷನ್ ಕಮಲ ಎಂಬ ಕೆಟ್ಟ ಸಂಪ್ರದಾಯಕ್ಕೆ ಅವಕಾಶ ಕೊಡಬಾರದು' ಎಂದರು.

ಮಲ್ಲಿಕಾರ್ಜುನ ಖರ್ಗೆ ಅವರು ಕರ್ನಾಟಕ ಮುಖ್ಯಮಂತ್ರಿ ಆಗುವರೇ ಎಂದು ಕೇಳಿದ ಪ್ರಶ್ನೆಗೆ, 'ಕಾಂಗ್ರೆಸ್ ಪಕ್ಷದಲ್ಲಿ ಚುನಾವಣೆಗೂ ಮೊದಲು ಮುಖ್ಯಮಂತ್ರಿ ಘೋಷಿಸುವ ಸಂಪ್ರದಾಯವಿಲ್ಲ. ಮೊದಲು ಚುನಾವಣೆಯಲ್ಲಿ ಗೆಲ್ಲಬೇಕು, ನಂತರ ಈ ವಿಚಾರವಾಗಿ ಚರ್ಚೆ ಮಾಡಬಹುದು' ಎಂದರು.

ಬಿಜೆಪಿಯಿಂದ ಕಾಂಗ್ರೆಸ್ ಪಕ್ಷಕ್ಕೆ ಶಾಸಕರ ಸೇರ್ಪಡೆ ಕುರಿತು ಪ್ರತಿಕ್ರಿಯಿಸಿದ ತರೂರ್, 'ಕರ್ನಾಟಕದಲ್ಲಿ ಕಳೆದ ಕೆಲವು ತಿಂಗಳಲ್ಲಿ ಐವರು ಶಾಸಕರು, ಇಬ್ಬರು ಪರಿಷತ್ ಸದಸ್ಯರು, 11 ಮಾಜಿ ಶಾಸಕರು, ನಾಲ್ವರು ಮಾಜಿ ಪರಿಷತ್ ಸದಸ್ಯರು, ಒಬ್ಬ ಮಾಜಿ ಸಂಸದರು ಕಾಂಗ್ರೆಸ್ ಪಕ್ಷ ಸೇರಿದ್ದಾರೆ' ಎಂದು ಹೇಳಿದರು.



ಅಡುಗೆ ಅನಿಲ ಸಿಲಿಂಡರ್ ಬೆಲೆ ಏರಿಕೆಯನ್ನು ಖಂಡಿಸಿ, ಕಾಂಗ್ರೆಸ್ ಸಂಸದ ಶಶಿ ತರೂರ್ ಅವರು ಕೆಪಿಸಿಸಿ ಕಚೇರಿಯಲ್ಲಿ ಭಾನುವಾರ ಎಲ್‌ಪಿಜಿ ಸಿಲಿಂಡರ್‌ಗೆ ಹೂವಿನ ಹಾರ ಹಾಕಿ ಕೈಮುಗಿದರು. ಎಐಸಿಸಿ ವಕ್ತಾರ ರೋಶನ್ ಗುಪ್ತಾ, ಕೆಪಿಸಿಸಿ ಮಾಧ್ಯಮ ವಿಭಾಗದ ಸಹ ಅಧ್ಯಕ್ಷ ಮನ್ಸೂರ್ ಅಲಿ ಖಾನ್, ಎಐಸಿಸಿ ಕಾರ್ಯದರ್ಶಿ ಅಭಿಷೇಕ್ ದತ್ ಇದ್ದರು – ಪ್ರಜಾವಾಣಿ ಚಿತ್ರ

ಸಂಕ್ಷಿಪ್ತ ಸುದ್ದಿ

ಬಿಜೆಪಿ ಅಭಿಮಾನಿಗಳಿಗೆ ನೀತಿ ಸಂಹಿತೆಯ ಪಾಠ ಮಾಡಿದ ಡೊಳ್ಳು ಕಲಾವಿದರು!

ತೇರದಾಳ(ಬಾಗಲಕೋಟೆ): ರಾಷ್ಟ್ರೀಯ ಪಕ್ಷವೊಂದರ ಅಭಿಮಾನಿಗಳಿಂದ ಇನಾಮು ಕೊಡುವ ಆಮಿಷ ತೋರಿಸಿದರೂ ಅದನ್ನು ಒಪ್ಪದ ಕಲಾವಿದರು ಚುನಾವಣಾ ನೀತಿ ಸಂಹಿತೆ ಪಾಲಿಸುವ ಬಗ್ಗೆ ಅವರಿಗೇ ಪಾಠ ಮಾಡಿದರು.

ಸಮೀಪದ ಸಸಾಲಟ್ಟಿ ಗ್ರಾಮದ ತೋಟದಲ್ಲಿರುವ ಬೀರೇಶ್ವರ ಜಾತ್ರೆ ಅಂಗವಾಗಿ ಭಾನುವಾರ ಡೊಳ್ಳಿನ ಗಾಯನ ಏರ್ಪಡಿಸಲಾಗಿತ್ತು. ಮುಧೋಳ ತಾಲ್ಲೂಕಿನ ಬರಗಿಯ ಲಕ್ಷ್ಮೀದೇವಿ ಡೊಳ್ಳಿನ ಗಾಯನ ಸಂಘ ಹಾಗೂ ಅದೇ ತಾಲ್ಲೂಕಿನ ನಿಂಗಾಪುರದ ಬಾಳು ಮಾಮಾ ಡೊಳ್ಳಿನ ಗಾಯನ ಸಂಘಗಳ ಮಧ್ಯೆ ಜೋರು ಜುಗಲ್ಬಂದಿ ನಡೆದಿತ್ತು.

ನಿಂಗಾಪುರದ ಕಲಾವಿದರ ಹಾಡಿನ ಸರದಿ ವೇಳೆ, ಬಿಜೆಪಿಯ ಅಭಿಮಾನಿಗಳು ತಮ್ಮ ಪಕ್ಷದ ಹಾಡು ಹಾಡಿದರೆ ಅವರಿಗೆ ಇನಾಮು ಕೊಡುವ ಆಸೆ ತೋರಿಸಿದರು. ಆದರೆ ಅವರ ಆಮಿಷಕ್ಕೆ ಮಣಿಯದ ಕಲಾವಿದರು, 'ಚುನಾವಣೆ ನೀತಿ ಸಂಹಿತೆ ಜಾರಿಯಲ್ಲಿದೆ. ಇಲ್ಲಿ ಪೊಲೀಸ್ ಹಾಗೂ ಚುನಾವಣಾ ಅಧಿಕಾರಿಗಳು ಇಲ್ಲವೆನ್ನುವ ಕಾರಣಕ್ಕೆ ನಾವು ಅದನ್ನು ಉಲ್ಲಂಘಿಸುವುದಿಲ್ಲ' ಎಂದು ತಿಳಿಹೇಳಿದರು. ಅಲ್ಲಿ ಸೇರಿದ್ದ ಕಲಾಪ್ರೇಮಿಗಳು ಕಲಾವಿದರ ಈ ನಡೆಗೆ ತಲೆದೂಗಿದರು.

ನನ್ನ ವಿರುದ್ಧ ಕ್ರಿಮಿನಲ್ ಪ್ರಕರಣವಿಲ್ಲ: ಮಾಧುಸ್ವಾಮಿ

ತುಮಕೂರು: 'ನನಗೆ ತಿಳಿದಿರುವಂತೆ ನನ್ನ ವಿರುದ್ಧ ಯಾವುದೇ ಕ್ರಿಮಿನಲ್ ಪ್ರಕರಣ ಇಲ್ಲ. ಯಾವುದೇ ಅಪರಾಧ ಕೃತ್ಯಗಳಲ್ಲಿ ಭಾಗಿಯಾಗಿಲ್ಲ' ಎಂದು ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ ಸ್ಪಷ್ಟನೆ ನೀಡಿದ್ದಾರೆ.

ಭಾನುವಾರ 'ಪ್ರಜಾವಾಣಿ'ಯಲ್ಲಿ ಪ್ರಕಟವಾದ '32 ಹಾಲಿ ಶಾಸಕರ ವಿರುದ್ಧ ಕ್ರಿಮಿನಲ್ ಪ್ರಕರಣ' ಸುದ್ದಿಯಲ್ಲಿ ತಮ್ಮ ಹೆಸರೂ ಪ್ರಸ್ತಾಪವಾದ ಹಿನ್ನೆಲೆಯಲ್ಲಿ ಅವರು ಈ ಸ್ಪಷ್ಟನೆ ನೀಡಿದರು. 'ಹಿಂದೆ 2018ರಲ್ಲಿ ತಾಲ್ಲೂಕು ಕಚೇರಿ ಮುಂದೆ ಪ್ರತಿಭಟಿಸಲಾಗಿತ್ತು. ಆಗ ಆಸ್ತಿ ಹಾನಿಗೆ ಸಂಬಂಧಿಸಿ ಪ್ರಕರಣ ದಾಖಲಾಗಿತ್ತು. ಆ ಪ್ರಕರಣ ಹಿಂಪಡೆಯಲಾಗಿದೆ. ಈ ಬಗ್ಗೆ ಈಗಾಗಲೇ ಮಾಹಿತಿ ನೀಡಲಾಗಿದೆ' ಎಂದರು.

ಫುಟ್‌ಬಾಲ್ ಪ್ರತಿಕೃತಿ ಮರೆಮಾಚಲು ಆಗ್ರಹ

ದಾವಣಗೆರೆ: ಫುಟ್‌ಬಾಲ್ ರಾಜಕೀಯ ಪಕ್ಷವೊಂದರ ಚಿಹ್ನೆ ಆಗಿರುವುರಿಂದ, ಇಲ್ಲಿನ ಪ್ರಮುಖ ವೃತ್ತದಲ್ಲಿ ಅಳವಡಿಸಿರುವ ಫುಟ್‌ಬಾಲ್ ಪ್ರತಿಕೃತಿಯಯನ್ನು ಮರೆ ಮಾಚಬೇಕು ಎಂದು ಕಾಂಗ್ರೆಸ್ ಆಗ್ರಹಿಸಿದೆ.

ಗಾಲಿ ಜನಾರ್ದನ ರೆಡ್ಡಿ ಸ್ಥಾಪಿಸಿರುವ ಕಲ್ಯಾಣ ರಾಜ್ಯ ಪ್ರಗತಿ ಪಕ್ಷಕ್ಕೆ ಚಿಹ್ನೆಯಾಗಿ ಫುಟ್‌ಬಾಲ್ ದೊರೆತಿದೆ.

ಹಾಗಾಗಿ, ಈ ಪ್ರತಿಕೃತಿಯು ಮತದಾರರ ಮೇಲೆ ಪ್ರಭಾವ ಬೀರುವ ಸಾಧ್ಯತೆಇದೆ. ಕೂಡಲೇ ಅದನ್ನು ಮರೆಮಾಚಬೇಕು ಎಂದು ಕೆಪಿಸಿಸಿ ವಕ್ತಾರ ಡಿ.ಬಸವರಾಜ ಹೇಳಿಕೆಯಲ್ಲಿ ಒತ್ತಾಯಿಸಿದ್ದಾರೆ.

'ಚುನಾವಣಾ ಆಯೋಗದ ಸೂಚನೆಯಂತೆ ಪಕ್ಷದ ಚಿಹ್ನೆ, ಬಾವುಟ, ಅಭ್ಯರ್ಥಿಗೆ ಪೂರಕವಾದ ಸಂಕೇತಗಳನ್ನು ನೀತಿ ಸಂಹಿತೆ ಜಾರಿಯಾದ ಬಳಿಕ ಮರೆಮಾಚಲು, ತೆರವಿಗೆ ಕ್ರಮಕೈಗೊಳ್ಳಬೇಕು. ಗುಂಡಿ ವೃತ್ತದಲ್ಲಿರುವ ಫುಟ್‌ಬಾಲ್ ಪ್ರತಿಕೃತಿ ಇನ್ನೂ ಅಧಿಕಾರಿಗಳ ಕಣ್ಣಿಗೆ ಬಿದ್ದಿಲ್ಲವೇ' ಎಂದು ಪ್ರಶ್ನಿಸಿದ್ದಾರೆ.



ದಾವಣಗೆರೆ ಗುಂಡಿ ವೃತ್ತದಲ್ಲಿರುವ ಫುಟ್‌ಬಾಲ್ ಪ್ರತಿಕೃತಿ

'ಹಾಸನ: ಕಾರ್ಯಕರ್ತನಿಗೆ ಟಿಕೆಟ್'

ಚಳ್ಳಕೆರೆ: 'ಹಾಸನ ಕ್ಷೇತ್ರದಲ್ಲಿ ಸಮರ್ಥ ಕಾರ್ಯಕರ್ತರಿದ್ದಾರೆ. ಕಾರ್ಯಕರ್ತನಿಗೆ ಟಿಕೆಟ್ ನೀಡಲು ನಿರ್ಧರಿಸಲಾಗಿದೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ತಿಳಿಸಿದರು.

'ಆ ಕ್ಷೇತ್ರದಲ್ಲಿ ಕುಟುಂಬದ ಯಾವೊಬ್ಬರೂ ಸ್ಪರ್ಧೆ ಮಾಡುವುದಿಲ್ಲ ಎಂದು ಸ್ಪಷ್ಟವಾಗಿ ಹೇಳಲು ಬಯಸುತ್ತಿದ್ದೇನೆ. ಕಾರ್ಯಕರ್ತರು ಇರುವಾಗ ಕುಟುಂಬ ತಲೆಕೊಡುವುದು ಸರಿಯಲ್ಲ ಎನ್ನುವುದು ನನ್ನ ಅಭಿಪ್ರಾಯ. ಎಲ್ಲವೂ ಸರಿಯಾಗಲಿದೆ, ಸರಿ ಮಾಡೋಣ' ಎಂದು ಹೇಳಿದರು.

ಸಾಮಾಜಿಕ, ಆರ್ಥಿಕ ಸಬಲರಿಗೆ ಮೀಸಲಾತಿ: ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆಕ್ಷೇಪ

'ಆರೆಸ್ಸೆಸ್, ಬಿಜೆಪಿ ಸಮಸಮಾಜದ ವಿರೋಧಿಗಳು'

ಪ್ರಜಾವಾಣಿ ವಾರ್ತೆ


ಬೆಂಗಳೂರು: 'ಸಾಮಾಜಿಕ ಮತ್ತು ಆರ್ಥಿಕವಾಗಿ ಮುಂದುವರಿದವರಿಗೂ ಮೀಸಲಾತಿ ನೀಡಿದರೆ ಸಮಸಮಾಜ ನಿರ್ಮಾಣ ಹೇಗೆ ಸಾಧ್ಯ' ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಪ್ರಶ್ನಿಸಿದ್ದಾರೆ.

ಕರ್ನಾಟಕ ಶೋಷಿತ ಸಮುದಾಯಗಳ ಮಹಾ ಒಕ್ಕೂಟ ನಗರದಲ್ಲಿ ಭಾನುವಾರ ಹಮ್ಮಿಕೊಂಡ ಶೋಷಿತ ಸಮುದಾಯಗಳ ಮುಖಂಡರ ರಾಜ್ಯಮಟ್ಟದ ಸಂಕಲ್ಪ ಅಧಿವೇಶನ ಉದ್ಘಾಟಿಸಿ, ಮಾತನಾಡಿದರು.

'ಆರೆಸ್ಸೆಸ್ ನಿಯಂತ್ರಣದಲ್ಲಿರುವ ಬಿಜೆಪಿ, ಸಮಸಮಾಜದ ವಿರೋಧಿಯಾಗಿದೆ. ಆರೆಸ್ಸೆಸ್ ಮತ್ತು ಹಿಂದೂ ಮಹಾಸಭಾದವರಿಗೆ ಸಂವಿಧಾನದ ಬಗ್ಗೆ ಕವಡೆ ಕಾಸಿನಷ್ಟೂ ಗೌರವವಿಲ್ಲ. ಹೀಗಾಗಿ, ಸಮಸಮಾಜ ನಿರ್ಮಾಣಕ್ಕೆ ಅವಕಾಶ ನೀಡುವುದಿಲ್ಲ. ಶೋಷಿತ ಸಮುದಾಯದವರಿಗೆ ಮೀಸಲಾತಿ ನೀಡಬೇಕೆಂದಾಗಲೆಲ್ಲ ಬಿಜೆಪಿ ವಿರೋಧ ಮಾಡಿದೆ. ಮೀಸಲಾತಿಯನ್ನು ಇನ್ನೂ ಎಷ್ಟು ವರ್ಷ ನೀಡುವಿರಿ ಎಂದು ಆ ಪಕ್ಷದವರು ಪ್ರಶ್ನಿಸಿದ್ದಾರೆ. ಆರ್ಥಿಕ ದುರ್ಬಲ ವರ್ಗಗಳಿಗೆ ಶೇ 10ರಷ್ಟು ಮೀಸಲಾತಿ ನೀಡಿದ ಬಳಿಕ ಅವರು ಬಾಯಿ ಮುಚ್ಚಿಕೊಂಡಿದ್ದಾರೆ' ಎಂದರು.

'ರಾಜಕೀಯವಾಗಿ ನಮಗೆ ಬದ್ಧತೆ ಇರಬೇಕು. ಕೆಲವು ರಾಜಕಾರಣಿಗಳು ಟಿಕೆಟ್ ಸಿಗಲಿಲ್ಲ ಎಂಬ ಕಾರಣಕ್ಕೆ ಬಿಜೆಪಿ, ಜೆಡಿಎಸ್‌ಗೆ ಹೋಗುತ್ತಿದ್ದಾರೆ. ಹಿಂದುಳಿದ ಜಾತಿಯವರು ಬಿಜೆಪಿಯಲ್ಲಿ ಗೆದ್ದರೆ ವರಿಷ್ಠರು ಹೇಳಿದ ಹಾಗೆ ಕೇಳಿಕೊಂಡು ಇರಬೇಕು. ನಾನು ಮುಖ್ಯಮಂತ್ರಿಯಾಗಿದ್ದಾಗ ರಾಜ್ಯದ ಎಲ್ಲಾ ಜಾತಿಯ ಜನರ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸ್ಥಿತಿಗತಿಗಳ ಸಮೀಕ್ಷೆ ನಡೆಸಿದ್ದೆ. ನಮ್ಮ ಅವಧಿಯಲ್ಲಿ ಸಮೀಕ್ಷೆಯ ವರದಿ ಪೂರ್ಣಗೊಂಡಿರಲಿಲ್ಲ. ಎಚ್. ಕಾಂತರಾಜು ನೇತೃತ್ವದ ಆಯೋಗ ಸಿದ್ಧಪಡಿಸಿದ ವರದಿಯನ್ನು ನಂತರದ ಸರ್ಕಾರಗಳು ಸ್ವೀಕರಿಸಲಿಲ್ಲ. ನಾವು ಮತ್ತೆ ಅಧಿಕಾರಕ್ಕೆ ಬಂದ ತಕ್ಷಣ ಈ ವರದಿಯನ್ನು ತೆಗೆದುಕೊಳ್ಳುತ್ತೇವೆ' ಎಂದು ಹೇಳಿದರು.

ವಕೀಲ ರವಿವರ್ಮ ಕುಮಾರ್, 'ಪ್ರಧಾನಿ ಸೇರಿ ಎಲ್ಲರೂ ಸಂವಿಧಾನದ ಶಿಶುಗಳೇ ಆಗಿದ್ದಾರೆ. ಸಂವಿಧಾನ ಬದಲಾವಣೆ ಮಾತೃ ದ್ರೋಹ ಆಗುತ್ತದೆ' ಎಂದರು.



ಕಾರ್ಯಕ್ರಮದಲ್ಲಿ (ಎಡದಿಂದ) ಅನಂತ ನಾಯಕ್ ಎನ್., ರವಿವರ್ಮ ಕುಮಾರ್, ಸಿದ್ದರಾಮಯ್ಯ ಮತ್ತು ಮಾವಳ್ಳಿ ಶಂಕರ್ ಸಮಾಲೋಚನೆ ನಡೆಸಿದರು –ಪ್ರಜಾವಾಣಿ ಚಿತ್ರ

ಸಂವಿಧಾನ ಬದಲಾಯಿಸುವವರಿಗೆ ಪಾಠ ಕಲಿಸಬೇಕು. ಕಾಲ್ಪನಿಕ ವ್ಯಕ್ತಿಗಳನ್ನು ಸೃಷ್ಟಿ ಮಾಡಿ, ಹಲವರ ಬಾಯಿ ಮುಚ್ಚಿಸುವ ಕೆಲಸ ಮಾಡಲಾಗುತ್ತಿದೆ
ಕೆ.ಎಂ. ರಾಮಚಂದ್ರಪ್ಪ, ಕರ್ನಾಟಕ ಶೋಷಿತ ಸಮುದಾಯಗಳ ಮಹಾ ಒಕ್ಕೂಟದ ಪ್ರಧಾನ ಸಂಚಾಲಕ

ನಾವು ಯುದ್ಧ ಭೂಮಿಯಲ್ಲಿದ್ದು, ಹೊಸ ಪರ್ವ ಕಾಲ ಸೃಷ್ಟಿಸಬೇಕಿದೆ. ಶೋಷಿತ ಸಮುದಾಯ ಬಿಕರಿಯಾಗಿಲ್ಲ. ಚುನಾವಣೆ ವೇಳೆ ಬಡ್ಡಿ ಸಮೇತ ತೀರಿಸುತ್ತೇವೆ
ಮಾವಳ್ಳಿ ಶಂಕರ್, ಕರ್ನಾಟಕ ಶೋಷಿತ ಸಮುದಾಯಗಳ ಮಹಾ ಒಕ್ಕೂಟದ ಸಂಚಾಲಕ

'ಮೀಸಲಾತಿ ವರ್ಗೀಕರಣ ರದ್ದುಪಡಿಸಿ'

ಶೋಷಿತ ಸಮುದಾಯಗಳ ಸಂಘಟನೆಗಳ ಮುಖಂಡರ ರಾಜ್ಯಮಟ್ಟದ ಸಂಕಲ್ಪ ಅಧಿವೇಶನದಲ್ಲಿ 9 ನಿರ್ಣಯಗಳನ್ನು ಅಂಗೀಕರಿಸಲಾಯಿತು. ಅವುಗಳಲ್ಲಿ ಪ್ರಮುಖ ನಿರ್ಣಯಗಳು–

- ಸರ್ಕಾರ ಜಾರಿಗೊಳಿಸಿರುವ ಮೀಸಲಾತಿ ವರ್ಗಿಕರಣ ಅವೈಜ್ಞಾನಿಕವಾಗಿದ್ದು, ಜಾರಿಗೊಳಿಸಿರುವ ಮೀಸಲಾತಿ ವರ್ಗಿಕರಣವನ್ನು ಕೂಡಲೇ ಹಿಂಪಡೆಯಬೇಕು.
- ಆರ್ಥಿಕ ದುರ್ಬಲ ವರ್ಗಗಳಿಗೆ ಶೇ 10ರಷ್ಟು ಮೀಸಲಾತಿ (ಇಡಬ್ಲ್ಯುಎಸ್) ನೀಡುವ ಕಾನೂನು ರದ್ದು ಮಾಡಬೇಕು.
- ಸ್ಥಳೀಯ ಸಂಸ್ಥೆಗಳಲ್ಲಿ ಹಿಂದುಳಿದ ವರ್ಗಗಳಿಗೆ ಮೀಸಲಾತಿ ನೀಡಿರುವಂತೆ ವಿಧಾನಸಭೆ ಹಾಗೂ ಲೋಕಸಭೆಯಲ್ಲಿ ಮೀಸಲಾತಿ ನೀಡಬೇಕು.
- ಎಸ್ಸಿ, ಎಸ್ಟಿ ಹಾಗೂ ಹಿಂದುಳಿದ ವರ್ಗಗಳಿಗೆ ವಿಧಾನ ಪರಿಷತ್, ರಾಜ್ಯ ಸಭೆಯಲ್ಲಿ ಮೀಸಲಾತಿ ಕಲ್ಪಿಸುವುದು.
- ಸರ್ಕಾರಿ ಸೌಲಭ್ಯಗಳನ್ನು ಪಡೆದು ಬೆಳೆದಿರುವ ಖಾಸಗಿ ಸಂಸ್ಥೆಗಳಲ್ಲಿ ಮೀಸಲಾತಿ ಕಲ್ಪಿಸಬೇಕು.
- ವಿಶೇಷ ಘಟಕ ಯೋಜನೆ ಕಾಯ್ದೆಯಲ್ಲಿನ ಸೆಕ್ಷನ್ 7(ಡಿ) ರದ್ದುಗೊಳಿಸಬೇಕು.
- ಕೇಂದ್ರ ಸರ್ಕಾರವು ಎಸ್.ಸಿ.ಪಿ /ಟಿ.ಎಸ್.ಪಿ ಕಾಯ್ದೆಯನ್ನು ರಾಷ್ಟ್ರ ಮಟ್ಟದಲ್ಲಿ ಜಾರಿಗೊಳಿಸಬೇಕು.
- ರಾಜ್ಯ ಸರ್ಕಾರ ಜಾರಿಗೆ ತಂದಿರುವ 3 ಕೃಷಿ ಕಾಯ್ದೆಗಳು, ಗೋಹತ್ಯೆ ನಿಷೇಧ ಕಾಯ್ದೆ ಹಾಗೂ ಮತಾಂತರ ಕಾಯ್ದೆಯನ್ನು ಹಿಂಪಡೆಯಬೇಕು.

'ಬಹುಮತ ಸಿಗದಂತೆ ಜೆಡಿಎಸ್ ಪೂಜೆ'

'ಜೆಡಿಎಸ್ ಪಕ್ಷಕ್ಕೆ ಚುನಾವಣೆಯಲ್ಲಿ ಸ್ವಂತ ಬಲದ ಮೇಲೆ ಗೆಲ್ಲುವ ಸಾಮರ್ಥ್ಯ ಇಲ್ಲ. ಹೀಗಾಗಿ, ಆ ಪಕ್ಷದವರು ಯಾವ ಪಕ್ಷಕ್ಕೂ ಬಹುಮತ ಬಾರದಿರಲಿ ಎಂದು ಪೂಜೆ ಮಾಡುತ್ತಾ ಇದ್ದಾರೆ. ಬಳಿಕ ಅಧಿಕಾರಕ್ಕಾಗಿ ಬಿಜೆಪಿ, ಕಾಂಗ್ರೆಸ್‌ಗೆ ಹಾರುತ್ತಾರೆ. ಈ ವಿಧಾನಸಭೆ ಚುನಾವಣೆಯಲ್ಲಿ 123 ಸ್ಥಾನ ಗೆಲ್ಲುವುದಾಗಿ ಕುಮಾರಸ್ವಾಮಿ ಹೇಳುತ್ತಾರೆ. ಅಭ್ಯರ್ಥಿಗಳೇ ಇಲ್ಲದ ಅವರ ಪಕ್ಷ ಎಲ್ಲಿಂದ ಗೆಲ್ಲುತ್ತದೆ' ಎಂದು ಸಿದ್ದರಾಮಯ್ಯ ಕುಟುಕಿದರು.

ದುಡಿಯುವ ವರ್ಗದ ಧ್ವನಿಗಿಲ್ಲ ಬೆಲೆ

• ವಿಜಯಕುಮಾರ್ ಎಸ್.ಕೆ.



ಬೆಂಗಳೂರು: ಸಂಘಟಿತ ಮತ್ತು ಅಸಂಘಟಿತ ವಲಯದ ಕಾರ್ಮಿಕರು, ಆಟೊ, ಟ್ಯಾಕ್ಸಿ ಚಾಲಕರು, ಆಹಾರ ಮತ್ತು ಇತರ ಡೆಲಿವರಿ ಸೇವೆಗಳನ್ನು ಒದಗಿಸುತ್ತಿರುವ ದುಡಿಯುವ ವರ್ಗದ ಜನರು ಸಂಖ್ಯಾಬಾಹುಳ್ಯದ ದೃಷ್ಟಿಯಿಂದ ರಾಜ್ಯದ ದೊಡ್ಡ ಸಮುದಾಯ. ಮತದಾರರ ಪಟ್ಟಿಯಲ್ಲೂ ಈ ಜನರು ನಿರ್ಣಾಯಕರು. ಆದರೆ, ಕಾರ್ಮಿಕ ಚಳವಳಿಗಳು ಬಲ ಕಳೆದುಕೊಂಡಂತೆಲ್ಲಾ ಈ ಜನರ ಶಕ್ತಿಯೂ ಕುಗ್ಗಿದೆ. ಚುನಾವಣಾ ರಾಜಕಾರಣದಲ್ಲಿ ಕಾರ್ಮಿಕ ವರ್ಗವನ್ನು ನೋಡುವ ಧೋರಣೆಯೂ ಬದಲಾಗಿದೆ. ದುಡಿಯುವ ವರ್ಗದ ಕೂಗು ಚುನಾವಣಾ ರಾಜಕಾರಣದ ಚರ್ಚೆಯ ಮುನ್ನೆಲೆಯಿಂದ ಅಂಚಿಗೆ ಸರಿಯುತ್ತಿದೆ.

ದುಡಿಯುವ ಕೈಗಳಿಗೆ ನಾಡು–ದೇಶ ಕಟ್ಟುವ ಶಕ್ತಿ ಇದೆ. ಆ ಕೈಗಳಿಗೆ ಶಕ್ತಿ ತುಂಬಲಾಗುತ್ತಿದೆ ಎಂಬ ಮಾತುಗಳನ್ನು ಲಾಗಾಯ್ತಿನಿಂದ ಕೇಳುತ್ತಲೇ ಬಂದಿದ್ದೇವೆ. ವಾಸ್ತವ ಏನು ಎಂಬುದನ್ನು ಗಮನಿಸಿದರೆ ದುಡಿವ ತೋಳುಗಳನ್ನು ಬಲಪಡಿಸುವ ಬದಲು, ಬಲಹೀನ ಮಾಡಲಾಗುತ್ತಿದೆಯೇ ಎಂಬ ಅನುಮಾನ ಕಾಡದಿರದು.

‘ದುಡಿಮೆಯೇ ದೇವರು’, ‘ಕಾಯಕವೇ ಕೈಲಾಸ’ ಎಂಬ ಮಾತುಗಳನ್ನು ರಾಜ್ಯದ ಜನ ನಂಬಿಕೊಂಡೇ ಬಂದಿದ್ದಾರೆ. ಆಳುವವರು ಕಾರ್ಮಿಕ ವರ್ಗವನ್ನು ಒಂದು ಸಮುದಾಯವಾಗಿ ನೋಡಲೇ ಇಲ್ಲ. ಇದೆಲ್ಲದರ ಪರಿಣಾಮ ಕಾರ್ಮಿಕ ವಿರೋಧಿ ನೀತಿಗಳು, ಶ್ರಮಿಕರ ಶೋಷಣೆಗಳು ನಿರಂತರವಾಗಿ ಹೆಚ್ಚುತ್ತಲೇ ಇವೆ.

ಕಾರ್ಮಿಕರ ರಕ್ಷಣೆಗೆ ಕಾನೂನು ಇನ್ನಷ್ಟು ಬಲಗೊಳ್ಳಬೇಕು ಎಂಬ ಬೇಡಿಕೆಗಳನ್ನು ಮುಂದಿಟ್ಟುಕೊಂಡು ಹೋರಾಟಗಳು ಹಲವು ದಶಕಗಳಿಂದ ನಡೆಯುತ್ತಲೇ ಇವೆ. ಕನಿಷ್ಠ ವೇತನಕ್ಕಾಗಿ ರಸ್ತೆಗಿಳಿಯುವುದು ಸಾಮಾನ್ಯವಾಗಿದೆ. ಆದರೆ, ಕಾರ್ಮಿಕ ವಿರೋಧಿ ನೀತಿಗಳನ್ನು ಜಾರಿಗೆ ತರುವ ಮೂಲಕ ಸರ್ಕಾರಗಳು ಶ್ರಮಿಕರ ಸಮುದಾಯದ ಮೇಲೆ ಪ್ರಹಾರ ಮಾಡುತ್ತಲೇ ಇವೆ.

ಕಾರ್ಮಿಕರ ಕೆಲಸದ ಅವಧಿಯನ್ನು 8 ಗಂಟೆಯಿಂದ 12 ಗಂಟೆಗಳಿಗೆ ಹೆಚ್ಚಿಸಲಾಯಿತು. ಹೆಚ್ಚುವರಿ ಕರ್ತವ್ಯದ(ಒ.ಟಿ) ಅವಧಿಯನ್ನು 75 ಗಂಟೆಗಳಿಂದ 145 ಗಂಟೆಗಳಿಗೆ(ಮೂರು ತಿಂಗಳಿಗೆ) ವಿಸ್ತರಿಸಲಾಗಿದೆ. ಪ್ರತಿ 4 ಗಂಟೆಗೊಮ್ಮೆ ಇದ್ದ ವಿರಾಮದ ಅವಧಿ ಪ್ರತಿ 6 ಗಂಟೆಗಳಿಗೆ ವಿಸ್ತರಿಸಲಾಯಿತು. ಮಹಿಳೆಯರು ರಾತ್ರಿ ಪಾಳಿಯಲ್ಲಿ ಕೆಲಸ ಮಾಡಬೇಕು ಎಂಬ ನಿಯಮ ಜಾರಿ ತರಲಾಯಿತು. ಆದರೆ, ಅವರಿಗೆ ಸುರಕ್ಷತೆಗೆ ಆದ್ಯತೆ ನೀಡಲಿಲ್ಲ. ಗುತ್ತಿಗೆ ನೌಕರರನ್ನು ಕೆಲಸಕ್ಕೆ ನೇಮಿಸಿಕೊಳ್ಳುವ ಪದ್ಧತಿಯಲ್ಲಾದರೂ ಒಂದಷ್ಟು ಕಾನೂನಿನ ರಕ್ಷಣೆ ಇತ್ತು. ಈಗ ನಿಗದಿತ ಅವಧಿಗೆ ದುಡಿಮೆ(ಫಿಕ್ಸ್ಡ್ ಟರ್ಮ್) ನಿಯಮ ಮುನ್ನೆಲೆಗೆ ಬಂದಿದೆ. ಈ ನಿಯಮದ ಪ್ರಕಾರ ಎಷ್ಟು ದಿನ ಬೇಕಾದರೂ ದುಡಿಸಿಕೊಳ್ಳಬಹುದು, ಯಾವಾಗ ಬೇಕಿದ್ದರೂ ಕೆಲಸ ಕಸಿದುಕೊಳ್ಳಬಹುದು.

ಕನಿಷ್ಠ ವೇತನಕ್ಕಾಗಿ ನ್ಯಾಯಾಲಯಗಳ ಮೆಟ್ಟಿಲೇರುವ ಅನಿವಾರ್ಯತೆಯನ್ನು ಸೃಷ್ಟಿಸಲಾಗಿದೆ. ಜೀವನ ನಡೆಸಲು ಕಾರ್ಮಿಕನಿಗೆ ಕನಿಷ್ಠ 25 ಸಾವಿರ ವೇತನ ಬೇಕಾಗುತ್ತದೆ ಎಂಬುದು ಸುಪ್ರೀಂ ಕೋರ್ಟ್ ಲೆಕ್ಕಾಚಾರ. ಆದರೆ, ಗಾರ್ಮೆಂಟ್ಸ್ ನೌಕರರ ವೇತನ ₹11 ಸಾವಿರವನ್ನು ಮೀರಲು ಸಾಧ್ಯವಾಗಿಲ್ಲ. ಹೈಕೋರ್ಟ್ ತನಕ ಹೋದರೂ ಗಾರ್ಮೆಂಟ್ಸ್ ಕಾರ್ಖಾನೆಗಳ ನೌಕರರ ವೇತನದಲ್ಲಿ ₹500 ಹೆಚ್ಚಳ ಸಾಧ್ಯವಾಯಿತು.

ಕಟ್ಟಡ ಕಾರ್ಮಿಕರ ಕಲ್ಯಾಣ ನಿಧಿಯಲ್ಲಿರುವ ಹಣ ದುರ್ಬಳಕೆ ಮಾಡಿಕೊಳ್ಳುವುದು ಹೇಗೆ ಎಂಬ ಆಲೋಚನೆಗಳನ್ನು ಎಲ್ಲಾ ಸರ್ಕಾರಗಳು ಮಾಡಿಕೊಂಡು ಬಂದಿವೆ. ಸಾರ್ವಜನಿಕ ಉದ್ಯಮಗಳನ್ನು ಖಾಸಗೀಕರಣ ಮಾಡುವ ಮೂಲಕ ಸಂಘಟಿತ ಕಾರ್ಮಿಕರನ್ನು ಬೀದಿಗೆ ತಳ್ಳುವ ಕೆಲಸಗಳಾಗುತ್ತಿವೆ. ಸಮಾನ ವೇತನಕ್ಕಾಗಿ ಸಾರಿಗೆ ಸಂಸ್ಥೆಗಳ ನೌಕರರು ನಡೆಸಿದ ಹೋರಾಟಗಳು ಅರಣ್ಯರೋಧನವಾಗಿವೆ. ಆಟೊರಿಕ್ಷಾ, ಟ್ಯಾಕ್ಸಿ ಚಾಲಕರು ದೊಡ್ಡ ಸಂಖ್ಯೆಯಲ್ಲಿದ್ದಾರೆ. ಹೋಟೆಲ್ ಕಾರ್ಮಿಕರು, ಹೋಟೆಲ್‌ಗಳಿಂದ ಮನೆಗಳಿಗೆ ಆಹಾರ ತಲುಪಿಸುವ ಡೆಲಿವರಿ ಕಾರ್ಮಿಕರು ಕಾನೂನಿನ ರಕ್ಷಣೆಗೆ ಇಟ್ಟಿರುವ ಮೊರೆಗಳು ಆಳುವ ಕಿವಿಗಳಿಗೆ ಕೇಳದಾಗಿವೆ. ಇವೆಲ್ಲವೂ ಕಾರ್ಮಿಕ ವರ್ಗದ ಮೇಲಿನ ದಾಳಿಯೇ ಆಗಿವೆ ಎಂಬುದು ಕಾರ್ಮಿಕ ಹೋರಾಟಗಾರರ ಅಳಲು.

ದುಡಿಯುವ ಸಮುದಾಯಗಳಿಂದಲೇ ದೇಶ ಮತ್ತು ನಾಡು ಕಟ್ಟಲು ಸಾಧ್ಯ. ಆದರೆ, ಜಾತಿ ಮತ್ತು ಧರ್ಮದ ಆಧಾರದಲ್ಲಿ ಚುನಾವಣೆಗಳು ನಡೆಯುತ್ತಿವೆ. ಕಾರ್ಮಿಕ ಸಮುದಾಯವನ್ನು ಒಂದು ಮತ ಸಮುದಾಯ ಎಂದು ಪರಿಗಣಿಸಲು ಸರ್ಕಾರಗಳು ಹಿಂದೆ ಬಿದ್ದಿವೆ. ಹಾಗೆ ಮಾಡಿದರೆ ಮಾತ್ರ ಕಾರ್ಮಿಕರ ಸಮುದಾಯಕ್ಕೆ ನ್ಯಾಯ ದೊರಕಲಿದೆ ಎಂಬುದು ಹೋರಾಟಗಾರರ ಅಂಬೋಣ.

‘ಕಾರ್ಮಿಕರ ಪರ ಸರ್ಕಾರದ ನಿರೀಕ್ಷೆ’



ಕೇಂದ್ರ ಸರ್ಕಾರ ತಂದಿರುವ ಕಾರ್ಮಿಕ ನೀತಿಗಳನ್ನು ವೇಗವಾಗಿ ರಾಜ್ಯದಲ್ಲೂ ಜಾರಿಗೆ ತರುವ ಪ್ರಯತ್ನಗಳು ನಡೆಯುತ್ತಿವೆ. ಇದರಿಂದ ಕಾರ್ಮಿಕ ವರ್ಗ ಕಷ್ಟಕ್ಕೆ ಸಿಲುಕುತ್ತಿದೆ. ಗುತ್ತಿಗೆ ಪದ್ಧತಿಯಲ್ಲಿ ಕೆಲಸದ ಅವಧಿ ಹೆಚ್ಚಳ ಮಾಡಲಾಗಿದೆ. ಮಹಿಳೆಯರು ರಾತ್ರಿ ಪಾಳಿಯಲ್ಲಿ ಕೆಲಸ ಮಾಡಬೇಕು, ಆದರೆ ಅವರಿಗೆ ಸುರಕ್ಷತೆ ಇಲ್ಲ. ಈಗ ಗುತ್ತಿಗೆ ಪದ್ಧತಿಯೂ ಇಲ್ಲವಾಗುತ್ತಿದ್ದು, ಫಿಕ್ಸ್ಡ್ ಟರ್ಮ್(ನಿಗದಿತ ಅವಧಿಗೆ) ದುಡಿಮೆ ಎಂಬ ನಿಯಮ ತರಲಾಗಿದೆ. ಎಷ್ಟು ದಿನ ಬೇಕಾದರೂ ದುಡಿಸಿಕೊಳ್ಳಬಹುದು. ಅದು ಸಂಘಟಿತ ವಲಯದಲ್ಲಿ ಈಗ ಹೆಚ್ಚಾಗುತ್ತಿದೆ. ಕೋವಿಡ್ ನಂತರ ಯಾವುದೇ ಸುರಕ್ಷತೆ ಇಲ್ಲವಾಗಿದ್ದು, ಕಾರ್ಮಿಕರನ್ನು ಗುಲಾಮರಂತೆ ನಡೆಸಿಕೊಳ್ಳಲಾಗುತ್ತಿದೆ. ಕಟ್ಟಡ ಕಾರ್ಮಿಕ ಮಂಡಳಿಯ ನಿಧಿ ಸೇರಿ ಎಲ್ಲಾ ಕಾರ್ಮಿಕ ಕಾರ್ಯಕ್ರಮಗಳ ಹಣ ದುರ್ಬಳಕೆ ಮಾಡಿಕೊಳ್ಳುವ ಪ್ರಯತ್ನ ನಡೆದಿದೆ. ಇಎಸ್‌ಐ ಸೌಲಭ್ಯವನ್ನೂ ಕಾರ್ಮಿಕರು ಪಡೆಯಲಾಗಷ್ಟು ಷರತ್ತುಗಳನ್ನು ವಿಧಿಸಲಾಗುತ್ತಿದೆ. ಕಾರ್ಮಿಕರ ಪರವಾಗಿ ಆಲೋಚಿಸುವ ಸರ್ಕಾರವನ್ನು ನಾವು ನಿರೀಕ್ಷೆ ಮಾಡುತ್ತಿದ್ದೇವೆ. ದುಡಿಯುವ ವರ್ಗಗಳ ರಕ್ಷಣೆಯಾಗಬೇಕು. ವೇತನ ಖಾತ್ರಿ, ಸಾಮಾಜಿಕ ಸುರಕ್ಷತೆ ಖಾತ್ರಿಯಾಗಬೇಕು. ರೈತ, ಕಾರ್ಮಿಕ ವಿರೋಧಿ ಕಾಯ್ದೆಗಳು ತಿದ್ದುಪಡಿಯಾಗಬೇಕು.

ಕೆ. ಮಹಾಂತೇಶ್, ಪ್ರಧಾನ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಫೆಡರೇಷನ್

2.90 ಕೋಟಿ	40 ಲಕ್ಷ	4 ಲಕ್ಷ	40 ಲಕ್ಷ	50 ಲಕ್ಷ
ಒಟ್ಟು ಅಸಂಘಟಿತ ಕಾರ್ಮಿಕರು	ಸಂಘಟಿತ ಕಾರ್ಮಿಕರು	ಗಾರ್ಮೆಂಟ್ಸ್ ಕಾರ್ಖಾನೆಗಳ ಕಾರ್ಮಿಕರು	ವಾಣಿಜ್ಯ ವಾಹನಗಳ ಚಾಲಕರು	ಕಟ್ಟಡ ಕಾರ್ಮಿಕರು

‘ಕಾರ್ಮಿಕ ವಿರೋಧಿ ನೀತಿಗಳನ್ನು ಹಿಂಪಡೆಯಬೇಕು’



ಕೆಲಸದ ಅವಧಿ ಹೆಚ್ಚಳ ಸೇರಿದಂತೆ ಜಾರಿಗೆ ಬಂದಿರುವ ಕಾರ್ಮಿಕರ ವಿರೋಧಿ ನೀತಿಗಳು ಅವರ ಬದುಕನ್ನು ಹಿಂಡುತ್ತಿವೆ. ಯಾವುದೇ ಸರ್ಕಾರ ಬಂದರೂ ಅವುಗಳನ್ನು ಹಿಂದಕ್ಕೆ ಪಡೆಯಲೇಬೇಕು. ಒಳ್ಳೆಯ ತರಕಾರಿ, ಸೊಪ್ಪು, ಹಾಲು, ಅಕ್ಕಿ ಖರೀದಿಸಿ ಕಾರ್ಮಿಕ ತನ್ನ ಕುಟುಂಬದವರ ಹೊಟ್ಟೆ ತುಂಬಿಸಲು ತಿಂಗಳಿಗೆ ಕನಿಷ್ಠ ₹25 ಸಾವಿರ ಬೇಕಾಗಲಿದೆ ಎಂಬ ಲೆಕ್ಕಾಚಾರ ಇದೆ. ಕಾರ್ಮಿಕರ ಕನಿಷ್ಠ ವೇತನ ₹16 ಸಾವಿರ ಇದೆ, ಗಾರ್ಮೆಂಟ್ಸ್ ಕಾರ್ಖಾನೆ ಕಾರ್ಮಿಕರ ವೇತನ ₹11 ಸಾವಿರ ಇದೆ. ಅವರು ಜೀವನ ಸಾಗಿಸುವುದು ಹೇಗೆ? ಕಾನೂನು ಬದಲಾವಣೆ ಆದಂತೆ ಕಾರ್ಮಿಕರ ಮೇಲೆ ದಬ್ಬಾಳಿಕೆ ಹೆಚ್ಚಾಗುತ್ತಿದೆ. ಸಂಘಟಿತ, ಅಸಂಘಟಿತ ಅಥವಾ ಸೇವಾ ವಲಯ ಆಗಿರುಬಹುದು, ಮಕ್ಕಳು ಮತ್ತು ವೃದ್ಧರನ್ನು ಹೊರತುಪಡಿಸಿದರೆ ಮಿಕ್ಕವರೆಲ್ಲರೂ ಶ್ರಮಿಕ ಸಮುದಾಯವೇ ಆಗಿದ್ದಾರೆ. ಕಾರ್ಮಿಕರನ್ನು ಒಂದು ಸಮುದಾಯವಾಗಿ ನೋಡಿದರೆ, ಅವರ ಪರವಾದ ಕಾನೂನುಗಳು ಬರಲು ಸಾಧ್ಯವಾಗುತ್ತದೆ. ಇದರ ಆಧಾರದಲ್ಲಿಯೇ ಚುನಾವಣೆಗಳು ನಡೆಯಬೇಕು, ರಾಜಕೀಯ ಪಕ್ಷಗಳು ಈ ಬಗ್ಗೆ ಆಲೋಚನೆ ನಡೆಸಬೇಕು.

ಆರ್.ಪ್ರತಿಭಾ, ಅಧ್ಯಕ್ಷೆ, ಗಾರ್ಮೆಂಟ್ಸ್ ಆ್ಯಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್

‘ಚಾಲಕರಿಗಾಗಿ ಪ್ರತ್ಯೇಕ ನಿಗಮ ಬೇಕು’



ಆಟೊರಿಕ್ಷಾ, ಟ್ಯಾಕ್ಸಿ, ಲಾರಿ ಸೇರಿ ವಾಣಿಜ್ಯ ವಾಹನಗಳ ಚಾಲಕರ ಸಂಖ್ಯೆ ರಾಜ್ಯದಲ್ಲಿ 40 ಲಕ್ಷಕ್ಕೂ ಹೆಚ್ಚಿದೆ. ಅಂದರೆ ಅವರ ಕುಟುಂಬದವರು ಸೇರಿದರೆ 1.20 ಕೋಟಿಯಷ್ಟು ಮತದಾರರನ್ನು ಚಾಲಕ ಸಮುದಾಯ ಹೊಂದಿದೆ. ಯಾವುದೇ ಸರ್ಕಾರ ಇದ್ದಾಗಲೂ ಚಾಲಕ ಸಮುದಾಯಕ್ಕೆ ನ್ಯಾಯ ದೊರಕಿಲ್ಲ. ಚುನಾವಣೆ ಬಳಿಕ ಬರುವ ಹೊಸ ಸರ್ಕಾರ ಚಾಲಕರ ಕಲ್ಯಾಣ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಪ್ರತ್ಯೇಕ ನಿಗಮ ಸ್ಥಾಪಿಸಬೇಕು. ಚಾಲಕರಿಗೆ ಗೌರವ ನೀಡಲು ‘ಚಾಲಕರ ದಿನ’ ಆಚರಣೆ ಮಾಡುವ ಘೋಷಣೆ ಮಾಡಬೇಕು. ಚಾಲಕರ ನಿಗಮದ ಮೂಲಕವೇ ವಿದ್ಯಾರ್ಥಿ ವೇತನ ಸೇರಿ ಎಲ್ಲಾ ಕಲ್ಯಾಣ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡಬೇಕು. ಬಜೆಟ್ ಪೂರ್ವಸಭೆಯಲ್ಲೂ ಈ ಅಭಿಪ್ರಾಯವನ್ನು ನಾವು ಹೇಳಿದ್ದೇವೆ. ಯಾವುದೇ ಪಕ್ಷ ಆಡಳಿತಕ್ಕೆ ಬಂದರೂ ನಮ್ಮ ಬೇಡಿಕೆಗಳಿಗೆ ಸ್ಪಂದಿಸಬೇಕು.

ತನ್ವೀರ್ ಪಾಷಾ, ಅಧ್ಯಕ್ಷ, ಟ್ಯಾಕ್ಸಿ ಮಾಲೀಕರ ಸಂಘ

ಒಂದೇ ಹೆಸರಿನವರಾದ ಇವರು...

ಬೆಂಗಳೂರು: ಚುನಾವಣೆಗಳಲ್ಲಿ ಒಂದೇ ಹೆಸರಿನ ಡಮ್ಮಿ ಅಭ್ಯರ್ಥಿಗಳನ್ನು ಕಣಕ್ಕಿಳಿಸಿ ಮತ ವಿಭಜನೆ ನಡೆಸಿ, ಗೆಲ್ಲಲು ತಂತ್ರ ರೂಪಿಸುವುದು ಹೊಸತೇನೂ ಅಲ್ಲ. ಮತದಾರರಲ್ಲಿ ಗೊಂದಲ ಸೃಷ್ಟಿಸುವ ಆಟವನ್ನು ಎಲ್ಲ ಲೋಕಸಭೆ, ವಿಧಾನಸಭೆ ಚುನಾವಣೆಗಳ ಸಂದರ್ಭಗಳಲ್ಲಿ ವಿವಿಧ ಕ್ಷೇತ್ರಗಳಲ್ಲಿ ಕಾಣಬಹುದು. ಆದರೆ, ಬೇರೆ ಬೇರೆ ಕ್ಷೇತ್ರಗಳಿಂದ ಒಂದೇ ಹೆಸರಿನವರು ಆಯ್ಕೆಯಾಗುತ್ತಾ ಬಂದಿದ್ದಾರೆ.

ರಾಜ್ಯ 15ನೇ ವಿಧಾನಸಭೆಗೆ ವಿವಿಧ ಕ್ಷೇತ್ರಗಳಿಂದ ಆಯ್ಕೆಯಾಗಿ ಬಂದ ಒಂದೇ ಹೆಸರಿನ ಹಲವರಿದ್ದಾರೆ. ಅಂಥ ಹೆಸರುಗಳನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ (ಶಿಗ್ಗಾವಿ) ಅವರ ಹೆಸರಿನಲ್ಲಿರುವ ‘ಬಸವರಾಜ’ ಪದದಿಂದಲೇ ನೋಡಬಹುದು. ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜ (ಕೆ.ಆರ್. ಪುರ), ಶಾಸಕರಾದ ಬಸವರಾಜ ದಢೇಸುಗೂರ (ಕನಕಗಿರಿ), ಬಸವರಾಜ ಮತ್ತಿಮೂಡ (ಕಲಬುರಗಿ ಗ್ರಾಮೀಣ) ಹೀಗೆ ನಾಲ್ವರಿದ್ದಾರೆ.

‘ಪಾಟೀಲ’ ಎಂಬ ಮನೆತನದ ಹೆಸರಿಟ್ಟುಕೊಂಡವರೂ ಇದ್ದಾರೆ. ಹೆಸರಿನ ಮುಂದಿರುವ ಮೊದಲ ಎರಡು ಅಕ್ಷರಗಳಿಂದಲೇ ಇವರನ್ನು ಗುರುತಿಸಬೇಕಿದೆ. ಕೃಷಿ ಸಚಿವರಾದ ಬಿ.ಸಿ. ಪಾಟೀಲ (ಹಿರೇಕೆರೂರು), ಶಾಸಕರಾದ ಎಚ್.ಕೆ. ಪಾಟೀಲ (ಗದಗ), ಎಂ.ಬಿ. ಪಾಟೀಲ (ಬಬಲೇಶ್ವರ), ಎ.ಎಸ್. ಪಾಟೀಲ ನಡಹಳ್ಳಿ (ದೇವರ ಹಿಪ್ಪರಗಿ), ಎಂ.ವೈ ಪಾಟೀಲ (ಅಫಜಲಪುರ) ಹೀಗೆ ಹಲವರಿದ್ದಾರೆ.

‘ಕುಮಾರಸ್ವಾಮಿ’ ಹೆಸರು ಹುಡುಕಿದರೆ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ, ಜೆಡಿಎಸ್ ಶಾಸಕ ಎಚ್.ಕೆ. ಕುಮಾರಸ್ವಾಮಿ (ಸಕಲೇಶಪುರ), ಬಿಜೆಪಿಯ ಎಂ.ಪಿ. ಕುಮಾರಸ್ವಾಮಿ (ಮೂಡಿಗೆರೆ) ಇದ್ದಾರೆ.

ಕಾಂಗ್ರೆಸ್ ಶಾಸಕರಾದ ಜಿ. ಪರಮೇಶ್ವರ (ಕೊರಟಗೆರೆ), ಪರಮೇಶ್ವರ ನಾಯಕ (ಹೂವಿನ ಹಡಗಲಿ) ಹೆಸರಿನಲ್ಲೂ ಸಾಮ್ಯತೆ ಇದೆ. ‘ಹಾಲಪ್ಪ’ ಹೆಸರಿನ ಇಬ್ಬರಿದ್ದಾರೆ. ಹರತಾಳು ಹಾಲಪ್ಪ (ಸಾಗರ), ಸಚಿವ ಹಾಲಪ್ಪ ಆಚಾರ್ (ಯಲಬುರ್ಗ).

‘ಶ್ರೀನಿವಾಸ’ ಹೆಸರಿನ ಕೆ. ಶ್ರೀನಿವಾಸ ಗೌಡ (ಕೋಲಾರ), ಎಸ್.ಆರ್. ಶ್ರೀನಿವಾಸ (ಗುಬ್ಬಿ), ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ), ಶ್ರೀನಿವಾಸ ಮಾನೆ (ಹಾನಗಲ್), ‘ಗಣೇಶ’ ಹೆಸರಿನ ಗಣೇಶ್ ಜೆ.ಎನ್. (ಕಂಪ್ಲಿ) ಬಳ್ಳಾರಿ, ಗಣೇಶ ಹುಕ್ಕೇರಿ (ಚಿಕ್ಕೋಡಿ ಸದಲಗ), ಜಿ.ಬಿ. ಜ್ಯೋತಿ ಗಣೇಶ್ (ತುಮಕೂರು ನಗರ). ‘ಆನಂದ’ ಹೊತ್ತಿಕೊಂಡಿರುವ ಪ್ರವಾಸೋದ್ಯಮ ಸಚಿವ ಆನಂದ ಸಿಂಗ್ (ವಿಜಯನಗರ), ಆನಂದ ಸಿದ್ದು ನ್ಯಾಮಗೌಡ (ಜಮಖಂಡಿ), ಆನಂದ ಮಾಮನಿ (ಸವದತ್ತಿ ಶಾಸಕರಾಗಿದ್ದ ಇವರು ಇತ್ತೀಚೆಗೆ ನಿಧನರಾಗಿದ್ದಾರೆ) ಇದ್ದಾರೆ. ‘ಕೃಷ್ಣ’ನನ್ನು ಹೊಂದಿರುವ ಎಂ. ಕೃಷ್ಣಪ್ಪ (ಬೆಂಗಳೂರು ದಕ್ಷಿಣ), ಕೃಷ್ಣಪ್ಪ ಎಂ. (ವಿಜಯನಗರ), ಎಂ. ಕೃಷ್ಣಾ ರೆಡ್ಡಿ (ಚಿಂತಾಮಣಿ), ಕೃಷ್ಣ ಬೈರೇಗೌಡ (ಬ್ಯಾಟರಾಯಣಪುರ) ಇದ್ದಾರೆ.

ಇನ್ನು ಎರಡು ಹೆಸರುಗಳಿರುವ ಕಂದಾಯ ಸಚಿವ ಆರ್. ಅಶೋಕ (ಪದ್ಮನಾಭನಗರ), ಕೆ.ಬಿ. ಅಶೋಕ ನಾಯ್ಕ್ (ಶಿವಮೊಗ್ಗ ಗ್ರಾಮೀಣ), ಶಿಕ್ಷಣ ಸಚಿವ ಬಿ.ಸಿ. ನಾಗೇಶ್ (ತಿಪಟೂರು), ಎಚ್. ನಾಗೇಶ್ (ಮುಳಬಾಗಿಲು), ಅನಿಲ್ ಬೆನಕಿ (ಬೆಳಗಾವಿ ಉತ್ತರ), ಅನಿಲ್‌ಕುಮಾರ್ ಸಿ. (ಹೆಗ್ಗಡದೇವನಕೋಟೆ), ಅರವಿಂದ ಬೆಲ್ಲದ (ಹುಬ್ಬಳ್ಳಿ–ಧಾರವಾಡ ಪಶ್ಚಿಮ), ಅರವಿಂದ ಲಿಂಬಾವಳಿ (ಮಹದೇವಪುರ),ಎನ್. ಮಹೇಶ (ಕೊಳ್ಳೇಗಾಲ), ಸಾ.ರಾ. ಮಹೇಶ (ಕೆ.ಆರ್.ನಗರ), ನಾಗೇಂದ್ರ ಬಿ (ಬಳ್ಳಾರಿ ಗ್ರಾಮಾಂತರ), ಎಲ್. ನಾಗೇಂದ್ರ (ಚಾಮರಾಜ), ಎಸ್.ಎನ್. ನಾರಾಯಣಸ್ವಾಮಿ (ಬಂಗಾರಪೇಟೆ), ನಿಸರ್ಗ ನಾರಾಯಣಸ್ವಾಮಿ (ದೇವನಹಳ್ಳಿ) ಹೀಗೆ ಪಟ್ಟಿ ಮಾಡಬಹುದು.

ಪ್ರಜಾ ಪತ್ರ

‘ರಕ್ತದಾನ ಜೀವ ಉಳಿಸಿದರೆ, ಮತದಾನ ದೇಶ ಉಳಿಸುತ್ತದೆ’



ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಯಾವುದೇ ಆಮಿಷಗಳಿಗೆ ಬಲಿಯಾಗದೆ ಪ್ರತಿಯೊಬ್ಬರು ಮತದಾನ ಮಾಡಬೇಕು. ಚುನಾವಣೆ ಹತ್ತಿರವಾಗುತ್ತಿದ್ದಂತೆ ರಾಜಕೀಯ ನಾಯಕರು ಹೊಸ–ಹೊಸ ಬಗೆಯಲ್ಲಿ ಪ್ರಚಾರ ನಡೆಸಿ, ಪ್ರಣಾಳಿಕೆಗಳನ್ನು ಬಿಡುಗಡೆಗೊಳಿಸಿ ಮತದಾರರನ್ನು ಸೆಳೆಯುತ್ತಾರೆ. ಆದರೆ, ಮತದಾರರು ಆಮಿಷಗಳಿಗೆ ಮಣಿಯದೇ ಉತ್ತಮ ವ್ಯಕ್ತಿತ್ವ ಹೊಂದಿರುವ ನಾಯಕನಿಗೆ ಮತ ನೀಡಬೇಕು.

ರಕ್ತದಾನ ಒಂದು ಜೀವ ಉಳಿಸಿದರೆ, ಮತದಾನ ಒಂದು ದೇಶವನ್ನು ಉಳಿಸುತ್ತದೆ. ಆದ್ದರಿಂದ ಪ್ರತಿಯೊಬ್ಬರು ತಮ್ಮ ಅಮೂಲ್ಯವಾದ ಮತವನ್ನು ಚಲಾಯಿಸಿ ಪ್ರಜಾಪ್ರಭುತ್ವವನ್ನು ಉಳಿಸಿ.

ಗೌತಮಿ ಕೆ., ಚಿಕ್ಕಬಳ್ಳಾಪುರ

‘ದೂರದೃಷ್ಟಿಯುಳ್ಳ ಅಭ್ಯರ್ಥಿಯ ಆಯ್ಕೆ ಮಾಡೋಣ’



ಮತದಾನ ನಮ್ಮ ಹಕ್ಕು. ಹಾಗಂತ ಆಮಿಷಕ್ಕಾಗಲಿ, ಒತ್ತಡಕ್ಕಾಗಲಿ ಅಥವಾ ಕಾಟಾಚಾರಕ್ಕಾಗಲಿ ಮತದಾನ ಮಾಡುವುದು ನಮಗೆ ನಾವೇ ಮಾಡಿಕೊಳ್ಳುವ ದ್ರೋಹ. ಸಮಾಜವನ್ನು ಬದಲಾಯಿಸುವ, ಸಾಮಾಜಿಕ ಕಳಕಳಿಯನ್ನು ಹೊಂದಿರುವ ದೂರದೃಷ್ಟಿ ನಾಯಕನನ್ನು ಆಯ್ಕೆ ಮಾಡೋಣ. ಜಾತಿ, ಮತ, ಧರ್ಮವನ್ನು ಮೀರಿ ಸಮಾಜದೊಡನೆ ಬೆರೆತಿರುವವರಿಗೆ ಆದ್ಯತೆ ನೀಡಬೇಕು.ವಿಧಾನಸಭೆ ಚುನಾವಣೆಗೆ ಸ್ಪರ್ಧಿಸುವ ಮುನ್ನ ಸ್ಥಳೀಯ ಸಂಸ್ಥೆಗಳ ಸದಸ್ಯನಾಗಿ ಮೂಲಸೌಲಭ್ಯಗಳ ಕೊರತೆಗಳಿಲ್ಲದಂತೆ ಊರಿನ ಹಿತಕ್ಕಾಗಿ ದುಡಿದಿರುವ ಜನನಾಯಕನಿಗೆ ಮತ ಚಲಾಯಿಸೋಣ.

ಉಮೇಶ್ ಆಚಾರ್ಯ, ಉಡುಪಿ

ರಾಜಕೀಯ ಪಕ್ಷಗಳ ಧೋರಣೆ, ಬದ್ಧತೆ, ಪ್ರಣಾಳಿಕೆ, ಪ್ರಚಾರದ ಕಾರ್ಯವೈಖರಿ ಹೇಗಿರಬೇಕು? ಚುನಾವಣೆಗೆ ಸಂಬಂಧಿಸಿದ ಇಂತಹ ವಿಷಯಗಳ ಬಗ್ಗೆ ನಿಮ್ಮ ಅಭಿಪ್ರಾಯಗಳನ್ನು 100 ಶಬ್ದಗಳ ಮಿತಿ ಒಳಗೆ ಕಳುಹಿಸಿ. ವಿಳಾಸದ ಜತೆ ಭಾವಚಿತ್ರ ಇರಲಿ.

9606038256

ಜಿಗಿ ನೆಗೆದಾಟ



ನಾಗರಾಜ ಛಬ್ಬಿ
ಕಾಂಗ್ರೆಸ್ → ಬಿಜೆಪಿ




ವೈ.ಎಸ್.ವಿ. ದತ್ತ
ಜೆಡಿಎಸ್ → ಕಾಂಗ್ರೆಸ್ → ಪಕ್ಷೇತರ



ಸೌಭಾಗ್ಯ ಬಸವರಾಜನ್
ಕಾಂಗ್ರೆಸ್ → ಪಕ್ಷೇತರ

ಗಾಳಿ ಮಾತು

ಮುನಿಸಿನಲ್ಲಿರುವ ರೇವಣ್ಣಗೆ ‘ಕೈ’ ಗಾಳ



ಚುನಾವಣೆ ಸಮೀಪಿಸುತ್ತಿದ್ದಂತೆಯೇ ಪಕ್ಷಾಂತರವೂ ಜೋರಾಗುತ್ತಿದೆ. ಬಿಜೆಪಿ, ಕಾಂಗ್ರೆಸ್, ಜೆಡಿಎಸ್ ಮೂರೂ ಪ್ರಮುಖ ಪಕ್ಷಗಳು ಅನ್ಯ ಪಕ್ಷಗಳಲ್ಲಿ ಟಿಕೆಟ್ ವಂಚಿತರಾದವರು, ಮುನಿಸಿಕೊಂಡವರನ್ನು ಸೆಳೆದು ಕಣಕ್ಕಿಳಿಸಿ ಬಲಾಬಲ ಹೆಚ್ಚಿಸಿಕೊಳ್ಳುವ ಕಸರತ್ತಿನಲ್ಲಿವೆ. ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷಗಳು ಅಭ್ಯರ್ಥಿಗಳ ಪಟ್ಟಿ ಪ್ರಕಟಿಸುವುದನ್ನೇ ಕಾಯುತ್ತಿರುವ ಜೆಡಿಎಸ್, ಆ ಎರಡೂ ಪಕ್ಷಗಳಿಂದ 15ಕ್ಕೂ ಹೆಚ್ಚು ಪ್ರಭಾವಿ ಮುಖಂಡರು ‘ತೆನೆ’ ಹೊರಲು ಸಜ್ಜಾಗಿದ್ದಾರೆ ಎನ್ನುತ್ತಿದೆ.

ಆದರೆ, ಪತ್ನಿ ಭವಾನಿ ಅವರಿಗೆ ಹಾಸನ ಕ್ಷೇತ್ರದ ಟಿಕೆಟ್‌ಗಾಗಿ ಪಟ್ಟುಹಿಡಿದು ಕುಳಿತಿರುವ ಜೆಡಿಎಸ್‌ನ ತಲೆಯಾಳುಗಳಲ್ಲಿ ಒಬ್ಬರಾದ ಎಚ್.ಡಿ. ರೇವಣ್ಣ ಅವರಿಗೇ ಕಾಂಗ್ರೆಸ್ ನಾಯಕರು ‘ಗಾಳ’ ಹಾಕಿದ್ದಾರೆ ಎಂಬ ಮಾತು ರೇವಣ್ಣ ಬೆಂಬಲಿಗರ ವಲಯದಲ್ಲಿ ಸದ್ದು ಮಾಡುತ್ತಿದೆ. ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರ ತವರು ಜಿಲ್ಲೆ ಹಾಸನದಲ್ಲಿ ಕಾಂಗ್ರೆಸ್‌ನ ಬಲ ಕುಗ್ಗಿದ್ದು, ಜೆಡಿಎಸ್ ಪ್ರಭಾವವೇ ಹೆಚ್ಚು. ಇಡೀ ಜಿಲ್ಲೆಯ ರಾಜಕಾರಣದ ಮೇಲೆ ಬಿಗಿಹಿಡಿತ ಹೊಂದಿರುವ ರೇವಣ್ಣ ಅವರು ಹಾಸನ ಕ್ಷೇತ್ರದ ಅಭ್ಯರ್ಥಿ ಆಯ್ಕೆ ವಿಚಾರದಲ್ಲಿ ತಮ್ಮ ಎಚ್.ಡಿ. ಕುಮಾರಸ್ವಾಮಿ ತಾಳಿರುವ ಬಿಗಿ ನಿಲುವಿನಿಂದ ಸಿಟ್ಟಾಗಿದ್ದಾರೆ.

‘ಪತ್ನಿಗೆ ಹಾಸನ ಕ್ಷೇತ್ರದ ಟಿಕೆಟ್ ನೀಡದಿದ್ದರೆ ಹೊಳೆನರಸೀಪುರ ಕ್ಷೇತ್ರದ ಟಿಕೆಟ್ ನನಗೂ ಬೇಡ’ ಎಂಬ ಸಂದೇಶವನ್ನು ತಂದೆ ಮತ್ತು ತಮ್ಮನಿಗೆ ರವಾನಿಸಲು ಶನಿವಾರ ಸಭೆಯನ್ನೂ ನಡೆಸಿದ್ದಾರೆ. ಈ ಅವಕಾಶವನ್ನೇ ಬಳಸಿಕೊಂಡು ರೇವಣ್ಣ ಅವರನ್ನು ಕಾಂಗ್ರೆಸ್‌ಗೆ ಸೆಳೆದರೆ ಹಾಸನ ಮತ್ತು ಹೊಳೆನರಸೀಪುರ ಎರಡೂ ಕ್ಷೇತ್ರಗಳಲ್ಲಿ ಪ್ರಬಲ ಅಭ್ಯರ್ಥಿಗಳನ್ನು ಕಣಕ್ಕಿಳಿಸಬಹುದು ಎಂಬುದು ಕಾಂಗ್ರೆಸ್‌ನ ಲೆಕ್ಕಾಚಾರವಂತೆ.

ಹಾಸನದಲ್ಲಿ ಭವಾನಿ ಅವರನ್ನೇ ಕಣಕ್ಕಿಳಿಸಬೇಕೆಂಬ ರೇವಣ್ಣ ಕುಟುಂಬದ ಪ್ರಯತ್ನ ಮತ್ತು ಎಚ್.ಪಿ. ಸ್ವರೂಪ್ ಅವರಿಗೇ ಟಿಕೆಟ್ ನೀಡಬೇಕೆಂಬ ಕುಮಾರಸ್ವಾಮಿಯವರ ಪಟ್ಟು ಜೆಡಿಎಸ್‌ನ ‘ಹೈಕಮಾಂಡ್’ನೊಳಗೆ ಹಗ್ಗ ಜಗ್ಗಾಟ ಸೃಷ್ಟಿಸಿದೆ. ಇದನ್ನು ಕುತೂಹಲದಿಂದ ಗಮನಿಸುತ್ತಿರುವ ‘ಕೈ’ ನಾಯಕರು ನಿರಂತರವಾಗಿ ರೇವಣ್ಣ ಸಂಪರ್ಕದಲ್ಲಿದ್ದಾರಂತೆ.

ಸೆಲೆಬ್ರಿಟಿ ಮಾತು



ಮತದಾನ ಮಾಡದಿದ್ದರೆ ಅನ್ಯಾಯ ಮಾಡಿದಂತೆ

ವಿಕ್ರಮ ವಿಸಾಜಿ ಸಾಹಿತಿ, ಕಲಬುರಗಿ

ಪ್ರಜಾಪ್ರಭುತ್ವದ ಜೀವಂತಿಕೆಯ ಸಂಕೇತಗಳಲ್ಲಿ ಮತದಾನದ ಹಕ್ಕು ಕೂಡ ಒಂದು. ಸ್ವತಂತ್ರ ವಿವೇಚನೆ ಮೂಲಕ ಇದನ್ನು ಚಲಾಯಿಸದಿದ್ದರೆ ಪ್ರಜಾಪ್ರಭುತ್ವಕ್ಕೆ ನಾವೇ ಅನ್ಯಾಯ ಮಾಡಿದಂತೆ ಆಗುತ್ತದೆ. ಜಾತಿ, ಧರ್ಮವನ್ನು ಮೀರಿ, ಎಲ್ಲಾ ಬಗೆಯ ಆಮಿಷಗಳನ್ನು ಮೀರಿ ಮತದಾನ ಮಾಡಿದಾಗ ಮಾತ್ರ ಅದು ಸ್ವತಂತ್ರ ವಿವೇಚನೆ. ಇಲ್ಲದಿದ್ದರೆ, ಅದು ಪ್ರಜಾಪ್ರಭುತ್ವದ ಅಣಕ. ನಮ್ಮ ಆಯ್ಕೆಯು ಭವಿಷ್ಯದ ಕಾರ್ಯಸೂಚಿಗಳ ಆಯ್ಕೆ ಕೂಡ ಹೌದು. ನಿರ್ಣಾಯಕ ಸಂದರ್ಭಗಳಲ್ಲಿ ಸುಮ್ಮನಿದ್ದು ಆಮೇಲೆ ನಮ್ಮ ಪ್ರಜಾಪ್ರಭುತ್ವ ಹಳಿಯುತ್ತ ಕೂರುವುದರಲ್ಲಿ ಅರ್ಥವಿಲ್ಲ. ಸಂವಿಧಾನವು ಒದಗಿಸಿದ ಈ ಹಕ್ಕನ್ನು ವಿವೇಕದಿಂದ ಚಲಾಯಿಸಬೇಕು. ಸಂವಿಧಾನದ ಮೌಲ್ಯಗಳು ಉಳಿಯುವುದು ಮತ್ತು ಬೆಳೆಯುವುದು ವ್ಯಕ್ತಿಗಳ ನಡತೆ ಮತ್ತು ನಿರ್ಧಾರಗಳಲ್ಲಿ, ಸಮಾಜದ ಕಟ್ಟಕಡೆಯ ವ್ಯಕ್ತಿಗಳಿಗೆ ಒದಗುವ ಅವಕಾಶಗಳಲ್ಲಿ. ಹೀಗಾಗಿ ಮತದಾನ ಒಂದು ಹೊಣೆಗಾರಿಕೆ ಕೂಡ. ಇಂಥ ಹೊಣೆಗಾರಿಕೆಗಳಿಂದ ತಪ್ಪಿಸಿಕೊಳ್ಳುವುದು ಬೇಡ.



ಮತದಾನ ಜಾಗೃತಿ

ಬಾಗಲಕೋಟೆ ಜಿಲ್ಲೆಯ ಕುಳಗೇರಿ ಕ್ರಾಸ್‌ನ ಎಪಿಎಂಸಿ ಆವರಣದಲ್ಲಿನ ಗುಡಿಸಲು ನಿವಾಸಿಗಳಿಗೆ ಭಾನುವಾರ ‘ಸಂಚಾರಿ ಅಣಕು ಮತಗಟ್ಟೆ’ಯಲ್ಲಿ ಮತದಾನ ಜಾಗೃತಿ ಮೂಡಿಸಲಾಯಿತು.

ಪ್ರಜಾವಾಣಿ ಚಿತ್ರ

ಮಾತಿನೇಟು



ಸೋಲು, ಗೆಲುವು ದೇವರ ಇಚ್ಛೆ. ಲಕ್ಷ್ಮಣ ಸವದಿ ಏಕೆ ಹತಾಶರಾಗಿ ಮಾತನಾಡುತ್ತಿದ್ದಾರೆ ಎಂಬುದು ನನಗೆ ಅರ್ಥವಾಗುತ್ತಿಲ್ಲ. ನಮ್ಮ ಪಕ್ಷದ ರಾಷ್ಟ್ರೀಯ ನಾಯಕರು ಹೆಮ್ಮರವಾಗಿದ್ದಾರೆ. ಅವರ ಮುಂದೆ ನಾನು ಮತ್ತು ಸವದಿ ಒಂದು ಗಿಡದ ತಪ್ಪಲಷ್ಟೇ. ಅಥಣಿ ಟಿಕೆಟ್ ಬಗ್ಗೆ ನಾಯಕರೇ ನಿರ್ಣಯ ತೆಗೆದುಕೊಳ್ಳಲಿದ್ದಾರೆ. ಏಕೆ ಇಷ್ಟು ಚಡಪಡಿಸುತ್ತಿದ್ದೀಯಾ? ಲಕ್ಷ್ಮಣ ಅಣ್ಣಾ, ಆರಾಮಾಗಿರು...

ರಮೇಶ ಜಾರಕಿಹೊಳಿ, ಬಿಜೆಪಿ ಶಾಸಕ

ಕ್ಷೇತ್ರದ ಕೂಗು



• **ಕ್ಷೇತ್ರ: ಕೊಪ್ಪಳ**
• **ಶಾಸಕ: ಕೆ. ರಾಘವೇಂದ್ರ ಹಿಟ್ನಾಳ (ಕಾಂಗ್ರೆಸ್)**
▸ ಕೊಪ್ಪಳಕ್ಕೆ ಸ್ನಾತಕೋತ್ತರ ಅಧ್ಯಯನ ಕೇಂದ್ರ, ಹೊಸ ವಿಶ್ವವಿದ್ಯಾಲಯ ಮಂಜೂರಾದರೂ ಜಾಗ ಸಿಕ್ಕಿಲ್ಲ. ಎರಡು ದಶಕಗಳಿಂದ ಬಾಕಿ ಉಳಿದ ಸಿಂಗಟಾಲೂರು ಏತ ನೀರಾವರಿ ಯೋಜನೆ ಇನ್ನೂ ಪೂರ್ಣಗೊಂಡಿಲ್ಲ. ಅಳವಂಡಿ– ಬೆಟಗೇರಿ ಏತ ನೀರಾವರಿ ಕಾಮಗಾರಿಗೆ ಭೂಮಿ ನೀಡಿದ ರೈತರಿಗೆ ಇನ್ನೂ ಪರಿಹಾರ ಸಿಕ್ಕಿಲ್ಲ.



• **ಕ್ಷೇತ್ರ: ಗಂಗಾವತಿ**
• **ಶಾಸಕ: ಪರಣ್ಣ ಮುನವಳ್ಳಿ** (ಬಿಜೆಪಿ)
▸ ಅಂಜನಾದ್ರಿ ಅಭಿವೃದ್ಧಿಗೆ ₹120 ಕೋಟಿ ಬಿಡುಗಡೆಯಾದರೂ ಭೂ ಸ್ವಾಧೀನ ಕಾರ್ಯ ಪೂರ್ಣಗೊಂಡಿಲ್ಲ. ಆದರೂ ಕಾಮಗಾರಿಗಳಿಗೆ ಭೂಮಿಪೂಜೆ ನಡೆಸಲಾಗಿದೆ. ಗಂಗಾವತಿ ಭಾಗದ ವಿಜಯನಗರ ಕಾಲುವೆಗಳ ಆಧುನೀಕರಣಕ್ಕೆ ಸರ್ಕಾರ ಕೋಟ್ಯಂತರ ರೂಪಾಯಿ ಹಣ ನೀಡಿದರೂ ಕಾಮಗಾರಿಯೇ ಪೂರ್ಣಗೊಂಡಿಲ್ಲ.



• **ಕ್ಷೇತ್ರ: ಯಲಬುರ್ಗಾ**
• **ಶಾಸಕ: ಹಾಲಪ್ಪ ಆಚಾರ್** (ಬಿಜೆಪಿ)
▸ ಕೃಷ್ಣಾ ನದಿಯಿಂದ ನೀರು ತಂದು ಕ್ಷೇತ್ರದ ಕೆರೆಗಳನ್ನು ತುಂಬಿಸುವ ಯೋಜನೆ ಪೂರ್ಣ ಪ್ರಮಾಣದಲ್ಲಿ ಅನುಷ್ಠಾನಗೊಂಡಿಲ್ಲ. ಭಾನಾಪುರದಲ್ಲಿ ‘ಟಾಯ್ ಕ್ಲಸ್ಟರ್’ ಆರಂಭವಾದರೂ ಸ್ಥಳೀಯ ಯುವಕರಿಗೆ ಹೆಚ್ಚಿನ ಪ್ರಮಾಣದಲ್ಲಿ ಉದ್ಯೋಗಾವಕಾಶ ಸಿಕ್ಕಿಲ್ಲ.



• **ಕ್ಷೇತ್ರ: ಕುಷ್ಟಗಿ**
• **ಶಾಸಕ: ಅಮರೇಗೌಡ ಬಯ್ಯಾಪುರ** (ಕಾಂಗ್ರೆಸ್)
▸ ದೋಟಿಹಾಳ ಕಂದಾಯ ಹೋಬಳಿ ಬೇಡಿಕೆ ಹಲವು ವರ್ಷಗಳಿಂದ ಈಡೇರಿಲ್ಲ. ಕೆರೆ ತುಂಬಿಸುವ ಯೋಜನೆ ಹೆಸರಿಗೆ ಮಾತ್ರ ಎಂಬಂತಾಗಿದೆ. ಸರಿಯಾದ ಕಾಲುವೆಗಳಿರದ ಕಾರಣ ಹೊಲಗಳಿಗೆ ನೀರು ಹರಿಯುತ್ತಿಲ್ಲ. ಹನುಮಸಾಗರ ತಾಲ್ಲೂಕು ಕೇಂದ್ರ ರಚನೆಗೆ ಒತ್ತಾಯಿಸಿ ಹೋರಾಟ ನಡೆದರೂ ಬೇಡಿಕೆ ಈಡೇರಿಲ್ಲ.




• **ಕ್ಷೇತ್ರ: ಕನಕಗಿರಿ**
• **ಶಾಸಕ: ಬಸವರಾಜ ದಢೇಸುಗೂರು** (ಬಿಜೆಪಿ)
▸ ತುಂಗಭದ್ರಾ ಜಲಾಶಯದಿಂದ ವ್ಯರ್ಥವಾಗಿ ಹರಿಯುವ ನೀರನ್ನು ತಡೆಯಲು ಕನಕಗಿರಿ ಸಮೀಪದ ನವಲಿಯಲ್ಲಿ ಸಮಾನಾಂತರ ಜಲಾಶಯ ನಿರ್ಮಾಣಕ್ಕೆ 2021–22ರ ಬಜೆಟ್‌ನಲ್ಲಿ ₹1,000 ಕೋಟಿ ಮೀಸಲಿಟ್ಟಿದ್ದರೂ ಕೆಲಸ ಆರಂಭವಾಗಿಲ್ಲ. ಕನಕಗಿರಿ ತಾಲ್ಲೂಕು ರಚನೆಯಾಗಿ 5 ವರ್ಷಗಳಾದರೂ ಪೂರ್ಣಪ್ರಮಾಣದ ಸರ್ಕಾರಿ ಕಚೇರಿಗಳು ಇಲ್ಲ.



ಬಿಜೆಪಿ ಅವಧಿಯ ಭ್ರಷ್ಟಾಚಾರದ ತನಿಖೆಗೆ ಸಚಿನ್ ಪೈಲಟ್ ಆಗ್ರಹ; ಮಂಗಳವಾರ ನಿರಶನ

ರಾಜಸ್ಥಾನ 'ಕೈ' ಬಣ ಗುದ್ದಾಟ ಮತ್ತೆ ಬಯಲಿಗೆ



ಸಚಿನ್ ಪೈಲಟ್

ಜೈಪುರ (ಪಿಟಿಐ): ರಾಜಸ್ಥಾನದಲ್ಲಿ ಬಿಜೆಪಿ ಆಡಳಿತಾವಧಿಯಲ್ಲಿ ನಡೆದಿದೆ ಎನ್ನಲಾದ ಭ್ರಷ್ಟಾಚಾರ ಕುರಿತು ತನಿಖೆ ನಡೆಸಬೇಕು ಎಂದು ಮಾಜಿ ಉಪ ಮುಖ್ಯಮಂತ್ರಿ ಸಚಿನ್ ಪೈಲಟ್ ಭಾನುವಾರ ಆಗ್ರಹಿಸಿದ್ದಾರೆ. ಈ ಬಗ್ಗೆ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಅವರ ಮೇಲೆ ಒತ್ತಡ ಹೇರಲು ಮಂಗಳವಾರ ಉಪವಾಸ ಸತ್ಯಾಗ್ರಹ ನಡೆಸಲು ನಿರ್ಧರಿಸಿದ್ದಾರೆ.

ಅಂದು ನಗರದ ಶಹೀದ್ ಸ್ಮಾರಕದ ಬಳಿ ದಿನವಿಡೀ ಉಪವಾಸ ಸತ್ಯಾಗ್ರಹ ನಡೆಸಲಿರುವುದಾಗಿ ಎಂದು ಪೈಲಟ್ ಹೇಳಿದ್ದಾರೆ.

ರಾಜ್ಯ ವಿಧಾನಸಭೆಗೆ ವರ್ಷಾಂತ್ಯಕ್ಕೆ ಚುನಾವಣೆ ನಡೆಯಲಿರುವುದರಿಂದ ಈ ಬೆಳವಣಿಗೆ ಗಮನ ಸೆಳೆದಿದೆ. ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಮತ್ತು ಸಚಿನ್ ಪೈಲಟ್ ಬಣಗಳ ನಡುವಿನ ಮುಸುಕಿನ ಗುದ್ದಾಟ ಮತ್ತೆ ಮುನ್ನೆಲೆಗೆ ಬಂದಂತಾಗಿದೆ.

ಇನ್ನೊಂದೆಡೆ, ಪೈಲಟ್ ಅವರ ಬೇಡಿಕೆಗೆ ರಾಜ್ಯ ಆಹಾರ ಸಚಿವ ಪ್ರತಾಪ್‌ಸಿಂಗ್ ಖಾಚರಿಯಾವಾಸ್ ಅವರೂ ದನಿಗೂಡಿಸಿದ್ದಾರೆ. ಹೀಗಾಗಿ, ರಾಜ್ಯ ಘಟಕದಲ್ಲಿ ಉದ್ಭವಿಸಿರುವ ಈ ಬಿಕ್ಕಟ್ಟನ್ನು ಚುನಾವಣೆಗೂ ಮುಂಚೆ ಬಗೆಹರಿಸುವಂತೆ ಎಂದು ಪಕ್ಷದ ಕೇಂದ್ರ ನಾಯಕತ್ವದ ಮೇಲೆ ಒತ್ತಡ ಹೇರಿದಂತಾಗಿದೆ ಎಂದು ವಿಶ್ಲೇಷಿಸಲಾಗುತ್ತಿದೆ.

'ವಸುಂಧರಾ ರಾಜೇ ನೇತೃತ್ವದ ಬಿಜೆಪಿ ಆಡಳಿತಾವಧಿಯಲ್ಲಿ ಭ್ರಷ್ಟಾಚಾರ ಕುರಿತು ಗೆಹಲೋತ್ ಸರ್ಕಾರ ಕ್ರಮ ತೆಗೆದುಕೊಂಡಿಲ್ಲ. ₹45 ಸಾವಿರ ಕೋಟಿಯ ಗಣಿ ಅಕ್ರಮ ಆರೋಪದ ಕುರಿತಂತೆ ತನಿಖೆ ನಡೆಸುವುದಾಗಿ ನಾವು ವಿರೋಧಪಕ್ಷದಲ್ಲಿದ್ದಾಗ ಭರವಸೆ ನೀಡಿದ್ದೆವು' ಎಂದು ಸಚಿನ್ ಪೈಲಟ್ ತಮ್ಮ ನಿವಾಸದಲ್ಲಿ ನಡೆದ ಮಾಧ್ಯಮಗೋಷ್ಠಿಯಲ್ಲಿ ಹೇಳಿದರು.

'ಚುನಾವಣೆಗೆ 6 ತಿಂಗಳಷ್ಟೇ ಉಳಿದಿದೆ. ಭ್ರಷ್ಟಾಚಾರ ವಿಷಯದಲ್ಲಿ ಒಳ ಒಪ್ಪಂದ ಇದೆ ಎಂಬ ವದಂತಿಗಳನ್ನು ವಿರೋಧ ಪಕ್ಷಗಳು ಹಬ್ಬಿಸುವ ಸಾಧ್ಯತೆ ಇದೆ. ಅದೂ ಅಲ್ಲದೆ, ನಮ್ಮ ಮಾತು ಮತ್ತು ಕೃತಿಗಳ ವ್ಯತ್ಯಾಸ ಇಲ್ಲ ಎಂಬ ಭಾವನೆ ಪಕ್ಷದ ಕಾರ್ಯಕರ್ತರಲ್ಲಿ ಮೂಡಿಸುವುದು ಅಗತ್ಯ. ಹೀಗಾಗಿ, ಈ ವಿಷಯದಲ್ಲಿ ಕ್ರಮ ಕೈಗೊಳ್ಳಬೇಕು' ಎಂದು ಪ್ರತಿಪಾದಿಸಿದರು.

'ಬಿಜೆಪಿ ಸರ್ಕಾರದ ಅವಧಿಯಲ್ಲಿ ಭ್ರಷ್ಟಾಚಾರ ನಡೆದಿದೆ ಎಂದು ನಾನು ಹಾಗೂ ಗೆಹಲೋತ್ ಇಬ್ಬರೂ ಆರೋಪಿಸಿದ್ದೆವು. ಆದರೆ, ನಿಷ್ಪಕ್ಷಪಾತ ತನಿಖೆ ನಡೆಸದೇ ತಪ್ಪಿತಸ್ಥರು ಯಾರು ಎಂಬುದು ಹೇಗೆ ಗೊತ್ತಾಗಬೇಕು. ಒಂದು ವೇಳೆ ಯಾರಿಂದಲೂ ಭ್ರಷ್ಟಾಚಾರ ನಡೆದಿಲ್ಲ ಎಂಬುದು ತನಿಖೆಯಿಂದ ದೃಢಪಟ್ಟರೆ ನಾನು ಮತ್ತು ಗೆಹಲೋತ್ ಹೇಳಿದ್ದು ಸುಳ್ಳು ಎಂಬುದನ್ನು ನಾವು ಒಪ್ಪಿಕೊಳ್ಳುತ್ತೇವೆ' ಎಂದು ಹೇಳಿದರು.

'ಕೇಂದ್ರ ಸರ್ಕಾರವು ವಿರೋಧ ಪಕ್ಷಗಳ ನಾಯಕರ ವಿರುದ್ಧ ಜಾರಿ ನಿರ್ದೇಶನಾಲಯ, ಸಿಬಿಐ, ಆದಾಯ ತೆರಿಗೆ ಇಲಾಖೆಯಂತಹ ತನಿಖಾ ಸಂಸ್ಥೆಗಳನ್ನು ಬಳಸಿಕೊಳ್ಳುತ್ತಿದೆ. ಆದರೆ, ರಾಜಸ್ಥಾನ ಸರ್ಕಾರ ಮಾತ್ರ ಭ್ರಷ್ಟಾಚಾರ ಪ್ರಕರಣಗಳ ತನಿಖೆಗಾಗಿ ತನ್ನ ಅಧೀನ ಸಂಸ್ಥೆಗಳನ್ನು ಬಳಸಿಕೊಳ್ಳುತ್ತಿಲ್ಲ' ಎಂದು ಪೈಲಟ್ ಹೇಳಿದರು.

ಏ. 11 ಮಹಾತ್ಮ ಜ್ಯೋತಿಬಾ ಫುಲೆ ಅವರ ಜನ್ಮದಿನ. ಫುಲೆ ಅವರು ಸೈನಿ ಸಮುದಾಯಕ್ಕೆ ಸೇರಿದ್ದು, ಗೆಹಲೋತ್ ಕೂಡಾ ಅದೇ ಸಮುದಾಯದವರು. ಅದೇ ದಿನ ನಿರಶನ ನಡೆಸಲು ಪೈಲಟ್ ನಿರ್ಧರಿಸಿರುವುದು ಗಮನಾರ್ಹ.

ಅಧಿಕಾರಕ್ಕೆ ಬಂದಾಗಿನಿಂದಲೂ ಹಗ್ಗಜಗ್ಗಾಟ...

ರಾಜಸ್ಥಾನದಲ್ಲಿ ಕಾಂಗ್ರೆಸ್ ಸರ್ಕಾರವು 2018ರಲ್ಲಿ ಅಸ್ತಿತ್ವಕ್ಕೆ ಬಂದ ದಿನದಿಂದಲೇ ಮುಖ್ಯಮಂತ್ರಿ ಪದವಿಗೆ ಸಂಬಂಧಿಸಿ ಗೆಹಲೋತ್ ಹಾಗೂ ಪೈಲಟ್ ನಡುವೆ ಹಗ್ಗಜಗ್ಗಾಟ ನಡೆದಿದೆ.

ರಾಜ್ಯದಲ್ಲಿ ನಾಯಕತ್ವ ಬದಲಾಗಬೇಕು ಎಂದು ಆಗ್ರಹಿಸಿ 2020ರ ಜುಲೈನಲ್ಲಿ ಪೈಲಟ್ ಹಾಗೂ ಅವರ ಬೆಂಬಲಿತ 18 ಶಾಸಕರು ಬಂಡಾಯವೆದ್ದಿದ್ದರು. ಇದು ರಾಜ್ಯದಲ್ಲಿ ಒಂದು ತಿಂಗಳು ಕಾಲ ರಾಜಕೀಯ ಬಿಕ್ಕಟ್ಟಿಗೆ ಕಾರಣವಾಗಿತ್ತು.

ಪೈಲಟ್ ವಿರುದ್ಧ ವಾಗ್ದಾಳಿ ನಡೆಸಿದ್ದ ಗೆಹಲೋತ್, 'ನನ್ನ ಸರ್ಕಾರವನ್ನು ಉರುಳಿಸಲು ಬಿಜೆಪಿ ಜೊತೆ ಸೇರಿ ಪೈಲಟ್ ಸಂಚು ರೂಪಿಸಿದ್ದಾರೆ' ಎಂದು ಆಗ ಆರೋಪಿಸಿದ್ದರು. ನಂತರ, ಪೈಲಟ್ ಎತ್ತಿರುವ ವಿಷಯಗಳ ಕುರಿತು ಪರಿಶೀಲನೆ ನಡೆಸುವುದಾಗಿ ಪಕ್ಷದ ಹೈಕಮಾಂಡ್ ಭರವಸೆ ನೀಡಿದ ನಂತರ, ಬಂಡಾಯ ಶಮನವಾಗಿತ್ತು.

'ಭಾರತ್ ಜೋಡೊ ಯಾತ್ರೆ' ರಾಜಸ್ಥಾನ ಪ್ರವೇಶಿಸುವ ಕೆಲ ದಿನಗಳ ಮುಂಚೆಯೂ ಪೈಲಟ್ ವಿರುದ್ಧ ವಾಗ್ದಾಳಿ ನಡೆಸಿದ್ದ ಗೆಹಲೋತ್, ಅವರನ್ನು ನಂಬಿಕೆ ದ್ರೋಹಿ ಎಂದು ಜರಿದಿದ್ದರು.

'ಅವರು (ಗೆಹಲೋತ್) ಬಳಸಿದಂತಹ ಭಾಷೆ ಬಳಸುವುದು ನನ್ನ ಸಂಸ್ಕಾರವಲ್ಲ' ಎಂದು ಪೈಲಟ್ ತಿರುಗೇಟು ನೀಡಿದ್ದರು.

ಕಾಜಲ್ ಹಿಂದೂಸ್ತಾನಿ ಬಂಧನ

ಗಿರ್ ಸೋಮನಾಥ್: ರಾಮನವಮಿಯಂದು ಊನಾದಲ್ಲಿ ದ್ವೇಷ ಭಾಷಣ ಮಾಡಿದ್ದ ಆರೋಪದಲ್ಲಿ ಬಲಪಂಥೀಯ ಕಾರ್ಯಕರ್ತೆ ಕಾಜಲ್ ಹಿಂದೂಸ್ತಾನಿ ಅವರನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಊನಾದ ಪೊಲೀಸರ ಮುಂದೆ ಕಾಜಲ್ ಭಾನುವಾರ ಶರಣಾಗಿದ್ದಾರೆ. ನ್ಯಾಯಾಲಯವು ಅವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ ಎಂದು ಹೇಳಿದ್ದಾರೆ. ಕಾಜಲ್ ದ್ವೇಷ ಭಾಷಣದ ಬಳಿಕ ಊನಾದಲ್ಲಿ ಕೋಮು ಹಿಂಸಾಚಾರ ನಡೆದಿತ್ತು.

ಉದ್ಧವ್‌ರನ್ನು ರಾವಣನಿಗೆ ಹೋಲಿಸಿದ ಶಿಂದೆ

ನೂರಾರು ಶಿವಸೈನಿಕರ ಜೊತೆ ಅಯೋಧ್ಯೆಗೆ ಭೇಟಿ ನೀಡಿದ ಮಹಾರಾಷ್ಟ್ರ ಮುಖ್ಯಮಂತ್ರಿ

ಪ್ರಜಾವಾಣಿ ವಾರ್ತೆ

ಲಖನೌ: ನೂರಾರು ಶಿವಸೈನಿಕರ ಜೊತೆ ಭಾನುವಾರ ಅಯೋಧ್ಯೆಗೆ ಭೇಟಿ ನೀಡಿದ ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂದೆ ಅವರು ತಮ್ಮ ವಿರೋಧಿ ಬಣದ ಉದ್ಧವ್ ಠಾಕ್ರೆ ಅವರನ್ನು ರಾವಣನಿಗೆ ಹೋಲಿಸಿದ್ದಾರೆ.

ಶಿವಸೇನಾದ ಸಂಸ್ಥಾಪಕ ಬಾಳಾ ಸಾಹೇಬ್ ಠಾಕ್ರೆ ಅವರ ನಿಜವಾದ ಉತ್ತರಾಧಿಕಾರಿ ನಾನೇ ಎಂದೂ ಅವರು ಪ್ರತಿಪಾದಿಸಿದ್ದಾರೆ. ಮುಖ್ಯಮಂತ್ರಿಯಾದ ಬಳಿಕ ರಾಮ ಲಲ್ಲಾನ ದರ್ಶನಕ್ಕಾಗಿ ಮೊದಲ ಬಾರಿ ಅಯೋಧ್ಯೆಗೆ ಭೇಟಿ ನೀಡಿದ ಅವರು, ಸರಯೂ ನದಿ ದಂಡೆಯಲ್ಲಿ ಆರತಿ ಬೆಳಗುವ ಕಾರ್ಯಕ್ರಮದಲ್ಲಿ ಪಾಲ್ಗೊಂಡರು.

ಅಯೋಧ್ಯೆಗೆ ದಿಢೀರ್ ಭೇಟಿ ನೀಡಿದ್ದ ಮಹಾರಾಷ್ಟ್ರದ ಉಪ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರು ಕೂಡ ಶಿಂದೆ ಅವರ ಜೊತೆಗಿದ್ದರು.

ಉದ್ಧವ್ ಅವರ ಹೆಸರು ಉಲ್ಲೇಖಿಸದೆ ವಾಗ್ದಾಳಿ ನಡೆಸಿದ ಶಿಂದೆ, ಕಳೆದ ವರ್ಷ ಉದ್ಧವ್ ನಿವಾಸದ ಮುಂದೆ ಹನುಮಾನ್ ಚಾಲೀಸಾ ಪಠಣ ಮಾಡುತ್ತೇವೆ ಎಂದು ಘೋಷಿಸಿದ್ದ ಪಕ್ಷೇತರ ಸಂಸದೆ ನವನೀತ್ ಕೌರ್ ಮತ್ತು ಅವರ ಪತಿ ರವಿ ರಾಣಾ ಅವರನ್ನು ಬಂಧಿಸಿರುವ ಘಟನೆಯನ್ನು ಮೆಲುಕು ಹಾಕಿದರು.

'2020ರಲ್ಲಿ ಪಾಲ್ಘಾರ್‌ನಲ್ಲಿ ಇಬ್ಬರು ಸಾಧುಗಳನ್ನು ಗುಂಪೊಂದು ಹಲ್ಲೆ ನಡೆಸಿ ಹತ್ಯೆಗೈದಾಗ ಉದ್ಧವ್ ನೇತೃತ್ವದ ಸರ್ಕಾರವು ಮೌನ ವಹಿಸಿತ್ತು' ಎಂದೂ ಶಿಂದೆ ಆರೋಪಿಸಿದ್ದಾರೆ.

ರವಿ ರಾಣಾ ಅವರೊಂದಿಗೆ ಅಯೋಧ್ಯೆಯ ಮಣ್ಣನ್ನು ಕೊಂಡೊಯ್ದು ಮಹಾರಾಷ್ಟ್ರದ ಅಮರಾವತಿಯಲ್ಲಿ 111 ಅಡಿ ಎತ್ತರದ ಹನುಮಾನ್ ಪ್ರತಿಮೆ ಸ್ಥಾಪಿಸಲಾಗುವುದು ಎಂದೂ ಅವರು ಈ ವೇಳೆ ಘೋಷಿಸಿದರು.

'ಭವ್ಯ ರಾಮಮಂದಿರ ಬಾಳಾಸಾಹೇಬರ ಕನಸಾಗಿತ್ತು. ಪ್ರಧಾನಿ ನರೇಂದ್ರ ಮೋದಿ ಅವರು ಅದನ್ನು ನನಸಾಗಿಸಿದ್ದಾರೆ' ಎಂದೂ ಹೇಳಿದರು.

ರಾಮ ದೇವರ ಕೃಪೆಯಿಂದ ತಮ್ಮ ಬಣಕ್ಕೆ ಶಿವಸೇನಾದ 'ಬಿಲ್ಲು ಮತ್ತು ಬಾಣ' ಚಿಹ್ನೆ ಲಭಿಸಿದೆ ಎಂದರು. ಬಿಜೆಪಿ ಮುಖಂಡರು ಶಿಂದೆ ಅವರ ಜೊತೆಗಿದ್ದರು.

ಮುಖ್ಯಾಂಶಗಳು

- ಬಾಳಾ ಠಾಕ್ರೆ ಉತ್ತರಾಧಿಕಾರಿ ನಾನೇ: ಶಿಂದೆ
- ಅಮರಾವತಿಯಲ್ಲಿ 111 ಅಡಿ ಎತ್ತರದ ಹನುಮಾನ್ ಪ್ರತಿಮೆ ಸ್ಥಾಪನೆ: ಘೋಷಣೆ

ಶಿಂದೆ, ಫಡಣವೀಸ್ ಅಯೋಧ್ಯೆ ಭೇಟಿ: ವಿಪಕ್ಷಗಳ ಟೀಕೆ

(ಮುಂಬೈ ವರದಿ): ಏಕನಾಥ ಶಿಂದೆ ಮತ್ತು ದೇವೇಂದ್ರ ಫಡಣವೀಸ್ ಅವರ ಅಯೋಧ್ಯೆ ಭೇಟಿಯು ಮಹಾರಾಷ್ಟ್ರದಲ್ಲಿ ಆಡಳಿತಾರೂಢ ಶಿವಸೇನಾ–ಬಿಜೆಪಿ ಮೈತ್ರಿಕೂಟ ಮತ್ತು ವಿರೋಧ ಪಕ್ಷಗಳ ಮೈತ್ರಿಕೂಟ ಮಹಾ ವಿಕಾಸ್ ಅಘಾಡಿ ನಡುವೆ ವಾಗ್ವಾದಕ್ಕೆ ಕಾರಣವಾಗಿದೆ.

ಇದು ಅಯೋಧ್ಯೆಗೆ ಭೇಟಿ ನೀಡುವ ಸರಿಯಾದ ಸಮಯವಲ್ಲ ಎಂದಿರುವ ಮಹಾ ವಿಕಾಸ್ ಅಘಾಡಿ, ಆಲಿಕಲ್ಲು ಮಳೆ ಮತ್ತು ಅಕಾಲಿಕ ಮಳೆಯಿಂದ ಬೆಳೆ ನಾಶವಾಗಿ ರಾಜ್ಯದ ವಿವಿಧೆಡೆ ರೈತರು ಯಾತನೆ ಅನುಭವಿಸಿದ್ದಾರೆ ಎಂದಿದೆ.

ಇದಕ್ಕೆ ಎದಿರೇಟು ನೀಡಿರುವ ಶಿಂದೆ ಅವರು, 'ನಾನು 24X7 ಲಭ್ಯವಿದ್ದೇನೆ. ನಾನು ಮನೆಯಿಂದ ಕೆಲಸ ಮಾಡುತ್ತಿಲ್ಲ. ಕ್ಷೇತ್ರಕ್ಕೆ ತೆರಳಿ ಕೆಲಸ ಮಾಡುತ್ತೇನೆ' ಎಂದಿದ್ದಾರೆ.

'ಸರ್ಕಾರವನ್ನು ಗುರಿಯಾಗಿಸಿ ಟೀಕಿಸಲು ವಿರೋಧ ಪಕ್ಷಗಳಿಗೆ ಯಾವುದೇ ಕಾರಣ ಸಿಗುತ್ತಿಲ್ಲ. ಅದಕ್ಕೆ ಈ ವಿಚಾರವಾಗಿ ಟೀಕಿಸುತ್ತಿವೆ' ಎಂದು ಫಡಣವೀಸ್ ಹೇಳಿದ್ದಾರೆ.

'ಶಿಂದೆ ಮತ್ತು ಫಡಣವೀಸ್ ಅವರು ಅಯೋಧ್ಯೆಗೆ ತೆಳಿರುವುದು ನಂಬಿಕೆಗೆ ಸಂಬಂಧಿಸಿದ ವಿಚಾರ. ಅವರ ನಂಬಿಕೆ ಅಯೋಧ್ಯೆಯಲ್ಲಿದೆ ನಮ್ಮ ನಂಬಿಕೆ ರೈತರಲ್ಲಿದೆ' ಎಂದು ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಹೇಳಿದ್ದಾರೆ.

'ನಾನು ಯಾವುದಾದರೂ ದೇವಾಲಯಕ್ಕೆ ಪೂಜೆ ಸಲ್ಲಿಸಲು ತೆರಳಿದರೆ ಅದನ್ನು ಪ್ರಚಾರಕ್ಕೆ ಬಳಸುವುದಿಲ್ಲ. ಮುಖ್ಯಮಂತ್ರಿಗಳು ದೇವರ ದರ್ಶನಕ್ಕೆ ತೆರಳಿದ್ದಾರೆ. ಅದಕ್ಕೆ ಈ ರೀತಿಯ ಪ್ರಚಾರ ಅಗತ್ಯ ಇರಲಿಲ್ಲ' ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಅಜಿತ್ ಪವಾರ್ ಹೇಳಿದ್ದಾರೆ.

ಶಿಂದೆ, ಫಡಣವೀಸ್ ಅಯೋಧ್ಯೆ ಭೇಟಿಯನ್ನು ಶಿವಸೇನಾ ಉದ್ಧವ್ ಠಾಕ್ರೆ ಬಣದ ವಕ್ತಾರ ಸಂಜಯ್ ರಾವುತ್ ಅವರು ಧಾರ್ಮಿಕ ಪ್ರವಾಸೋದ್ಯಮ ಎಂದು ಬಣ್ಣಿಸಿದ್ದಾರೆ. 'ಮಹಾರಾಷ್ಟ್ರದ ರೈತರು ಸಂಕಷ್ಟದಲ್ಲಿರುವಾಗ ಸರ್ಕಾರ ಅಯೋಧ್ಯೆಗೆ ತೆರಳಿದೆ' ಎಂದೂ ಹೇಳಿದ್ದಾರೆ.



ಮಹಾರಾಷ್ಟ್ರ ಸಿ.ಎಂ ಏಕನಾಥ ಶಿಂದೆ ಅವರು ಅಯೋಧ್ಯೆಗೆ ಭಾನುವಾರ ಭೇಟಿ ನೀಡಿದಾಗ ಬೆಂಬಲಿಗರು ಸ್ವಾಗತ ಕೋರಿದರು. ಉತ್ತರ ಪ್ರದೇಶ ಸಚಿವ ಸ್ವತಂತ್ರ ದೇವ್ ಸಿಂಗ್, ಮಹಾರಾಷ್ಟ್ರ ಡಿಸಿಎಂ ದೇವೇಂದ್ರ ಫಡಣವೀಸ್ ಇದ್ದರು —ಪಿಟಿಐ ಚಿತ್ರ

ಸುದ್ದಿ 2 ನಿಮಿಷ

ಸಿಆರ್‌ಪಿಎಫ್ ಪರೀಕ್ಷೆ: ಗೃಹ ಸಚಿವ ಅಮಿತ್ ಶಾಗೆ ಸ್ಟಾಲಿನ್ ಪತ್ರ

ಚೆನ್ನೈ (ಪಿಟಿಐ): ಕೇಂದ್ರೀಯ ಮೀಸಲು ಪೊಲೀಸ್ ಪಡೆ (ಸಿಆರ್‌ಪಿಎಫ್) ನೇಮಕಾತಿಗೆ ಸಂಬಂಧಿಸಿದಂತೆ ಭಾನುವಾರ ನಡೆಸಲಾದ ಕಂಪ್ಯೂಟರ್ ಪರೀಕ್ಷೆಯಲ್ಲಿ ತಮಿಳು ಭಾಷೆಗೆ ಅವಕಾಶ ನೀಡದಿರುವುದನ್ನು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರು ವಿರೋಧಿಸಿದ್ದಾರೆ.

'ತಮಿಳು ಸೇರಿದಂತೆ ಇತರ ಪ್ರಾದೇಶಿಕ ಭಾಷೆಗಳಲ್ಲೂ ಪರೀಕ್ಷೆ ಬರೆಯಲು ಅವಕಾಶ ನೀಡಬೇಕು' ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೆ ಸ್ಟಾಲಿನ್ ಪತ್ರ ಬರೆದಿದ್ದಾರೆ.

'ಪರೀಕ್ಷೆಯನ್ನು ಇಂಗ್ಲಿಷ್ ಅಥವಾ ಹಿಂದಿ ಭಾಷೆಯಲ್ಲಿ ಬರೆಯಬೇಕೆಂಬ ಕೇಂದ್ರದ ಅಧಿಸೂಚನೆಯಿಂದಾಗಿ ತಮಿಳುನಾಡಿನ ಅಭ್ಯರ್ಥಿಗಳು ತಮ್ಮ ಸ್ವಂತ ರಾಜ್ಯದಲ್ಲೇ ಪರೀಕ್ಷೆ ಬರೆಯಲು ಸಾಧ್ಯವಾಗಿಲ್ಲ. ಇದಲ್ಲದೇ 100 ಪ್ರಶ್ನೆಗಳಲ್ಲಿ 25 ಪ್ರಶ್ನೆಗಳು ಹಿಂದಿ ಭಾಷೆಗೆ ಸಂಬಂಧಿಸಿದವು. ಪರೀಕ್ಷೆಯಲ್ಲಿ ಇಂಗ್ಲಿಷ್ ಅಥವಾ ಹಿಂದಿ ಭಾಷೆ ಕಡ್ಡಾಯಗೊಳಿಸಿರುವುದು ಏಕಪಕ್ಷೀಯ ಮಾತ್ರವಲ್ಲ, ತಾರತಮ್ಯವೂ ಹೌದು' ಎಂದು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

'ಈ ನಡೆಯು ಅಭ್ಯರ್ಥಿಗಳು ಸರ್ಕಾರಿ ಕೆಲಸದಿಂದ ವಂಚಿತರಾಗುವಂತೆ ಮಾಡುತ್ತದೆ. ಪರೀಕ್ಷೆಯ ಅಧಿಸೂಚನೆಯು ಅಭ್ಯರ್ಥಿಗಳ ಸಾಂವಿಧಾನಿಕ ಹಕ್ಕಿಗೆ ವಿರುದ್ಧವಾಗಿದೆ. ಹಾಗಾಗಿ ಹಿಂದಿಯೇತರ ಅಭ್ಯರ್ಥಿಗಳಿಗೆ ತಮಿಳು ಸೇರಿದಂತೆ ತಮ್ಮ ಸ್ಥಳೀಯ ಭಾಷೆಯಲ್ಲಿ ಪರೀಕ್ಷೆ ಬರೆಯಲು ಅನುವು ಮಾಡಿಕೊಡುವ ವಿಷಯದಲ್ಲಿ ಮಧ್ಯಪ್ರವೇಶಿಸಬೇಕು' ಎಂದೂ ಪತ್ರದಲ್ಲಿ ಕೋರಿದ್ದಾರೆ.



ರಾಹುಲ್ ವಿರುದ್ಧ ಮಾನಹಾನಿ ಪ್ರಕರಣ: ಅಸ್ಸಾಂ ಸಿ.ಎಂ

ಗುವಾಹಟಿ (ಪಿಟಿಐ): 'ಅದಾನಿ ಸಮೂಹಕ್ಕೂ ನನಗೂ ಸಂಬಂಧ ಇದೆ ಎನ್ನುವಂಥ ಟ್ವೀಟ್ ಮಾಡಿರುವ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ವಿರುದ್ಧ ಮಾನಹಾನಿ ಪ್ರಕರಣ ದಾಖಲಿಸುತ್ತೇನೆ' ಎಂದು ಅಸ್ಸಾಂ ಮುಖ್ಯಮಂತ್ರಿ ಹಿಮಂತ್ ಬಿಸ್ವಾ ಶರ್ಮಾ ಅವರು ಭಾನುವಾರ ಹೇಳಿದ್ದಾರೆ.

ಪತ್ರಕರ್ತರೊಂದಿಗೆ ಮಾತನಾಡಿದ ಅವರು, 'ರಾಹುಲ್ ಮಾಡಿರುವ ಟ್ವೀಟ್ ಮಾನಹಾನಿಕರವಾಗಿದೆ. ಏ. 14ರಂದು ರಾಜ್ಯಕ್ಕೆ ಪ್ರಧಾನಿ ಭೇಟಿ ನೀಡಿದ ಬಳಿಕ ರಾಹುಲ್ ವಿರುದ್ಧ ಗುವಾಹಟಿಯಲ್ಲಿಯೇ ಪ್ರಕರಣ ದಾಖಲಿಸುತ್ತೇನೆ' ಎಂದರು.

ಕಾಂಗ್ರೆಸ್ ತೊರೆದು ಬಿಜೆಪಿ ಸೇರಿರುವ ಕೆಲವು ನಾಯಕರನ್ನು ಗುರಿಯಾಗಿಸಿ, ರಾಹುಲ್ ಟ್ವೀಟ್ ಮಾಡಿದ್ದರು. ಅದಾನಿ ಅವರ ಹೆಸರನ್ನು ಇಂಗ್ಲಿಷ್‌ನಲ್ಲಿ ದೊಡ್ಡದಾಗಿ ಬರೆದು, ಕಾಂಗ್ರೆಸ್ ತೊರೆದ ನಾಯಕರ ಹೆಸರುಗಳನ್ನು ಅದಾನಿಯ ಇಂಗ್ಲಿಷ್ ಹೆಸರಿಗೆ ಹೊಂದುವಂತೆ ಪೋಣಿಸಿ ಟ್ವೀಟ್ ಮಾಡಿದ್ದರು. ಗುಲಾಂ ನಬಿ ಆಜಾದ್, ಜ್ಯೋತಿರಾಧಿತ್ಯ ಸಿಂಧಿಯಾ, ಹಿಮಂತ್ ಬಿಸ್ವಾ ಶರ್ಮಾ, ಕಿರಣ್ ಕುಮಾರ್ ರೆಡ್ಡಿ ಹಾಗೂ ಅನಿಲ್ ಕೆ. ಆ್ಯಂಟನಿ ಅವರ ಹೆಸರುಗಳನ್ನು ಟ್ವೀಟ್‌ನಲ್ಲಿ ಉಲ್ಲೇಖಿಸಿದ್ದರು. 'ಅವರು ಸತ್ಯವನ್ನು ಮುಚ್ಚಿಡುತ್ತಿದ್ದಾರೆ. ಅದಕ್ಕಾಗಿಯೇ ಅವರು ಎಲ್ಲರನ್ನೂ ತಪ್ಪು ದಾರಿಗೆ ಎಳೆಯುತ್ತಿದ್ದಾರೆ! ಪ್ರಶ್ನೆಯು ಹಾಗೆಯೇ ಉಳಿಯಲಿದೆ– ಅದಾನಿ ಕಂಪನಿಗೆ ಯಾರ ₹20 ಸಾವಿರ ಬೇನಾಮಿ ಹಣ ಸಂದಾಯವಾಗಿದೆ?' ಎಂದೂ ರಾಹುಲ್ ತಮ್ಮ ಟ್ವೀಟ್‌ನಲ್ಲಿ ಕೇಳಿದ್ದರು.

ಐಐಟಿ ಬಾಂಬೆ ವಿದ್ಯಾರ್ಥಿ ಆತ್ಮಹತ್ಯೆ ಪ್ರಕರಣ: ಆರೋಪಿ ಬಂಧನ

ಮುಂಬೈ (ಪಿಟಿಐ): ಐಐಟಿ ಬಾಂಬೆಯ ಪರಿಶಿಷ್ಟ ಜಾತಿ ವಿದ್ಯಾರ್ಥಿ ದರ್ಶನ್ ಸೋಲಂಕಿ ಆತ್ಮಹತ್ಯೆ ಪ್ರಕರಣದಲ್ಲಿ ಅದೇ ಕಾಲೇಜಿನ ವಿದ್ಯಾರ್ಥಿ ಅರ್ಮಾನ್ ಖಾತ್ರಿ ಎಂಬಾತನನ್ನು ಮುಂಬೈನ ವಿಶೇಷ ತನಿಖಾ ತಂಡ (ಎಸ್‌ಐಟಿ) ಬಂಧಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಹಾಸ್ಟೆಲ್‌ನ ಒಂದೇ ಮಹಡಿಯಲ್ಲಿ ಸೋಲಂಕಿ, ಅರ್ಮಾನ್ ನೆಲೆಸಿದ್ದರು. ಮಾ. 3ರಂದು ಎಸ್‌ಐಟಿ ಅಧಿಕಾರಿಗಳು ವಶಪಡಿಸಿಕೊಂಡಿದ್ದ ಸೋಲಂಕಿಯ ಮರಣಪತ್ರದಲ್ಲಿ 'ಅರ್ಮಾನ್ ನನ್ನನ್ನು ಕೊಂದಿದ್ದಾನೆ' ಎಂದು ಬರೆಯಲಾಗಿತ್ತು. ಆ ಪತ್ರವನ್ನು ಕೈಬರಹ ತಜ್ಞರಲ್ಲಿ ಪರಿಶೀಲಿಸಿದಾಗ, ಅದು ಸೋಲಂಕಿ ಬರೆದ ಪತ್ರವೇ ಎಂದು ಖಚಿತವಾಗಿತ್ತು. ಈ ಕಾರಣ ಅರ್ಮಾನ್‌ನನ್ನು ಬಂಧಿಸಲಾಗಿದೆ ಎಂದು ತಿಳಿಸಿದ್ದಾರೆ.

ಅಹಮದಾಬಾದ್ ನಿವಾಸಿ ಸೋಲಂಕಿ, ಮೊದಲ ವರ್ಷದ ಬಿ.ಟೆಕ್ ವಿದ್ಯಾರ್ಥಿ. ಫೆ.12ರಂದು ಕ್ಯಾಂಪಸ್‌ನಲ್ಲಿರುವ ಹಾಸ್ಟೆಲ್‌ನ 7ನೇ ಮಹಡಿಯಿಂದ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದರು. ಜಾತಿ ನಿಂದನೆಯಿಂದ ಆತ್ಮಹತ್ಯೆ ಮಾಡಿಕೊಂಡಿದ್ದಾಗಿ ಪೋಷಕರು ಆರೋಪಿಸಿದ್ದರು.

ದಲಿತ ಮಹಿಳೆ ಮೇಲೆ ಅತ್ಯಾಚಾರ, ಹತ್ಯೆ: ವ್ಯಕ್ತಿ ಬಂಧನ

ಜೈಪುರ (ಪಿಟಿಐ): ಮನೆಯಲ್ಲಿ ಒಂಟಿಯಾಗಿದ್ದ ವೇಳೆ ದಲಿತ ಮಹಿಳೆಯೊಬ್ಬರ ಮೇಲೆ ಅತ್ಯಾಚಾರ ಎಸಗಿ, ಆಕೆಗೆ ಬೆಂಕಿ ಹಚ್ಚಿದ ಆರೋಪದಲ್ಲಿ ವ್ಯಕ್ತಿಯನ್ನು ಬಂಧಿಸಲಾಗಿದೆ. ಗುರುವಾರ (ಏ.6) ಕೃತ್ಯ ನಡೆದಿದ್ದು, ಪರಿಹಾರದ ಭರವಸೆ ಸಿಕ್ಕ ಬಳಿಕವಷ್ಟೇ ಮಹಿಳೆಯ ಅಂತ್ಯಸಂಸ್ಕಾರವನ್ನು ಕುಟುಂಬಸ್ಥರು ಭಾನುವಾರ ನೆರವೇರಿಸಿದರು.

ಮಹಿಳೆಯು ಮನೆಯಲ್ಲಿ ಒಂಟಿಯಾಗಿದ್ದ ವೇಳೆ ಶಕೂರ್ ಖಾನ್ ಎಂಬಾತ ಮಹಿಳೆಯ ಮೇಲೆ ಅತ್ಯಾಚಾರ ಎಸಗಿದ್ದಾನೆ. ಬಾಡ್ಮೇರ್ ಎಂಬಲ್ಲಿ ಈ ಕೃತ್ಯ ನಡೆದಿದ್ದು, ಶಕೂರ್ ಕೂಡ ಇದೇ ಪ್ರದೇಶದವನು. ಅತ್ಯಾಚಾರ ಎಸಗಿದ ಮೇಲೆ ಆ್ಯಸಿಡ್ ಅನ್ನು ಹೋಲುವ ವಸ್ತುವೊಂದನ್ನು ಆಕೆಯ ಮೈ ಮೇಲೆ ಎರಚಿ, ನಂತರ ಬೆಂಕಿ ಹಚ್ಚಲಾಗಿದೆ.

ಎರಡು ಮಕ್ಕಳ ತಾಯಿಯಾದ 30 ವರ್ಷದ ಮಹಿಳೆಗೆ ಶೇ 50ರಷ್ಟು ಸುಟ್ಟ ಗಾಯಗಳಾಗಿದ್ದವು. ಅವರನ್ನು ಜೋಧಪುರದ ಸರ್ಕಾರಿ ಆಸ್ಪತ್ರೆಗೆ ಶುಕ್ರವಾರ ದಾಖಲು ಮಾಡಲಾಗಿತ್ತು. ಶನಿವಾರ ಮಹಿಳೆ ಮೃತಪಟ್ಟಿದ್ದಾರೆ.


'ಇಬ್ಬರು ಪೊಲೀಸ್ ಅಧಿಕಾರಿಗಳು ನಮ್ಮ ಜೊತೆ ತಪ್ಪಾಗಿ ನಡೆದುಕೊಂಡಿದ್ದಾರೆ' ಎಂದು ದೂರಿದ ಮಹಿಳೆಯ ಕುಟುಂಬಸ್ಥರು ಮೃತದೇಹವನ್ನು ಪಡೆಯಲು ನಿರಾಕರಿಸಿದರು. 'ಉಪ ಪೊಲೀಸ್ ವರಿಷ್ಠಾಧಿಕಾರಿ ಸೇರಿ ಇಬ್ಬರು ಪೊಲೀಸ್ ಅಧಿಕಾರಿಗಳನ್ನು ವಜಾ ಮಾಡಬೇಕು. ₹1 ಕೋಟಿ ಪರಿಹಾರದ ಜೊತೆಗೆ ಕುಟುಂಬದ ಒಬ್ಬ ಸದಸ್ಯನಿಗೆ ಸರ್ಕಾರಿ ಕೆಲಸ ನೀಡಬೇಕು' ಎಂದು ಒತ್ತಾಯಿಸಿದರು.

'ಸರ್ಕಾರಿ ಯೋಜನೆಗಳ ಅನ್ವಯ ಗರಿಷ್ಠ ಮಟ್ಟದ ಪರಿಹಾರವನ್ನು ನೀಡುವುದಾಗಿ ಭರವಸೆ ನೀಡಿದ ಬಳಿಕ ಕುಟುಂಬದವರು ಮಹಿಳೆಯ ಮೃತದೇಹವನ್ನು ಮರಣೋತ್ತರ ಪರೀಕ್ಷೆಗೆ ನೀಡಿದರು. ಭಾನುವಾರ ಅಂತ್ಯಸಂಸ್ಕಾರ ನೆರವೇರಿಸಲಾಯಿತು' ಎಂದು ಬಾಡ್ಮೇರ್‌ನ ಹೆಚ್ಚುವರಿ ಜಿಲ್ಲಾ ಮ್ಯಾಜಿಸ್ಟ್ರೇಟರ್ ಅವನೀಶ್ ಪನ್ವಾರ್ ತಿಳಿಸಿದರು.

ನಿಯೋಗ ಭೇಟಿ: ಪಾಲಿ ಕ್ಷೇತ್ರದ ಸಂಸದ ಪಿ.ಪಿ. ಚೌಧರಿ, ವಿರೋಧ ಪಕ್ಷದ ಉಪ ನಾಯಕ ಸತೀಶ್ ಪೂನಿಯಾ, ಜಾಲೋರ್ ಕ್ಷೇತ್ರದ ಶಾಸಕ ಜೋಗೇಶ್ವರ್ ಗಾರ್ಗ್ ಅವರ ನಿಯೋಗವು ಮಹಿಳೆಯ ಕುಟುಂಬಸ್ಥರನ್ನು ಭೇಟಿ ಮಾಡಿ ಸಾಂತ್ವನ ಹೇಳಿತು.

'ಮಹಿಳೆಯಾಗಿ, ನೀವು ಮನೆಯಲ್ಲಿ ಒಂಟಿಯಾಗಿದ್ದೀರಿ ಎಂದಾದರೆ, ನೀವು ಸುರಕ್ಷಿತವಲ್ಲ ಎಂದೇ ಅರ್ಥ. ರಾಜ್ಯ ಸರ್ಕಾರದಿಂದ ರಕ್ಷಣೆಯನ್ನು ನಿರೀಕ್ಷಿಸಲು ಸಾಧ್ಯವಿಲ್ಲ. ಈ ಸರ್ಕಾರವು ತನ್ನ ಮಾಲೀಕರನ್ನು ಓಲೈಸುವುದರಲ್ಲಿ ನಿರತವಾಗಿದೆ. ಜನರಿಗಾಗಿ ಈ ಸರ್ಕಾರ ಕೆಲಸ ಮಾಡುತ್ತಿಲ್ಲ' ಎಂದು ಬಿಜೆಪಿ ಆರೋಪಿಸಿದೆ.

'ವಿಶ್ವಗುರುವಾಗುವ ಭಾರತದ ಪ್ರಯತ್ನ ತಡೆಯಲು ಸುಳ್ಳು ಮಾಹಿತಿ ಬಿತ್ತರ'



ಮೋಹನ್ ಭಾಗವತ್

ಮುಂಬೈ (ಪಿಟಿಐ): ಭಾರತವು ವಿಶ್ವಗುರು ಪಟ್ಟವೇರುವತ್ತ ಹೆಜ್ಜೆ ಹಾಕುತ್ತಿದೆ. ಆದರೆ, ಈ ಕುರಿತು ಸುಳ್ಳು ಹಾಗೂ ತಿರುಚಿದ ಮಾಹಿತಿಯನ್ನು ಪ್ರಸಾರ ಮಾಡುವ ಮೂಲಕ ಇದಕ್ಕೆ ತಡೆ ಒಡ್ಡಲಾಗುತ್ತಿದೆ ಎಂದು ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್) ಮುಖ್ಯಸ್ಥ ಮೋಹನ್ ಭಾಗವತ್ ಭಾನುವಾರ ಹೇಳಿದರು.

ಇಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಅವರು, '1857ರಲ್ಲಿ ನಡೆದ ಮೊದಲ ಸ್ವಾತಂತ್ರ್ಯ ಸಂಗ್ರಾಮದ ನಂತರ ಇಂಥ ತಪ್ಪುಕಲ್ಪನೆಗಳನ್ನು ಬಿತ್ತರಿಸುವ ಕಾರ್ಯ ಆರಂಭಗೊಂಡಿತು. ಆದರೆ, ಇಂತಹ ಕೃತ್ಯಗಳಲ್ಲಿ ತೊಡಗಿದ್ದವರಿಗೆ ಸ್ವಾಮಿ ವಿವೇಕಾನಂದ ಅವರು ತಕ್ಕ ಪ್ರತ್ಯುತ್ತರ ನೀಡಿದರು' ಎಂದರು.

'ಮುಂದಿನ 20–30 ವರ್ಷಗಳಲ್ಲಿ ಭಾರತವು ವಿಶ್ವಗುರುವಾಗಿ ಹೊರಹೊಮ್ಮುವುದು ನಿಶ್ಚಿತ. ಈ ಗುರಿ ಸಾಧನೆ ಹಾಗೂ ಇಂಥ ಬದಲಾವಣೆಯನ್ನು ಅನುಭವಿಸುವ ಸಲುವಾಗಿ ನಾವು ಎರಡು ಪೀಳಿಗೆಗಳನ್ನು ಅಣಿಗೊಳಿಸಬೇಕಿದೆ' ಎಂದು ಭಾಗವತ್ ಪ್ರತಿಪಾದಿಸಿದರು.

'ಕಳೆದ ಹಲವು ವರ್ಷಗಳಿಂದ ವಿವಿಧ ಕ್ಷೇತ್ರಗಳಲ್ಲಿ ಭಾರತವು ಗಮನಾರ್ಹ ಪ್ರಗತಿ ಸಾಧಿಸಿದೆ. ಆದರೆ, ಭಾರತದ ಈ ಸಾಧನೆ ಕುರಿತು ಜಾಗತಿಕ ಮಟ್ಟದಲ್ಲಿ ಸುಳ್ಳು ಮಾಹಿತಿಯನ್ನು ಹಬ್ಬಿಸುವ ಕಾರ್ಯ ನಡೆಯುತ್ತಿದೆ. ಇಂಥ ಪ್ರಯತ್ನಗಳಿಗೆ ಪ್ರತ್ಯುತ್ತರ ನೀಡಲು ಪೀಳಿಗೆಗಳನ್ನು ಸಜ್ಜುಗೊಳಿಸಬೇಕು ಹಾಗೂ ವಿಶ್ವದಲ್ಲಿರುವ ಒಳ್ಳೆಯ ಜನರು ಭಾರತದತ್ತ ಮುಖ ಮಾಡುವಂತೆ ಮಾಡಬೇಕು' ಎಂದೂ ಹೇಳಿದರು.

ಅದಾನಿ ಮಹತ್ವಾಕಾಂಕ್ಷಿ: ಪವಾರ್

ನವದೆಹಲಿ (ಪಿಟಿಐ): 'ಉದ್ಯಮಿ ಗೌತಮ್ ಅದಾನಿ ಅವರು ಸರಳ ವ್ಯಕ್ತಿ, ಶ್ರಮಜೀವಿ. ಮೂಲ ಸೌಕರ್ಯ ಕ್ಷೇತ್ರದಲ್ಲಿ ದೊಡ್ಡ ಸಾಧನೆ ಮಾಡುವ ಮಹತ್ವಾಕಾಂಕ್ಷೆ ಹೊಂದಿದವರು' ಎಂದು ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಬಣ್ಣಿಸಿದ್ದಾರೆ.

ಮರಾಠಿ ಭಾಷೆಯಲ್ಲಿ 2015ರಲ್ಲಿ ಪ್ರಕಟವಾಗಿರುವ, ತಮ್ಮ ಆತ್ಮಚರಿತ್ರೆ 'ಲೋಕ್ ಮಾಜೆ ಸಾಂಗಟಿ..' ಕೃತಿಯಲ್ಲಿ ಅವರು ಈ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಎರಡು ದಶಕದ ಹಿಂದೆ ಅದಾನಿ ಅವರು ಕಲ್ಲಿದ್ದಲು ಕ್ಷೇತ್ರವನ್ನು ಪ್ರವೇಶಿಸುವ ಅವಧಿ ವೇಳೆಯಲ್ಲಿ ತಮ್ಮ ನಡುವಿನ ಗೆಳೆತನವನ್ನು ಮೆಲುಕು ಹಾಕಿದ್ದಾರೆ.

'ಉಷ್ಣ ವಿದ್ಯುತ್ ವಲಯಕ್ಕೆ ಅದಾನಿ ಪ್ರವೇಶಿಸಲು ನನ್ನ ಒತ್ತಾಯವೂ ಕಾರಣ. ಅವರು ವಜ್ರದ ಉದ್ಯಮದಲ್ಲಿ ನೆಲೆಯೂರಿದ್ದರು. ಅದರೆ, ಅದರಲ್ಲಿ ಅವರಿಗೆ ಆಸಕ್ತಿ ಇರಲಿಲ್ಲ. ಮೂಲಸೌಕರ್ಯ ಕ್ಷೇತ್ರದಲ್ಲಿ ಸಾಧಿಸುವ ಗುರಿ ಇತ್ತು. ಆಗ ಗುಜರಾತ್ ಮುಖ್ಯಮಂತ್ರಿಯಾಗಿದ್ದ ಚಿಮನ್‌ಭಾಯ್ ಪಟೇಲ್ ಜೊತೆಗೆ ಉತ್ತಮ ಬಾಂಧವ್ಯ ಹೊಂದಿದ್ದರು. ಮುಂದ್ರಾದಲ್ಲಿ ಬಂದರು ಅಭಿವೃದ್ಧಿಗೆ ಪ್ರಸ್ತಾವ ಸಲ್ಲಿಸಿದ್ದರು' ಎಂದು ಪವಾರ್ ಅವರು ಬರೆದಿದ್ದಾರೆ.

'ಮುಖ್ಯಮಂತ್ರಿಯಾಗಿದ್ದ ಪಟೇಲ್ ಅವರು, ಉದ್ದೇಶಿತ ಬಂದರು ಪಾಕಿಸ್ತಾನ ಗಡಿಗೆ ಹತ್ತಿರದಲ್ಲಿದೆ ಎಂದು ಗೌತಮ್ ಅದಾನಿ ಅವರಿಗೆ ಆಗಲೇ ಎಚ್ಚರಿಸಿದ್ದರು. ಈ ನಡುವೆಯೂ ಅದಾನಿ ಸವಾಲು ಸ್ವೀಕರಿಸಿದ್ದರು. ನಂತರ ನನ್ನ ಸಲಹೆಯ ಮೇರೆಗೆ ಕಲ್ಲಿದ್ದಲು ಉದ್ಯಮ, ಉಷ್ಣ ವಿದ್ಯುತ್ ಕ್ಷೇತ್ರ ಪ್ರವೇಶಿಸಿದ್ದರು' ಎಂದು ಸ್ಮರಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

'ಈಸ್ಟರ್ ದಾಳಿ ಸಂತ್ರಸ್ತರಿಗೆ ನ್ಯಾಯ'

ಕೊಲಂಬೊ (ಪಿಟಿಐ): 2019ರ ಈಸ್ಟರ್ ದುರಂತದಲ್ಲಿ ಮೃತಪಟ್ಟವರಿಗೆ ನ್ಯಾಯ ದೊರಕಿಸಿಕೊಡಲಾಗುವುದು ಎಂದು ಶ್ರೀಲಂಕಾ ಅಧ್ಯಕ್ಷ ರಾನಿಲ್ ವಿಕ್ರಮಸಿಂಘೆ ಭರವಸೆ ನೀಡಿದರು.

ಈ ದಾಳಿಯಲ್ಲಿ 11 ಭಾರತೀಯರು ಸೇರಿದಂತೆ 270 ಮಂದಿ ಸಾವಿಗೀಡಾಗಿದ್ದರು. 'ಯಾವುದೇ ಪ್ರಭಾವಕ್ಕೆ ಒಳಗಾಗದೆ ಸ್ವತಂತ್ರವಾಗಿ ಹಾಗೂ ನಿಷ್ಪಕ್ಷಪಾತವಾಗಿ ಕಾನೂನು ಕ್ರಮ ಜರುಗಿಸಲಾಗುವುದು. ಬಲಿಯಾದ ಎಲ್ಲರಿಗೂ ನ್ಯಾಯ ಒದಗಿಸಲು ಅಗತ್ಯ ಕ್ರಮ ತೆಗೆದುಕೊಳ್ಳಲಾಗಿದೆ' ಎಂದು ಅವರು ಹೇಳಿದರು.

ಮೇಯರ್ ಚುನಾವಣೆ: ಇಬ್ಬರು ಭಾರತೀಯರ ಸ್ಪರ್ಧೆ

ಲಂಡನ್ (ಪಿಟಿಐ): ಯುರೋಪ್‌ನ ಲೈಸೆಸ್ಟರ್ ನಗರದ ಮೇಯರ್ ಹುದ್ದೆಗೆ ಇಬ್ಬರು ಭಾರತೀಯ ಅಭ್ಯರ್ಥಿಗಳು ಸ್ಪರ್ಧಿಸುತ್ತಿದ್ದಾರೆ. ಚುನಾವಣೆಯು ಮೇ 4ರಂದು ನಡೆಯಲಿದೆ. ಕನ್ಸರ್ವೇಟಿವ್ ಪಕ್ಷದ ಕೌನ್ಸಿಲರ್ ಸಂಜಯ್ ಮೋಡ್‌ವಾಡಿಯಾ ಹಾಗೂ ಲೇಬರ್ ಪಕ್ಷದ ಮಾಜಿ ಕೌನ್ಸಿಲರ್ ರಿಟಾ ಪಟೇಲ್ ಚುನಾವಣೆಯಲ್ಲಿ ಸೆಣಸಲಿದ್ದಾರೆ.

ನುಸುಳುಕೋರನನ್ನು ಹೊಡೆದುರುಳಿಸಿದ ಸೇನಾ ಪಡೆ

ಪೂಂಛ್/ ಜಮ್ಮು (ಪಿಟಿಐ): 'ಜಮ್ಮು ಮತ್ತು ಕಾಶ್ಮೀರದ ಪೂಂಛ್ ಜಿಲ್ಲೆಯ ಬಳಿಯಿರುವ ಗಡಿ ನಿಯಂತ್ರಣ ರೇಖೆಯ ಮೂಲಕ ಶನಿವಾರ ತಡರಾತ್ರಿ ದೇಶದೊಳಗೆ ನುಸುಳಲು ಯತ್ನಿಸುತ್ತಿದ್ದ ಪಾಕಿಸ್ತಾನದ ನುಸುಳುಕೋರರಲ್ಲಿ ಒಬ್ಬನನ್ನು ಭಾರತೀಯ ಸೇನಾ ಪಡೆ ಹತ್ಯೆ ಮಾಡಿ, ಇಬ್ಬರನ್ನು ಬಂಧಿಸಿದೆ' ಎಂದು ರಕ್ಷಣಾ ವಕ್ತಾರರೊಬ್ಬರು ತಿಳಿಸಿದರು.

'ಈ ಮೂವರು, ಚಂಜಲ್ ಹಳ್ಳಿಯಲ್ಲಿನ ಮೈದಾನ್ ಮೊಹಲ್ಲಾದ ನಿವಾಸಿಗಳು. 17 ಕೆ.ಜಿ ಮಾದಕ ವಸ್ತು-ಕಳ್ಳಸಾಗಣೆ ಉದ್ದೇಶದಿಂದ ಶಾಹ್‌ಪುರ ಸೆಕ್ಟರ್ ಮೂಲಕ ಒಳನುಸುಳಲು ಯತ್ನಿಸಿದ್ದರು ಎಂದು ಹೇಳಿದರು.



ಗುಜರಾತ್ ಟೈಟನ್ಸ್‌ಗೆ ಆಘಾತ; ಕೋಲ್ಕತ್ತಗೆ ರೋಚಕ ಗೆಲುವು: ಒಂದೇ ಓವರ್‌ನಲ್ಲಿ ಐದು ಸಿಕ್ಸರ್

ರಿಂಕು ಸಿಂಗ್ ಸಿಕ್ಸರ್ ಕಿಂಗ್

ಅಹಮದಾಬಾದ್ (ಪಿಟಿಐ): ರಿಂಕು ಸಿಂಗ್ ಸಿಡಿಸಿದ ಸತತ ಐದು ಸಿಕ್ಸರ್‌ಗಳ ಬಲದಿಂದ ಕೋಲ್ಕತ್ತ ನೈಟ್ ರೈಡರ್ಸ್ ತಂಡವು ಹಾಲಿ ಚಾಂಪಿಯನ್ ಗುಜರಾತ್ ಟೈಟನ್ಸ್ ಎದುರು ಪವಾಡಸದೃಶ ಜಯ ದಾಖಲಿಸಿತು. ಐಪಿಎಲ್‌ನಲ್ಲಿ ಹೊಸ ಇತಿಹಾಸ ರಚನೆಯಾಯಿತು.

ಮೊಟೇರಾದ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಭಾನುವಾರ ಸಂಜೆ ಗುಜರಾತ್ ತಂಡವು ನೀಡಿದ್ದ 205 ರನ್‌ಗಳ ಗುರಿಯನ್ನು ಕೋಲ್ಕತ್ತ ಬೆನ್ನಟ್ಟಿತ್ತು. ಕೊನೆಯ ಓವರ್‌ನಲ್ಲಿ ಗೆಲುವಿಗೆ 29 ರನ್‌ಗಳ ಅಗತ್ಯವಿತ್ತು. ಬಹುತೇಕ ಅಸಾಧ್ಯ ಎಂಬಂತಿದ್ದ ಗುರಿಯನ್ನು ರಿಂಕು ಅವರು ಸಾಧ್ಯಗೊಳಿಸಿದರು.

ಮಧ್ಯಮವೇಗಿ ಯಶ್ ದಯಾಳ್ 20ನೇ ಓವರ್ ಬೌಲಿಂಗ್ ಮಾಡಿದರು. ಅವರ ಮೊದಲ ಎಸೆತವನ್ನು ಎದುರಿಸಿದ ಉಮೇಶ್ ಯಾದವ್ ಒಂದು ರನ್ ಪಡೆಯುವಲ್ಲಿ ಯಶಸ್ವಿಯಾದರು. ಸ್ಟ್ರೈಕ್‌ಗೆ ಬಂದ ರಿಂಕು ಸಿಂಗ್ ಅಸಾಧ್ಯ ಸವಾಲನ್ನು 'ಸಾಧ್ಯ' ಮಾಡಿದರು.

ನಂತರ ಐದು ಎಸೆತಗಳಲ್ಲಿಯೂ ಸಿಕ್ಸರ್‌ಗಳನ್ನು ಎತ್ತಿದರು. ಮೂರು ಫುಲ್ ಟಾಸ್, ಒಂದು ಲೆಂಗ್ತ್ ಮತ್ತು ಒಂದು ನಿಧಾನಗತಿಯ ಶಾರ್ಟ್ ಎಸೆತಗಳನ್ನು ಪ್ರೇಕ್ಷಕರ ಗ್ಯಾಲರಿಗೆ ಕಳಿಸುವಲ್ಲಿ ಎಡಗೈ ಬ್ಯಾಟರ್ ರಿಂಕು ಯಶಸ್ವಿಯಾದರು.

ತಂಡ ಗೆಲುವು ಸಾಧಿಸುತ್ತಿದ್ದಂತೆಯೇ ಮುಖ್ಯ ಕೋಚ್ ಚಂದ್ರಕಾಂತ್ ಪಂಡಿತ್ ಮತ್ತು ಸಹ ಆಟಗಾರರು ಕ್ರೀಡಾಂಗಣಕ್ಕೆ ಧಾವಿಸಿದರು. ರಿಂಕು ಸಿಂಗ್ ಅವರನ್ನು ಅಪ್ಪಿಕೊಂಡು ಸಂಭ್ರಮಿಸಿದರು. ಇತ್ತ ಯಶ್ ದಯಾಳ್ ಕಣ್ಣೀರು ಹಾಕುತ್ತ ಕುಸಿದರು. ಗುಜರಾತ್ ತಂಡದ ಸಹ ಆಟಗಾರರು ಅವರನ್ನು ಸಂತೈಸಿದರು.

ಈ ಆವೃತ್ತಿಯಲ್ಲಿ ಮೂರನೇ ಪಂದ್ಯವಾಡಿದ ಗುಜರಾತ್‌ಗೆ ಇದು ಮೊದಲ ಸೋಲು. ಕೆಕೆಆರ್‌ಗೆ ಎರಡನೇ ಗೆಲುವು. ಈಚೆಗೆ ತನ್ನ ಎರಡನೇ ಪಂದ್ಯದಲ್ಲಿ ಕೋಲ್ಕತ್ತ ತಂಡವು ಆರ್‌ಸಿಬಿ ಎದುರು ಜಯಿಸಿತ್ತು.

ಮೊದಲೆರಡು ಪಂದ್ಯಗಳನ್ನು ಜಯಿಸಿ ಆತ್ಮವಿಶ್ವಾಸದಲ್ಲಿದ್ದ ಗುಜರಾತ್ ಬಳಗವು ಟಾಸ್ ಗೆದ್ದು ಬ್ಯಾಟಿಂಗ್ ಮಾಡಿತು.

ಸಾಯಿ ಸುದರ್ಶನ್ (53; 38ಎ, 4X3) ಹಾಗೂ ವಿಜಯ್ ಶಂಕರ್ (ಔಟಾಗದೆ 63: 24ಎ, 4X4, 6X5) ಅವರ ಬಿರುಸಿನ ಅರ್ಧಶತಕಗಳ ಬಲದಿಂದ 20 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 204 ರನ್ ಗಳಿಸಿತು. ಕೆಕೆಆರ್ ತಂಡದ ಸುನೀಲ್ ನಾರಾಯಣ್ ಮೂರು ವಿಕೆಟ್ ಪಡೆಯುವಲ್ಲಿ ಯಶಸ್ವಿಯಾದರು.

ಹಾರ್ದಿಕ್ ಪಾಂಡ್ಯ ಗೈರು ಹಾಜರಿಯಲ್ಲಿ ತಂಡವನ್ನು ಮುನ್ನಡೆಸಿದ ರಶೀದ್ ಖಾನ್ ಬೌಲಿಂಗ್‌ನಲ್ಲಿ ಯಶಸ್ವಿಯಾದರು. ಆದರೆ ಬೌಲರ್‌ಗಳ ನಿಯೋಜನೆಯಲ್ಲಿ ಎಡವಿದರು.

ಗುರಿ ಬೆನ್ನಟ್ಟಿದ್ದ ಕೋಲ್ಕತ್ತ ತಂಡಕ್ಕೆ ಆರಂಭದಲ್ಲಿಯೇ ಮೊಹಮ್ಮದ್ ಶಮಿ ಮತ್ತು ಜೋಶುವ ಲಿಟಲ್ ಪೆಟ್ಟುಕೊಟ್ಟಿದ್ದರು. ಆದರೆ, ವೆಂಕಟೇಶ್ ಅಯ್ಯರ್ (83; 40ಎ) ಹಾಗೂ ನಿತೀಶ್ ರಾಣಾ (45; 29ಎ) ಅವರು ತಂಡದ ಹೋರಾಟವನ್ನು ಜೀವಂತವಾಗಿಟ್ಟರು.

ರಶೀದ್ ಹ್ಯಾಟ್ರಿಕ್: ಅಯ್ಯರ್ ಮತ್ತು ರಾಣಾ ನಿರ್ಗಮನದ ನಂತರ ಇನಿಂಗ್ಸ್ ಹೊಣೆ ರಿಂಕು ಸಿಂಗ್ ಮೇಲೆ ಬಿತ್ತು. ಈ ಮಧ್ಯೆ ಸ್ಪಿನ್ನರ್ ರಶೀದ್ ಖಾನ್ ಸತತ ಎಸೆತಗಳಲ್ಲಿ ಮೂರು ವಿಕೆಟ್‌ಗಳನ್ನು ಪಡೆದು ತಂಡಕ್ಕೆ ಮೇಲುಗೈ ಒದಗಿಸಿದರು. ಆ್ಯಂಡ್ರೂ ರಸೆಲ್, ಸುನೀಲ್ ನಾರಾಯಣ್, ಶಾರ್ದೂಲ್ ಠಾಕೂರ್ ಅವರು ಹೀಗೆ ಬಂದು ಹಾಗೆ ಹೋದರು. ಈ ನಡುವೆಯೂ ಅಬ್ಬರಿಸಿದ ಉತ್ತರಪ್ರದೇಶದ ಹುಡುಗ ರಿಂಕು ತಂಡವನ್ನು ಗೆಲ್ಲಿಸಿದರು.



ಕೋಲ್ಕತ್ತ ನೈಟ್ ರೈಡರ್ಸ್ ತಂಡದ ರಿಂಕು ಸಿಂಗ್ –ಪಿಟಿಐ ಚಿತ್ರ

ಸ್ಕೋರ್ ಕಾರ್ಡ್

ಗುಜರಾತ್ ಟೈಟನ್ಸ್ 4ಕ್ಕೆ 204 (20 ಓವರ್)

ವೃದ್ಧಿಮಾನ್ ಸಿ ಜಗದೀಶನ್ ಬಿ ನಾರಾಯಣ್ 17 (17ಎ, 4x3)
ಗಿಲ್ ಸಿ ಉಮೇಶ್ ಬಿ ನಾರಾಯಣ್ 39 (31ಎ, 4x5)
ಸುದರ್ಶನ್ ಸಿ ಅನುಕೂಲ್ (ಬದಲಿ) ಬಿ ನಾರಾಯಣ್ 53 (38ಎ, 4x3, 6x2)
ಅಭಿನವ್ ಬಿ ಸುಯಶ್ 14 (8ಎ, 4x3)
ವಿಜಯ್ ಔಟಾಗದೇ 63 (24ಎ, 4x4, 6x5)
ಮಿಲ್ಲರ್ ಔಟಾಗದೇ 2 (3ಎ)

ಇತರೆ: ((ಬೈ 1, ಲೆಗ್‌ಬೈ 4, ನೋಬಾಲ್ 1, ವೈಡ್ 10) 16

ವಿಕೆಟ್ ಪತನ: 1-33 (ವೃದ್ಧಿಮಾನ್ ಸಹಾ, 4.2), 2-100 (ಶುಭಮನ್ ಗಿಲ್, 11.4), 3-118 (ಅಭಿನವ್ ಮನೋಹರ್, 13.3), 4-153 (ಸಾಯಿ ಸುದರ್ಶನ್, 17.3)

ಬೌಲಿಂಗ್: ಉಮೇಶ್ ಯಾದವ್ 3-0-24-0, ಶಾರ್ದೂಲ್ ಠಾಕೂರ್ 3-0-40-0, ಲಾಕಿ ಫರ್ಗ್ಯೂಸನ್ 4-0-40-0, ಸುನಿಲ್ ನಾರಾಯಣ್ 4-0-33-3, ವರುಣ್ ಚಕ್ರವರ್ತಿ 2-0-27-0, ಸುಯಶ್ ಶರ್ಮಾ 4-0-35-1

ಕೋಲ್ಕತ್ತ ನೈಟ್ ರೈಡರ್ಸ್ 7ಕ್ಕೆ 207 (20 ಓವರ್)

ಗುರ್ಬಾಜ್ ಸಿ ದಯಾಳ್ ಬಿ ಶಮಿ 15 (12ಎ, 4X1, 6X1)
ಜಗದೀಶನ್ ಸಿ ಅಭಿನವ್ ಬಿ ಲಿಟಲ್ 6 (8ಎ, 4X1)
ವೆಂಕಟೇಶ್ ಸಿ ಶುಭಮನ್ ಬಿ ಜೋಸೆಫ್ 83 (40ಎ, 4X8, 6X5)
ನಿತೀಶ್ ಸಿ ಶಮಿ ಬಿ ಜೋಸೆಫ್ 45 (29ಎ, 4X4, 6X3)
ರಿಂಕು ಔಟಾಗದೆ 48 (21ಎ, 4X1, 6X6)
ರಸೆಲ್ ಸಿ ಭರತ್ (ಬದಲಿ) ಬಿ ರಶೀದ್ 1 (2ಎ)
ನಾರಾಯಣ್ ಸಿ ಜಯಂತ್ (ಬದಲಿ) ಬಿ ರಶೀದ್ 0 (1ಎ)
ಶಾರ್ದೂಲ್ ಎಲ್‌ಬಿಡಬ್ಲ್ಯು ಬಿ ರಶೀದ್ 0 (1ಎ), ಉಮೇಶ್ ಔಟಾಗದೆ 5 (6ಎ)

ಇತರೆ: (ಲೆಗ್‌ಬೈ 1, ವೈಡ್ 3) 4

ವಿಕೆಟ್ ಪತನ: 1-20 (ರಹಮಾನುಲ್ಲಾ ಗುರ್ಬಾಜ್, 2.3), 2-28 (ನಾರಾಯಣ್ ಜಗದೀಶನ್, 3.6), 3-128 (ನಿತೀಶ್ ರಾಣಾ, 13.1), 4-154 (ವೆಂಕಟೇಶ್ ಅಯ್ಯರ್, 15.5), 5-155 (ಆ್ಯಂಡ್ರೆ ರಸೆಲ್, 16.1), 6-155 (ಸುನಿಲ್ ನಾರಾಯಣ್, 16.2), 7-155 (ಶಾರ್ದೂಲ್ ಠಾಕೂರ್, 16.3)

ಬೌಲಿಂಗ್: ಮೊಹಮ್ಮದ್ ಶಮಿ 4-0-28-1, ಜೋಶ್ ಲಿಟಲ್ 4-0-45-1, ಅಲ್ಜರಿ ಜೋಸೆಫ್ 4-0-27-2, ಯಶ್ ದಯಾಳ್ 4-0-69-0, ರಶೀದ್ ಖಾನ್ 4-0-37-3

ಫಲಿತಾಂಶ: ಕೋಲ್ಕತ್ತ ನೈಟ್ ರೈಡರ್ಸ್‌ಗೆ 3 ವಿಕೆಟ್ ಜಯ

ಒಂದೇ ಓವರ್‌ನಲ್ಲಿ ಐದು ಸಿಕ್ಸರ್ ಸಿಡಿಸಿದವರು (ಐಪಿಎಲ್)

ಬ್ಯಾಟರ್	ಬೌಲರ್	ಸ್ಥಳ	ವರ್ಷ
ಕ್ರಿಸ್‌ಗೇಲ್ (ಆರ್‌ಸಿಬಿ)	ರಾಹುಲ್ ಶರ್ಮಾ (ಪುಣೆ)	ಬೆಂಗಳೂರು	2012
ರಾಹುಲ್ ತೆವಾಟಿಯಾ (ಆರ್‌ಆರ್)	ಶೆಲ್ಡನ್ ಕಾಟ್ರೆಲ್ (ಪಂಜಾಬ್)	ಶಾರ್ಜಾ	2020
ರವೀಂದ್ರ ಜಡೇಜ (ಚೆನ್ನೈ)	ಹರ್ಷಲ್ ಪಟೇಲ್ (ಆರ್‌ಸಿಬಿ)	ಮುಂಬೈ	2021
ಮಾರ್ಕಸ್ ಸ್ಟೊಯಿನಿಸ್, ಜೇಸನ್ ಹೋಲ್ಡರ್ (ಲಖನೌ)	ಶಿವಂ ಮಾವಿ (ಕೋಲ್ಕತ್ತ)	ಪುಣೆ	2022
ರಿಂಕು ಸಿಂಗ್ (ಕೆಕೆಆರ್)	ಯಶ್ ದಯಾಳ್ (ಗುಜರಾತ್)	ಅಹಮದಾಬಾದ್	2023

ಬೆಂಗಳೂರಿಗೆ ರಾಹುಲ್ ಪಡೆ ಸವಾಲು

ಆರ್‌ಸಿಬಿ–ಲಖನೌ ಸೂಪರ್ ಜೈಂಟ್ಸ್ ಹಣಾಹಣಿ ಇಂದು

• ಗಿರೀಶ ದೊಡ್ಡಮನಿ

ಬೆಂಗಳೂರು: ಸೋಮವಾರ ರಾತ್ರಿ ಬೆಂಗಳೂರಿನ ಕ್ರಿಕೆಟ್ ಅಭಿಮಾನಿಗಳಿಗೆ 'ಡಬಲ್ ಮನರಂಜನೆ' ಲಭಿಸಲಿದೆ.

ಒಂದು ಕಡೆ ರಾಯಲ್ ಚಾಲೆಂಜರ್ಸ್ ಬೆಂಗಳೂರು ಮತ್ತು ಇನ್ನೊಂದು ಕಡೆ ಲಖನೌ ಸೂಪರ್‌ಜೈಂಟ್ಸ್ ತಂಡದ ನಾಯಕ, ಕನ್ನಡಿಗ ಕೆ.ಎಲ್. ರಾಹುಲ್ ಅವರ ಆಟವನ್ನು ಆಸ್ವಾದಿಸುವ ಅವಕಾಶ ಪ್ರೇಕ್ಷಕರಿಗೆ ಒದಗಿಬಂದಿದೆ. ಮೂರು ವರ್ಷಗಳ ನಂತರ ರಾಹುಲ್ ತಮ್ಮ ತವರು, ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಐಪಿಎಲ್ ಪಂದ್ಯವಾಡಲಿದ್ದಾರೆ.

ಹೋದ ವರ್ಷದ ಆವೃತ್ತಿಯಲ್ಲಿ ಸೇರ್ಪಡೆಯಾಗಿದ್ದ ಲಖನೌ ತಂಡವು ಇದೇ ಮೊದಲ ಬಾರಿ ಉದ್ಯಾನನಗರಿಯಲ್ಲಿ ಕಣಕ್ಕಿಳಿಯಲಿದೆ. ಕಳೆದ ಬಾರಿ ರಾಹುಲ್ ಬಳಗವು ಕೋಲ್ಕತ್ತದ ಈಡನ್ ಗಾರ್ಡನ್ ಕ್ರೀಡಾಂಗಣದಲ್ಲಿ ನಡೆದಿದ್ದ ಎಲಿಮಿನೇಟರ್ ಪಂದ್ಯದಲ್ಲಿ ಆರ್‌ಸಿಬಿ ಎದುರು ಮಣಿದಿತ್ತು. ಆ ನಿರಾಶೆಗೆ ಮುಯ್ಯಿ ತೀರಿಸಿಕೊಳ್ಳುವ ಛಲದಲ್ಲಿ ಲಖನೌ ಇದೆ.

ಎರಡು ಪಂದ್ಯಗಳನ್ನು ಆಡಿರುವ ಆರ್‌ಸಿಬಿ ಬೆಂಗಳೂರಿನಲ್ಲಿಯೇ ನಡೆದಿದ್ದ ಮುಂಬೈ ವಿರುದ್ಧದ ಮೊದಲ ಹಣಾಹಣಿಯಲ್ಲಿ ಭರ್ಜರಿ ಗೆಲುವು ಸಾಧಿಸಿತ್ತು. ಆದರೆ ಕೋಲ್ಕತ್ತದಲ್ಲಿ ನಡೆದ ಎರಡನೇ ಪಂದ್ಯದಲ್ಲಿ ಮುಗ್ಗರಿಸಿತ್ತು. ಆ ಪಂದ್ಯದಲ್ಲಿ ಎಡಗೈ ವೇಗಿ ಡೇವಿಡ್ ವಿಲಿ ಒಂದೇ ಓವರ್‌ನಲ್ಲಿ ಎರಡು ವಿಕೆಟ್ ಗಳಿಸಿ ಆರ್‌ಸಿಬಿಗೆ ಆರಂಭದಲ್ಲಿಯೇ ಭರವಸೆ ಮೂಡಿದ್ದರು.

ಆದರೆ, 11ನೇ ಓವರ್ ನಂತರ ಕೋಲ್ಕತ್ತ ತಂಡದ ಶಾರ್ದೂಲ್ ಠಾಕೂರ್ ಬ್ಯಾಟಿಂಗ್ ಅಬ್ಬರಕ್ಕೆ ಉಳಿದ ಬೌಲರ್‌ಗಳ ಲಯ ತಪ್ಪಿತು. 23 ಇತರೆ ರನ್‌ಗಳೂ ಹರಿದುಹೋದವು. ದೊಡ್ಡ ಮೊತ್ತದ ಗುರಿ ಬೆನ್ನಟ್ಟಿದ ತಂಡಕ್ಕೆ ಮಧ್ಯಮಕ್ರಮಾಂಕದ ಬ್ಯಾಟರ್‌ಗಳೂ ಕೈಕೊಟ್ಟದ್ದರು. ಸ್ಪಿನ್ ಬೌಲಿಂಗ್ ಮತ್ತು ಡೆತ್ ಓವರ್‌ಗಳಲ್ಲಿಯ ಆಟವನ್ನು ಸುಧಾರಣೆ ಮಾಡಿಕೊಳ್ಳದಿದ್ದರೆ ಆತಿಥೇಯ ತಂಡಕ್ಕೆ ಗೆಲುವಿನ ಹಾದಿ ಕಷ್ಟವಾಗಬಹುದು.

ಆರಂಭಿಕ ಮುನ್ನಡೆಯನ್ನು ಬಳಸಿಕೊಂಡು ಪಂದ್ಯದ ಮೇಲೆ ಹಿಡಿತ ಸಾಧಿಸುವ ತಂತ್ರಗಾರಿಕೆಯಲ್ಲಿ ಫಫ್ ಡುಪ್ಲೆಸಿ ನಾಯಕತ್ವ ವಿಫಲವಾಯಿತು. ಆದರೆ ಲಖನೌ ತಂಡವು ಸನ್‌ರೈಸರ್ಸ್ ಎದುರಿನ ಪಂದ್ಯದಲ್ಲಿ ಇಂತಹದೇ ಸನ್ನಿವೇಶದಲ್ಲಿ ಯಶಸ್ವಿಯಾಗಿತ್ತು. 50 ರನ್‌ಗಳಿಗೆ ಮೂರು ವಿಕೆಟ್ ಕಳೆದುಕೊಂಡಿದ್ದ ಸನ್‌ರೈಸರ್ಸ್ ತಂಡವನ್ನು 121 ರನ್‌ಗಳ ಸಾಧಾರಣ ಮೊತ್ತಕ್ಕೆ ಕಟ್ಟಿಹಾಕಿದ್ದ ರಾಹುಲ್ ಬಳಗವು ಪಂದ್ಯವನ್ನು ಜಯಿಸಿತ್ತು.

'ಬ್ಯಾಟಿಂಗ್ ವೈಫಲ್ಯದ ಬಗ್ಗೆ ಬೆರಳು ತೋರಿಸುವುದು ಬಹಳ ಸುಲಭ. ಆದರೆ ನಮ್ಮ ಬೌಲಿಂಗ್ ಕಳಪೆಯಾಗಿತ್ತು. ಫೀಲ್ಡಿಂಗ್ ಕೂಡ ಚೆನ್ನಾಗಿರಲಿಲ್ಲ. ಪಂದ್ಯದ 40 ಓವರ್‌ಗಳಲ್ಲಿಯೂ ನಾವು ಸಾಮರ್ಥ್ಯಕ್ಕೆ ತಕ್ಕಂತೆ ಆಡಲಿಲ್ಲ' ಎಂದು ಆರ್‌ಸಿಬಿಯ ಬೌಲರ್ ಡೇವಿಡ್ ವಿಲಿ ಭಾನುವಾರ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದರು.

ಆದರೆ ತವರಿನ ಅಭಿಮಾನಿಗಳ ಎದುರು ಪುಟಿದೇಳುವ ಹುಮ್ಮಸ್ಸಿನಲ್ಲಿರುವ ಡುಪ್ಲೆಸಿ ಬಳಗವು ಲಖನೌಗೆ ಕಠಿಣ ಸವಾಲೊಡ್ಡುವ ನಿರೀಕ್ಷೆ ಇದೆ.

ಭಾನುವಾರ ಸಂಜೆಯ ಹೊತ್ತಿಗೆ ಸಿದ್ಧವಾಗಿದ್ದ ಪಿಚ್ ಮೇಲ್ನೋಟಕ್ಕೆ ಸ್ಪರ್ಧಾತ್ಮಕವಾಗಿ ಕಂಡಿದೆ.

ಪಂದ್ಯ ಆರಂಭ: ರಾತ್ರಿ 7.30

ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ವಾಹಿನಿ, ಜಿಯೊ ಸಿನಿಮಾ ಆ್ಯಪ್.



ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಭಾನುವಾರ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ನಾಯಕ ಫಫ್ ಡುಪ್ಲೆಸಿ ಹಾಗೂ ಕೋಚ್ ಸಂಜಯ್ ಬಾಂಗರ್ ಚರ್ಚೆಯಲ್ಲಿ ತೊಡಗಿದ್ದರು –ಪ್ರಜಾವಾಣಿ ಚಿತ್ರ/ಕೃಷ್ಣಕುಮಾರ್ ಪಿ.ಎಸ್



ಕೆ.ಎಲ್ ರಾಹುಲ್ –ಪ್ರಜಾವಾಣಿ ಚಿತ್ರ

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್)

ಆಟಗಾರ	ತಂಡ	ವಿಕೆಟ್
ರಶೀದ್	ಗುಜರಾತ್	8

ಆರೆಂಜ್ ಕ್ಯಾಪ್ (ಹೆಚ್ಚು ರನ್)

ಆಟಗಾರ	ತಂಡ	ರನ್
ಶಿಖರ್	ಪಂಜಾಬ್	225

ಐಎಂ ಆಟಗಾರನ ಜೊತೆ ಡ್ರಾ ಸಾಧಿಸಿದ 12ರ ಬಾಲಕ

ಮುಂಬೈ (ಪಿಟಿಐ): 12 ವರ್ಷದ ಇಶಾನ್ ತೆಂಡೂಲ್ಕರ್, ಫಿಡೆ ರೇಟೆಡ್ ಚೆಸ್ ಟೂರ್ನಿಯ ಅಚ್ಚರಿಯ ಫಲಿತಾಂಶವೊಂದರಲ್ಲಿ ಇಂಟರ್‌ನ್ಯಾಷನಲ್ ಮಾಸ್ಟರ್ ವಿಕ್ರಮಾದಿತ್ಯ ಕುಲಕರ್ಣಿ ವಿರುದ್ಧ 'ಡ್ರಾ' ಮಾಡಿಕೊಂಡು ಗಮನ ಸೆಳೆದಿದ್ದಾನೆ. ಭಾನುವಾರ ಮೂರನೇ ಸುತ್ತಿನಲ್ಲಿ ಮೊದಲ ಬೋರ್ಡ್ ಕಪ್ಪುಕಾಯಿಗಳಲ್ಲಿ ಆಡಿದ ಇಶಾನ್, ಅನುಭವಿ ಎದುರಾಳಿಗೆ ಬಿಟ್ಟುಕೊಡದೇ ದಿಟ್ಟವಾಗಿ ಆಡಿದ. 96 ನಡೆಗಳ ನಂತರ ಇಬ್ಬರೂ 'ಪಾಯಿಂಟ್ ಹಂಚಿಕೊಳ್ಳಲು' ಒಪ್ಪಿದರು. ಮೂರನೇ ಸುತ್ತಿನ ಪಂದ್ಯಗಳ ನಂತರ ಮೂರು ಪಾಯಿಂಟ್‌ಗಳೊಂದಿಗೆ ಮುನ್ನಡೆ ಸಾಧಿಸಿದ್ದಾರೆ.

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ರಾಜಸ್ಥಾನ	3	2	1	0	4	2.067
ಕೋಲ್ಕತ್ತ	3	2	1	0	4	1.375
ಲಖನೌ	3	2	1	0	4	1.358
ಗುಜರಾತ್	3	2	1	0	4	0.431
ಚೆನ್ನೈ	3	2	1	0	4	0.356
ಪಂಜಾಬ್	3	2	1	0	4	-0.281
ಬೆಂಗಳೂರು	2	1	1	0	2	-1.256
ಹೈದರಾಬಾದ್	3	1	2	0	2	-1.502
ಮುಂಬೈ	2	0	2	0	0	-1.394
ದೆಹಲಿ	3	0	3	0	0	-2.092

*ಭಾನುವಾರದ ಪಂದ್ಯಗಳ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ
https://www.prajavani.net/cricket

ಗಾಲ್ಫ್: ಆಗಸ್ಟಾ ಮಾಸ್ಟರ್ಸ್‌ನಿಂದ ಹಿಂದೆ ಸರಿದ ವುಡ್ಸ್



ಆಗಸ್ಟಾ, ಅಮೆರಿಕ (ಎಎಫ್‌ಪಿ): ಐದು ಬಾರಿಯ ಚಾಂಪಿಯನ್, ಅಮೆರಿಕದ ಟೈಗರ್ ವುಡ್ಸ್ ಅವರು ಇಲ್ಲಿ ನಡೆಯುತ್ತಿರುವ ಮಾಸ್ಟರ್ಸ್ ಗಾಲ್ಫ್ ಟೂರ್ನಿಯಿಂದ ಹಿಂದೆ ಸರಿದಿದ್ದಾರೆ.

ಮೂರನೇ ಸುತ್ತಿನಲ್ಲಿ ಆಡಬೇಕಿದ್ದ ಅವರು ಪಾದದ ಗಾಯದಿಂದಾಗಿ ಆಡುತ್ತಿಲ್ಲ ಎಂದು ಟೂರ್ನಿಯ ಸಂಘಟಕರು ಭಾನುವಾರ ತಿಳಿಸಿದ್ದಾರೆ.

'ಪಾದದ ನೋವು ಉಲ್ಬಣಿಸಿದ್ದರಿಂದ ಟೂರ್ನಿಯಿಂದ ಹಿಂದೆ ಸರಿದಿದ್ದೇನೆ. ನಿರಾಸೆಯಾಗಿದೆ. ಪ್ರೀತಿ ಮತ್ತು ಬೆಂಬಲ ತೋರಿದ ಅಭಿಮಾನಿಗಳಿಗೆ ಧನ್ಯವಾದಗಳು' ಎಂದು ತಮ್ಮ ನಿರ್ಧಾರದ ಕುರಿತು ವುಡ್ಸ್ ಟ್ವಿಟರ್‌ನಲ್ಲಿ ತಿಳಿಸಿದ್ದಾರೆ.

2021ರಲ್ಲಿ ಕಾರು ಅಪಘಾತಕ್ಕೆ ಒಳಗಾಗಿದ್ದ ವುಡ್ಸ್ ಆಗಿನಿಂದ ಕಾಲು ನೋವು ಎದುರಿಸುತ್ತಿದ್ದಾರೆ.

ಹೈದರಾಬಾದ್‌ಗೆ ಭರ್ಜರಿ ಜಯ


ಹೈದರಾಬಾದ್ (ಪಿಟಿಐ): ರಾಹುಲ್ ತ್ರಿಪಾಠಿ ಅವರ ಅಜೇಯ ಅರ್ಧಶತಕ ಹಾಗೂ ಮಯಂಕ್ ಮಾರ್ಕಂಡೆ (15ಕ್ಕೆ 4) ಅವರ ಸ್ಪಿನ್ ಮೋಡಿ ಸನ್‌ರೈಸರ್ಸ್ ಹೈದರಾಬಾದ್ ತಂಡಕ್ಕೆ ಗೆಲುವು ತಂದುಕೊಟ್ಟವು.

ರಾಜೀವಗಾಂಧಿ ಅಂತರರಾಷ್ಟ್ರೀಯ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಪಂಜಾಬ್ ಎದುರಿನ ಐಪಿಎಲ್ ಪಂದ್ಯದಲ್ಲಿ ಹೈದರಾಬಾದ್ ಎಂಟು ವಿಕೆಟ್‌ಗಳಿಂದ ಗೆದ್ದಿತು. ಪಂಜಾಬ್ ನಾಯಕ ಶಿಖರ್ ಧವನ್ (ಅಜೇಯ 99) ಆಟ ವ್ಯರ್ಥವಾಯಿತು.

ಮೊದಲು ಬ್ಯಾಟ್ ಮಾಡಿದ ಪಂಜಾಬ್ 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 143 ರನ್ ಗಳಿಸಿತು. ಏಡನ್ ಮರ್ಕರಂ ನಾಯಕತ್ವದ ತಂಡವು 17.1 ಓವರ್‌ಗಳಲ್ಲಿ ಎರಡು ವಿಕೆಟ್ ಕಳೆದುಕೊಂಡು ಗೆಲುವಿನ ಗುರಿ ತಲುಪಿತು.

ಹೈದರಾಬಾದ್ ಪರ ಆರಂಭಿಕರಾಗಿ ಕಣಕ್ಕಿಳಿದ ಹ್ಯಾರಿ ಬ್ರೂಕ್ (13) ಮತ್ತು ಮಯಂಕ್ ಅಗರವಾಲ್ (21) ಮೊದಲ ವಿಕೆಟ್‌ಗೆ 27 ರನ್ ಸೇರಿಸಿದರು. ಆದರೆ ವೈಯಕ್ತಿಕ ದೊಡ್ಡ ಮೊತ್ತ ಗಳಿಸುವಲ್ಲಿ ವಿಫಲರಾದರು.

ಮುರಿಯದ ಮೂರನೇ ವಿಕೆಟ್ ಜೊತೆಯಾಟದಲ್ಲಿ ರಾಹುಲ್ ತ್ರಿಪಾಠಿ (ಔಟಾಗದೆ 74, 48ಎ, 4X10, 6X3) ಮತ್ತು ಮರ್ಕರಂ (37, 21ಎ, 4X6) ಬರೋಬ್ಬರಿ 100 ರನ್ ಕಲೆಹಾಕಿ ತಂಡದ ಸುಲಭ ಜಯದಲ್ಲಿ ಪ್ರಮುಖ ಪಾತ್ರ ವಹಿಸಿದರು.



ಮಯಂಕ್ ಮಾರ್ಕಂಡೆ– ಪಿಟಿಐ ಚಿತ್ರ

ಶಿಖರ್ ಆಟ ವ್ಯರ್ಥ: ಟಾಸ್ ಗೆದ್ದ ಸನ್‌ರೈಸರ್ಸ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಪಂಜಾಬ್ ಕಿಂಗ್ಸ್ ತಂಡವು ಗೌರವಯುತ ಮೊತ್ತ ಗಳಿಸಲು ಶಿಖರ್ ಧವನ್ ಕಾರಣರಾದರು. 66 ಎಸೆತಗಳಲ್ಲಿ ಅವರು 12 ಬೌಂಡರಿ, 5 ಸಿಕ್ಸರ್ ಸಿಡಿಸಿದರು.

ಸನ್‌ರೈಸರ್ಸ್ ತಂಡದ ಮಧ್ಯಮವೇಗಿ ಭುವನೇಶ್ವರ್ ಕುಮಾರ್ ಇನಿಂಗ್ಸ್‌ನ ಮೊದಲ ಎಸೆತದಲ್ಲಿಯೇ ಪ್ರಭಸಿಮ್ರನ್ ಸಿಂಗ್ ವಿಕೆಟ್ ಕಬಳಿಸಿದರು. ಎರಡನೇ ಓವರ್‌ನಲ್ಲಿ ಮಾರ್ಕೊ ಜೆನ್ಸನ್ ಎಸೆತದಲ್ಲಿ ಮ್ಯಾಥ್ಯೂ ಶಾಟ್ ಔಟಾದರು.

ಒಂದು ಕಡೆ ವಿಕೆಟ್‌ಗಳು ಉರುಳುತ್ತಿದ್ದರೂ ಶಿಖರ್ ಧವನ್ ಬ್ಯಾಟ್ ಬೀಸುತ್ತಿದ್ದರು. ಎಲ್ಲ ಬೌಲರ್‌ಗಳನ್ನೂ ದಿಟ್ಟವಾಗಿ ಎದುರಿಸಿದರು. ಆರಂಭಿಕ ಬ್ಯಾಟರ್ ಆಗಿ ಕಣಕ್ಕಿಳಿದವರು ಕೊನೆಯ ಎಸೆತದವರೆಗೂ ಕ್ರೀಸ್‌ನಲ್ಲಿದ್ದು ದಾಖಲೆ ಬರೆದರು.

ಶಿಖರ್ ಅವರನ್ನು ಬಿಟ್ಟರೆ ಸ್ಯಾಮ್ ಕರನ್ (22 ರನ್) ಅವರೊಬ್ಬರೇ ಎರಡಂಕಿ ಗಳಿಸಿದರು.

ಸಂಕ್ಷಿಪ್ತ ಸ್ಕೋರು: ಪಂಜಾಬ್ ಕಿಂಗ್ಸ್: 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 143 (ಶಿಖರ್ ಧವನ್ ಔಟಾಗದೆ 99, ಸ್ಯಾಮ್ ಕರನ್ 22, ಮಯಂಕ್ ಮಾರ್ಕಂಡೆ 15ಕ್ಕೆ4, ಮಾರ್ಕೊ ಜೆನ್ಸೆನ್ 16ಕ್ಕೆ2, ಉಮ್ರಾನ್ ಮಲಿಕ್ 32ಕ್ಕೆ2). ಸನ್‌ರೈಸರ್ಸ್ ಹೈದರಾಬಾದ್: 17.1 ಓವರ್‌ಗಳಲ್ಲಿ 2 ವಿಕೆಟ್‌ಗೆ 145 (ಮಯಂಕ್ ಅಗರವಾಲ್ 21, ರಾಹುಲ್ ತ್ರಿಪಾಠಿ ಔಟಾಗದೆ 74, ಏಡನ್ ಮರ್ಕರಂ ಔಟಾಗದೆ 37; ಅರ್ಷದೀಪ್ ಸಿಂಗ್ 20ಕ್ಕೆ 1, ರಾಹುಲ್ ಚಾಹರ್ 28ಕ್ಕೆ 1). ಫಲಿತಾಂಶ: ಸನ್‌ರೈಸರ್ಸ್ ಹೈದರಾಬಾದ್‌ಗೆ 8 ವಿಕೆಟ್‌ಗಳ ಜಯ

ಗರಿಷ್ಠ ಮಟ್ಟದಲ್ಲಿ ಆಮದು ಸುಂಕ • ತಗ್ಗಿದ ಬೇಡಿಕೆ

ಚಿನ್ನ ಆಮದು ಶೇ 30ರಷ್ಟು ಇಳಿಕೆ

ನವದೆಹಲಿ (ಪಿಟಿಐ): ಚಿನ್ನದ ಆಮದು 2022-23ರ ಏಪ್ರಿಲ್–ಫೆಬ್ರುವರಿ ಅವಧಿಯಲ್ಲಿ ಶೇಕಡ 30ರಷ್ಟು ಇಳಿಕೆ ಕಂಡಿದ್ದು, ₹ 2.60 ಲಕ್ಷ ಕೋಟಿಗೆ ತಲುಪಿದೆ ಎಂದು ಕೇಂದ್ರ ವಾಣಿಜ್ಯ ಸಚಿವಾಲಯ ತಿಳಿಸಿದೆ.

ಆಮದು ಸುಂಕ ಗರಿಷ್ಠ ಮಟ್ಟದಲ್ಲಿ ಇರುವುದು ಹಾಗೂ ಜಾಗತಿಕ ಆರ್ಥಿಕ ಅನಿಶ್ಚಿತ ಪರಿಸ್ಥಿತಿಯೇ ಆಮದು ಪ್ರಮಾಣ ಕಡಿಮೆ ಆಗಲು ಕಾರಣಗಳಾಗಿವೆ ಎಂದು ಸಚಿವಾಲಯ ಹೇಳಿದೆ.

2021-22ರ ಏಪ್ರಿಲ್–ಫೆಬ್ರುವರಿ ಅವಧಿಯಲ್ಲಿ ₹ 3.70 ಲಕ್ಷ ಕೋಟಿ ಮೌಲ್ಯದ ಚಿನ್ನ ಆಮದಾಗಿತ್ತು. 2022ರ ಆಗಸ್ಟ್‌ನಿಂದ ಚಿನ್ನದ ಆಮದು ಇಳಿಮುಖವಾಗಿಯೇ ಇದೆ. ಬೆಳ್ಳಿ ಆಮದು 2022-23ರ ಏಪ್ರಿಲ್–ಫೆಬ್ರುವರಿ ಅವಧಿಯಲ್ಲಿ ಶೇ 66ರಷ್ಟು ಹೆಚ್ಚಾಗಿ ₹ 43,460 ಕೋಟಿಗೆ ತಲುಪಿದೆ.

ಚಿನ್ನದ ಆಮದು ಇಳಿಮುಖವಾಗಿದ್ದರೂ ವ್ಯಾಪಾರ ಕೊರತೆಯನ್ನು ಕಡಿಮೆ ಮಾಡಲು ಸಾಧ್ಯವಾಗಿಲ್ಲ. ಒಟ್ಟು ಆಮದು ಮತ್ತು ರಫ್ತು ವಹಿವಾಟಿನ ನಡುವಣ ಅಂತರವು 2022-23ರ ಏಪ್ರಿಲ್–ಫೆಬ್ರುವರಿ ಅವಧಿಯಲ್ಲಿ ₹ 20.29 ಲಕ್ಷ ಕೋಟಿ ಆಗುವ ಅಂದಾಜು ಮಾಡಲಾಗಿದೆ. 2021-22ರ ಇದೇ ಅವಧಿಯಲ್ಲಿ ಇದು ₹ 14.14 ಲಕ್ಷ ಕೋಟಿಯಷ್ಟು ಇತ್ತು.

'ಭಾರತವು 2022-23ರ ಏಪ್ರಿಲ್–ಜನವರಿ ಅವಧಿಯಲ್ಲಿ 600 ಟನ್‌ಗಳಷ್ಟು ಚಿನ್ನ ಆಮದು ಮಾಡಿಕೊಂಡಿದೆ. ಆಮದು ಸುಂಕ ಗರಿಷ್ಠ ಮಟ್ಟದಲ್ಲಿ ಇರುವುದರಿಂದ ಆಮದು ಪ್ರಮಾಣ ಕಡಿಮೆ ಆಗಿದೆ. ದೇಶಿ ಉದ್ಯಮ ಮತ್ತು ರಫ್ತು ವಹಿವಾಟಿಗೆ ಉತ್ತೇಜನ ನೀಡಲು ಕೇಂದ್ರ ಸರ್ಕಾರವು ಸುಂಕ ಕಡಿಮೆ ಮಾಡುವ ನಿಟ್ಟಿನಲ್ಲಿ ಆಲೋಚನೆ ಮಾಡಬೇಕಿದೆ' ಎಂದು ಹರಳು ಮತ್ತು ಆಭರಣ ರಫ್ತು ಉತ್ತೇಜನ ಮಂಡಳಿಯ (ಜಿಜೆಇಪಿಸಿ) ಮಾಜಿ ಅಧ್ಯಕ್ಷ ಕೋಲಿನ್ ಶಾ ಹೇಳಿದ್ದಾರೆ.

'ಚಿನ್ನದ ದರ ಹೆಚ್ಚಾದರೆ ಬೇಡಿಕೆ ಕಡಿಮೆ ಆಗುತ್ತದೆ. ಆಮದು ಸುಂಕ ಗರಿಷ್ಠ ಮಟ್ಟದಲ್ಲಿ ಇದ್ದರೆ ಅನಧಿಕೃತ ಮಾರ್ಗಗಳ ಮೂಲಕ ಚಿನ್ನದ ಆಮದು ಹೆಚ್ಚಾಗುತ್ತದೆ ಎಂದು ತಿಳಿಸಿದ್ದಾರೆ.



ಚಿನ್ನ ಆಮದು

800-900 ಟನ್
ವಾರ್ಷಿಕ ಆಮದು ಪ್ರಮಾಣ


600 ಟನ್
2022-23ರ ಏಪ್ರಿಲ್–ಜನವರಿಯಲ್ಲಿ ಆಮದು

15%
ಚಿನ್ನದ ಆಮದು ಸುಂಕ

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು
100 ಮೊಟ್ಟೆಗೆ ₹410
12 ಮೊಟ್ಟೆಗೆ ₹60
ಮೈಸೂರು
100 ಮೊಟ್ಟೆಗೆ ₹410

ರಾಮನಗರ ರೇಷ್ಮೆಗೂಡು ಧಾರಣೆ



ಮಿಶ್ರತಳಿ (ಸಿ.ಬಿ)
₹401-550
ದ್ವಿತಳಿ (ಬಿ.ವಿ)
₹315-875

ಸುಧಾ, ಮಯೂರ ಓದಿ

ಗೇಲ್: ಸಿಎನ್‌ಜಿ, ಪಿಎನ್‌ಜಿ ಬೆಲೆ ₹ 7ರಷ್ಟು ಇಳಿಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: ನೈಸರ್ಗಿಕ ಅನಿಲದ ಬೆಲೆ ನಿಗದಿ ಸೂತ್ರವನ್ನು ಕೇಂದ್ರ ಸರ್ಕಾರ ಬದಲಾಯಿಸಿದ ಬೆನ್ನಲ್ಲೇ, ಗೇಲ್ ಗ್ಯಾಸ್ ಲಿಮಿಟೆಡ್ ಕಂಪನಿಯು ಸಿಎನ್‌ಜಿ ಹಾಗೂ ಕೊಳವೆ ಮೂಲಕ ಪೂರೈಸುವ ಅಡುಗೆ ಅನಿಲದ (ಪಿಎನ್‌ಜಿ) ಬೆಲೆಯನ್ನು ₹ 7ರವರೆಗೆ ತಗ್ಗಿಸಿದೆ. ಮುಂದಿನ ತಿಂಗಳು ಚುನಾವಣೆ ಎದುರಿಸಲಿರುವ ಕರ್ನಾಟಕದಲ್ಲಿ ಬೆಲೆ ಇಳಿಕೆಯು ಇತರೆಡೆಗಳಿಗಿಂತ ಹೆಚ್ಚು.

ರಾಜ್ಯದಲ್ಲಿ ಸಿಎನ್‌ಜಿ ಬೆಲೆಯು ಕೆ.ಜಿ.ಗೆ ₹ 7ರಷ್ಟು ಅಗ್ಗವಾಗಿದ್ದು, 82.50ಕ್ಕೆ ತಲುಪಿದೆ. ಸೋನಿಪತ್‌ನಲ್ಲಿಯೂ ಇಷ್ಟೇ ಪ್ರಮಾಣದಲ್ಲಿ ಬೆಲೆ ಇಳಿಕೆಯಾಗಿದೆ. ಇತರ ಕಡೆಗಳಲ್ಲಿ ಸಿಎನ್‌ಜಿ ಬೆಲೆ ಇಳಿಕೆಯು ಕೆ.ಜಿ.ಗೆ ₹ 6ರಷ್ಟು ಆಗಿದೆ.

ಪಿಎನ್‌ಜಿ ಬೆಲೆಯನ್ನು ಬೆಂಗಳೂರು ಮತ್ತು ದಕ್ಷಿಣ ಕನ್ನಡದಲ್ಲಿ ಒಂದು ಸಾವಿರ ಕೆ.ಜಿಗೆ ₹ 7ರಷ್ಟು ಇಳಿಸಲಾಗಿದೆ. ದೇಶದ ಇತರ ಕಡೆಗಳಲ್ಲಿ ಬೆಲೆ ಇಳಿಕೆಯು ₹ 6ರಷ್ಟು ಆಗಿದೆ. ಈ ಇಳಿಕೆಯ ನಂತರ ಬೆಂಗಳೂರು ಮತ್ತು ದಕ್ಷಿಣ ಕನ್ನಡದಲ್ಲಿ ಪಿಎನ್‌ಜಿ ಬೆಲೆಯು ಒಂದು ಸಾವಿರ ಕೆ.ಜಿಗೆ ₹ 51.50 ಆಗಿದೆ.

ಕ್ರೆಡಿಟ್ ಸ್ಕೋರ್: ಮತ್ತೆ ಮತ್ತೆ ಕೇಳುವ ಪ್ರಶ್ನೆಗಳು



ಬಂಡವಾಳ ಮಾರುಕಟ್ಟೆ

ಅವಿನಾಶ್ ಕೆ.ಟಿ.

ಕಡಿಮೆ ಬಡ್ಡಿ ದರದಲ್ಲಿ ಸಾಲ ಪಡೆದುಕೊಳ್ಳಬೇಕು ಎಂದಾದರೆ ಉತ್ತಮವಾದ ಕ್ರೆಡಿಟ್ ಸ್ಕೋರ್ ಇರಲೇಬೇಕು. ಆದರೆ ಕ್ರೆಡಿಟ್ ಸ್ಕೋರ್ ಬಗ್ಗೆ ಅನೇಕರಿಗೆ ಗೊಂದಲಗಳಿವೆ. ಪದೇ ಪದೇ ಕ್ರೆಡಿಟ್ ಸ್ಕೋರ್ ಚೆಕ್ ಮಾಡಿದರೆ ತೊಂದರೆ ಆಗುತ್ತದೆ, ಕ್ರೆಡಿಟ್ ಸ್ಕೋರ್ ಒಮ್ಮೆ ಕಡಿಮೆ ಆದರೆ ಅದನ್ನು ಸರಿಪಡಿಸಿಕೊಳ್ಳಲು ಸಾಧ್ಯವೇ ಇಲ್ಲ, ನಮ್ಮ ಆದಾಯದ ಆಧಾರದಲ್ಲಿ ಕ್ರೆಡಿಟ್ ಸ್ಕೋರ್ ನಿರ್ಧಾರವಾಗುತ್ತದೆ ಎಂಬುದು ತಪ್ಪು ಕಲ್ಪನೆಗಳ ಸಾಲಿಗೆ ಸೇರಿವೆ.

ಕ್ರೆಡಿಟ್ ಸ್ಕೋರ್ ಕುರಿತು ತಿಳಿದಿರಲೇಬೇಕಾದ ಕೆಲವು ಅಂಶಗಳನ್ನು ಪರಿಶೀಲಿಸೋಣ.

1. ಸಿಬಿಲ್ ಅಥವಾ ಕ್ರೆಡಿಟ್ ಸ್ಕೋರ್ ಅಂದರೆ?: ಸಾಲದ ಅಗತ್ಯವಿದೆ ಎಂದು ಬ್ಯಾಂಕ್‌ಗೆ ಅರ್ಜಿ ಸಲ್ಲಿಸಿದ ಕೂಡಲೇ ಬ್ಯಾಂಕ್‌ಗಳು ಕೇಳುವುದು ಸಿಬಿಲ್ ಅಥವಾ ಕ್ರೆಡಿಟ್ ಸ್ಕೋರ್ ವಿವರ. ಗ್ರಾಹಕರಿಗೆ ಸಾಲ ಕೊಡಲು ಬ್ಯಾಂಕ್‌ಗಳು ಕ್ರೆಡಿಟ್ ಸ್ಕೋರ್ ಅನ್ನು ಮಾನದಂಡವಾಗಿ ಪರಿಗಣಿಸುತ್ತವೆ. ಒಂದೇ ಮಾತಿನಲ್ಲಿ ಹೇಳುವುದಾದರೆ ಕ್ರೆಡಿಟ್ ಸ್ಕೋರ್ ಎನ್ನುವುದು ನಿಮಗೆ ಎಷ್ಟು ಸಾಲ ಕೊಡಬಹುದು ಎಂಬುದನ್ನು ತೀರ್ಮಾನಿಸಲು ಬ್ಯಾಂಕ್‌ಗಳು ಬಳಸಿಕೊಳ್ಳುವ ಅಳತೆಗೋಲು.

ನಿಮ್ಮ ಹಣಕಾಸಿನ ವ್ಯವಹಾರದ ಶಿಸ್ತು ಹಾಗೂ ಅಶಿಸ್ತಿಗೆ ಕ್ರೆಡಿಟ್ ಸ್ಕೋರ್ ಕನ್ನಡಿ ಇದ್ದಂತೆ. ಕ್ರೆಡಿಟ್ ಸ್ಕೋರ್ ಉತ್ತಮವಾಗಿದ್ದರಷ್ಟೇ ಸಾಲ ಸಿಗುತ್ತದೆ. 300ರಿಂದ 900ರವರೆಗೆ ಕ್ರೆಡಿಟ್ ಸ್ಕೋರ್ ನೀಡಲಾಗುತ್ತದೆ. 750ಕ್ಕಿಂತ ಹೆಚ್ಚು ಕ್ರೆಡಿಟ್ ಸ್ಕೋರ್ ಹೊಂದಿದ್ದರೆ ಸಾಲ ಸಿಗುವ ಸಾಧ್ಯತೆ ಹೆಚ್ಚಿರುತ್ತದೆ.

2. ಸಿಬಿಲ್ ವರದಿಯಲ್ಲಿ ಸಾಲದ ಮಾಹಿತಿ ಹೇಗೆ ಬರುತ್ತದೆ?: ಕ್ರೆಡಿಟ್ ರೇಟಿಂಗ್ ಬ್ಯೂರೋಗಳಾದ ಕ್ರೆಡಿಟ್ ಇನ್ಫಾರ್ಮೇಷನ್ ಬ್ಯೂರೋ ಆಫ್ ಇಂಡಿಯಾ ಲಿಮಿಟೆಡ್ (CIBIL), ಈಕ್ವಿಫ್ಯಾಕ್ಸ್, ಎಕ್ಸ್‌ಪೀರಿಯನ್ ಸಂಸ್ಥೆಗಳು ಪ್ರತಿ ತಿಂಗಳು ಬ್ಯಾಂಕ್‌ಗಳಿಂದ ಮಾಹಿತಿ ಪಡೆದು ಸಾಲಗಾರರ ಮಾಹಿತಿಯನ್ನು ಭರ್ತಿಮಾಡಿ ಕ್ರೆಡಿಟ್ ಸ್ಕೋರ್ ನೀಡುತ್ತವೆ. ಸಾಲವನ್ನು ಸರಿಯಾಗಿ ಪಾವತಿಸಿದ್ದಾರೋ, ಸಾಲ ಪಾವತಿಯಲ್ಲಿ ವಿಳಂಬವಾಗಿದೆಯೋ ಎಂಬಿತ್ಯಾದಿ ಮಾಹಿತಿ ಪರಿಗಣಿಸಿ ಕ್ರೆಡಿಟ್ ಸ್ಕೋರ್ ನೀಡಲಾಗುತ್ತದೆ.

3. ಕ್ರೆಡಿಟ್ ಸ್ಕೋರ್ ಹೆಚ್ಚಿಸಿಕೊಳ್ಳುವುದು ಹೇಗೆ?: ಕ್ರೆಡಿಟ್ ಸ್ಕೋರ್ ಹೆಚ್ಚಿಸಿಕೊಳ್ಳಲು ಹಲವು ಕ್ರಮಗಳನ್ನು ಅನುಸರಿಸಬೇಕಾಗುತ್ತದೆ. ಸಮಯಕ್ಕೆ ಸರಿಯಾಗಿ ಸಾಲ ಮರುಪಾವತಿ, ಅಗತ್ಯವಿರುವುದಕ್ಕೆ ಮಾತ್ರ ಕ್ರೆಡಿಟ್ ಕಾರ್ಡ್ ಬಳಸುವುದು, ಸಾಲ ಪಡೆಯುವಾಗ ಅಡಮಾನ ಸಹಿತ ಸಾಲ ಮತ್ತು ಅಡಮಾನ ರಹಿತ ಸಾಲಗಳ ಮಿಶ್ರಣ ಕಾಯ್ದುಕೊಳ್ಳುವುದು, ಹೆಚ್ಚುವರಿ ಸಾಲದ ಅಗತ್ಯವಿದ್ದಾಗ ಎಚ್ಚರಿಕೆಯಿಂದ ಅದಕ್ಕೆ ಅರ್ಜಿ ಸಲ್ಲಿಸುವುದು, ಕ್ರೆಡಿಟ್ ವರದಿಯಲ್ಲಿ ತಪ್ಪುಗಳಿದ್ದರೆ ದೂರು ನೀಡಿ ಸರಿಪಡಿಸಿಕೊಳ್ಳುವುದು, ಸಾಲಕ್ಕೆ ಖಾತರಿದಾರರಾಗಿದ್ದರೆ ಸಾಲ ಪಡೆದವರು ಮರುಪಾವತಿ ಮಾಡುವಂತೆ ನೋಡಿಕೊಳ್ಳುವುದು... ಹೀಗೆ ಕೆಲವು ನಿರ್ದಿಷ್ಟ ಕ್ರಮಗಳನ್ನು ರೂಢಿಸಿಕೊಂಡಾಗ ಕ್ರೆಡಿಟ್ ಸ್ಕೋರ್ ಉತ್ತಮವಾಗಿರುತ್ತದೆ.

4. ಪದೇ ಪದೇ ಸಿಬಿಲ್ ಸ್ಕೋರ್ ಪರಿಶೀಲಿಸಿದರೆ?: ನೀವು ಕ್ರೆಡಿಟ್ ಸ್ಕೋರ್ ಪರಿಶೀಲಿಸಿದಾಗ ಅದನ್ನು 'ಸಾಫ್ಟ್ ಎನ್‌ಕ್ವೈರಿ' ಎಂದು ಪರಿಗಣಿಸಲಾಗುತ್ತದೆ. ಈ ರೀತಿ ಎಷ್ಟೇ ಬಾರಿ ಕ್ರೆಡಿಟ್ ಸ್ಕೋರ್ ಪರಿಶೀಲನೆ ಮಾಡಿದರೂ ಅದರಿಂದ ಯಾವುದೇ ನಕಾರಾತ್ಮಕ ಪರಿಣಾಮ ಉಂಟಾಗುವುದಿಲ್ಲ. ಆದರೆ ಮೇಲಿಂದ ಮೇಲೆ ನೀವು ಸಾಲಕ್ಕೆ ಅರ್ಜಿ ಸಲ್ಲಿಸಿ ಬ್ಯಾಂಕ್‌ಗಳು ನಿಮ್ಮ ಕ್ರೆಡಿಟ್ ಸ್ಕೋರ್ ಪರಿಶೀಲನೆಗೆ ಮುಂದಾದಾಗ ಅದು 'ಹಾರ್ಡ್ ಎನ್‌ಕ್ವೈರಿ' ಎನಿಸಿಕೊಳ್ಳುತ್ತದೆ. 'ಹಾರ್ಡ್ ಎನ್‌ಕ್ವೈರಿ'ಯಿಂದ ಕ್ರೆಡಿಟ್ ಸ್ಕೋರ್ ಮೇಲೆ ನಕಾರಾತ್ಮಕ ಪರಿಣಾಮ ಉಂಟಾಗುತ್ತದೆ. ಕಡಿಮೆ ಅವಧಿಯಲ್ಲಿ ಸಾಲಕ್ಕಾಗಿ ಹೆಚ್ಚೆಚ್ಚು ಅರ್ಜಿಗಳನ್ನು ಸಲ್ಲಿಸಿದಾಗ ಕ್ರೆಡಿಟ್ ಸ್ಕೋರ್‌ಗೆ ಧಕ್ಕೆಯಾಗುತ್ತದೆ.

5. ಆದಾಯ, ಉಳಿತಾಯದಿಂದ ಕ್ರೆಡಿಟ್ ಸ್ಕೋರ್ ಉತ್ತಮವಾಗುವುದೇ?: ನಿಮ್ಮ ಆದಾಯ ಅಥವಾ ಬ್ಯಾಂಕ್‌ನಲ್ಲಿರುವ ಉಳಿತಾಯದ ಹಣದ ಆಧಾರದಲ್ಲಿ ಕ್ರೆಡಿಟ್ ಸ್ಕೋರ್ ನಿರ್ಧಾರವಾಗುವುದಿಲ್ಲ. ಸಾಲ ತಗೆದುಕೊಂಡ ಮೇಲೆ ಮರುಪಾವತಿಯಲ್ಲಿ ಎಷ್ಟು ಶಿಸ್ತು ಕಾಯ್ದುಕೊಂಡಿದ್ದೀರಿ, ಸಮಯಕ್ಕೆ ಸರಿಯಾಗಿ ಸಾಲದ ಕಂತುಗಳನ್ನು ಪಾವತಿಸಿದ್ದೀರಾ ಎನ್ನುವುದರ ಆಧಾರದಲ್ಲಿ ಕ್ರೆಡಿಟ್ ಸ್ಕೋರ್ ನಿರ್ಧಾರವಾಗುತ್ತದೆ.

6. ಕ್ರೆಡಿಟ್ ಸ್ಕೋರ್ ಹೆಚ್ಚಳಕ್ಕೆ ಅವಕಾಶ?: ಬಾಕಿ ಇರುವ ಸಾಲಗಳನ್ನು ಮರುಪಾವತಿ ಮಾಡುವುದು, ಸಾಲಗಳನ್ನು ಕಡಿಮೆ ಮೊತ್ತಕ್ಕೆ ಸೆಟಲ್ಮೆಂಟ್ ಮಾಡಿಕೊಳ್ಳದೆ ಪೂರ್ತಿ ಅಸಲು ಮತ್ತು ಬಡ್ಡಿ ಮೊತ್ತ ಪಾವತಿಸುವುದು ಸೇರಿದಂತೆ ಸಾಲ ಮರುಪಾವತಿಯಲ್ಲಿ ಎಚ್ಚರಿಕೆ ವಹಿಸಿದರೆ ಕಡಿಮೆ ಇರುವ ಕ್ರೆಡಿಟ್ ಸ್ಕೋರ್‌ಅನ್ನು ಕಾಲಕ್ರಮೇಣ ಹೆಚ್ಚಿಸಿಕೊಳ್ಳಬಹುದು.

(ಲೇಖಕ ಇಂಡಿಯನ್ ಮನಿ ಡಾಟ್ ಕಾಂನ ಹಣಕಾಸು ಸಲಹಾ ವಿಭಾಗದ ಮುಖ್ಯಸ್ಥ)

ಎರಡನೇ ವಾರವೂ ಜಿಗಿದ ಷೇರುಪೇಟೆ

ಸತತ ಎರಡನೇ ವಾರ ಷೇರುಪೇಟೆ ಸೂಚ್ಯಂಕಗಳು ಗಳಿಕೆ ಕಂಡಿವೆ. ಏಪ್ರಿಲ್ 7ಕ್ಕೆ ಕೊನೆಗೊಂಡ ವಾರದಲ್ಲಿ ನಿಫ್ಟಿ ಮತ್ತು ಸೆನ್ಸೆಕ್ಸ್ ಜಿಗಿದಿವೆ. 59,832 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇ 1.42ರಷ್ಟು ಹೆಚ್ಚಳ ಕಂಡಿದೆ. 17,599 ಅಂಶಗಳಲ್ಲಿ ವಹಿವಾಟು ಮುಗಿಸಿರುವ ನಿಫ್ಟಿ ಶೇ 1.37ರಷ್ಟು ಸುಧಾರಿಸಿದೆ.

ವಿದೇಶಿ ಸಾಂಸ್ಥಿಕ ಹೂಡಿಕೆದಾರರಿಂದ ಖರೀದಿ ಭರಾಟೆ, ನೇರ ತೆರಿಗೆ ಸಂಗ್ರಹದಲ್ಲಿ ಹೆಚ್ಚಳ, ಜಿಎಸ್‌ಟಿ ಸಂಗ್ರಹದಲ್ಲಿ ಏರಿಕೆ, ಉತ್ಪಾದನಾ ವಲಯದಲ್ಲಿ ಸಕಾರಾತ್ಮಕತೆ ಮತ್ತು ಆರ್‌ಬಿಐ ಬಡ್ಡಿ ದರ ಹೆಚ್ಚಳದ ನಿರ್ಧಾರಕ್ಕೆ ತಡೆ ಒಡ್ಡಿದ್ದು ಸೇರಿದಂತೆ ಹಲವು ಅಂಶಗಳು ಮಾರುಕಟ್ಟೆ ಪುಟಿದೇಳಲು ಕಾರಣವಾಗಿವೆ.

ವಲಯವಾರು ಪ್ರಗತಿಯಲ್ಲಿ ಬಿಎಸ್‌ಇ ರಿಯಲ್ ಎಸ್ಟೇಟ್ ಸೂಚ್ಯಂಕ ಶೇ 4ರಷ್ಟು, ಕ್ಯಾಪಿಟಲ್ ಗೂಡ್ಸ್ ಸೂಚ್ಯಂಕ ಶೇ 3ರಷ್ಟು, ಟೆಲಿಕಾಂ ಸೂಚ್ಯಂಕ ಶೇ 2.6ರಷ್ಟು ಹೆಚ್ಚಳ ಕಂಡಿವೆ. ಪವರ್ ಸೂಚ್ಯಂಕ ಶೇ 0.3ರಷ್ಟು ಕುಸಿದಿದೆ. ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಕಳೆದ ವಾರ ₹1,604.56 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ. ದೇಶಿ ಸಾಂಸ್ಥಿಕ ಹೂಡಿಕೆದಾರರು ₹ 2,275.53 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

ಬಿಎಸ್‌ಇ ಲಾರ್ಜ್ ಕ್ಯಾಪ್‌ನಲ್ಲಿ ಸ್ಟಾರ್ ಹೆಲ್ತ್, ಡಿಎಲ್‌ಎಫ್, ನೈಕಾ, ಬಂಧನ್ ಬ್ಯಾಂಕ್ ಮತ್ತು ಹಿಂದೂಸ್ತಾನ್ ಜಿಂಕ್ ಜಿಗಿತ ಕಂಡಿವೆ. ಮಿಡ್ ಕ್ಯಾಪ್‌ನಲ್ಲಿ ಚೋಳಮಂಡಲಂ ಇನ್ವೆಸ್ಟ್‌ಮೆಂಟ್, ಕ್ಲೀನ್ ಸೈನ್ಸ್ ಆ್ಯಂಡ್ ಟೆಕ್ನಾಲಜಿ, ಗೋದ್ರೆಜ್ ಪ್ರಾಪರ್ಟೀಸ್, ಮಹಿಂದ್ರ ಆ್ಯಂಡ್ ಮಹಿಂದ್ರ ಫೈನಾನ್ಸಿಯಲ್ ಸರ್ವಿಸಸ್ ಮತ್ತು ಜಿಎಂಆರ್ ಏರ್‌ಪೋರ್ಟ್ ಇನ್ಫ್ರಾಸ್ಟ್ರಕ್ಚರ್ ಹೆಚ್ಚಳ ದಾಖಲಿಸಿವೆ.

ಮುನ್ನೋಟ: ಈ ವಾರದಿಂದ ಕಂಪನಿಗಳ ತ್ರೈಮಾಸಿಕ ವರದಿಗಳ ಪರ್ವ ಶುರುವಾಗಲಿದೆ. ಟಿಸಿಎಸ್, ಇನ್ಫೊಸಿಸ್, ಎಚ್‌ಡಿಎಫ್‌ಸಿ ಬ್ಯಾಂಕ್, ಆನಂದ್ ರಾಠಿ ವೆಲ್ತ್, ಡೆಲ್ಟಾ ಕಾರ್ಪ್ ಲಿಮಿಟೆಡ್ ಸೇರಿ ಪ್ರಮುಖ ಕಂಪನಿಗಳು ತ್ರೈಮಾಸಿಕ ಸಾಧನೆ ವರದಿ ಪ್ರಕಟಿಸಲಿವೆ. ಉಳಿದಂತೆ ಜಾಗತಿಕ ವಿದ್ಯಮಾನಗಳು ಹಾಗೂ ದೇಶಿಯವಾಗಿ ಆಗುವ ಬೆಳವಣಿಗೆಗಳು ಮಾರುಕಟ್ಟೆ ಸೂಚ್ಯಂಕಗಳ ಮೇಲೆ ಪರಿಣಾಮ ಬೀರಲಿವೆ.



ಆರ್ಲಿಯಾನ್ ಮಾಸ್ಟರ್ಸ್ ಬ್ಯಾಡ್ಮಿಂಟನ್ ಟೂರ್ನಿ: ಫೈನಲ್‌ನಲ್ಲಿ ರೋಚಕ ಗೆಲುವು

ಪ್ರಿಯಾಂಶು ರಾಜಾವತ್‌ಗೆ ಕಿರೀಟ

ಆರ್ಲಿಯಾನ್, ಫ್ರಾನ್ಸ್ (ಪಿಟಿಐ): ರೋಚಕ ಹಣಾಹಣಿಯಲ್ಲಿ ಜಯ ಸಾಧಿಸಿದ ಭಾರತದ ಪ್ರಿಯಾಂಶು ರಾಜಾವತ್ ಅವರು ಆರ್ಲಿಯಾನ್ ಮಾಸ್ಟರ್ಸ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಪ್ರಶಸ್ತಿ ಮುಡಿಗೇರಿಸಿಕೊಂಡರು.

ಭಾನುವಾರ ನಡೆದ ಟೂರ್ನಿಯ ಪುರುಷರ ಸಿಂಗಲ್ಸ್ ವಿಭಾಗದ ಫೈನಲ್‌ನಲ್ಲಿ ಪ್ರಿಯಾಂಶು 21-15, 19-21, 21-16ರಿಂದ ಡೆನ್ಮಾರ್ಕ್‌ನ ಮ್ಯಾಗ್ನಸ್ ಜೋಹಾನ್‌ಸನ್ ಅವರನ್ನು ಮಣಿಸಿದರು. ಇದರೊಂದಿಗೆ ಬಿಡಬ್ಲ್ಯುಎಫ್ ವಿಶ್ವ ಟೂರ್ ಸೂಪರ್ 300 ಮಟ್ಟದಲ್ಲಿ ಮೊದಲ ಸಲ ಪ್ರಶಸ್ತಿ ಗೆದ್ದ ಸಂಭ್ರಮ ಅವರದಾಯಿತು.

ವಿಶ್ವ ರ‍್ಯಾಂಕಿಂಗ್‌ನಲ್ಲಿ 49ನೇ ಸ್ಥಾನದಲ್ಲಿರುವ ಮ್ಯಾಗ್ನಸ್ ಅವರಿಗೆ 68 ನಿಮಿಷಗಳಲ್ಲಿ ಸೋಲಿನ ರುಚಿ ತೋರಿಸಿದ 58ನೇ ಕ್ರಮಾಂಕದ ಪ್ರಿಯಾಂಶು ಅವರಿಗೆ ಇದು ವೃತ್ತಿ ಜೀವನದ ದೊಡ್ಡ ಪ್ರಶಸ್ತಿಯೂ ಆಗಿದೆ.

ಇಬ್ಬರೂ ಆಟಗಾರರು ಅರ್ಹತಾ ಸುತ್ತಿನಲ್ಲಿ ಗೆದ್ದು ಟೂರ್ನಿಯ ಮುಖ್ಯ ಸುತ್ತು ಪ್ರವೇಶಿಸಿದ್ದರು.

ಜಿದ್ದಾಜಿದ್ದಿನ ಹಣಾಹಣಿ: 21 ವರ್ಷದ ಉಭಯ ಆಟಗಾರರು ಮೊದಲ ಬಾರಿ ಮುಖಾಮುಖಿಯಾಗಿದ್ದ ಈ ಪಂದ್ಯದಲ್ಲಿ ತೀವ್ರ ಸೆಣಸಾಟದಲ್ಲಿ ಭಾಗಿಯಾದರು. ಟೂರ್ನಿಯುದ್ದಕ್ಕೂ ಆಕ್ರಮಣಕಾರಿ ಆಟದ ಮೂಲಕ ಗಮನಸೆಳೆದಿದ್ದ ಪ್ರಿಯಾಂಶು ಇಲ್ಲಿಯೂ ಅದೇ ರೀತಿಯ ಆಟದಿಂದ ಎದುರಾಳಿಯನ್ನು ಕಂಗೆಡಿಸುವ ಪ್ರಯತ್ನ ನಡೆಸಿದರು.

ಆಕ್ರಮಣಕಾರಿ ಹೊಡೆತಗಳ ಮೂಲಕ ಮೊದಲ ಗೇಮ್‌ನ ಆರಂಭದಲ್ಲಿ 6–5ರಿಂದ ಮುನ್ನಡೆ ಸಾಧಿಸಿದರು. ಮ್ಯಾಗ್ನಸ್ ಅವರ ಬ್ಯಾಕ್‌ಹ್ಯಾಂಡ್ ಹೊಡೆತಗಳಿಗೆ ಪ್ರತ್ಯುತ್ತರ ನೀಡಿ ವಿರಾಮದ ವೇಳೆಗೆ ಮೂರು ಪಾಯಿಂಟ್ಸ್‌ನಿಂದ ರಾಜಾವತ್ ಮುನ್ನಡೆ ಕಾಯ್ದುಕೊಂಡರು.

ವಿರಾಮದ ನಂತರ ಪ್ರಿಯಾಂಶು ಅವರ ಹಿಡಿತ ಬಿಗಿಗೊಂಡಿತು. 18–11ರಿಂದ ಮುನ್ನಡೆದ ಅವರು ಅದೇ ಲಯದೊಂದಿಗೆ ಗೇಮ್ ತಮ್ಮದಾಗಿಸಿಕೊಂಡರು.

ಎರಡನೇ ಗೇಮ್‌ನಲ್ಲಿ ಮ್ಯಾಗ್ನಸ್ ಅವರು ಡಿಫೆನ್ಸ್ ಆಟಕ್ಕೆ ಒತ್ತುಕೊಟ್ಟರು. ಆರಂಭದಲ್ಲಿ ಅವರಿಗೆ 6–3ರ ಮೇಲುಗೈ ಸಿಕ್ಕಿತು. ಭಾರತದ ಆಟಗಾರ ಪದೇ ಪದೇ ನೆಟ್‌ಗೆ ಚೆಂಡು ಹೊಡೆದರು. ಇದರ ಲಾಭ ಪಡೆದ ಮ್ಯಾಗ್ನಸ್ 14–9ರಿಂದ ಮುನ್ನಡೆ ಗಳಿಸಿದರು. ನಂತರ ಪ್ರಿಯಾಂಶು ಅವರ ಪುಟಿದೇಳುವ ಪ್ರಯತ್ನವನ್ನು ವಿಫಲಗೊಳಿಸಿ ಗೇಮ್ ತಮ್ಮದಾಗಿಸಿಕೊಂಡರು.

ಮೂರನೇ ಗೇಮ್ ಮತ್ತಷ್ಟು ರೋಚಕತೆ ಪಡೆದುಕೊಂಡಿತು. ಪ್ರಿಯಾಂಶು ಆರಂಭದಲ್ಲಿ 5–0ಯಿಂದ ಮುನ್ನಡೆದರು. ಬಳಿಕ ಡೆನ್ಮಾರ್ಕ್ ಆಟಗಾರ 9–9ರಿಂದ ಸಮಬಲ ಸಾಧಿಸುವಲ್ಲಿ ಯಶಸ್ವಿಯಾದರು. ಬಳಿಕ ದೀರ್ಘ ರ‍್ಯಾಲಿಗಳಲ್ಲಿ ಎದುರಾಳಿಯನ್ನು ಹಿಂದಿಕ್ಕಿದ ಪ್ರಿಯಾಂಶು ಗೇಮ್ ಹಾಗೂ ಪಂದ್ಯ ಗೆದ್ದು ಬೀಗಿದರು.

ಟೂರ್ನಿಯಲ್ಲಿ ಪ್ರಿಯಾಂಶು ಅವರು ಫೋರ್‌ಹ್ಯಾಂಡ್ ಕ್ರಾಸ್‌ಕೋರ್ಟ್ ಜಂಪ್ ಮೂಲಕ ಸ್ಮ್ಯಾಷ್‌ಗಳನ್ನು ಪ್ರಯೋಗಿಸಿದ್ದು ಪ್ರೇಕ್ಷಕರ ಗಮನ ಸೆಳೆಯಿತು. ಇದು ಅವರ ನೆಚ್ಚಿನ ಹೊಡೆತ ಕೂಡ ಆಗಿದೆ.



ಪ್ರಶಸ್ತಿಯೊಂದಿಗೆ ಪ್ರಿಯಾಂಶು ರಾಜಾವತ್ ಸಂಭ್ರಮ– ಬಿಎಐ ಟ್ವಿಟರ್ ಚಿತ್ರ

ಮುಖ್ಯಾಂಶಗಳು
- ಫೈನಲ್‌ನಲ್ಲಿ ಡೆನ್ಮಾರ್ಕ್‌ನ ಮ್ಯಾಗ್ನಸ್ ವಿರುದ್ಧ ಜಯ
- ವಿಶ್ವ ಟೂರ್ ಸೂಪರ್ 300 ಮಟ್ಟದಲ್ಲಿ ಮೊದಲ ಪ್ರಶಸ್ತಿ
- ತನಗಿಂತ ಮೇಲಿನ ರ‍್ಯಾಂಕ್ ಆಟಗಾರನನ್ನು ಮಣಿಸಿದ ಪ್ರಿಯಾಂಶು

ಬ್ಯಾಸ್ಕೆಟ್‌ಬಾಲ್: ಮಂಗಳೂರು ತಂಡಕ್ಕೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಜತ್ ಅವರ ಅಮೋಘ ಆಟದ ನೆರವಿನಿಂದ ಮಂಗಳೂರು ಬ್ಯಾಸ್ಕೆಟ್‌ಬಾಲ್ ಕ್ಲಬ್ ತಂಡವು ಕರ್ನಾಟಕ ಗ್ರಾಮೀಣ ಬ್ಯಾಸ್ಕೆಟ್‌ಬಾಲ್ ಲೀಗ್ ಟೂರ್ನಿಯಲ್ಲಿ ಚಾಂಪಿಯನ್ ಆಯಿತು.

ಕಂಠೀರವ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಟೂರ್ನಿಯ ಫೈನಲ್ ಲೀಗ್ ಪಂದ್ಯದಲ್ಲಿ ಮಂಗಳೂರು 83–58ರಿಂದ ಮೈಸೂರಿನ ಆರ್ಯನ್ಸ್ ಬಿ.ಸಿ. ತಂಡವನ್ನು ಮಣಿಸಿತು. ಆರ್ಯನ್ಸ್ ತಂಡದ ವಿಜಯ್ 17 ಪಾಯಿಂಟ್ಸ್ ಗಳಿಸಿದರು. ಮತ್ತೊಂದು ಪಂದ್ಯದಲ್ಲಿ ಮಂಡ್ಯದ ವಿವೇಕಾನಂದ ಬಿ.ಸಿ. ತಂಡವು 100–82ರಿಂದ ಗೌರಿಬಿದನೂರಿನ ಪಿನಾಕಿನಿ ಎದುರು ಗೆದ್ದು 2ನೇ ಸ್ಥಾನ ಗಳಿಸಿತು. ಆರ್ಯನ್ಸ್ ಮತ್ತು ಪಿನಾಕಿನಿ ಕ್ರಮವಾಗಿ ಮೂರು ಮತ್ತು ನಾಲ್ಕನೇ ಸ್ಥಾನ ತಮ್ಮದಾಗಿಸಿಕೊಂಡವು. ಪ್ರಶಸ್ತಿ ಗೆದ್ದ ಮಂಗಳೂರು ತಂಡಕ್ಕೆ ₹ 50,000 ಬಹುಮಾನ ನೀಡಲಾಯಿತು. ಎರಡು ಮತ್ತು ಮೂರನೇ ಸ್ಥಾನ ಪಡೆದ ವಿವೇಕಾನಂದ ಮತ್ತು ಆರ್ಯನ್ಸ್ ತಂಡಗಳು ಕ್ರಮವಾಗಿ ₹30,000 ಮತ್ತು ₹ 20,000 ಪಡೆದುಕೊಂಡವು.



ಪ್ರಶಸ್ತಿ ವಿಜೇತ ಮಂಗಳೂರು ತಂಡ :(ಎಡದಿಂದ) ನಿಂತವರು: ಸೂರಜ್, ಆದಿತ್ಯ, ಆರ್.ರಾಜನ್ (ಕೆಎಸ್‌ಬಿಬಿಎ ಉಪಾಧ್ಯಕ್ಷ), ಕೆ.ಗೋವಿಂದರಾಜ್ (ಬಿಎಫ್‌ಐ ಅಧ್ಯಕ್ಷ), ಶೊಕೀನ್ ಶೆಟ್ಟಿ, ಬಿ.ದಯಾನಂದ (ಕೆಎಸ್‌ಬಿಬಿಎ ಅಧ್ಯಕ್ಷ), ಗುಣಶೇಖರ್ ಎಸ್. (ಕೆಎಸ್‌ಬಿಬಿಎ ಉಪಾಧ್ಯಕ್ಷ), ನವೀನ್ ಶೆಟ್ಟಿ (ತಂಡದ ಕಾರ್ಯದರ್ಶಿ), ಪ್ರದೀಪ್, ಸಾಯಿ ಸಂಯಮ್ ಮತ್ತು ಪ್ರದ್ಯುಮ್ನ. ಮಂಡಿಯೂರಿದವರು: ಅನಿಕೇತ್ ರಾವ್, ಅಶ್ವಿಜ್, ರಜತ್, ವಿನೀತ್ ಪೂಜಾರಿ.



ಪ್ರಶಸ್ತಿ ಜಯಿಸಿದ ಕುಪ್ಪಂಡ (ಕೈಕೇರಿ)ಆಟಗಾರರು ಟ್ರೋಫಿಯೊಂದಿಗೆ ಸಂಭ್ರಮಿಸಿದರು

ಕೊಡವ ಕೌಟುಂಬಿಕ ಹಾಕಿ ಟೂರ್ನಿ: ಪೆನಾಲ್ಟಿ ಶೂಟೌಟ್‌ನಲ್ಲಿ ಗೆಲುವು

ಕುಪ್ಪಂಡಕ್ಕೆ ಅಪ್ಪಚೆಟ್ಟೋಳಂಡ ಕಪ್

ಪ್ರಜಾವಾಣಿ ವಾರ್ತೆ

ನಾಪೋಕ್ಲು (ಕೊಡಗು ಜಿಲ್ಲೆ): ಕುಪ್ಪಂಡ ತಂಡದವರು ಪೆನಾಲ್ಟಿ ಶೂಟೌಟ್‌ನಲ್ಲಿ ಕುಲ್ಲೇಟಿರ ತಂಡದ ವಿರುದ್ಧ ಗೆಲುವು ಸಾಧಿಸಿ ಅಪ್ಪಚೆಟ್ಟೋಳಂಡ ಕಪ್‌ಗೆ ಮುತ್ತಿಕ್ಕಿದರು. ಇದೇ ಮೊದಲ ಬಾರಿ ಕೊಡವ ಕೌಟುಂಬಿಕ ಹಾಕಿ ಟೂರ್ನಿಯ ಚಾಂಪಿಯನ್ ಆಗಿ ಹೊರಹೊಮ್ಮಿದರು.

ಚರಿಯಪರಂಬುವಿನ ಜನರಲ್ ತಿಮ್ಮಯ್ಯ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಫೈನಲ್ ಪಂದ್ಯದಲ್ಲಿ ಈ ಹಿಂದೆ ಮೂರು ಸಲ ಚಾಂಪಿಯನ್ ಆಗಿದ್ದ ಕುಲ್ಲೇಟಿರ ತಂಡವನ್ನು ಮಣಿಸಿದರು.

ಜಿದ್ದಾಜಿದ್ದಿನಿಂದ ಕೂಡಿದ್ದ ಪಂದ್ಯದ ಆರಂಭದಲ್ಲಿ ಎರಡೂ ತಂಡಗಳು ತಲಾ ಒಂದು ಗೋಲು ಗಳಿಸಿ ಸಮಬಲ ಸಾಧಿಸಿದ್ದವು. ಕುಪ್ಪಂಡ ಸೋಮಯ್ಯ ಹಾಗೂ ಕುಲ್ಲೇಟಿರ ಅವನೀಶ್ ತಂಡದ ಪರವಾಗಿ ಒಂದೊಂದು ಗೋಲು ಹೊಡೆದಿದ್ದರು. ನಂತರ, ಪೆನಾಲ್ಟಿ ಶೂಟ್‌ಔಟ್‌ನಲ್ಲಿ ಕುಪ್ಪಂಡ (ಕೈಕೇರಿ) ತಂಡದವರು 4-2 ಗೋಲುಗಳಿಂದ ಕುಲ್ಲೇಟಿರ ತಂಡದವರ ವಿರುದ್ಧ ಗೆಲುವು ಸಾಧಿಸಿದರು.

ವಿಜೇತ ಕುಪ್ಪಂಡ ತಂಡದ ಆಟಗಾರರಿಗೆ ₹ 3 ಲಕ್ಷ ನಗದು ಹಾಗೂ ಟ್ರೋಫಿ ನೀಡಲಾಯಿತು. ಹಾಕಿ ಅಕಾಡೆಮಿಯ ಸಿಲ್ವರ್ ರೋಲಿಂಗ್ ಟ್ರೋಫಿಯೂ ವಿಜೇತ ತಂಡದ ಪಾಲಾಯಿತು. ರನ್ನರ್ಸ್ ಅಪ್ ಕುಲ್ಲೇಟಿರ ತಂಡದ ಆಟಗಾರರು ₹ 2 ಲಕ್ಷ ನಗದು ಹಾಗೂ ಟ್ರೋಫಿ ಪಡೆದರು.

3ನೇ ಹಾಗೂ 4ನೇ ಸ್ಥಾನಕ್ಕೆ ನಡೆದ ಪಂದ್ಯದಲ್ಲಿ ನೆಲ್ಲಮಕ್ಕಡ ತಂಡದವರು 1-0 ಗೋಲಿನಿಂದ ಪಳಂಗಂಡ ವಿರುದ್ಧ ಗೆಲುವು ಸಾಧಿಸಿದರು. ನೆಲ್ಲಮಕ್ಕಡ ತಂಡಕ್ಕೆ ₹ 1 ಲಕ್ಷ ನಗದು ಹಾಗೂ ಟ್ರೋಫಿ, 4ನೇ ಸ್ಥಾನ ಪಡೆದ ಪಳಂಗಂಡ ತಂಡಕ್ಕೆ ₹ 50 ಸಾವಿರ ನಗದು ಹಾಗೂ ಟ್ರೋಫಿ ವಿತರಿಸಲಾಯಿತು.

ವೈಯಕ್ತಿಕ ಪ್ರಶಸ್ತಿಗಳು: ಟೂರ್ನಿಯ ಶ್ರೇಷ್ಠ ಆಟಗಾರ;ಕುಪ್ಪಂಡ ಸೋಮಯ್ಯ. ಪಂದ್ಯ ಶ್ರೇಷ್ಠ;ಕುಲ್ಲೇಟಿರ ಅವನೀಶ್.

ಅತ್ಯುತ್ತಮ ಆಟಗಾರ: ನೆಲ್ಲಮಕ್ಕಡ ಸೋಮಯ್ಯ

ಅತ್ಯುತ್ತಮ ಆಟಗಾರ್ತಿ:ನಾಪಂಡ ಸೌಮ್ಯಾ

ಅತ್ಯುತ್ತಮ ಗೋಲ್ ಕೀಪರ್: ಕುಲ್ಲೇಟಿರ ವಚನ್ ಕಾಳಪ್ಪ

ಟೂರ್ನಿಯ ಉದಯೋನ್ಮುಖ ಆಟಗಾರ:ಕುಪ್ಪಂಡ ನಾಚಪ್ಪ

ಉತ್ತಮ ಕುಟುಂಬ ತಂಡ:ಮುಕ್ಕಾಟಿರ (ಕಡಗದಾಳು)

ವಿಶ್ವ ಚೆಸ್ ಚಾಂಪಿಯನ್‌ಷಿಪ್: ಮೊದಲ ಪಂದ್ಯ ಡ್ರಾ

ಅಸ್ತಾನಾ (ಕಜಕಸ್ತಾನ): ವಿಶ್ವ ಚೆಸ್ ಚಾಂಪಿಯನ್‌ಷಿಪ್‌ನ ಮೊದಲ ಪಂದ್ಯವನ್ನು ಬಿಳಿಕಾಯಿಗಳಲ್ಲಿ ಆಡಿ ಅಲ್ಪ ಮೇಲುಗೈ ಸಾಧಿಸಿದರೂ, ಅದನ್ನು ಗೆಲುವನ್ನಾಗಿ ಪರಿವರ್ತಿಸುವಲ್ಲಿ ಇಯಾನ್ ನಿಪೊಮ್‌ನಿಷಿ ಅವರು ವಿಫಲರಾದರು. ಚೀನಾದ ಡಿಂಗ್ ಲಿರೆನ್ ವಿರುದ್ಧದ ಮೊದಲ ಪಂದ್ಯದಲ್ಲಿ ಅವರು ಪಾಯಿಂಟ್ ಹಂಚಿಕೊಳ್ಳುವುದಕ್ಕೆ ತೃಪ್ತಿಪಡಬೇಕಾಯಿತು.

ಲಿರೆನ್ ಪ್ರಬಲ ರಕ್ಷಣಾ ವ್ಯೂಹ ರಚಿಸಿದ್ದು, ಐದು ಗಂಟೆಗಳ ನಂತರವೂ ಸ್ಪಷ್ಟ ಫಲಿತಾಂಶ ಬರಲಿಲ್ಲ. 49 ನಡೆಗಳ ನಂತರ ಇಬ್ಬರೂ ‘ಒಪ್ಪಂದ’ಕ್ಕೆ ಸಹಿಹಾಕಿದರು. ಸೋಮವಾರ ಎರಡನೇ ಪಂದ್ಯ ನಡೆಯಲಿದೆ.

ರಷ್ಯಾದ ನಿಪೊಮ್‌ನಿಷಿ ಇಲ್ಲಿ ತಟಸ್ಥ ಧ್ವಜದಡಿ ಆಡುತ್ತಿದ್ದಾರೆ.

ಕಜಕಸ್ತಾನದ ಸಂಸ್ಕೃತಿ ಸಚಿವ ಅಸ್ಖತ್ ಒರ್ಲೊವ್ ಮತ್ತು ಫಿಡೆ ಅಧ್ಯಕ್ಷ ಅರ್ಕಾಡಿ ಡ್ವೊರ್ಕೊವಿಚ್ ಅವರು ಕಾಯಿಗಳನ್ನು ಮುನ್ನಡೆಸಿ ಚಾಂಪಿಯನ್‌ಷಿಪ್‌ಗೆ ಸಾಂಪ್ರದಾಯಿಕ ಆರಂಭ ನೀಡಿದರು.

ಸಂಕ್ಷಿಪ್ತ ಸುದ್ದಿ

ಏಷ್ಯನ್ ಕುಸ್ತಿ: ರೂಪಿನ್‌ಗೆ ಬೆಳ್ಳಿ

ಆಸ್ತಾನ, ಕಜಕಸ್ತಾನ (ಪಿಟಿಐ): ಭಾರತದ ಕುಸ್ತಿಪಟುಗಳು ಇಲ್ಲಿ ನಡೆಯುತ್ತಿರುವ ಏಷ್ಯನ್ ಕುಸ್ತಿ ಚಾಂಪಿಯನ್‌ಷಿಪ್‌ನಲ್ಲಿ ಮೂರು ಪದಕಗಳನ್ನು ಗೆದ್ದುಕೊಂಡಿದ್ದಾರೆ.

ಭಾನುವಾರ 55 ಕೆಜಿ ಗ್ರೀಕೊ ರೋಮನ್ ವಿಭಾಗದಲ್ಲಿ ರೂಪಿನ್ ಬೆಳ್ಳಿ ಪದಕ ಜಯಿಸಿದರು. ನೀರಜ್ (63 ಕೆಜಿ ಗ್ರೀಕೊ ರೋಮನ್) ಮತ್ತು ಸುನಿಲ್ ಕುಮಾರ್ (87 ಕೆಜಿ ಗ್ರೀಕೊ ರೋಮನ್) ಕಂಚಿನ ಪದಕಗಳಿಗೆ ಕೊರಳೊಡ್ಡಿದರು.

ರೂಪಿನ್ ಫೈನಲ್ ಬೌಟ್‌ನಲ್ಲಿ 1–3ರಿಂದ ಇರಾನ್‌ನ ಪೊಯಾ ಸೌಲತ್ ದಾದ್ ಮಾರ್ಜ್ ವಿರುದ್ಧ ಸೋತರು.

ಕಂಚಿನ ಪದಕದ ಸುತ್ತುಗಳಲ್ಲಿ ನೀರಜ್ 5-2ರಿಂದ ದಕ್ಷಿಣ ಕೊರಿಯಾದ ಜಿನ್‌ಸೆಯುಬ್ ಎದುರು, ಸುನಿಲ್ ಕುಮಾರ್ 4-1ರಿಂದ ಜಪಾನ್‌ನ ಮಸಾಟೊ ಸುಮಿ ವಿರುದ್ಧ ಜಯ ಸಾಧಿಸಿದರು.

ಗ್ರ್ಯಾನ್‌ಪ್ರಿ ಅಥ್ಲೆಟಿಕ್ಸ್ ಇಂದಿನಿಂದ

ಬೆಂಗಳೂರು: ಇಂಡಿಯನ್ ಗ್ರ್ಯಾನ್‌ಪ್ರಿ-3 ಅಥ್ಲೆಟಿಕ್ಸ್ ಸೋಮವಾರದಿಂದ ಇಲ್ಲಿಯ ಕಂಠೀರವ ಕ್ರೀಡಾಂಗಣದಲ್ಲಿ ನಡೆಯಲಿದೆ.

ಮುಂಬರುವ ಏಷ್ಯನ್ ಗೇಮ್ಸ್ ಹಾಗೂ ಪ್ಯಾರಿಸ್ ಒಲಿಂಪಿಕ್ಸ್ ಸಿದ್ಧತೆಗೆ ಐಜಿಪಿ ಸರಣಿಯ ಈ ಮೂರನೇ ಕೂಟವು ಪ್ರಮುಖವೆನಿಸಿದೆ. ಆಂಧ್ರಪ್ರದೇಶದ ಜ್ಯೋತಿ ಯರಾಜಿ ಮತ್ತು ಅಸ್ಸಾಂನ ಅಮ್ಲಾನ್ ಬೊರ್ಗೊಹೈನ್ ಅವರು ಕ್ರಮವಾಗಿ ಮಹಿಳೆ ಮತ್ತು ಪುರುಷರ ಸ್ಪ್ರಿಂಟ್ ವಿಭಾಗಗಳಲ್ಲಿ ಮುಖ್ಯ ಅಥ್ಲೀಟ್‌ಗಳೆನಿಸಿದ್ದಾರೆ.

ಕರ್ನಾಟಕದ ನಿಹಾಲ್ ಜೋಯೆಲ್ (400 ಮೀ.), ಕೃಷಿಕ್ ಎಂ. (110 ಮೀಟರ್ ಹರ್ಡಲ್ಸ್), ದಾನೇಶ್ವರಿ ಎ.ಟಿ. (100 ಮೀ.) ಮತ್ತು ಉನ್ನತಿ ಅಯ್ಯಪ್ಪ (100 ಮೀ. ಹರ್ಡಲ್ಸ್) ಪದಕದ ವಿಶ್ವಾಸದೊಂದಿಗೆ ಕಣಕ್ಕಿಳಿಯಲಿದ್ದಾರೆ.